ಮಂಗಳವಾರ, ಏಪ್ರಿಲ್ 29, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಕಿಗೆ ಆಹುತಿ

ಕೋಲಾರದಲ್ಲಿ ಸೋಫಾ, ಕುಶನ್ ಗೋದಾಮಿನಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಂಡ ಬೆಂಕಿಯಿಂದಾಗಿ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಬೆಂಕಿಗಾಹುತಿಯಾಗಿವೆ

ಆರು ಹೊಸ ಬಡಾವಣೆಗಳ ನಿರ್ಮಾಣಕ್ಕೆ ಸಿದ್ಧತೆ • ಪಿಆರ್‌ಆರ್ ಯೋಜನೆ ಅನುಷ್ಠಾನಕ್ಕೆ ಆದ್ಯತೆ

ಬಿಡಿಎ ಯೋಜನೆಗಳಿಗೆ ಚುರುಕು

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕೈಗೊಂಡಿರುವ ಅಭಿವೃದ್ಧಿ ಯೋಜನೆಗಳು ಪ್ರಗತಿಯತ್ತ ದಾಪುಗಾಲಿಟ್ಟಿವೆ. ಭೂ ವಿವಾದ, ಭೂ ಪರಿಹಾರ ಬಿಕ್ಕಟ್ಟು, ಪರಿಸರ ಇಲಾಖೆ ಅನುಮತಿ ವಿಳಂಬ, ಆರ್ಥಿಕ ಸಮಸ್ಯೆ, ಒತ್ತುವರಿ ಸೇರಿ ಹಲವು ಕಾರಣಗಳಿಂದ ಮಂದಗತಿಯಲ್ಲಿ ಸಾಗುತ್ತಿದ್ದ ವಿವಿಧ ಬಡಾವಣೆಗಳ ಅಭಿವೃದ್ಧಿ ಹಾಗೂ ರಸ್ತೆ ಕಾಮಗಾರಿಗಳು ಈಗ ಚುರುಕು ಪಡೆದಿವೆ.

18 ವರ್ಷಗಳಿಂದ ಘೋಷಣೆ ಹಂತದಲ್ಲೇ ಇದ್ದ ಪೆರಿಫೆರಲ್ ವರ್ತುಲ ರಸ್ತೆ(ಪಿಆರ್‌ಆರ್) ಯೋಜನೆ 1 ಮತ್ತು 2 ಅನ್ನು ಅನುಷ್ಠಾನವಾಗುತ್ತಿವೆ. ಸಂಚಾರ ದಟ್ಟಣೆ ತಗ್ಗಿಸುವುದಕ್ಕಾಗಿ 2006ರಲ್ಲಿ ರೂಪಿಸಿದ್ದ ಈ ಯೋಜನೆಗೆ ಈಗ ರಾಜ್ಯ ಸರ್ಕಾರ ಅನುದಾನ ನೀಡಿದ್ದು, ಯೋಜನೆಯ ಪ್ರಗತಿಗೆ ವೇಗ ಸಿಕ್ಕಂತಾಗಿದೆ.

ಪಿಆರ್‌ಆರ್-2 ಯೋಜನೆಗೆ ಹೊಂದಿಕೊಂಡಂತೆ ಆರು ಹೊಸ ಬಡಾವಣೆಗಳನ್ನು ನಿರ್ಮಿಸಲು ನಿರ್ಧರಿಸಿರುವ ಬಿಡಿಎ, ಇದಕ್ಕಾಗಿ ಈ ಯೋಜನೆ ವ್ಯಾಪ್ತಿಯ ಗ್ರಾಮಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಿದ್ದು, ಜಮೀನುಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದೆ. ಬಿಡಿಎ ನಿವೇಶಗಳಿಗೆ ಭಾರಿ ಬೇಡಿಕೆ ಇದ್ದು, ಹೊಸದಾಗಿ 50 ಸಾವಿರ ನಿವೇಶಗಳನ್ನು ಅಭಿವೃದ್ಧಿಗೊಳಿಸುವ ಗುರಿ ಹೊಂದಿದೆ. ಯೋಜನೆಗೆ ಭೂಮಿ ನೀಡುವವರಿಗೆ 40 : 60ರ ಅನುಪಾತದಲ್ಲಿ ಪರಿಹಾರ ನೀಡಲು ತೀರ್ಮಾನಿಸಿದೆ.

ಪಿಆರ್‌ಆರ್ ಯೋಜನೆಯನ್ನು ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆಯಾಗಿ ಬದಲಾಯಿಸಿ, ಎರಡು ಹಂತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 73 ಕಿ.ಮೀ. ರಸ್ತೆ ನಿರ್ಮಿಸಲು ಹುಡ್ಕೊ ಬ್ಯಾಂಕ್ ನೆರವಿನೊಂದಿಗೆ ₹27 ಸಾವಿರ ಕೋಟಿ ವೆಚ್ಚದಲ್ಲಿ ಯೋಜನೆಯನ್ನು ರೂಪಿಸಲಾಗಿದೆ.

ಪಿಆರ್‌ಆರ್-1 ಯೋಜನೆ ತುಮಕೂರು ರಸ್ತೆ ಮತ್ತು ಹೊಸೂರು ರಸ್ತೆ ಸಂಪರ್ಕಿಸಲಿದೆ. ಇದರ ಮುಂದುವರಿದ ಭಾಗವಾಗಿ ಹೊಸೂರು ರಸ್ತೆ ಹಾಗೂ ಬೆಂಗಳೂರು-ಮೈಸೂರು ರಸ್ತೆಯನ್ನು ಪಿಆರ್‌ಆರ್-2 ಸಂಪರ್ಕಿಸಲಿದೆ. ಪಿಆರ್‌ಆರ್-2 ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ ಮಾರ್ಗವಾಗಿ ಸಾಗಲಿದೆ. ಈ ಯೋಜನೆಯಡಿ 100 ಮೀಟರ್ ಅಗಲದಲ್ಲಿ 30 ಕಿ.ಮೀ. ಉದ್ದದ ರಸ್ತೆ ನಿರ್ಮಿಸಲಾಗುತ್ತಿದೆ. ಜತೆಗೆ ಈ ಕಾರಿಡಾರ್‌ನ ಎರಡೂ ಬದಿಗಳಲ್ಲಿ ತಲಾ 24 ಮೀಟರ್ ಉದ್ದಕ್ಕೂ ವಾಣಿಜ್ಯ ನಿವೇಶನಗಳನ್ನು ರಚಿಸಿ, ಮಾರಾಟ ಮಾಡಿ ವ್ಯವಹಾರಕ್ಕೆ ಉತ್ತೇಜನ ನೀಡಲು ಉದ್ದೇಶಿಸಲಾಗಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೂಲಕ ಹಾದು ಹೋಗುವ ದಶ ಪಥ ಎಕ್ಸ್‌ಪ್ರೆಸ್ ರಸ್ತೆ ನಿರ್ಮಾಣ ಕಾಮಗಾರಿ ದಶಕದ ನಂತರ ಮತ್ತೆ ಜೀವ ಪಡೆದಿದೆ. 200 ಶೆಡ್‌ಗಳನ್ನು ತೆರವುಗೊಳಿಸುವ ಮೂಲಕ ಸಂಪರ್ಕ ಕಲ್ಪಿಸಲು ಇದ್ದ ತೊಡಕನ್ನು ಪ್ರಾಧಿಕಾರ ನಿವಾರಿಸಿದೆ. ನೈಸ್ ರಸ್ತೆಗೆ ಸಮಾನಾಂತರವಾಗಿ ಈ ರಸ್ತೆಯನ್ನು ನಿರ್ಮಿಸಲಾಗುತ್ತಿದ್ದು, 10.5 ಕಿ.ಮೀ. ಉದ್ದದ ಟೋಲ್ ರಹಿತ ಎಕ್ಸ್‌ಪ್ರೆಸ್ ಹೈವೆ ನಿರ್ಮಾಣಗೊಳ್ಳಲಿದೆ. ಚಲ್ಲಘಟ್ಟದ ಬಳಿ 250 ಮೀಟರ್ ಉದ್ದದ ಸುರಂಗ ರಸ್ತೆ ನಿರ್ಮಾಣದ ಜೊತೆಗೆ ರೈಲು ಕೆಳಸೇತುವೆ ಕೂಡ ಇರಲಿದೆ.

ಬಡಾವಣೆಗಳ ಅಭಿವೃದ್ಧಿ: ಡಾ.ಶಿವರಾಮ ಕಾರಂತ (ಎಸ್.ಕೆ) ಬಡಾವಣೆಯಲ್ಲಿ ಮೂವತ್ತು ಸಾವಿರ ನಿವೇಶನಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ. ಬಾಕಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಮೂರು ತಿಂಗಳು ಗಡುವು ನೀಡಲಾಗಿದೆ. 2,782 ಎಕರೆಯಲ್ಲಿ ನಿರ್ಮಿಸುತ್ತಿರುವ ಬಡಾವಣೆಯಲ್ಲಿ 16 ಸಾವಿರದಿಂದ 17 ಸಾವಿರ ನಿವೇಶನಗಳನ್ನು ರೈತರಿಗೆ ನೀಡಲಾ ಗುತ್ತದೆ. 30X40 ಅಡಿ ಮತ್ತು 40X60 ಅಡಿ ಅಳತೆಯ ನಿವೇಶನಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ನಗರದ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸುವ ಕಾರ್ಯಕ್ಕೆ ವೇಗ ನೀಡಲಾಗಿದೆ. ಒಂಬತ್ತು ಬ್ಲಾಕ್‌ಗಳಲ್ಲೂ ರಸ್ತೆ, ವಿದ್ಯುತ್, ಚರಂಡಿ ವ್ಯವಸ್ಥೆ ಸೇರಿ ಮುಂತಾದ ಮೂಲಸೌಕರ್ಯ ಒದಗಿಸುವ ಕಾಮಗಾರಿಗಳು ನಡೆಯುತ್ತಿವೆ.

ಶಿವರಾಮ ಕಾರಂತ ಬಡಾವಣೆಯ ನೋಟ.

ಕೆಂಪೇಗೌಡ ಬಡಾವಣೆ ಮೂಲಕ ಹಾದು ಹೋಗುವ ದಶಪಥ ಮಾರ್ಗ

50,000 6 ಬಡಾವಣೆಗಳಲ್ಲಿ ನಿವೇಶನ ನಿರ್ಮಾಣ | **27,000** ಕೋಟಿ ಪಿಆರ್ ಆರ್ ಯೋಜನೆ ವೆಚ್ಚ | **73** ಕಿ.ಮೀ. ರಸ್ತೆ ನಿರ್ಮಾಣ

ಯೋಜನೆಗಳು ಪ್ರಗತಿಯಲ್ಲಿ: ಜಯರಾಂ

‘ಬಿಡಿಎ ಯೋಜನೆಗಳು ಪ್ರಗತಿಯಲ್ಲಿವೆ. ಭೂ ವ್ಯಾಜ್ಯ ಸಂಬಂಧ ಕೆಲವರು ಕೋರ್ಟ್ ಮೆಟ್ಟಿಲೇರಿದ್ದರು. ಹಾಗಾಗಿ ಕಾಮಗಾರಿ ವಿಳಂಬವಾಗಿತ್ತು. ಈಗ ನ್ಯಾಯಾಲಯದಲ್ಲಿ ಬಿಡಿಎ ಪರ ಆದೇಶಗಳು ಬಂದಿರುವುದರಿಂದ ಜಮೀನು ಸ್ವಾಧೀನ ಪಡಿಸಿಕೊಂಡು ಅಭಿವೃದ್ಧಿ ಪಡಿಸಲಾಗುತ್ತಿದೆ. ಕೆಂಪೇಗೌಡ, ಶಿವರಾಮಕಾರಂತ ಬಡಾವಣೆ ಅಭಿವೃದ್ಧಿ ಕಾರ್ಯ ಭರದಿಂದ ಸಾಗಿದೆ. ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆಗಾಗಿ ಭೂ ಸ್ವಾಧೀನ ಪ್ರಕ್ರಿಯೆ ನಡೆಯುತ್ತಿದ್ದು, ಅದು ಮುಗಿದ ಬಳಿಕ ಬೇರೆ ಕಾಮಗಾರಿ ಪ್ರಾರಂಭಿಸಲಾಗುವುದು. ಸರ್ಕಾರ ಅನುದಾನ ಸಹ ಬಿಡುಗಡೆ ಮಾಡಿದೆ ’ಎಂದು ಬಿಡಿಎ ಆಯುಕ್ತ ಎನ್.ಜಯರಾಂ ತಿಳಿಸಿದರು.

ಟಿಟಾಗಢದಲ್ಲಿ ತಯಾರಾಗಿದೆ ಮೂರನೇ ರೈಲು • ಬೆಂಗಳೂರಿಗೆ ರವಾನಿಸಲು ಸಿದ್ಧತೆ

ಜೂನ್‌ನಲ್ಲಿ ಹಳದಿ ಮಾರ್ಗ ಸಂಚಾರ ಆರಂಭ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಪೂರೈಕೆಯಾಗಲು ಮೂರನೇ ರೈಲು ಪಶ್ಚಿಮ ಬಂಗಾಳದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಲ್ಲಿ ತಯಾರಾಗಿದೆ. ಪ್ಯಾಕಿಂಗ್ ನಡೆಯುತ್ತಿದ್ದು, ಕೆಲವೇ ದಿನಗಳಲ್ಲಿ ಬೆಂಗಳೂರಿಗೆ ಹೊರಡಲಿದೆ. ಹಳದಿ ಮಾರ್ಗದಲ್ಲಿ ಜೂನ್‌ನಲ್ಲಿ ರೈಲು ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

ಬೊಮ್ಮಸಂದ್ರ–ಆರ್.ವಿ. ರಸ್ತೆ ನಡುವಿನ ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭಗೊಳ್ಳಲು ಕನಿಷ್ಠ ಮೂರು ರೈಲುಗಳ ಅವಶ್ಯವಿದ್ದು ಚಾಲಕ ರಹಿತ ಎಂಜಿನ್ ಹೊಂದಿರುವ ಪ್ರೊಟೊಟೈಪ್ (ಮೂಲ ಮಾದರಿ) ಎರಡು ರೈಲುಗಳು ಈಗಾಗಲೇ ಪೂರೈಕೆಯಾಗಿವೆ. ಮೂರನೇ ರೈಲಿಗಾಗಿ ಬಿಎಂಆರ್‌ಸಿಎಲ್ ಕಾಯುತ್ತಿದೆ.

ಈ ಮಾರ್ಗಕ್ಕೆ ಒಟ್ಟು 14 ರೈಲುಗಳ ಅಗತ್ಯವಿದೆ. ಪ್ರತಿ 15 ನಿಮಿಷಗಳಿಗೆ ಒಂದು ರೈಲು ಸಂಚರಿಸಲು 8 ರೈಲುಗಳು ಇರಬೇಕಿದೆ. ಅರ್ಧಗಂಟೆಗೆ ಒಂದು ಟ್ರಿಪ್ ನಡೆಸಲು ಮೂರು ರೈಲು ಬೇಕು. ಟಿಆರ್‌ಎಸ್‌ಎಲ್ ಕಾರ್ಯಾಗಾರದಲ್ಲಿ ‘ಮೇಕ್ ಇನ್ ಇಂಡಿಯಾ’ ಅಡಿಯಲ್ಲಿ 36 ರೈಲುಗಳನ್ನು ತಯಾರಿಸಲಾಗುತ್ತಿದೆ. ಅದರಲ್ಲಿ 34 ರೈಲುಗಳು ಬಿಎಂಆರ್‌ಸಿಎಲ್‌ಗೆ ಬರಲಿವೆ. 14 ರೈಲುಗಳು ಹಳದಿ ಮಾರ್ಗಕ್ಕೆ ಬಳಕೆಯಾಗಲಿವೆ. ಉಳಿದವುಗಳು ಹಸಿರು ಮತ್ತು ನೇರಳೆ ಮಾರ್ಗದಲ್ಲಿರುವ ರೈಲುಗಳ ಕೊರತೆ ನೀಗಿಸಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಶನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್.ವಿ. ರಸ್ತೆ ನಿಲ್ದಾಣಗಳಿರುವ ಹಳದಿ ಮಾರ್ಗವು 18.8 ಕಿ.ಮೀ ಉದ್ದದ ಇದೆ. ಐಟಿ ಕಂಪನಿಗಳೇ ಹೆಚ್ಚಿರುವ ದಕ್ಷಿಣ ಬೆಂಗಳೂರನ್ನು (ಎಲೆಕ್ಟ್ರಾನಿಕ್ ಸಿಟಿ) ನಗರದ ಕೇಂದ್ರಕ್ಕೆ ಸಂಪರ್ಕಿಸಲಿದೆ.

ಆರಂಭದಲ್ಲಿ ರೈಲು ಅರ್ಧಗಂಟೆಗೊಮ್ಮೆ ಸಂಚರಿಸಲಿದ್ದು, 50 ಸಾವಿರ ಜನರು ಪ್ರಯಾಣಿಸುವ ನಿರೀಕ್ಷೆ ಇದೆ. ಪೂರ್ಣ ಪ್ರಮಾಣದಲ್ಲಿ ಸಂಚಾರ ಶುರುವಾದರೆ ಸುಮಾರು 3.5 ಲಕ್ಷ ಜನರಿಗೆ ಉಪಯೋಗವಾಗಲಿದೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಪೂರೈಕೆಯಾಗಿರುವ ಎರಡನೇ ರೈಲು

ವರ್ಷದ ಹಿಂದೆಯೇ ಕಾಮಗಾರಿ ಪೂರ್ಣ

ಹಳದಿ ಮಾರ್ಗದ ಕಾಮಗಾರಿ 2024ರ ಜೂನ್‌ನಲ್ಲಿಯೇ ಪೂರ್ಣಗೊಂಡಿತ್ತು. ಆದರೆ, ರೈಲುಗಳಿಲ್ಲದೇ ಸಂಚಾರ ಆರಂಭವಾಗಿರಲಿಲ್ಲ. ವರ್ಷದ ಬಳಿಕ 2025ರ ಜೂನ್‌ನಲ್ಲಿ ಆರಂಭಗೊಳ್ಳುವ ನಿರೀಕ್ಷೆ ಇದೆ.

ಕಳೆದ ವರ್ಷ ಜೂನ್‌ನಿಂದ ಸುಮಾರು 3 ತಿಂಗಳು ವಿವಿಧ ತಂತ್ರಜ್ಞರು ಹಳದಿ ಮಾರ್ಗದಲ್ಲಿ ಹಲವು ಪರೀಕ್ಷೆಗಳನ್ನು ನಡೆಸಿದ್ದರು. ಚಾಲಕ ರಹಿತ ಎಂಜಿನ್ ಕೋಚ್‌ನಲ್ಲಿ ಸಂಚರಿಸಿ ಟ್ರ್ಯಾಕ್ಷನ್, ಬ್ರೇಕಿಂಗ್ ಪರೀಕ್ಷೆ ಮಾಡಿದ್ದರು.

ಈ ಪರೀಕ್ಷೆಗಳು ಯಶಸ್ವಿಯಾದ ಬಳಿಕ ಸೆಪ್ಟೆಂಬರ್‌ನಲ್ಲಿ ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ಪ್ರಾಯೋಗಿಕ ಸಂಚಾರದ ಮೂಲಕ ಪರೀಕ್ಷೆಗಳನ್ನು ನಡೆಸಿತ್ತು. ರೋಲಿಂಗ್ ಸ್ಟಾಕ್ (ರೈಲು) ತಜ್ಞರು, ಹಳಿ ತಂತ್ರಜ್ಞರು, ಬ್ರೇಕ್ ತಂತ್ರಜ್ಞರು, ವಿವಿಧ ತಾಂತ್ರಿಕ ಪರಿಣತರ ತಂಡದ ಸದಸ್ಯರು ಈ ಪರೀಕ್ಷೆಗಳಲ್ಲಿ ಭಾಗವಹಿಸಿದ್ದರು.

ಮೂರನೇ ರೈಲು ಬಂದ ಮೇಲೆ ಸುಮಾರು ಒಂದು ತಿಂಗಳು ಅಂತಿಮ ಪರೀಕ್ಷೆಗಳು ನಡೆಯಲಿದ್ದು, ರೈಲ್ವೆ ಸುರಕ್ಷತಾ ಆಯುಕ್ತರು ಒಪ್ಪಿಗೆ ನೀಡಿದರೆ ಸಂಚಾರ ಆರಂಭವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಾಯುತ್ತಿದ್ದೇವೆ: ಮಹೇಶ್ವರರಾವ್

ಎಂ. ಮಹೇಶ್ವರ ರಾವ್

ಹಳದಿ ಮಾರ್ಗದಲ್ಲಿ ಮೇ ಅಂತ್ಯ ಇಲ್ಲವೇ ಜೂನ್ ಆರಂಭದಲ್ಲಿ ರೈಲು ಸಂಚಾರ ಆರಂಭಿಸಬೇಕು ಎಂದು ನಿರ್ಧರಿಸಿದ್ದೇವೆ. ಟಿಟಾಗಢದಲ್ಲಿ ಮೂರನೇ ರೈಲು ತಯಾರಾಗಿರುವ ಬಗ್ಗೆ ಮಾಹಿತಿ ಬಂದಿದೆ. ಪ್ಯಾಕಿಂಗ್ ಹಂತದಲ್ಲಿದೆ. ರೈಲಿಗಾಗಿ ನಾವೂ ಕಾಯುತ್ತಿದ್ದೇವೆ. ಹೆಬ್ಬಗೋಡಿಗೆ ರೈಲು ಬಂದ ಕೂಡಲೇ ಅಂತಿಮ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ. ಮೂರು ರೈಲುಗಳನ್ನು ಇಟ್ಟುಕೊಂಡು ಸಂಚಾರ ಆರಂಭಿಸಲಾಗುವುದು. ರೈಲುಗಳ ಸೇರ್ಪಡೆಯಾಗುತ್ತಿದ್ದಂತೆ ಅವಧಿ ಕಡಿಮೆ ಮಾಡಿ, ಟ್ರಿಪ್‌ಗಳನ್ನು ಹೆಚ್ಚಿಸಲಾಗುವುದು ಎಂದರು.

ಮೆಟ್ರೊದಲ್ಲಿ ಊಟ: ₹ 500 ದಂಡ

ಬೆಂಗಳೂರು: ‘ನಮ್ಮ ಮೆಟ್ರೊ’ ರೈಲಿನ ಒಳಗೆ ಊಟ ಮಾಡಿದ ಮಹಿಳೆಗೆ ಬಿಎಂಆರ್‌ಸಿಎಲ್ ₹ 500 ದಂಡ ವಿಧಿಸಿದೆ.

ಮೆಟ್ರೊ ನಿಯಮ ಪ್ರಕಾರ ರೈಲಿನ ಒಳಗೆ ಆಹಾರ ಸೇವಿಸುವಂತಿಲ್ಲ. ಆದರೆ, ಏಪ್ರಿಲ್ 26ರಂದು ಮೆಟ್ರೊ ಹಸಿರು ಮಾರ್ಗದಲ್ಲಿ ಮಾದಾವರ ನಿಲ್ದಾಣದಿಂದ ಮಾಗಡಿ ರಸ್ತೆ ನಿಲ್ದಾಣಕ್ಕೆ ಪ್ರಯಾಣಿಸುತ್ತಿದ್ದ ಮಹಿಳೆ ಸಂಚಾರದ ವೇಳೆಯೇ ಊಟ ಮಾಡಿದ್ದರು. ಸಹಪ್ರಯಾಣಿಕರೊಬ್ಬರು ಇದನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು.

ಅದೇ ಮಹಿಳೆ ಸೋಮವಾರ ಬೆಳಿಗ್ಗೆ ಮಾದಾವರ ಮೆಟ್ರೊ ನಿಲ್ದಾಣಕ್ಕೆ ಬಂದಾಗ ಭದ್ರತಾ ಸಿಬ್ಬಂದಿ ದಂಡ ಹಾಕಿದ್ದಾರೆ.

ಮೆಟ್ರೊ ನಿಲ್ದಾಣದ ಆವರಣದಲ್ಲಿ ಮತ್ತು ರೈಲಿನ ಒಳಗೆ ಆಹಾರ ಮತ್ತು ಪಾನೀಯ ಸೇವಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಕಸ ಹಾಕುವುದನ್ನು ತಡೆಗಟ್ಟಲು, ಶುಚಿತ್ವ ಕಾಪಾಡಿಕೊಳ್ಳಲು ಈ ನಿಯಮ ರೂಪಿಸಲಾಗಿದೆ. ಎಲ್ಲ ಪ್ರಯಾಣಿಕರು ನಿಯಮ ಪಾಲನೆ ಮಾಡಬೇಕು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಗಂಡು ಹುಲಿಯ ಕಳೇಬರ ಪತ್ತೆ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಅಭಯಾರಣ್ಯದ ಓಂಕಾರ ವಲಯ ವ್ಯಾಪ್ತಿಯ ಶ್ರೀಕಂಠಪುರ ಗುಡ್ಡದಲ್ಲಿ 8 ರಿಂದ 9 ವರ್ಷದ ಗಂಡು ಹುಲಿಯ ಕಳೇಬರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಪಶು ವೈದ್ಯಾಧಿಕಾರಿ ಡಾ.ಮುಜೀಬ್ ಮರಣೋತ್ತರ ಪರೀಕ್ಷೆ ನಡೆಸಿದ್ದು, ‘ದೇಹದ ಮೇಲೆ ಗಾಯಗಳು ಪತ್ತೆಯಾಗಿಲ್ಲ. ವಯೋಸಹಜವಾಗಿ ಮೃತಪಟ್ಟಿದೆ’ ಎಂದಿದ್ದಾರೆ.

ನೃತ್ಯ ರೂಪಕ

ಮಹದೇವಪುರ ಸಮೀಪದ ಬಿದರಹಳ್ಳಿಯ ಈಸ್ಟ್ ಪಾಯಿಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಮೂರು ದಿನಗಳ ‘ಸಂಸ್ಕೃತಿ 2K25 ಉತ್ಸವ’ದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ನೃತ್ಯ ಪ್ರದರ್ಶಿಸಿದರು

ದಿ ಗ್ರೇಟ್ ಬೆಂಗಳೂರು ಹ್ಯಾಕಥಾನ್ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯವು ಜಿಸ್ಕ್ ಟೆಕ್ನಾಲಜೀಸ್ ಹಾಗೂ ಹ್ಯಾಕ್ ಕಲ್ಚರ್ ಸಹಯೋಗದಲ್ಲಿ ಆಯೋಜಿಸಿದ್ದ ದಿ ಗ್ರೇಟ್ ಬೆಂಗಳೂರು ಹ್ಯಾಕಥಾನ್ ಯಶಸ್ವಿಯಾಗಿ ಪೂರ್ಣಗೊಂಡಿತು.

ಹ್ಯಾಕಥಾನ್‌ನಲ್ಲಿ 4,700ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. 150 ತಂಡಗಳು ಅಂತಿಮ ಹಂತಕ್ಕೆ ಆಯ್ಕೆಯಾಗಿದ್ದವು. ಇದರಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ಆರು ತಂಡಗಳು ಮತ್ತು ಇತರೆ ಕಾಲೇಜಿನ 18 ತಂಡಗಳಿದ್ದವು.

ಸುರಕ್ಷಿತ ಮತ್ತು ಪರಿಣಾಮಕಾರಿ ಆನ್‌ಲೈನ್ ಪರೀಕ್ಷೆಗಳ ಅಗತ್ಯವನ್ನು ಪರಿಹರಿಸಲು ಆನ್‌ಲೈನ್ ಮೌಲ್ಯಮಾಪನ ಮಾಡಲು ಸಹಾಯವಾಗುವ (ಥ್ಯೂಸ್ಕ್ ಟ್ರ್ಯಾಮಕ್), ಆರ್ಥಿಕ ನಿರ್ಧಾರ ತೆಗೆದುಕೊಳ್ಳಲು ಬಹುಭಾಷಾ ಸಂವಾದಾತ್ಮಕ ಸಲಹೆಗಾರರ ನೇಮಿಸುವುದು (ಸರ್ವಮ್ ಟ್ರ್ಯಾಕ್) ಹಾಗೂ ಯಾತ್ರಿ ಟ್ರ್ಯಾಕ್‌ಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಯಿತು ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಜೆ. ಸೂರ್ಯಪ್ರಸಾದ್ ತಿಳಿಸಿದರು.

ಹ್ಯಾಕಥಾನ್‌ನ ವ್ಯವಸ್ಥಾಪಕಿ ಆರ್ಯಾ ಎ.ಐ., ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಕೆ.ಎಸ್. ಶ್ರೀಧರ್, ವಿ. ಕೃಷ್ಣ, ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗದ ಅಧ್ಯಕ್ಷೆ ಮಮತಾ ಎಚ್.ಆರ್., ಕರಣ್ ಎಂ.ವಿ., ತರುಣ್ ಮಲ್ಲಪ್ಪ ಉಪಸ್ಥಿತರಿದ್ದರು.

‘ದರ ನಿಗದಿ ಸಮಿತಿ ವರದಿ ಬಿಡುಗಡೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಪ್ರಯಾಣ ದರ ಪರಿಷ್ಕರಣೆಗೆ ಶಿಫಾರಸು ಮಾಡಿರುವ ದರ ನಿಗದಿ ಸಮಿತಿಯ ವರದಿಯನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಬೇಕು. ಬಿಎಂಆರ್‌ಸಿಎಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಸಂಸದ ತೇಜಸ್ವಿ ಸೂರ್ಯ ಒತ್ತಾಯಿಸಿದ್ದಾರೆ.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್ ಅವರಿಗೆ ಈ ಬಗ್ಗೆ ಮನವಿ ಸಲ್ಲಿಸಿದ್ದಾರೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಯವರ ಅಧ್ಯಕ್ಷತೆಯಲ್ಲಿ ದರ ನಿಗದಿ ಸಮಿತಿ 2024ರ ಸೆಪ್ಟೆಂಬರ್ 7ರಂದು ರಚನೆಯಾಗಿತ್ತು. ಡಿ.16ರಂದು ಸಮಿತಿಯು ವರದಿ ನೀಡಿತ್ತು. ಆನಂತರ ಮೆಟ್ರೊ ಪ್ರಯಾಣ ದರ ಶೇ 71ರಷ್ಟು ಹೆಚ್ಚಳ ಮಾಡಲಾಯಿತು. ಇದು ದೇಶದಲ್ಲಿಯೇ ದುಬಾರಿಯಾಗಿದೆ. ದರ ನಿಗದಿ ಸಮಿತಿ (ಎಫ್‌ಎಫ್‌ಸಿ) ವರದಿಯಲ್ಲಿರುವ ಶಿಫಾರಸುಗಳನ್ನು ಇಲ್ಲಿವರೆಗೆ ಬಹಿರಂಗಪಡಿಸಿಲ್ಲ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ದೆಹಲಿ ಮೆಟ್ರೊಗೆ ಸಂಬಂಧಿಸಿದಂತೆ ನಾಲ್ಕು ವಿಭಿನ್ನ ಸಂದರ್ಭಗಳಲ್ಲಿ ದರ ನಿಗದಿ ಸಮಿತಿಗಳನ್ನು ರಚಿಸಲಾಗಿತ್ತು. ಆ ಸಮಿತಿಗಳು ನೀಡಿದ್ದ ವರದಿಗಳನ್ನು ದೆಹಲಿ ಮೆಟ್ರೊ ರೈಲು ನಿಗಮ (ಡಿಎಂಆರ್‌ಸಿ) ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅದೇ ರೀತಿ, ಮುಂಬೈ ಮತ್ತು ಹೈದರಾಬಾದ್ ಮೆಟ್ರೊ ಸಂಸ್ಥೆಗಳು ಕೂಡ ದರ ನಿಗದಿ ಸಮಿತಿಯ ವರದಿಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿ ಪಾರದರ್ಶಕವನ್ನು ಕಾಯ್ದುಕೊಂಡಿವೆ. ಸಾರ್ವಜನಿಕರ ವಿಶ್ವಾಸವನ್ನು ಉಳಿಸಿಕೊಂಡಿವೆ. ಬಿಎಂಆರ್‌ಸಿಎಲ್ ಕೂಡ ಇದೇ ಮಾದರಿಯನ್ನು ಅನುಸರಿಸಿ ವರದಿಯನ್ನು ಸಾರ್ವಜನಿಕ ವಲಯಕ್ಕೆ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ತುಷಾರ್ ಬಿಬಿಎಂಪಿ ಆಡಳಿತಾಧಿಕಾರಿ

ಪ್ರಜಾವಾಣಿ ವಾರ್ತೆ

ತುಷಾರ್ ಗಿರಿನಾಥ್

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ನಗರಾಭಿವೃದ್ಧಿ ಇಲಾಖೆ, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯನ್ನಾಗಿ ವರ್ಗಾಯಿಸಿರುವ ಸರ್ಕಾರ, ಬಿಬಿಎಂಪಿಯ ಆಡಳಿತಾಧಿಕಾರಿಯಾಗಿ ಹೆಚ್ಚುವರಿ ಜವಾಬ್ದಾರಿಯನ್ನೂ ನೀಡಿದೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಏಪ್ರಿಲ್ 30ರಂದು ನಿವೃತ್ತರಾಗಲಿದ್ದಾರೆ. ಅವರ ಮೂರೂ ಹುದ್ದೆಗೆ ತುಷಾರ್ ಅವರನ್ನು ನೇಮಿಸ ಲಾಗಿದೆ.

ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರಿಗೆ ಬಿಬಿಎಂಪಿ ಮುಖ್ಯ ಆಯುಕ್ತರ ಹುದ್ದೆ ಹೆಚ್ಚುವರಿಯಾಗಿ ವಹಿಸಲಾಗಿದೆ.

‘ಗೋಕಾಕ್ ಸಾಹಿತ್ಯ ಯಾನ’ ಕಾರ್ಯಕ್ರಮದಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ

ರಾಜಕೀಯ, ಧರ್ಮಗಳಿಗೆ ವಿಮರ್ಶೆ, ಸಂಶೋಧನೆ ಬೇಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕೀಯ ಮತ್ತು ಧರ್ಮಗಳಿಗೆ ಸಾಹಿತ್ಯ, ವಿಮರ್ಶೆ, ಸಂಶೋಧನೆಗಳು ಬೇಕಾಗಿಲ್ಲ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ವಿನಾಯಕ ಕೃಷ್ಣ ಗೋಕಾಕ್ ವಾಙ್ಮಯ ಟ್ರಸ್ಟ್ ಅಧ್ಯಕ್ಷ ನರಹಳ್ಳಿ ಬಾಲಸುಬ್ರಹ್ಮಣ್ಯ ತಿಳಿಸಿದರು.

ವಿನಾಯಕಕೃಷ್ಣಗೋಕಾಕ್‌ವಾಙ್ಮಯ ಟ್ರಸ್ಟ್ ಹಾಗೂ ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜು ಆಯೋಜಿಸಿದ್ದ ‘ಗೋಕಾಕ್ ಸಾಹಿತ್ಯ ಯಾನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಿರ್ಲಕ್ಷ್ಯಕ್ಕೆ ಒಳಗಾಗಿ ಸೊರಗುತ್ತಿರುವ ಕ್ಷೇತ್ರಗಳಲ್ಲಿ ವಿಮರ್ಶೆ, ಸಂಶೋಧನೆಯೂ ಸೇರಿದೆ. ವಿದ್ಯಾರ್ಥಿಗಳು ಸೇರಿದಂತೆ ಯುವ ಸಮೂಹಕ್ಕೆ ಸಂಶೋಧನಾ ಕೌಶಲದ ಬಗ್ಗೆ ಮನದಟ್ಟು ಮಾಡಿಕೊಡಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ ಎಂದು ಅಭಿಪ್ರಾಯಪಟ್ಟರು.

ಮಾಹಿತಿಯನ್ನು ಕ್ಷಣ ಮಾತ್ರದಲ್ಲಿಯೇ ಮೊಬೈಲ್, ಲ್ಯಾಪ್‌ಟಾಪ್, ಪಾಮ್‌ಟ್ಯಾಪ್‌ಗಳ ಮೂಲಕ ಪಡೆಯಬಹುದು. ಇದನ್ನೇ ಯುವಜನರು ಅನುಸರಿಸುತ್ತಿದ್ದಾರೆ. ಜ್ಞಾನ ಮತ್ತು ಮಾಹಿತಿ ಬೇರೆ ಬೇರೆ ಎಂಬುದು ಯುವಪೀಳಿಗೆಗೆ ತಿಳಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬೇಂದ್ರೆ, ಮಾಸ್ತಿ, ಕುವೆಂಪು, ಗೋಕಾಕ್, ಕಾರಂತ, ಐನ್‌ಸ್ಟೀನ್ ಇನ್ನಿತರ ದಾರ್ಶನಿಕರ ಬರಹಗಳಿಂದ ನಾವು ಉತ್ಕೃಷ್ಟ ಜ್ಞಾನವನ್ನು ಪಡೆಯಲು ಸಾಧ್ಯ ಎಂದು ಹೇಳಿದರು.

ಕಥೆಗಾರರಾದ ಲಿಂಗರಾಜ ಸೊಟ್ಟಪ್ಪನವರ್, ಅಂಜನಾ ಹೆಗಡೆ ಅವರಿಗೆ ವಿ.ಕೃ. ಗೋಕಾಕ್ ಫೆಲೋಶಿಪ್ ನೀಡಿ ಗೌರವಿಸಲಾಯಿತು. ಪತ್ರಕರ್ತೆ ವಿದ್ಯಾರಶ್ಮಿ ಪೆಲತ್ತಡ್ಕ, ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಸಂಧ್ಯಾ ಹೆಗಡೆ ದೊಡ್ಡಹೊಂಡ, ಟ್ರಸ್ಟ್ ಕಾರ್ಯದರ್ಶಿ ನ.ರವಿಕುಮಾರ್ ಭಾಗವಹಿಸಿದ್ದರು.

ಕಥೆಗಾರರಾದ ಅಂಜನಾ ಹೆಗಡೆ, ಲಿಂಗರಾಜ ಸೊಟ್ಟಪ್ಪನವರ್ ಅವರಿಗೆ ವಿ.ಕೃ. ಗೋಕಾಕ್ ಫೆಲೋಶಿಪ್ ನೀಡಿ ಗೌರವಿಸಲಾಯಿತು

ಗಾಂಧಿಪುರ: ಬೃಹತ್ ಆರೋಗ್ಯ ತಪಾಸಣಾ ಶಿಬಿರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ಸಮಾಜ ಸೇವಾ ಸಮಿತಿ ಸಹಭಾಗಿತ್ವದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ವೈಟ್‌ಫೀಲ್ಡ್ ಸಮೀಪದ ಗಾಂಧಿಪುರ ಸರ್ಕಾರಿ ಶಾಲೆಯಲ್ಲಿ ಆಯೋಜಿಸಲಾಗಿತ್ತು.

ಆರೋಗ್ಯ ಶಿಬಿರದಲ್ಲಿ ಪ್ರತಿಷ್ಠಿತ ವೈದೇಹಿ ಆಸ್ಪತ್ರೆ, ಮಣಿಪಾಲ್ ಆಸ್ಪತ್ರೆ, ವೈಟ್‌ಫೀಲ್ಡ್ ಆಸ್ಟರ್ ಆಸ್ಪತ್ರೆ, ಬ್ರೂಕ್ ಫೀಲ್ಡ್ ಆಸ್ಪತ್ರೆ, ಗ್ಲೋಬಲ್ ಐ ಫೌಂಡೇಷನ್, ಸಾಯಿ ಆಪ್ಟಿಕಲ್, ಕಾವೇರಿ ಆಸ್ಪತ್ರೆ ಸೇರಿದಂತೆ ಮೊದಲಾದ ಆಸ್ಪತ್ರೆಗಳ ನುರಿತ ವೈದ್ಯರ ತಂಡ ಪಾಲ್ಗೊಂಡಿದ್ದವು.

ಸಾಮಾನ್ಯ ರೋಗಗಳ ತಪಾಸಣೆ, ಹೃದಯ ಸಂಬಂಧಿ ಕಾಯಿಲೆ, ಕಿವಿ, ಹಲ್ಲು, ಕಣ್ಣಿನ ತಪಾಸಣೆ, ಇಸಿಜಿ, ಮಧುಮೇಹ ಸೇರಿದಂತೆ ವಿವಿಧ ರೋಗಗಳ ತಪಾಸಣೆ ನಡೆಸಲಾಯಿತು. ಅಗತ್ಯವಿರುವವರಿಗೆ ಔಷಧಿ, ಕನ್ನಡಕ, ನಡಿಗೆ ಕೋಲು, ಗಾಲಿ ಕುರ್ಚಿ ವಿತರಿಸಲಾಯಿತು. ಎರಡು ಸಾವಿರಕ್ಕೂ ಅಧಿಕ ಜನರು ಶಿಬಿರದ ಪ್ರಯೋಜನ ಪಡೆದುಕೊಂಡರು.

ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಯುವ ಘಟಕದ ರಾಜ್ಯಾಧ್ಯಕ್ಷ ಎ.ರಾಜು ಮಾತನಾಡಿ, ಈ ಭಾಗದಲ್ಲಿ ಬಡವರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಸಿಗಬೇಕೆಂಬ ನಿಟ್ಟಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ 13 ವರ್ಷಗಳಿಂದ ನಮ್ಮ ಸಂಘಟನೆ ಆರೋಗ್ಯ ಶಿಬಿರ ಹಮ್ಮಿಕೊಂಡು ಬರುತ್ತಿದೆ’ ಎಂದರು.

ಈ ಸಂಧರ್ಭದಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಹೆಬ್ಬಾಳ್ ವೆಂಕಟೇಶ್, ಕರ್ನಾಟಕ ದಲಿತ ಕ್ರಿಯಾ ವೇದಿಕೆ ರಾಜ್ಯಾಧ್ಯಕ್ಷ ಕಾಡುಗುಡಿ ಸೊಣ್ಣಪ್ಪ, ಬೆಳತ್ತೂರು ವೆಂಕಟೇಶ್, ಶಕುಂತಲಾಮ್ಮ ಇತರರು ಇದ್ದರು.



ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಯುವ ಘಟಕದ ರಾಜ್ಯಾಧ್ಯಕ್ಷ ಎ.ರಾಜು ಅವರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಶಿಬಿರಕ್ಕೆ ಚಾಲನೆ ನೀಡಿದರು.

ಮಂಗಳವಾರ, ಏಪ್ರಿಲ್ 29, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 118 | ಪುಟ 18

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಳೆ ರಭಸ

ತುಮಕೂರಿನಲ್ಲಿ ಸೋಮವಾರ ರಭಸದ ಮಳೆ ಸುರಿದಿದೆ. ಮಳೆ ಗಾಳಿಗೆ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಮರಗಳು ಬಿದ್ದು ಕಾರುಗಳು ಜಖಂಗೊಂಡಿವೆ

ಆಳ–ಅಗಲ

ಎನ್‌ಸಿಇಆರ್‌ಟಿ ಮತ್ತೆ 'ಪಠ್ಯ' ವಿವಾದ

ಜೋಳ ಖರೀದಿ: ರೈತರು ಕಂಗಾಲು 10

ಭಯೋತ್ಪಾದನೆ ಅಂತ್ಯದ ಆರಂಭ: ಒಮರ್ 2B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,218 ▲	24,328 ▲	₹1.01 ಲಕ್ಷ (ಬೆಂಗಳೂರು) ▼	₹1.03 ಲಕ್ಷ (ಬೆಂಗಳೂರು) ▼	85.23 ▲

ಭಾರತದ ವಿಷಯವಾಗಿ 'ಸುಳ್ಳು, ಪ್ರಚೋದನಕಾರಿ' ಸುದ್ದಿ ಪ್ರಸಾರ ● ಗೃಹ ಸಚಿವಾಲಯದಿಂದ ಕ್ರಮ

ಪಾಕ್ 16 ಚಾನೆಲ್‌ಗಳಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಭಾರತದ ಬಗ್ಗೆ 'ಸುಳ್ಳು, ಪ್ರಚೋದನಕಾರಿ ಮತ್ತು ಕೋಮು ಭಾವನೆ ಕೆರಳಿಸುವ' ಸುದ್ದಿಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ಪಾಕಿಸ್ತಾನದ 16 ಯೂಟ್ಯೂಬ್ ಚಾನೆಲ್‌ಗಳ ಮೇಲೆ ಕೇಂದ್ರ ಸರ್ಕಾರ ಸೋಮವಾರ ನಿರ್ಬಂಧ ಹೇರಿದೆ.

ಗೃಹ ಸಚಿವಾಲಯದ ಶಿಫಾರಸಿನಂತೆ ಸರ್ಕಾರ ಈ ಕ್ರಮ ಕೈಗೊಂಡಿದೆ. ಡಾನ್ ನ್ಯೂಸ್ ಮತ್ತು ಜಿಯೊ ನ್ಯೂಸ್ ಸೇರಿದಂತೆ ಈಚಾನೆಲ್‌ಗಳು ಒಟ್ಟು 6.3 ಕೋಟಿ ಚಂದಾದಾರರನ್ನು ಹೊಂದಿವೆ. 'ಭಾರತದ ಬಗ್ಗೆ, ಭಾರತೀಯ ಸೇನೆ ಮತ್ತುಭದ್ರತಾ ಏಜೆನ್ಸಿಗಳ ಕುರಿತು ಸುಳ್ಳು ಹಾಗೂ ಕಪೋಲಕಲ್ಪಿತ ಮಾಹಿತಿ ಪ್ರಸಾರ ಮಾಡಿರುವುದಕ್ಕೆ ಪಾಕಿಸ್ತಾನದ ಕೆಲವು ಯೂಟ್ಯೂಬ್ ಚಾನೆಲ್‌ಗಳನ್ನು ನಿಷೇಧಿಸುವಂತೆ ಗೃಹ ಸಚಿವಾಲಯ ಶಿಫಾರಸು ಮಾಡಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾನೆಲ್ ಯಾವುವು?: ಡಾನ್ ನ್ಯೂಸ್, ಇರ್ಶಾದ್ ಭಟ್ಟಿ, ಸಮಾ ಟಿ.ವಿ., ಎಆರ್‌ವೈ ನ್ಯೂಸ್, ಬೋಲ್ ನ್ಯೂಸ್, ರಫ್ತಾರ್, ದಿ ಪಾಕಿಸ್ತಾನ್ ರೆಫರೆನ್ಸ್, ಜಿಯೊ ನ್ಯೂಸ್, ಸಮಾ ಸ್ಪೋರ್ಟ್ಸ್, ಜಿಎನ್‌ಎನ್, ಉಜೈರ್ ಕ್ರಿಕೆಟ್, ಉಮರ್ ಚೀಮಾ ಎಕ್ಸ್‌ಕ್ಲೂಸಿವ್, ಅಸ್ಮಾ ಶಿರಾಝಿ, ಮುನೀಬ್ ಫರೂಕಿ, ಸುನೊ ನ್ಯೂಸ್ ಮತ್ತು ರಾಝಿ ನಾಮ ಚಾನೆಲ್‌ಗಳ ಪ್ರಸಾರಕ್ಕೆ ನಿರ್ಬಂಧ ಹೇರಲಾಗಿದೆ.

2B ಪುಟ ನೋಡಿ

'ಆ ಮಕ್ಕಳಿಗೆ ಏನು ಉತ್ತರಿಸಲಿ?'

ಶ್ರೀನಗರ: 'ಒಬ್ಬ ಮುಖ್ಯಮಂತ್ರಿಯಾಗಿ, ಪ್ರವಾಸೋದ್ಯಮ ಸಚಿವನಾಗಿ ಪ್ರವಾಸಿಗರನ್ನು ಇಲ್ಲಿಗೆ ಸ್ವಾಗತಿಸಿದ್ದೇನೆ. ಆದ್ದರಿಂದ ಅವರು ಸುರಕ್ಷಿತವಾಗಿ ಮರಳುವುದನ್ನು ಖಾತರಿ ಪಡಿಸುವುದು ನನ್ನ ಜವಾಬ್ದಾರಿಯಾಗಿತ್ತು. ನನಗೆ ಅದು ಸಾಧ್ಯವಾಗಲಿಲ್ಲ' ಎಂದು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಭಾವುಕರಾಗಿ ಹೇಳಿದರು.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಸೋಮವಾರ ಮಾತನಾಡಿದ ಅವರು, 'ರಕ್ತದ ಮಡುವಿನಲ್ಲಿ ಬಿದ್ದಿದ್ದ ತಂದೆಯನ್ನು ನೋಡಿದ ಆ ಮಕ್ಕಳಿಗೆ, ಕೆಲವೇ ದಿನಗಳ ಹಿಂದೆ ಮದುವೆಯಾದ ನೌಕಾಪಡೆ ಅಧಿಕಾರಿಯ ಪತ್ನಿ ಈಗ ವಿಧವೆಯಾಗಿದ್ದು, ಅವರಿಗೆ ನಾನು ಏನು ಹೇಳಲಿ? ನಾವು ಮಾಡಿದ ತಪ್ಪು ಏನು ಎಂದು ಅವರು ಪ್ರಶ್ನಿಸಿದರು. ನನ್ನ ಬಳಿ ಉತ್ತರವಿರಲಿಲ್ಲ' ಎಂದು ಗದ್ಗದಿತರಾದರು.

2B ಪುಟ ನೋಡಿ

ಬಿಬಿಸಿ ವರದಿಗಾರಿಕೆಗೆ ಆಕ್ಷೇಪ

ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಬಿಬಿಸಿಯ ವರದಿಗಾರಿಕೆ ಬಗ್ಗೆ ಭಾರತ ತೀವ್ರ ಆಕ್ಷೇಪ ಸಲ್ಲಿಸಿದೆ. ಬಿಬಿಸಿ ಇಂಡಿಯಾ ಮುಖ್ಯಸ್ಥ ಜಾಕಿ ಮಾರ್ಟಿನ್ ಅವರಿಗೆ ಪತ್ರ ಬರೆದು ತನ್ನ ಅಸಮಾಧಾನ ಹೊರಹಾಕಿದೆ.

'ದಾಳಿ ನಡೆಸಿದವರನ್ನು ಭಯೋತ್ಪಾದಕರು ಎನ್ನುವ ಬದಲು ಬಂಡುಕೋರರು ಎಂದಿರುವ ಬಿಬಿಸಿ ವರದಿಗಾರಿಕೆಗೆ ಆಕ್ಷೇಪ ವ್ಯಕ್ತಪಡಿಸಿ, ಆ ಮಾಧ್ಯಮ ಸಂಸ್ಥೆಗೆ ಪತ್ರ ಬರೆಯಲಾಗಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಚಾರ ವಿಭಾಗವು ಬಿಬಿಸಿ ವರದಿಗಾರಿಕೆಯ ಮೇಲೆ ಕಣ್ಣಿಡಲಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಜ್ಯದಲ್ಲಿ ಇದ್ದ ನಾಲ್ವರು ಪಾಕ್ ಪ್ರಜೆಗಳ ಗಡಿಪಾರು

ಬೆಂಗಳೂರು: ಕರ್ನಾಟಕದಲ್ಲಿ ಅಕ್ರಮವಾಗಿ ನೆಲಸಿದ್ದ ಪಾಕಿಸ್ತಾನದ ನಾಲ್ವರು ಪ್ರಜೆಗಳನ್ನು ಗಡಿಪಾರು ಮಾಡಲಾಗಿದೆ.

'ಕೇಂದ್ರ ಸರ್ಕಾರದ ಸೂಚನೆಯಂತೆ ಅನಧಿಕೃತವಾಗಿ ವಾಸವಾಗಿರುವ ಪಾಕಿಸ್ತಾನದ ಪ್ರಜೆಗಳ ಪತ್ತೆ ಕಾರ್ಯವನ್ನು ಗುಪ್ತಚರ ವಿಭಾಗದ ಅಧಿಕಾರಿಗಳು ನಡೆಸಿದ್ದರು. ಕಾರ್ಯಾಚರಣೆ ವೇಳೆ ಬ್ಯುಸಿನೆಸ್ ವೀಸಾ, ಎಜುಕೇಷನ್ ವೀಸಾದ ಮೇಲೆ ಬಂದಿದ್ದ ನಾಲ್ವರು, ವೀಸಾದ ಅವಧಿ ಮುಕ್ತಾಯವಾದ ಮೇಲೂ ಅನಧಿಕೃತವಾಗಿ ರಾಜ್ಯದಲ್ಲೇ ನೆಲಸಿದ್ದು ಪತ್ತೆಯಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2B ಪುಟ ನೋಡಿ

ಭಾರತೀಯ ಸೇನೆಯು ಹಠಾತ್ ದಾಳಿ ನಡೆಸುವ ಸಮಯ ಸನ್ನಿಹಿತವಾಗಿದೆ. ನಾವು ಸೈನ್ಯವನ್ನು ಸಜ್ಜುಗೊಳಿಸುತ್ತಿದ್ದೇವೆ

ಖ್ವಾಜಾ ಮಹಮ್ಮದ್ ಆಸಿಫ್
ಪಾಕಿಸ್ತಾನದ ರಕ್ಷಣಾ ಸಚಿವ

ಐಪಿಎಲ್‌ನಲ್ಲಿ ಶತಕದ ವೈಭವ

ರಾಜಸ್ಥಾನ ರಾಯಲ್ಸ್ ತಂಡದ 14 ವರ್ಷ ವಯಸ್ಸಿನ ಬ್ಯಾಟರ್ ವೈಭವ್ ಸೂರ್ಯವಂಶಿ ಸೋಮವಾರ ಐಪಿಎಲ್‌ನಲ್ಲಿ ಚೊಚ್ಚಲ ಶತಕ ದಾಖಲಿಸಿದರು. ಕ್ರಿಸ್ ಗೇಲ್ (30ಎಸೆತ) ಬಳಿಕ ಐಪಿಎಲ್‌ನಲ್ಲಿ ದಾಖಲಾದ ಎರಡನೇ ಅತಿವೇಗದ ಶತಕ (35ಎಸೆತ) ಇದಾಗಿದೆ. ಗುಜರಾತ್ ಟೈಟನ್ಸ್ ವಿರುದ್ಧದ ಪಂದ್ಯವನ್ನು ರಾಜಸ್ಥಾನ ತಂಡವು ಎಂಟು ವಿಕೆಟ್‌ಗಳಿಂದ ಜಯಿಸಿತು

ರನ್ 101

ಎಸೆತ 38

ಬೌಂಡರಿ 7

ಸಿಕ್ಸರ್ 11

5B

ಎಎಸ್ಪಿ ಮೇಲೆ ಕೈ ಎತ್ತಿದ ಸಿ.ಎಂ

ಕಾಂಗ್ರೆಸ್ ಸಭೆಯಲ್ಲಿ ಬಿಜೆಪಿಯಿಂದ ಕಪ್ಪು ಬಟ್ಟೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಳಗಾವಿ:ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಕಾಂಗ್ರೆಸ್ ಇಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಷಣಕ್ಕೆ ಬಿಜೆಪಿಯ ಆರು ಕಾರ್ಯಕರ್ತೆಯರು ಅಡ್ಡಿಪಡಿಸಿದರು. ಕಪ್ಪು ಬಾವುಟ ಪ್ರದರ್ಶಿಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸಮಾವೇಶದಲ್ಲಿ ಅವ್ಯವಸ್ಥೆ ಮತ್ತು ಗೊಂದಲ ಆಗಿರುವುದು ಕಂಡು ಸಿಟ್ಟಿಗೆದ್ದ ಸಿದ್ದರಾಮಯ್ಯ ಅವರು, ಭದ್ರತೆ ನಿಗಾ ವಹಿಸಿದ್ದ ಪೊಲೀಸರತ್ತ ಕೈ ಮಾಡಿದರು. ಧಾರವಾಡದ ಎಎಸ್ಪಿ ನಾರಾಯಣ ಭರಮನಿ ಅವರು ವೇದಿಕೆ ಏರಿ ಬರುತ್ತಿದ್ದಂತೆಯೇ, ಅವರ ಮೇಲೆ ಕೈ ಎತ್ತಲು ಸಿದ್ದರಾಮಯ್ಯ ಮುಂದಾದರು. ಭರಮನಿ ತಕ್ಷಣವೇ ಹಿಂದೆ ಸರಿದರು.

'ಯಾರಯ್ಯ ಬೆಳಗಾವಿ ಎಸ್ಪಿ? ಏನು ನಡೆಯುತ್ತಿದೆ ಇಲ್ಲಿ? ಏನ್ ಮಾಡುತ್ತಿದ್ದೀರಿ ನೀವೆಲ್ಲ' ಎಂದು ಸಿದ್ದರಾಮಯ್ಯ ರೇಗಿದರು. ಅವರನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಯ್ಯದ್ ನಾಸಿರ್ ಹುಸೇನ್ ಹಾಗೂ ಸಚಿವ ಎಚ್.ಕೆ.ಪಾಟೀಲ ಅವರು ಸಮಾಧಾನಪಡಿಸಿದರು.

11ನೇ ಪುಟ ನೋಡಿ

ಬೆಳಗಾವಿಯಲ್ಲಿ ಸೋಮವಾರ ಕಾಂಗ್ರೆಸ್ ಸಮಾವೇಶದಲ್ಲಿ ಎಎಸ್ಪಿ ನಾರಾಯಣ ಭರಮನಿ ಅವರತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಕೈ ಎತ್ತಿದರು

ಒಬ್ಬ ಮುಖ್ಯಮಂತ್ರಿ ಪೊಲೀಸ್ ಅಧಿಕಾರಿಯನ್ನು ಇಷ್ಟು ಕೀಳಾಗಿ ನಡೆಸಿಕೊಳ್ತಾರಾ? ಅಧಿಕಾರಿಗಳು ಸರ್ಕಾರದ ಕೈಬೊಂಬೆನಾ? ಸಿದ್ದರಾಮಯ್ಯರ ದುರಹಂಕಾರ ಅಂದ್ರೆ ಇದೇನೇ

ಆರ್.ಅಶೋಕ, ವಿರೋಧಪಕ್ಷದ ನಾಯಕ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹೇಳಿಕೆ ನೀಡದಂತೆ 'ಕೈ' ನಾಯಕರಿಗೆ ತಾಕೀತು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿ ಕುರಿತು ಯಾವುದೇ ಹೇಳಿಕೆ ನೀಡಬಾರದು ಎಂದು ಕಾಂಗ್ರೆಸ್ ಹೈಕಮಾಂಡ್ ತನ್ನ ನಾಯಕರಿಗೆ ಸೋಮವಾರ ತಾಕೀತು ಮಾಡಿದೆ.

ಈಚೆಗೆ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ತೆಗೆದುಕೊಂಡ ನಿರ್ಣಯ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪದಾಧಿಕಾರಿಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಮಾತ್ರ ಪಕ್ಷದ ನಿಲುವನ್ನು ಪ್ರತಿನಿಧಿಸುತ್ತವೆ ಎಂದು ಸ್ಪಷ್ಟಪಡಿಸಿದೆ.

ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಆರ್.ಬಿ. ತಿಮ್ಮಾಪುರ, ಹಿರಿಯ ಸಂಸದ ಶಶಿ ತರೂರ್, ಮಹಾರಾಷ್ಟ್ರ ಕಾಂಗ್ರೆಸ್‌ನ ಹಿರಿಯ ನಾಯಕ ವಿಜಯ್ ವಡೆಟ್ಟಿವಾರ್, ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್‌ನ ಅಧ್ಯಕ್ಷ ತಾರಿಕ್ ಹಮೀದ್, ಕಾಶ್ಮೀರದ ಹಿರಿಯ ನಾಯಕ ಸೈಫುದ್ದೀನ್ ಸೋಜ್ ಹಾಗೂ ಕೇಂದ್ರದ ಮಾಜಿ ಸಚಿವ ಮಣಿಶಂಕರ್ ಅಯ್ಯರ್ ಅವರು ಪಾಕಿಸ್ತಾನದ ಜತೆಗಿನ ಯುದ್ಧದ ಅಗತ್ಯತೆಯನ್ನು ಪ್ರಶ್ನಿಸಿ ನೀಡಿರುವ ಹೇಳಿಕೆಗಳು ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿವೆ.

ಕೆಲವು ನಾಯಕರ ಹೇಳಿಕೆಗಳಿಂದಾಗಿ ಪಕ್ಷವು ತೀವ್ರ ಟೀಕೆಗೆ ಗುರಿಯಾಗುತ್ತಿದ್ದಂತೆಯೇ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು 'ಎಕ್ಸ್' ಖಾತೆಯಲ್ಲಿ ಹೇಳಿಕೆಯನ್ನು ಪೋಸ್ಟ್ ಮಾಡಿದ್ದಾರೆ. 'ಕೆಲವು ನಾಯಕರು ಮಾಧ್ಯಮಗಳಿಗೆ ನೀಡಿದ ಹೇಳಿಕೆಯು ಅವರ ವೈಯಕ್ತಿಕ ಅಭಿಪ್ರಾಯವೇ ಹೊರತು, ಕಾಂಗ್ರೆಸ್‌ನ ಅಭಿಪ್ರಾಯ ಅಲ್ಲ' ಎಂದಿದ್ದಾರೆ.

ಜೈರಾಮ್ ರಮೇಶ್

ಪಕ್ಷದ ಕಾರ್ಯಕಾರಿ ಸಮಿತಿಯು (ಸಿಡಬ್ಲ್ಯುಸಿ) ಭಯೋತ್ಪಾದಕ ದಾಳಿಯನ್ನು ಖಂಡಿಸಿ ಏ.24ರಂದು ನಿರ್ಣಯ ತೆಗೆದುಕೊಂಡಿದೆ. ಖರ್ಗೆ ಮತ್ತು ರಾಹುಲ್ ಅವರು ಏ.25ರಂದು ನಡೆದ ಸರ್ವಪಕ್ಷ ಸಭೆಯಲ್ಲಿ ಪಕ್ಷದ ಅಭಿಪ್ರಾಯಗಳನ್ನು ತಿಳಿಸಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ನಾಯಕರ ಹೇಳಿಕೆಗಳನ್ನು ಭಾರತದ ಮಾನಹಾನಿ ಮಾಡಲು ಪಾಕಿಸ್ತಾನವು ಬಳಸಿಕೊಂಡಿದೆ ಎಂದು ಬಿಜೆಪಿ ಆರೋಪಿಸಿತ್ತು.

ಜನಿವಾರ ತೆಗೆಸದಂತೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲ್ವೆ ನೇಮಕಾತಿ ಮಂಡಳಿಯು ನಡೆಸುತ್ತಿರುವ ನೇಮಕಾತಿ ಪರೀಕ್ಷೆಯ ಸಂದರ್ಭದಲ್ಲಿ ಅಭ್ಯರ್ಥಿಗಳ ಜನಿವಾರ ಹಾಗೂ ಮಾಂಗಲ್ಯ ತೆಗೆಸದಂತೆ ನಿರ್ದೇಶನ ನೀಡಲಾಗಿದೆ. ಈ ಸಂಬಂಧ ಅಧಿಕೃತ ಆದೇಶ ಹೊರಡಿಸಲಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

'ಅಭ್ಯರ್ಥಿಗಳು ಜನಿವಾರ, ಮಾಂಗಲ್ಯ ತೆಗೆದಿಟ್ಟು ಪರೀಕ್ಷೆ ಬರೆಯಬೇಕೆಂಬ ವಿಷಯ ವನ್ನು ಪರೀಕ್ಷಾ ನಿಯಮದಲ್ಲಿ ಉಲ್ಲೇಖಿಸಲಾಗಿದೆ ಎಂದು ದೂರುಗಳು ಬಂದಿದ್ದವು. ಈ ಗೊಂದಲ ನಿವಾರಿಸುವಂತೆ ಸಂಸದರು ಹಾಗೂ ಶಾಸಕರು ಮನವಿ ಮಾಡಿದ್ದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ವಿವಿಧ ಸಂಘಟನೆಗಳು ಈ ಬಗ್ಗೆ ಗಮನ ಸೆಳೆದಿದ್ದವು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಈ ವಿಷಯದ ಬಗ್ಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ರೈಲ್ವೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಗೊಂದಲ ನಿವಾರಿಸಲಾಗಿದೆ. ಜನಿವಾರ, ಮಾಂಗಲ್ಯ ಸೇರಿದಂತೆ ಧಾರ್ಮಿಕ ಸಂಕೇತ ಬಿಂಬಿಸುವ ಯಾವುದೇ ವಸ್ತು ಧರಿಸಿ ಬಂದಲ್ಲಿ ಅಭ್ಯರ್ಥಿಗಳಿಗೆ ತೊಂದರೆ ನೀಡಬಾರದೆಂದು ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗಿದೆ' ಎಂದರು.

'ಇತರಎಲ್ಲಪರೀಕ್ಷಾನಿಯಮಗಳನ್ನುಪಾಲಿಸಿ ಪರೀಕ್ಷೆ ಬರೆಯಲು ಅಭ್ಯರ್ಥಿಗಳಿಗೆ ಅನುವು ಮಾಡಿಕೊಡಲು ಸೂಚಿಸಲಾಗಿದೆ' ಎಂದರು.

ಒಪ್ಪಂದಕ್ಕೆ ಭಾರತ–ಫ್ರಾನ್ಸ್ ಸಹಿ ● ₹64 ಸಾವಿರ ಕೋಟಿ ವೆಚ್ಚ

ನೌಕಾಪಡೆಗೆ 26 ರಫೆಲ್ ಜೆಟ್ ಖರೀದಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಭಾರತೀಯ ನೌಕಾಪಡೆಯ ಬಲ ಹೆಚ್ಚಿಸುವ ಉದ್ದೇಶದಿಂದ ರಫೆಲ್–ಎಂ 26 ಯುದ್ಧ ವಿಮಾನಗಳನ್ನು ₹64 ಸಾವಿರ ಕೋಟಿ ವೆಚ್ಚದಲ್ಲಿ ಖರೀದಿಸುವ ಒಪ್ಪಂದಕ್ಕೆ ಭಾರತವು ಫ್ರಾನ್ಸ್ ಜತೆಗೆ ಸೋಮವಾರ ಸಹಿ ಹಾಕಿತು.

'ಫ್ರಾನ್ಸ್‌ನ ಯುದ್ಧ ವಿಮಾನ ತಯಾರಿಕಾ ಕಂಪನಿ ಡಸಾಲ್ಟ್ ಏವಿಯೇಷನ್ ಪೂರೈಸಲಿರುವ ರಫೆಲ್ ಮರೀನ್ ಯುದ್ಧ ವಿಮಾನಗಳು ಸಾಗರ ಪ್ರದೇಶದಲ್ಲಿ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ. ಇವುಗಳನ್ನು ದೇಶಿ ನಿರ್ಮಿತ ಐಎನ್‌ಎಸ್ ಯುದ್ಧ ನೌಕೆಗೆ ನಿಯೋಜಿಸಲಾಗುವುದು. ಭಾರತೀಯ ನೌಕಾಪಡೆಗೆ 2030ರೊಳಗೆ ಈ ವಿಮಾನಗಳ ಸೇರ್ಪಡೆ ಪೂರ್ಣವಾಗಲಿದೆ. ಫ್ರಾನ್ಸ್ ಮತ್ತು ಭಾರತದಲ್ಲಿ ಸಿಬ್ಬಂದಿಗೆ ತರಬೇತಿ ನೀಡಲಾಗುವುದು' ಎಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಫ್ರಾನ್ಸ್ ರಕ್ಷಣಾ ಸಚಿವ ಸೆಬಾಸ್ಟಿಯನ್ ಲೆಕೊರ್ನು ಅವರು ಒಪ್ಪಂದಕ್ಕೆ ಸಹಿ ಹಾಕಿದರು. ಸಹಿ ಮಾಡಿದ ಒಪ್ಪಂದದ ಪ್ರತಿಗಳನ್ನು ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರ ಸಮ್ಮುಖದಲ್ಲಿ ಉಭಯ ರಾಷ್ಟ್ರಗಳ ಅಧಿಕಾರಿಗಳು ವಿನಿಮಯ ಮಾಡಿಕೊಂಡರು.

ಒಪ್ಪಂದದ ಪ್ರಕಾರ, ಏಕ ಆಸನದ 22 ಮತ್ತು ಎರಡು ಆಸನಗಳ ನಾಲ್ಕು ವಿಮಾನಗಳನ್ನು ಡಸಾಲ್ಟ್ ಏವಿಯೇಷನ್ ಪೂರೈಸಲಿದೆ.2028ರ ವೇಳೆಗೆ ವಿಮಾನಗಳನ್ನು ನೀಡುವ ಪ್ರಕ್ರಿಯೆ ಪ್ರಾರಂಭವಾಗಲಿದೆ.

7ನೇ ಪುಟ ನೋಡಿ

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. **ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ಕಾಗದಪತ್ರ ಅಗತ್ಯವಿರಬಹುದು. **ಬಡ್ಡಿ ದರಗಳು, ಡೌನ್ ಪೇಮೆಂಟ್ ಮತ್ತು ಅವಧಿ ಆಯ್ಕೆಗಳು ಅರ್ಜಿದಾರರ ಸಾಲ ಪ್ರೊಫೈಲ್ ಅನ್ನು ಸಾಲದಾತರು ವಿಶ್ಲೇಷಣೆ ಮಾಡುವುದನ್ನು ಆಧರಿಸಿದೆ. **ಕೊಡುಗೆಗಳು/ವೈಶಿಷ್ಟ್ಯಗಳನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಮಾರ್ಪಾಡು ಮಾಡಬಹುದು ಅಥವಾ ಹಿಂಪಡೆಯಬಹುದು. #ಪೈನ್ ಲ್ಯಾಬ್ಸ್ ಮಶೀನ್‌ಗಳ ಮೂಲಕ IDFC FIRST ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿಕೊಂಡು ಮಾಡಿದ EMI ವಹಿವಾಟುಗಳಿಗೆ ಆಯ್ದ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಆಫರ್ ಲಭ್ಯವಿದೆ. #ಗ್ರಾಹಕರು 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಗರಿಷ್ಠ ₹5000 ವರೆಗೆ ಪಡೆಯಬಹುದು. #ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್ ಗೆ ಒಂದು ವಹಿವಾಟಿಗೆ ಮಾನ್ಯವಾಗಿದೆ. #ಸ್ಕೀಮ್ ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಲಭ್ಯವಿದೆ. *3 ವರ್ಷಗಳ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್ ಕೇವಲ Activa 110 ಮತ್ತು Activa 125 ಡಿಲಕ್ಸ್ ವೇರಿಯಂಟ್‌ನಲ್ಲಿ ಮಾತ್ರ ಲಭ್ಯವಿದೆ. *₹5500 ಮೌಲ್ಯದ 3 ವರ್ಷದ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್‌ನ ವಿವರವಾದ ನಿಯಮ ಮತ್ತು ಷರತ್ತುಗಳ ಬಗ್ಗೆ ದಯವಿಟ್ಟು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳನ್ನು ಸಂಪರ್ಕಿಸಿ. *ಈ ಮೇಲಿನ ಸ್ಕೀಮ್ ಅನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಎಲ್ಲ ಕೊಡುಗೆಗಳು 2025 ಏಪ್ರಿಲ್ 30 ರ ವರೆಗೆ ಮಾನ್ಯವಾಗಿದೆ. ^ಸೀಮಿತ ಅವಧಿಯ ವಿಶೇಷ ದರವು ಕರ್ನಾಟಕ ರಾಜ್ಯದಲ್ಲಿ Activa 110cc ಸ್ಟಾಂಡರ್ಡ್ OBD2B ವೇರಿಯಂಟ್‌ಗಾಗಿದೆ. ಸೀಮಿತ ಅವಧಿಯ ವಿಶೇಷ ಬೆಲೆಯ ಬಗ್ಗೆ ವಿವರಗಳಿಗಾಗಿ, ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳನ್ನು ಸಂಪರ್ಕಿಸಿ. ಕ್ರಿಯೇಟಿವ್‌ನಲ್ಲಿ ತೋರಿಸಿದ ವೈಶಿಷ್ಟ್ಯಗಳು ಎಲ್ಲ ವೇರಿಯಂಟ್‌ಗಳಲ್ಲಿ ಲಭ್ಯವಿಲ್ಲದಿರಬಹುದು. ಚಿತ್ರದಲ್ಲಿ ತೋರಿಸಿದ ಉತ್ಪನ್ನಗಳು ಮಾರ್ಕೆಟ್‌ನಲ್ಲಿನ ಅಸಲಿ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

ವೈಟ್ ಟಾಪಿಂಗ್ ವಿಳಂಬ ಇಬ್ಬರು ಗುತ್ತಿಗೆದಾರರಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ದಕ್ಷಿಣ ಹಾಗೂ ಪಶ್ಚಿಮ ವಲಯದಲ್ಲಿ ವೈಟ್ ಟಾಪಿಂಗ್ ಕಾಮಗಾರಿಯಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ಇಬ್ಬರು ಗುತ್ತಿಗೆದಾರರಿಗೆ ತಲಾ ₹5 ಲಕ್ಷ ದಂಡ ವಿಧಿಸಲಾಗಿದೆ.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರದ ವೆಸ್ಟ್ ಆಫ್ ಕಾರ್ಡ್ ರಸ್ತೆ ಹಾಗೂ ಹೊಸಕೆರೆಹಳ್ಳಿ ಮುಖ್ಯರಸ್ತೆಯಲ್ಲಿ ಗುತ್ತಿಗೆ ಸಂಸ್ಥೆ ಜೆಎಂಸಿಗೆ ಸಂಸ್ಥೆ ವೈಟ್ ಟಾಪಿಂಗ್ ಕಾಮಗಾರಿಯನ್ನು ಪ್ರಾರಂಭಿಸದೆ, ಸಾರ್ವಜನಿಕರಿಗೆ ಅನಾನುಕೂಲ ಮಾಡಿರುವುದಕ್ಕೆ ದಂಡ ವಿಧಿಸಲಾಗಿದೆ.

ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಓಷಿಯನ್ ಕನ್ ಸ್ಟ್ರಕ್ಷನ್ ಸಂಸ್ಥೆ ವೈಯಾಲಿ ಕಾವಲ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ನಿಧಾನಗತಿಯಲ್ಲಿ ನಿರ್ವಹಿಸುತ್ತಿರುವುದರಿಂದ ದಂಡ ವಿಧಿಸಲಾಗಿದೆ. ವೈಟ್ ಟಾಪಿಂಗ್ ಕಾಮಗಾರಿ ತ್ವರಿತಗತಿ ನಡೆಸದವರಿಗೆ ದಂಡ ವಿಧಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಪ್ರಧಾನ ಎಂಜಿನಿಯರ್ ಬಿ.ಎಸ್ ಪ್ರಹ್ಲಾದ್ ಅವರಿಗೆ ಆದೇಶಿಸಿದ್ದರು. ಅದರಂತೆ, ರಸ್ತೆ ಮತ್ತು ಮೂಲಸೌಕರ್ಯ ವಿಭಾಗದ ಆಯಾ ವಲಯಗಳ ಕಾರ್ಯಪಾಲಕ ಎಂಜಿನಿಯರ್ ಅವರು ಗುತ್ತಿಗೆದಾರರಿಗೆ ದಂಡ ವಿಧಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೇ 8ರವರೆಗೆ ಬನಶಂಕರಿ ಚಿತಾಗಾರ ಸ್ಥಗಿತ

ಬೆಂಗಳೂರು: ಬನಶಂಕರಿ ವಿದ್ಯುತ್ ಚಿತಾಗಾರದಲ್ಲಿ ಎರಡು ಪರ್ನೆಸ್ ಕಾಯಿಲ್ ಹಾಗೂ ಬ್ರಿಕ್ಸ್‌ಗಳ ತುರ್ತು ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಏಪ್ರಿಲ್ 29ರಿಂದ ಮೇ 8ರವರೆಗೆ ಚಿತಾಗಾರ ಸ್ಥಗಿತಗೊಳ್ಳಲಿದೆ ಎಂದು ಬಿಬಿಎಂಪಿ ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಬಿಜೆಪಿಯವರದ್ದು ಇಬ್ಬಗೆ ನೀತಿ: ರಮೇಶ್ ಬಾಬು

ಪ್ರಜಾವಾಣಿ ವಾರ್ತೆ

ರಮೇಶ್ ಬಾಬು

ಬೆಂಗಳೂರು: 'ರೈಲ್ವೆ ಪರೀಕ್ಷೆಯ ಸಂದರ್ಭದಲ್ಲಿ ತಾಳಿ, ಕುಂಕುಮ ನಿಷೇಧಿಸಿ ಸುತ್ತೋಲೆ ಹೊರಡಿಸಿದ್ದರೂ ಬಿಜೆಪಿಯವರು ಏಕೆ ಮೌನ ವಹಿಸಿದ್ದಾರೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿಯವರದ್ದು ಇಬ್ಬಗೆ ನೀತಿ, ರಾಜಕಾರಣ. ಧಾರ್ಮಿಕ ಭಾವನೆಗಳನ್ನು ಇಟ್ಟುಕೊಂಡು ಅವರು ಆಟವಾಡುತ್ತಾರೆ' ಎಂದು ದೂರಿದರು.

'ರೈಲ್ವೆ ಪರೀಕ್ಷೆಯಲ್ಲಿ ಧಾರ್ಮಿಕ ಸಂಕೇತಗಳನ್ನು ನಿಷೇಧಿಸಿದ ಕೇಂದ್ರ ಸರ್ಕಾರದ ನೀತಿಯನ್ನು ಬ್ರಾಹ್ಮಣ ಮಹಾಸಭಾ ಸೇರಿದಂತೆ ಎಲ್ಲ ಹಿಂದೂ ಧಾರ್ಮಿಕ ಸಂಘಟನೆಗಳು ಪ್ರಶ್ನಿಸಬೇಕು' ಎಂದು ಅವರು ಒತ್ತಾಯಿಸಿದರು.

ಆರೋಪದಲ್ಲಿ ಹುರುಳಿಲ್ಲ: 'ಟಿಸಿಎಸ್ 10ಕೆ ಓಟದಲ್ಲಿ ಭಾಗವಹಿಸಿದ್ದ ಸ್ಪರ್ಧಿಗಳು ದೂಳು, ಗುಂಡಿಯಿಂದ ಕೂಡಿದ ರಸ್ತೆಯಲ್ಲಿ ಓಡಬೇಕಾಯಿತು. ನಗರದ ರಸ್ತೆಗಳು ಹಾಳಾಗಿರುವ ಪರಿಣಾಮ ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಮಾನ ಹರಾಜಾಯಿತು ಎನ್ನುವ ಸಂಸದ ತೇಜಸ್ವಿ ಸೂರ್ಯ ಅವರ ಆರೋಪದಲ್ಲಿ ಹುರುಳಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರ ರಾಜಕೀಯ ಕಾರ್ಯದರ್ಶಿ ದೀಪಕ್ ತಿಮ್ಮಯ ಹೇಳಿದರು.

ಐಐಎಸ್‌ಸಿ ನಿರ್ದೇಶಕ ಕ್ರಿಸ್ ಗೋಪಾಲಕೃಷ್ಣನ್ ಸೇರಿ 16 ಜನರ ವಿರುದ್ಧದ ದೂರು

ಜಾತಿ ನಿಂದನೆ ಆರೋಪ: ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ನಿಂದನೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ಫೊಸಿಸ್ ಸಹ ಸಂಸ್ಥಾಪಕ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಆಡಳಿತ ಮಂಡಳಿ ಅಧ್ಯಕ್ಷ ಸೇನಾಪತಿ ಕ್ರಿಸ್ ಗೋಪಾಲಕೃಷ್ಣನ್ ಹಾಗೂ ಐಐಎಸ್‌ಸಿ ನಿರ್ದೇಶಕ ಗೋವಿಂದನ್ ರಂಗರಾಜನ್ ಸೇರಿದಂತೆ ಒಟ್ಟು 16 ಜನರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

'ನಮ್ಮ ವಿರುದ್ಧದ ಪ್ರಕರಣ ರದ್ದು ಪಡಿಸಬೇಕು' ಎಂದು ಕೋರಿ ಐಐಎಸ್‌ಸಿ ನಿರ್ದೇಶಕ ಗೋವಿಂದನ್ ರಂಗರಾಜನ್ ಸೇರಿದಂತೆ ಒಟ್ಟು 16 ಜನರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

ಐಐಸಿಎಸ್‌ಯ ಸುಸ್ಥಿರ ತಂತ್ರಜ್ಞಾನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದ ಭೋವಿ ಸಮುದಾಯದ ದೂರುದಾರ ಡಿ.ಸಣ್ಣ ದುರ್ಗಪ್ಪ ಅವರನ್ನು; ಮಹಿಳೆ ಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಸೇವೆಯಿಂದ ವಜಾಗೊಳಿಸಲಾಗಿತ್ತು. ಬಳಿಕ ಅದನ್ನು ರಾಜೀನಾಮೆ ರೂಪಕ್ಕೆ ಪರಿವರ್ತಿಸಲಾಗಿತ್ತು. ನಂತರ ಸಣ್ಣ ದುರ್ಗಪ್ಪ ಅವರು, 'ಜಾತಿ ತಾರತಮ್ಯ ನಡೆಸುವ ಮೂಲಕ ನನ್ನನ್ನು ಸೇವೆಯಿಂದ ವಜಾಗೊಳಿಸಲಾಗಿದೆ' ಎಂದು ಆರೋಪಿಸಿ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

ಒಟ್ಟು 18 ಜನರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ, ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ಕಲಂ 3(8), 3(14), 3(1)(2), 3(ಎಕ್ಸ್) ಅಡಿ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಈ ಕುರಿತ ಎಫ್‌ಐಆರ್ ಮತ್ತು 71ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಪರಿಗಣಿಸಿರುವ ಖಾಸಗಿ ದೂರನ್ನು ರದ್ದುಗೊಳಿಸುವಂತೆ ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, 'ಪ್ರತಿವಾದಿ ಡಿ.ಸಣ್ಣ ದುರ್ಗಪ್ಪ ಅವರನ್ನು ಸೇವೆಯಿಂದ ವಜಾಗೊಳಿಸಿರುವ ಕ್ರಮ ಮತ್ತು ಅದನ್ನು ರಾಜೀನಾಮೆಯನ್ನಾಗಿ ಪರಿಗಣಿಸಿರುವುದು ಸಿವಿಲ್ ಪ್ರಕ್ರಿಯೆಯಾಗಿದೆ. ಇಂತಹುದನ್ನು ಕ್ರಿಮಿನಲ್ ಆರೋಪದಡಿ ದೂರು ದಾಖಲಿಸುವುದು ಸಾಧ್ಯವಿಲ್ಲ. ಇದು ಅರ್ಜಿದಾರರಿಗೆ ಕಿರುಕುಳ ನೀಡುವ ದುರುದ್ದೇಶಪೂರಿತ ಪ್ರಯತ್ನ. ಆದ್ದರಿಂದ, ದೂರನ್ನು ವಜಾಗೊಳಿಸಲಾಗುತ್ತಿದೆ' ಎಂದು ಹೇಳಿದೆ. ಅಂತೆಯೇ, ಪ್ರಕರಣದ ದೂರುದಾರರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆ ನಡೆಸುವುದಕ್ಕೆ ಅನುಮತಿ ಕೋರಿ ರಾಜ್ಯ ಅಡ್ವೋಕೇಟ್ ಜನರಲ್ ಅವರಿಗೆ ಅನುಮತಿ ಕೋರಲು ಅರ್ಜಿದಾರರಿಗೆ ಸ್ವಾತಂತ್ರ್ಯನೀಡಿದೆ.

ಮುಖ್ಯಾಂಶಗಳು

- ಹೈಕೋರ್ಟ್‌ಗೆ ಸಲ್ಲಿಸಿದ್ದ ರಿಟ್ ಅರ್ಜಿ
- ಪ್ರಾಧ್ಯಾಪಕ ಡಿ. ಸಣ್ಣ ದುರ್ಗಪ್ಪ ಎಂಬುವರಿಂದ ಆರೋಪ
- ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು
- ಅಡ್ವೊಕೇಟ್ ಜನರಲ್ ಅನುಮತಿ ಕೋರಲು ಅವಕಾಶ

ಅರ್ಜಿ ಸಲ್ಲಿಸಿದ್ದವರು

ರಿಜಿಸ್ಟ್ರಾರ್ ಕ್ಯಾಪ್ಟನ್ ಶ್ರೀಧರ್ ವಾರಿಯರ್, ಆಡಳಿತ ಮಂಡಳಿ ಮುಖ್ಯಸ್ಥ ಸೇನಾಪತಿ ಕ್ರಿಸ್ ಗೋಪಾಲಕೃಷ್ಣನ್, ಡೀನ್ ಪಿ.ಅನಿಲ್ ಕುಮಾರ್, ಎಂಸಿಬಿಯ ಆಡಳಿತ ಮತ್ತು ಹಣಕಾಸು ವಿಭಾಗದ ಡೀನ್ ದೀಪ್‌ಶಿಖಾ ಚಕ್ರವರ್ತಿ, ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ನಮ್ರತಾ ಗುಂಡಯ್ಯ, ವೈದ್ಯಕೀಯ ಕೇಂದ್ರದ ವೈದ್ಯಾಧಿಕಾರಿ ಡಾ.ನಿರ್ಮಲಾ, ಬಯೊ ಎಂಜಿನಿಯರಿಂಗ್ ವಿಭಾಗದ ಸಂಧ್ಯಾ ಎಸ್.ವಿಶ್ವೇಶ್ವರಯ್ಯ (ನಿವೃತ್ತ), ಇಸಿಇ ವಿಭಾಗದ ಕೆ.ವಿ.ಎಸ್ ಹರಿ, ಸಿಎಸ್‌ಟಿ ವಿಭಾಗದ ಎಸ್.ದಾಸಪ್ಪ, ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದ ಪ್ರಧಾನ ಸಂಶೋಧನಾ ವಿಜ್ಞಾನಿ ಪಿ.ಬಾಲಚಂದ್ರ, ಐಐಎಸ್‌ಸಿ ಮಾಜಿ ನಿರ್ದೇಶಕ ಪಿ.ಬಲರಾಮ್, ಬಯೊ ಕೆಮಿಸ್ಟ್ರಿ ವಿಭಾಗದ ಅಂಜಲಿ ಎ.ಕಾರಂಡೆ (ನಿವೃತ್ತ), ಕೆ.ಚಟ್ಟೋಪಾಧ್ಯಾಯ (ನಿವೃತ್ತ), ವಕೀಲರಾದ ಪ್ರದೀಪ್ ಎಸ್. ಸಾವ್ಕಾರ್ ಮತ್ತು ಅಭಿಲಾಷ್ ರಾಜು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಕ್ಯೂಎ/ಕ್ಯೂಸಿ) ವಿಭಾಗ, ಯಲಹಂಕ ವಲಯ, ರೂಂ ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ(ಕ್ಯೂಎ/ಕ್ಯೂಸಿ)/ಯಲಹಂಕ/ಟೆಂಡರ್/05/2025–26 ದಿನಾಂಕ: 28–04–2025

ಅಲ್ಪಾವಧಿ ಟೆಂಡರ್ ಪ್ರಕಟಣೆ – (4ನೇ ಕರೆ)

(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ (ಯಲಹಂಕ ವಲಯ), ಬಿಬಿಎಂಪಿ, ಇವರು ಈ ಕೆಳಕಂಡ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣೆಗೆ ಸಮಾಲೋಚನಾ ಸೇವೆಗಳಿಗಾಗಿ ಇದೇ ವಿಧದ ಕಾಮಗಾರಿಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಡಿಪಿಆರ್ ತಯಾರಿಕೆಯೊಂದಿಗೆ ರಸ್ತೆ ಅಗಲೀಕರಣವನ್ನು ಪ್ರಾರಂಭಿಸಲು ಅನುದಾನಗಳು, ಭೂಸ್ವಾಧೀನದ ವೆಚ್ಚ, ರಚನೆಗಳ ಕೆಡುವಿಕೆ, ಜಕ್ಕೂರು ರಸ್ತೆಯ ರೈಲ್ವೆ ಹಳಿಯಿಂದ ಕೆಪಿಎಸ್‌ಸಿ ಲೇಔಟ್ ವರೆಗಿನ ಅಸ್ತಿತ್ವದಲ್ಲಿರುವ ರಸ್ತೆ ಅಗಲಕ್ಕೆ ಮರು ಡಾಂಬರೀಕರಣ ಕಾಮಗಾರಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. (ಕರೆ–4) – **ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 392.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 9,800/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **29–04–2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **03–05–2025 ರಂದು ಬೆಳಿಗ್ಗೆ 11.30 ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ಕಛೇರಿ, ರೂಂ. ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು – 560002** ಇಲ್ಲಿ ನಡೆಯುವುದು. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **12–05–2025 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **13–05–2025 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ವಿಭಾಗ, ಯಲಹಂಕ ವಲಯ, ಬಿಬಿಎಂಪಿ.

ಡಾ. ಹರಿಸಿಂಗ್ ಗೌರ್ ವಿಶ್ವವಿದ್ಯಾಲಯ, ಸಾಗರ (ಮ.ಪ್ರ) ಭಾರತ

(ಕೇಂದ್ರಿಯ ವಿಶ್ವವಿದ್ಯಾಲಯ)

ವೆಬ್‌ಸೈಟ್: www.dhsgsu.edu.in ಫೋನ್: +91–7582–265228

ಜಾಹೀರಾತು ಸಂಖ್ಯೆ: ಆರ್/ಎ–ಎನ್‌ಟಿ/2025/03 ದಿನಾಂಕ: 26.04.2025

ನೇಮಕಾತಿ ಪ್ರಕಟಣೆ

ಡಾಕ್ಟರ್ ಹರಿಸಿಂಗ್ ಗೌರ್ ವಿಶ್ವವಿದ್ಯಾಲಯದಲ್ಲಿನ ವಿವಿಧ ಭೋದಕೇತರ ಹುದ್ದೆಗಳನ್ನು (ವೃಂದ ಎ) ನೇರ/ಡೆಪ್ಯುಟೇಶನ್/ಗುತ್ತಿಗೆ ನೇಮಕಾತಿ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಅರ್ಹ ಭಾರತೀಯ ನಾಗರಿಕರಿಂದ ನಿರ್ದಿಷ್ಟ ನಮೂನೆಯಲ್ಲಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ:–

- ಆನ್‌ಲೈನ್ ಅರ್ಜಿಗಳ ಸಲ್ಲಿಕೆಯ ಆರಂಭಿಕ ದಿನಾಂಕ: 26.04.2025
- ಆನ್‌ಲೈನ್ ಅರ್ಜಿಗಳ ಸಲ್ಲಿಕೆಯ ಕೊನೆಯ ದಿನಾಂಕ: 25.05.2025
- ಅರ್ಜಿಯ ಕರಡು ಪ್ರತಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 02.06.2025 ರಂದು ಸಂಜೆ 6.00 ಗಂಟೆಯೊಳಗೆ
- ಆನ್‌ಲೈನ್ ಲಿಂಕ್ (https://dhsgsunt.samarth.edu.in/) ನೇರ ಲಭ್ಯತೆ

ವಿದ್ಯಾರ್ಹತೆ, ಅರ್ಹತಾ ಮಾನದಂಡ, ಇನ್ನಿತರೆ ವಿವರಗಳು ಹಾಗೂ ಅಪ್‌ಡೇಟ್‌ಗಳಿಗಾಗಿ ದಯವಿಟ್ಟು ವಿಶ್ವವಿದ್ಯಾಲಯದ www.dhsgsu.edu.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಯಾವುದೇ ತಿದ್ದುಪಡಿ ಎದುರಾದಲ್ಲಿ, ಅಂತಹುದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

CBC 21273/12/0003/2526 ರಿಜಿಸ್ಟ್ರಾರ್ (ಒಎಫ್‌ಎಫ್‌ಜಿ)

ಮುನಿರತ್ನ ವಿರುದ್ಧ ಹೆಚ್ಚುವರಿ ದೋಷಾರೋಪ ಪಟ್ಟಿ

ಮುನಿರತ್ನ

ಬೆಂಗಳೂರು: ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ ಅವರ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಹಾಗೂ ಜಾತಿ ನಿಂದನೆ ಪ್ರಕರಣದ ತನಿಖೆ ನಡೆಸಿದ್ದ ಸಿಐಡಿ ತನಿಖಾ ತಂಡವು ನಗರದ 42ನೇ ಎ.ಸಿ.ಜೆ.ಎಂ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು ಮೂರು ಸಾವಿರ ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದಂತಾಗಿದೆ ಎಂದು ಮೂಲಗಳು ತಿಳಿಸಿವೆ.

ಮುನಿರತ್ನ ಸೇರಿ 7 ಆರೋಪಿಗಳ ವಿರುದ್ಧ ಡಿಸೆಂಬರ್‌ನಲ್ಲಿ ಎರಡು ದೋಷಾ ರೋಪ ಪಟ್ಟಿ ಸಲ್ಲಿಸಲಾಗಿತ್ತು.

ಬಳಿಕ ತನಿಖೆ ಮುಂದುವರಿಸಲಾಗಿತ್ತು. ಈಗ ತಾಂತ್ರಿಕ ಸಾಕ್ಷ್ಯಾಧಾರ, ಸಾಕ್ಷಿದಾರರ ಹೇಳಿಕೆಯುಳ್ಳ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಕೋರ್ಟ್‌ಗೆ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. 'ದೋಷಾರೋಪ ಪಟ್ಟಿಯಲ್ಲಿ ಮುನಿರತ್ನ, ಸುಧಾಕರ್, ಇನ್‌ಸ್ಪೆಕ್ಟರ್ ಐಯಣ್ಣ ರೆಡ್ಡಿ, ಲೋಹಿತ್‌ಗೌಡ, ಶ್ರೀನಿವಾಸ್, ಕಿರಣ್ ಕುಮಾರ್, ಮಂಜುನಾಥ್ ಅವರ ಹೆಸರು ಉಲ್ಲೇಖಿಸಲಾಗಿದೆ. ಅಶ್ಲೀಲ ಫೋಟೊ ತೆಗೆಯುವ ಹಾಗೂ ವಿಡಿಯೊ ಸೆರೆ ಹಿಡಿಯುವಲ್ಲಿ ಆರೋಪಿಗಳ ಪಾತ್ರವನ್ನು ಇದರಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಮುನಿರತ್ನ ವಿರುದ್ಧದ ಅತ್ಯಾಚಾರದ ಆರೋಪ, ಎಚ್‌ಐವಿ ಸೋಂಕಿತರನ್ನು ಬಳಸಿಕೊಂಡು ತಮ್ಮ ವಿರೋಧಿಗಳನ್ನು ಹನಿಟ್ರ್ಯಾಪ್ ಬಲೆಗೆ ಬೀಳಿಸಿ ಕಾಯಿಲೆ ಹರಡುವಿಕೆಗೆ ಯತ್ನಿಸಿದ್ದರು ಎಂಬ ಆರೋಪೂ ಸಾಬೀತಾಗಿತ್ತು. ತನಿಖೆ ವೇಳೆ ಇದಕ್ಕೆ ಸಂಬಂಧಿಸಿದ ಹೆಚ್ಚುವರಿ ಮಾಹಿತಿಯನ್ನೂ ಈಗಿನ ದೋಷಾರೋಪ ಪಟ್ಟಿಯಲ್ಲಿ ಸೇರಿಸಲಾಗಿದೆ' ಎಂದು ಸಿಐಡಿ ಹೇಳಿದೆ.

ಜಾತಿ ನಿಂದನೆ ಪ್ರಕರಣ: 'ಜಾತಿ ನಿಂದನೆಗೆ ಸಂಬಂಧಿಸಿ ಗುತ್ತಿಗೆದಾರ ವೇಲುನಾಯ್ಕರ್ ದೂರು ನೀಡಿದ್ದರು. ಆಗ ಲಭಿಸಿದ್ದ ಆಡಿಯೊದಲ್ಲಿ ಆರೋಪಿಯ ಧ್ವನಿ ಮಾದರಿ ಹಾಗೂ ಫೋನ್ ಸಂಭಾಷಣೆ ಆಡಿಯೊದಲ್ಲಿರುವ ಧ್ವನಿಗೆ ಹೋಲಿಕೆ ಆಗಿರುವುದು ಎಫ್‌ಎಸ್ ಎಲ್ ತಜ್ಞರ ವರದಿಯಿಂದ ದೃಢಪಟ್ಟಿತ್ತು. ಇದಕ್ಕೆ ಸಂಬಂಧಿಸಿದ ಪೂರಕ ಸಾಕ್ಷ್ಯಗಳನ್ನೂ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform the general public that my client intends to purchase the immovable property mentioned and described in the schedule below from **Sri. Shivanna S. H.**, son of Sri. Haalina Honnaiah (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the agricultural land bearing Survey No. 216/4, (earlier being part of Survey No. 216/1) measuring 1 acre, situated at Kethohalli Village, Kasaba Hobli, Ramanagara Taluk and is bounded on the:

East by : Property bearing Survey No. 122;
West by : Property bearing Survey No. 216/1;
North by : Property bearing Survey No. 216/2;
South by : Property bearing survey No. 216/5;

Vinay K. S., Advocate,
Vinay Kademane & Associates
307, 3rd Floor, Prestige Centre Point,
No.7/49, Edward Road, Bengaluru-560001
Ph.: 080 22863885
email:vinay@vinaykademane.in

Place : Bengaluru
Date : 28-04-2025

PUBLIC NOTICE

This is to inform the general public that my client intends to purchase the immovable property mentioned and described in the schedule below from **Smt. Jayalakshmamma,** wife of Late Honnaiah alias Honnappa, (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and she has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the agricultural land bearing Survey No. 216/5, (earlier being part of Survey No. 216/1) measuring 1 acre *(excluding 30 guntas of karab land)*, situated at Kethohalli Village, Kasaba Hobli, Ramanagara Taluk and is bounded on the:

East by : Property bearing Survey No. 122;
West by : Property bearing Survey No. 119;
North by : Property bearing Survey No. 216/1 & 216/4;
South by : Property bearing Survey No. 119.

Vinay K. S., Advocate,
Vinay Kademane & Associates
307, 3rd Floor, Prestige Centre Point,
No.7/49, Edward Road, Bengaluru-560001
Ph.: 080 22863885
email:vinay@vinaykademane.in

Place : Bengaluru
Date : 28-04-2025

PERSONAL

Change of Name

CHANGE OF NAME
I, **Manjunath Channegowda,** resident of 2442, 7th B Main Road, RPC Layout, Vijayanagar 2nd Stage, Bengaluru-560104 declare that in my Son's 10th ICSE education certificate bearing Unique ID: 8332052. My name is recorded as **Manjunath C.** instead of **Manjunath Channegowda** (Father) and my Wife's Name is Recorded as **Madhuri J.** instead of **Madhuri Javaregowda** (Mother) and my Son's Name is Recorded as **Prabhudh M.** instead of **Prabhudh Manjunath.** vide affidavit dated 26.4.2025 Sworn before XIV Addl. Judge, Court of Small Causes and ACJM, Bengaluru City.

I MAKTAR Ali. M.D S/o.Late Abdil Razak aged about 54 years, residing at #5093, Shashikala Compound, 2nd Cross, Sarigenagara, Kolar 563101. Have changed my name to Mohammed Makthiyar vide affidavit dated 25.04.2025 before Notary M Krishne Gowda Kolar. Henceforth I shall be called as Mohammed Makthiyar only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

'ಬಿಜೆಪಿಯಲ್ಲಿ ನಾಯಕರ ಕೊರತೆ'

ವಿಜಯಪುರ (ದೇವನಹಳ್ಳಿ): ಬಿಜೆಪಿಯಲ್ಲಿ ಕಾರ್ಯಕರ್ತರು ಇದ್ದಾರೆ. ಆದರೆ, ಅವರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ನಾಯಕರ ಕೊರತೆ ಇದೆ ಎಂದು ಬಿಜೆಪಿ ನಾಯಕ ಸದಾನಂದಗೌಡ ಹೇಳಿದ್ದಾರೆ.

ಇಲ್ಲಿ ನಡೆದ 'ಬಿಜೆಪಿ ಸಂಘಟನಾ ಪರ್ವ' ಬೂತ್ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು. ಇದುವರೆಗೆ ನಾಯಕರಲ್ಲಿ ಕೆಲವು ಗೊಂದಲ, ಭಿನ್ನಾಭಿಪ್ರಾಯಗಳಿದ್ದವು. ಅದರ ಪರಿಣಾಮ ಕಾರ್ಯಕರ್ತರ ಮೇಲಾಗಿತ್ತು ಎಂದು ಹೇಳಿದರು.

ಈಗ ಬಿಜೆಪಿ ರಾಜ್ಯ ನಾಯಕರಿಗೆ ತಮ್ಮ ತಪ್ಪಿನ ಅರಿವಾಗಿದೆ. ಮುಂದಿನ ಚುನಾವಣೆಯಲ್ಲಿ ಪಕ್ಷ ಉತ್ತಮ ಸಾಧನೆ ತೋರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಗೆ ಟಿ.ಎಸ್. ಲತಾ ನೇಮಕ

ಲತಾ ಟಿ.ಎಸ್.

ಬೆಂಗಳೂರು: ಕೆಎಸ್‌ಆರ್‌ಟಿಸಿ ಮುಖ್ಯ ಸಾರ್ವಜನಿಕ ಅಧಿಕಾರಿ ಲತಾ ಟಿ.ಎಸ್. ಅವರು ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಗೆ ಹಿರಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ (ಪಿಆರ್‌ಸಿಐ) ದೇಶದ್ಯಾಂತ 85 ಶಾಖೆಗಳನ್ನು ಹೊಂದಿದೆ. ಅಲ್ಲದೇ ಸಿಂಗಪುರ, ಲಂಡನ್, ಶ್ರೀಲಂಕಾ, ದುಬೈ, ನೇಪಾಳ, ಆಸ್ಟ್ರೇಲಿಯಾ, ಅಮೆರಿಕಗಳಲ್ಲಿ ಅಂತರರಾಷ್ಟ್ರೀಯ ಶಾಖೆಗಳನ್ನು ಹೊಂದಿದೆ. ಯಂಗ್ ಕಮ್ಯುನಿಕೇಟರ್ ಕ್ಲಬ್‌ಗಳು (ವೈಸಿಸಿ) ದೇಶದ 70ಕ್ಕೂ ಹೆಚ್ಚು ಕಾಲೇಜುಗಳಲ್ಲಿವೆ ಎಂದು ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ ಮುಖ್ಯಸ್ಥ ಎಂ.ಬಿ.ಜಯರಾಂ, ರಾಷ್ಟ್ರೀಯ ಕಾರ್ಯಕಾರಿಣಿ ಅಧ್ಯಕ್ಷೆ ಗೀತಾ ಶಂಕರ್ ತಿಳಿಸಿದ್ದಾರೆ.

ನೆಲಮಂಗಲದಲ್ಲಿ ಅಪಹರಣ ತುಮಕೂರಿನಲ್ಲಿ ಶವ ಪತ್ತೆ

ತುಮಕೂರು: ನೆಲಮಂಗಲದಲ್ಲಿ ಭಾನುವಾರ ರಾತ್ರಿ ಅಪಹರಣವಾಗಿದ್ದ ಉದ್ಯಮಿ ದಿಲೀಪ್‌ಕುಮಾರ್ (32) ಎಂಬುವರ ಶವ ನಗರದ ಜಯಪುರದಲ್ಲಿ ಸೋಮವಾರ ಬೆಳಿಗ್ಗೆ ಕೊಲೆಯಾದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ತಲೆ ಹಾಗೂ ಕತ್ತಿನ ಭಾಗಕ್ಕೆ ಡ್ರ್ಯಾಗರ್‌ನಿಂದ ಚುಚ್ಚಿ ಕೊಲೆ ಮಾಡಲಾಗಿದೆ. ದಿಲೀಪ್ ಮಾಗಡಿ ತಾಲ್ಲೂಕಿನ ಸೋಲೂರಿನ ನಿವಾಸಿ. ಹೆಂಡತಿ ಅಮೃತ ಜತೆಗೆ ನೆಲಮಂಗಲದಲ್ಲಿ ವಾಸವಿದ್ದರು. ಊಟ ತರಲು ಹೊರಗಡೆ ಹೋದಾಗ ಅವರ ಮೇಲೆ ಹಲ್ಲೆ ನಡೆಸಿ ಅಪಹರಣ ಮಾಡಲಾಗಿತ್ತು. ಅಮೃತ ನೀಡಿದ ದೂರಿನ ಮೇರೆಗೆ ನೆಲಮಂಗಲ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೌಟುಂಬಿಕ ಕಲಹದಿಂದ ಕೊಲೆಯಾಗಿರಬಹುದು. ನೆಲಮಂಗಲ–ತುಮಕೂರು ಮಧ್ಯೆ ಕೊಲೆ ಮಾಡಿ ಮೃತದೇಹವನ್ನು ನಗರದಲ್ಲಿ ಬಿಟ್ಟು ಹೋಗಿರಬಹುದು' ಎಂದು ಪೊಲೀಸರು ಶಂಕಿಸಿದ್ದಾರೆ. 'ದಿಲೀಪ್ ಎರಡು ಮದುವೆಯಾಗಿದ್ದು, ಎರಡನೇ ಹೆಂಡತಿಯ ಸಂಬಂಧಿಕರು ಕೃತ್ಯ ಎಸಗಿರಬಹುದು' ಎಂಬ ಅನುಮಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಡಿವೈಎಸ್‌ಪಿ ಕೆ.ಆರ್.ಚಂದ್ರಶೇಖರ್, ನೆಲಮಂಗಲ ಠಾಣೆ ಪೊಲೀಸರು ಮೃತದೇಹ ದೊರೆತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅರಿವು ಸಾಲ: ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅರಿವು ವಿದ್ಯಾಭ್ಯಾಸ ಸಾಲಕ್ಕೆ ಅರ್ಜಿ ಆಹ್ವಾನಿಸಿದೆ. ವೃತ್ತಿಪರ ಕೋರ್ಸ್‌ಗಳಾದ ವೈದ್ಯಕೀಯ (ಎಂಬಿಬಿಎಸ್), ಬಿ.ಟೆಕ್, ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್, ಬಿ. ಆಯುಷ್, ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶುವೈದ್ಯಕೀಯ ಪದವಿ ಕೋರ್ಸ್‌ಗಳಿಗೆ ಆಯ್ಕೆಯಾದ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಅರಿವು ಫ್ರೆಶ್ ಸಾಲ ಯೋಜನೆಗೆ ಮೇ 23ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ www.kmdconline.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಬೆಂಗಳೂರು ನಗರ ಜಿಲ್ಲೆಯ ಉತ್ತರ ವಿಭಾಗ, ನಂ. 40, ಎರಡನೇ ಅಡ್ಡ ರಸ್ತೆ, ನೂರ್ ಮಸೀದಿ ಹತ್ತಿರ, ನಾಲ್ಕನೇ ಮುಖ್ಯ ರಸ್ತೆ, ವಸಂತಪ್ಪ ಬ್ಲಾಕ್, ಗಂಗಾನಗರ, ಬೆಂಗಳೂರು–080-23539786.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಭಾರತ ಸರ್ಕಾರ

सत्यमेव जयते

ಉದ್ದೇಶಿತ ಪ್ರದೇಶಗಳಲ್ಲಿ ಉನ್ನತ ವರ್ಗಗಳಲ್ಲಿನ ವಿದ್ಯಾರ್ಥಿಗಳಿಗಾಗಿನ ವಸತಿ ಶಿಕ್ಷಣ ಯೋಜನೆಗಾಗಿ ಕೈಗೊಳ್ಳಲಾಗುವ ರಾಷ್ಟ್ರೀಯ ಪ್ರವೇಶ ಪರೀಕ್ಷೆ [ಶ್ರೇಷ್ಠ (ಎನ್‌ಇಟಿಎಸ್)] – 2025ಕ್ಕೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು, ಉದ್ದೇಶಿತ ಪ್ರದೇಶಗಳಲ್ಲಿ ಉನ್ನತ ವರ್ಗಗಳಲ್ಲಿನ ವಿದ್ಯಾರ್ಥಿಗಳಿಗಾಗಿನ ವಸತಿ ಶಿಕ್ಷಣ ಯೋಜನೆ [ಶ್ರೇಷ್ಠ (ಎನ್‌ಇಟಿಎಸ್)[– 2025 ರಾಷ್ಟ್ರೀಯ ಪ್ರವೇಶ ಪರೀಕ್ಷೆ ನಡೆಸುವ ಜವಾಬ್ದಾರಿ ಹೊಂದಿರುತ್ತದೆ. ಉದ್ದೇಶಿತ ಪ್ರದೇಶಗಳಲ್ಲಿ ಉನ್ನತ ವರ್ಗಗಳಲ್ಲಿನ ವಿದ್ಯಾರ್ಥಿಗಳಿಗಾಗಿನ ವಸತಿ ಶಿಕ್ಷಣ ಯೋಜನೆ (ಶ್ರೇಷ್ಠ) ಎಂಬ ಯೋಜನೆಯು ಪರಿಶಿಷ್ಟ ಜಾತಿಗಳ (ಎಸ್‌ಸಿ) ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಾತ್ರ, ಸಿಬಿಎಸ್‌ಇ ಸಂಯೋಜಿತ ಪ್ರತಿಷ್ಠಿತ ವಸತಿ ಶಾಲೆಗಳಲ್ಲಿ ಉನ್ನತ ಗುಣಮಟ್ಟದ ಶಿಕ್ಷಣ ಒದಗಿಸುತ್ತದೆ. 9ನೇ ಮತ್ತು 11ನೇ ತರಗತಿಗಳಲ್ಲಿ ಸುಮಾರು 3,000 ಸೀಟ್‌ಗಳನ್ನು ಒದಗಿಸಲಾಗುತ್ತಿದ್ದು, ಇದರ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುತ್ತದೆ.

ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ 9ನೇ ಮತ್ತು 11ನೇ ತರಗತಿ ಪ್ರವೇಶಕ್ಕಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಇವರಿಂದ, ಶ್ರೇಷ್ಠ (ಎನ್‌ಇಟಿಎಸ್) ರಾಷ್ಟ್ರೀಯ ಪ್ರವೇಶ ಪರೀಕ್ಷೆಯನ್ನು ಆಫ್‌ಲೈನ್ ವಿಧಾನದಲ್ಲಿ ಕೈಗೊಳ್ಳಲಾಗುತ್ತದೆ .

ಪರೀಕ್ಷಾ ಚಟುವಟಿಕೆಗಳ ಸಮಯಸೂಚಿ ಕೆಳಗಿನಂತಿರುತ್ತದೆ:

ಆನ್‌ಲೈನ್ ಅರ್ಜಿ ಸಲ್ಲಿಸುವಿಕೆ	15 ಏಪ್ರಿಲ್ 2025 ರಿಂದ 05 ಮೇ 2025 (ಸಂಜೆ 05:00 ಗಂಟೆವರೆಗೆ)
ವಿವರಗಳ ತಿದ್ದುಪಡಿ	06 ಮೇ 2025 ರಿಂದ 07 ಮೇ 2025
ಪರೀಕ್ಷಾ ಮಾದರಿ	ಬಹು ಆಯ್ಕೆ ಪ್ರಶ್ನೆಗಳು (ಎಂಸಿಕ್ಯೂ)
ಪರೀಕ್ಷೆ ಅವಧಿ	03 ಗಂಟೆ (180 ನಿಮಿಷಗಳು)
ಪರೀಕ್ಷೆ ವಿಧಾನ	ಒಎಂಆರ್ ಪತ್ರಿಕೆಯಲ್ಲಿ ಪೆನ್ನು ಮತ್ತು ಕಾಗದ ವಿಧಾನ
ಪ್ರಶ್ನೆಪತ್ರಿಕೆಯ ಮಾಧ್ಯಮ	ದ್ವಿಭಾಷೆ (ಹಿಂದಿ ಮತ್ತು ಇಂಗ್ಲಿಷ್)
ಪರೀಕ್ಷೆ ದಿನಾಂಕ	01ನೇ ಜೂನ್ 2025 (ಭಾನುವಾರ)
ಪರೀಕ್ಷೆ ಶುಲ್ಕ	ಶೂನ್ಯ
ಪರೀಕ್ಷೆ ಸಮಯ	ಮಧ್ಯಾಹ್ನ 02.00 ರಿಂದ ಸಂಜೆ 05.00 (3 ಗಂಟೆ)
ಎನ್‌ಟಿಎ ವೆಬ್‌ಸೈಟ್‌ನಿಂದ ಪ್ರವೇಶ ಪತ್ರಗಳ ಡೌನ್‌ಲೋಡಿಂಗ್	25ನೇ ಮೇ 2025
ವೆಬ್‌ಸೈಟ್ ವಿವರ	https://exams.nta.ac.in/SHRESHTA/
ಫಲಿತಾಂಶ ಘೋಷಣೆ	ಪರೀಕ್ಷೆಯ ಬಳಿಕ 04 ರಿಂದ 06 ವಾರಗಳೊಳಗೆ

ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಜಾಗ್ರತೆಯಿಂದ ಭರ್ತಿ ಮಾಡಬೇಕೆಂದು ಕೋರಲಾಗಿದೆ. ಅರ್ಹತೆ, ಪರೀಕ್ಷಾ ಯೋಜನೆ, ಪರೀಕ್ಷಾ ಕೇಂದ್ರಗಳು, ಪರೀಕ್ಷಾ ಸಮಯ, ಅರ್ಜಿ ಸಲ್ಲಿಸುವ ಪ್ರಕ್ರಿಯೆ ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುವ ಮಾಹಿತಿ ಕೈಪಿಡಿಯನ್ನು ಎನ್‌ಟಿಎ ಸಂಸ್ಥೆಯ https://exams.nta.ac.in/SHRESHTA/ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಸದರಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಮಾಹಿತಿ ಕೈಪಿಡಿಯನ್ನು ಪರಿಶೀಲಿಕೊಳ್ಳಬೇಕು ಮತ್ತು 15.04.2025 ರಿಂದ 05.05.2025ರ ಅವಧಿಯೊಳಗೆ ಮಾತ್ರ https://exams.nta.ac.in/SHRESHTA/ ಮುಖಾಂತರ ಅರ್ಜಿ ಸಲ್ಲಿಸುವುದು.

ಈ ಕುರಿತಾದ ಪ್ರಚಲಿತ ವಿದ್ಯಮಾನಗಳನ್ನು ತಿಳಿಯುತ್ತಿರಲು, ಆಗಾಗ್ಗೆ ಎನ್‌ಟಿಎ ಸಂಸ್ಥೆಯ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಬೇಕೆಂದು ಅಭ್ಯರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಸೂಚಿಸಲಾಗಿದೆ.

ಅಭ್ಯರ್ಥಿಗಳು ತಮ್ಮ ಯಾವುದೇ ವಿಚಾರಣೆಗಳಿಗಾಗಿ ಅಥವಾ ಸ್ಪಷ್ಟೀಕರಣಗಳಿಗಾಗಿ, ಎನ್‌ಟಿಎ ಸಂಸ್ಥೆಯ ಸಹಾಯವಾಣಿ 011 40759000 ಸಂಖ್ಯೆಗೆ (ಕರೆ) ಸಂಪರ್ಕಿಸಬಹುದು ಅಥವಾ ಎನ್‌ಟಿಎ ಸಂಸ್ಥೆಯ shreshta@nta.ac.in ವಿಳಾಸಕ್ಕೆ (ಇಮೇಲ್) ಬರೆಯಬಹುದು.

CBC 38101/11/0003/2526

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಎವರೆಸ್ಟ್: 402 ಮಂದಿಗೆ ಅನುಮತಿ

53 ದೇಶಗಳ **402** ಆರೋಹಿಗಳು (**74** ಮಹಿಳೆಯರು) ಮೌಂಟ್ ಎವರೆಸ್ಟ್ ಏರಲು ಪ್ರಸಕ್ತ ಋತುವಿನಲ್ಲಿ ಅನುಮತಿ ಪಡೆದವರು

75 ಮಹಿಳೆಯರು ಸೇರಿ **414** ಆರೋಹಿಗಳು ಕಳೆದ ವರ್ಷ ಅನುಮತಿ ಪಡೆದಿದ್ದವರು

₹59.5 ಕೋಟಿ ನೇಪಾಳ ಪ್ರವಾಸೋದ್ಯಮ ಇಲಾಖೆ ಪಡೆದ ರಾಯಧನ

8,000 ಆರೋಹಿಗಳು ಇಲ್ಲಿಯವರೆಗೂ ಮೌಂಟ್ ಎವರೆಸ್ಟ್ ಅನ್ನು ಯಶಸ್ವಿಯಾಗಿ ಏರಿರುವವರು

'ವಾಹನ ಅಪಘಾತಗಳಲ್ಲಿ ಗಾಯಗೊಂಡವರಿಗೆ ಗಂಟೆಯಲ್ಲಿ ಚಿಕಿತ್ಸೆ'
ನಗದುರಹಿತ ಚಿಕಿತ್ಸೆ: ಕೇಂದ್ರಕ್ಕೆ ತಪರಾಕಿ 11

ಚೀನಾ ವಿದೇಶಾಂಗ ಇಲಾಖೆ ವಕ್ತಾರ ಗೋ ಜೈಕುನ್ ಹೇಳಿಕೆ
ಮಾನಸ ಸರೋವರ ಯಾತ್ರೆಗೆ ತಯಾರಿ 8

ಅಶ್ಲೀಲ ವಿಡಿಯೊ: 'ಸುಪ್ರೀಂ' ನೋಟಿಸ್

ಈಗಾಗಲೇ ನಿಯಮಗಳಿವೆ, ಇನ್ನಷ್ಟು ನಿಯಮಗಳನ್ನು ರೂಪಿಸುತ್ತೇವೆ: ಕೇಂದ್ರ ಸರ್ಕಾರದ ಉತ್ತರ

ನವದೆಹಲಿ: ಅಶ್ಲೀಲ ವಿಡಿಯೊಗಳು ಅಥವಾ ವಿಚಾರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಮತ್ತು ವಿವಿಧ ಒಟಿಟಿ ವೇದಿಕೆಗಳಲ್ಲಿ ಪ್ರಸಾರವಾಗುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಸೋಮವಾರ ತೀವ್ರ ಕಳವಳ ವ್ಯಕ್ತಪಡಿಸಿದೆ.

ಈ ಬಗ್ಗೆ ಕೇಂದ್ರ ಮಾಹಿತಿ ಆಯೋಗದ ಮಾಜಿ ಆಯುಕ್ತ ಉದಯ್ ಮಾಹುರ್‌ಕರ್ ಅವರು ಸಲ್ಲಿಸಿದ್ದ ಸಾರ್ವ ಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ನ್ಯಾಯ ಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಅಗಸ್ಟೀನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು ನಡೆಸಿತು.

'ಅಶ್ಲೀಲ ವಿಡಿಯೊಗಳು ಹಂಚಿಕೆಯಾಗದಂತೆ ಮತ್ತು ಪ್ರಸಾರ ಮಾಡದಂತೆ ನಿಷೇಧಿಸಬೇಕು. ಇದಕ್ಕಾಗಿ ಪ್ರಾಧಿಕಾರವೊಂದನ್ನು ರಚಿಸಬೇಕು' ಎಂದು ಕೋರಿ ಐವರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗಳ ವಿಚಾರಣೆಯನ್ನೂ ಇದೇ ವೇಳೆ ನಡೆಸಲಾಯಿತು.

ಅರ್ಜಿಗಳ ಕುರಿತು ವಿಸ್ತೃತವಾಗಿ ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ, ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಉಲ್ಲು, ಎಎಲ್‌ಟಿಟಿ, 'ಎಕ್ಸ್', ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್, ಗೂಗಲ್, ಆ್ಯಪಲ್‌ಗೆ ನ್ಯಾಯಾಲಯ ನೋಟಿಸ್ ಜಾರಿ ಮಾಡಿತು.

'ಇಂಥ ವಿಡಿಯೊಗಳ ನಿಯಂತ್ರಣ ಅಗತ್ಯ. ಆದರೆ, ಇದು ನ್ಯಾಯಾಂಗದ ಕಾರ್ಯವ್ಯಾಪ್ತಿಯಲ್ಲಿಲ್ಲ. ಈ ವಿಚಾರದ ಬಗ್ಗೆ ಶಾಸಕಾಂಗ ಅಥವಾ ಕಾರ್ಯಾಂಗ ಕ್ರಮ ಕೈಗೊಳ್ಳಬೇಕಿದೆ. ಆದರೂ ನಾವು ನೋಟಿಸ್ ನೀಡುತ್ತಿದ್ದೇವೆ' ಎಂದು ಪೀಠ ಹೇಳಿತು. 'ಈಗಾಗಲೇ ಹಲವು ನಿಯಮಗಳನ್ನು ರೂಪಿಸಲಾಗಿದೆ. ಇನ್ನಷ್ಟು ನಿಯಮಗಳನ್ನು ರೂಪಿಸುವ ಬಗ್ಗೆ ಚಿಂತನೆ ನಡೆದಿದೆ' ಎಂದು ಸಾಲಿಸಿಟರಲ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

'ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಆಗದಂತೆ ಬಹಳ ಸೂಕ್ಷ್ಮವಾಗಿ ಈ ಅರ್ಜಿಗಳ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ಈ ವೇದಿಕೆಗಳಲ್ಲಿ ಕಾಣಸಿಗುವ ವಿಡಿಯೊಗಳು ಅಶ್ಲೀಲ ಮಾತ್ರವಲ್ಲ, ವಿಕೃತವಾಗಿಯೂ ಇವೆ' ಎಂದರು.

'ಯಾವುದೇ ನಿಯಂತ್ರಣವಿಲ್ಲದೆ ಲೈಂಗಿಕ ವಿಚಾರಗಳಿಗೆ ಸಂಬಂಧಿಸಿ ಅಶ್ಲೀಲ ವಿಡಿಯೊಗಳು ಹರಿದಾಡುತ್ತಿವೆ. ಈ ಬಗ್ಗೆ ವಿವರವಾದ ಪಟ್ಟಿಯೊಂದನ್ನು ಸಲ್ಲಿಸಿದ್ದೇನೆ' ಎಂದು ಉದಯ್ ಪರ ವಕೀಲ ವಿಷ್ಣು ಶಂಕರ್ ಜೈನ್ ಹೇಳಿದರು.

'ಮೆಹ್ತಾ ಅವರೇ ಇದಕ್ಕೆ ಏನಾದರೂ ಮಾಡಲೇಬೇಕು' ಎಂದು ನ್ಯಾಯಮೂರ್ತಿ ಗವಾಯಿ ಅವರು ಹೇಳಿದರು. 'ಯ್ಯೂಟೂಬ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿನ ಕಂಟೆಂಟ್‌ಗಳನ್ನು ನಿಯಂತ್ರಿಸುವ ಬಗ್ಗೆ ನಿಯಮಗಳನ್ನು ರೂಪಿಸಿ' ಎಂದು ಯೂಟ್ಯೂಬರ್ ರಣವೀರ್ ಸಿಂಗ್ ಅಲಹಾಬಾದಿಯಾ ಅವರ ಪ್ರಕರಣ ವಿಚಾರಣೆ ವೇಳೆಯೂ ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ನಿರ್ದೇಶನ ನೀಡಿತ್ತು.

ಅರ್ಜಿಯಲ್ಲಿರುವುದೇನು?

- ನೀಲಿಚಿತ್ರದಂಥ ವಿಡಿಯೊಗಳನ್ನು ಹಂಚಿಕೊಳ್ಳುವ ಹಲವು ಜಾಲತಾಣ ಖಾತೆಗಳು, ಜಾಲತಾಣ ವೇದಿಕೆಗಳಿವೆ. ಒಟಿಟಿ ವೇದಿಕೆಗಳಲ್ಲೂ ಇಂಥ ವಿಡಿಯೊಗಳಿವೆ. ಈ ಎಲ್ಲ ವೇದಿಕೆಗಳಲ್ಲಿ ಮಕ್ಕಳನ್ನು ಬಳಸಿಕೊಂಡ ಅಶ್ಲೀಲ ವಿಡಿಯೊಗಳೂ ಇವೆ
- ಈ ರೀತಿಯ ವಿಡಿಯೊಗಳು ವಯಸ್ಕರು, ಯುವಕರು ಮತ್ತು ಮಕ್ಕಳ ಮನಸ್ಸನ್ನು ಹಾಳು ಮಾಡುತ್ತವೆ. ವಿಕೃತ, ಅಸಹಜ ಲೈಂಗಿಕತೆಯನ್ನು ಪ್ರಚೋದಿಸುತ್ತವೆ. ಇದರಿಂದ ಅಪರಾಧ ಪ್ರಕರಣಗಳೂ ಹೆಚ್ಚುತ್ತವೆ
- ಮೂಗುದಾರ ಹಾಕದಿದ್ದರೆ ಇಂಥ ವಿಡಿಯೊಗಳು ಸಮಾಜದ ಮೌಲ್ಯಗಳು, ಮಾನಸಿಕ ಆರೋಗ್ಯ ಮತ್ತು ಸಾರ್ವಜನಿಕರ ಸುರಕ್ಷತೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ
- ಕೇಂದ್ರ ಸರ್ಕಾರವು ಸೂಕ್ತ ನಿಯಮ ರೂಪಿಸುವವರೆಗೂ ಇಂಥ ಅಶ್ಲೀಲ ವಿಡಿಯೊಗಳ ಪ್ರಸಾರ ಮತ್ತು ಹಂಚಿಕೆಯನ್ನು ರದ್ದು ಮಾಡಬೇಕು. ವಿಶೇಷವಾಗಿ ಮಕ್ಕಳು ಈ ವಿಡಿಯೊಗಳನ್ನು ನೋಡದಂತೆ ಮಾಡಬೇಕು
- ಅಶ್ಲೀಲ ವಿಡಿಯೊಗಳನ್ನು ನೋಡುವುದರಿಂದ ಆಗುವ ಪರಿಣಾಮಗಳನ್ನು ತಿಳಿದುಕೊಳ್ಳಲು ಭಾರತದ ಪುನರ್ವಸತಿ ಮಂಡಳಿಯು ಸೂಚಿಸಿದ ಮನೋಶಾಸ್ತ್ರಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸಬೇಕು

- ಇದು ನಮ್ಮ ವ್ಯಾಪ್ತಿಯ ವಿಚಾರವಲ್ಲ. ನಾವು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರವನ್ನು ಕಸಿಯುತ್ತಿದ್ದೇವೆ ಎನ್ನುವ ಆರೋಪ ಮೊದಲೇ ನಮ್ಮ ಮೇಲಿದೆ
- ಒಟಿಟಿ ವೇದಿಕೆ ಪ್ರತಿನಿಧಿಗಳೂ ನ್ಯಾಯಾಲಯದ ಮುಂದೆ ಬರಲಿ, ಅವರಿಗೂ ಸ್ವಲ್ಪ ಸಾಮಾಜಿಕ ಜವಾಬ್ದಾರಿ ಇರಲಿ

ಬಿ.ಆರ್. ಗವಾಯಿ, ನ್ಯಾಯಮೂರ್ತಿ

ಸಂಬಂಧಪಟ್ಟ ಅಧಿಕಾರಿಗಳ ಬಳಿ ಪ್ರತಿನಿಧಿಯನ್ನು ಕಳುಹಿಸಲಾಗಿದೆ, ದೂರು ನೀಡಲಾಗಿದೆ. ಆದರೆ, ಯಾವುದರಿಂದಲೂ ಪ್ರಯೋಜನವಾಗಿಲ್ಲ

ಐವರು ಸಲ್ಲಿಸಿದ ಅರ್ಜಿಯಲ್ಲಿ ಹೇಳಿರುವ ಅಂಶ

'ಮಕ್ಕಳೇ ಹೆಚ್ಚು ನೋಡುವಂತಾಗಿದೆ'

ಇಂಥ ವಿಡಿಯೊಗಳನ್ನು ಮಕ್ಕಳೇ ಹೆಚ್ಚು ನೋಡುವಂತಾಗಿದೆ. ಇದು ನನ್ನ ಕಳವಳ. ಯಾವುದೇ ಕಾರ್ಯಕ್ರಮವಿರಲಿ, ಅದರಲ್ಲಿ ಬಳಸುವ ಭಾಷೆ ಇತ್ಯಾದಿ... ಈ ಯಾವುದನ್ನೂ ಇಬ್ಬರು ಪುರುಷರು ಒಟ್ಟಿಗೆ ಕೂತು ನೋಡುವುದಕ್ಕೂ ಸಾಧ್ಯವಿಲ್ಲ. ಇಂಥ ಕಾರ್ಯಕ್ರಮಗಳನ್ನು 18 ತುಂಬಿದವರೇ ನೋಡಬೇಕು ಎಂಬ ನಿಯಮವಿದೆಯಷ್ಟೆ. ಇದು ಬಿಟ್ಟು ಬೇರೆ ಯಾವುದೇ ಸೆನ್ಸಾರ್ ಇಲ್ಲ

ತುಷಾರ್ ಮೆಹ್ತಾ, ಸಾಲಿಸಿಟರಲ್ ಜನರಲ್

ಪದ್ಮ ಪ್ರಶಸ್ತಿ ಪ್ರದಾನ

ತೊಗಲು ಬೊಂಬೆಯಾಟದ ಹಿರಿಯ ಕಲಾವಿದೆ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ, ಹೆಸರಾಂತ ವಯೊಲಿನ್ ವಾದಕ ಲಕ್ಷ್ಮೀ ನಾರಾಯಣ ಸುಬ್ರಮಣಿಯಂ, ಪ್ರಸಿದ್ಧ ವೈದ್ಯೆ ವಿಜಯಲಕ್ಷ್ಮೀ ದೇಶಮಾನೆ, ಸಾಹಸ ನಿರ್ದೇಶಕ ಹಾಸನ ರಘು ಮತ್ತು ಪತ್ರಕರ್ತ, ರಾಜಕೀಯ ವಿಶ್ಲೇಷಕ ಎ.ಸೂರ್ಯಪ್ರಕಾಶ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಪದ್ಮ ಪ್ರಶಸ್ತಿ ಪ್ರದಾನ ಮಾಡಿದರು — ಪಿಟಿಐ ಚಿತ್ರಗಳು

ಕತ್ತಲಲ್ಲಿ ಸ್ಪೇನ್, ಪೋರ್ಚುಗಲ್

ವಿದ್ಯುತ್ ವ್ಯತ್ಯಯದಿಂದ ಸಂಚಾರ ದೀಪಗಳು ಕಾರ್ಯನಿರ್ವಹಿಸದ ಕಾರಣ ಸ್ಪೇನ್, ಫ್ರಾನ್ಸ್ ಗಡಿಭಾಗ ಐಬೇರಿಯನ್ ದ್ವೀಪದಲ್ಲಿ ರಸ್ತೆಯಲ್ಲಿ ನಿಂತ ವಾಹನಗಳು —ಎಎಫ್‌ಪಿ ಚಿತ್ರ

ಬಾರ್ಸಿಲೋನಾ(ಎಪಿ): ಸ್ಪೇನ್ ಹಾಗೂ ಪೋರ್ಚುಗಲ್‌ನಲ್ಲಿ ಸೋಮವಾರ ವಿದ್ಯುತ್ ಸಂಪರ್ಕದಲ್ಲಿ ಭಾರಿ ವ್ಯತ್ಯಯ ಉಂಟಾಯಿತು. ಇದರಿಂದ ಮೆಟ್ರೊ ರೈಲು ಸಂಪರ್ಕ, ಫೋನ್ ಲೈನ್‌ಗಳು, ಸಂಚಾರ ದೀಪ ಹಾಗೂ ಎಟಿಎಂ ವಹಿವಾಟುಗಳು ಸ್ಥಗಿತಗೊಂಡಿದ್ದವು.

'ದೇಶದ ಕಂಡುಬಂದ ಅತ್ಯಪರೂಪದ ವಿದ್ಯುತ್ ವ್ಯತ್ಯಯ ಪ್ರಕರಣ ಇದಾಗಿದೆ. 'ಐಬೇರಿಯನ್ ದ್ವೀಪ ಸೇರಿದಂತೆ ಹಲವು ಕಡೆಗಳಲ್ಲಿ ಹೆಚ್ಚಿನ ಸಮಸ್ಯೆ ಉಂಟಾಗಿದ್ದು, ಪ್ರಕರಣ ಕುರಿತು ಪರಿಶೀಲಿಸಲಾಗುತ್ತಿದೆ' ಎಂದು ಸ್ಪೇನ್‌ನ ವಿದ್ಯುತ್ ಗ್ರಿಡ್ ಮೇಲ್ವಿಚಾರಣಾ ಕಂಪನಿ 'ರೆಡ್ ಎಲೆಕ್ಟ್ರಿಕಾ' ತಿಳಿಸಿದೆ. ಸ್ಪೇನ್ ದೇಶವು 5 ಕೋಟಿ ಜನಸಂಖ್ಯೆಯನ್ನು ಹೊಂದಿದ್ದು, ವಿದ್ಯುತ್ ವ್ಯತ್ಯಯದಿಂದ ಎಷ್ಟು ಜನರು ತೊಂದರೆಗೆ ಒಳಗಾಗಿದ್ದಾರೆ ಎಂದು ಗೊತ್ತಾಗಿಲ್ಲ.

'ಸ್ಥಳೀಯ ಕಾಲಮಾನದಂತೆ, ಮಧ್ಯಾಹ್ನದ ನಂತರ ಏಕಾಏಕಿ ದೊಡ್ಡ ಪ್ರಮಾಣದ ವಿದ್ಯುತ್ ವ್ಯತ್ಯಯ ಉಂಟಾಯಿತು. ಇದರಿಂದ ಮ್ಯಾಡ್ರಿಡ್‌ನಲ್ಲಿರುವ ಸಂಸತ್ ಕತ್ತಲಿನಲ್ಲಿ ಮುಳುಗಿತು. ದೇಶದಲ್ಲಿರುವ ಮೆಟ್ರೊ ಸಂಪರ್ಕ ಸಂಚಾರ ಕಡಿತಗೊಂಡು, ಜನರು ಕಗ್ಗತ್ತಲಿನಲ್ಲಿ ಕಂಗಾಲಾದರು' ಎಂದು ಸ್ಪೇನ್‌ನ ಸರ್ಕಾರಿ ಸುದ್ದಿ ವಾಹಿನಿ 'ಆರ್‌ಟಿವಿಇ' ವರದಿ ಮಾಡಿದೆ.

'ಸೋಮವಾರ ಮಧ್ಯಾಹ್ನ 12.15ರ ವೇಳೆ ದೇಶದಲ್ಲಿ ವಿದ್ಯುತ್ ಬಳಕೆಯು 25 ಸಾವಿರ ಮೆಗಾವಾಟ್‌ನಿಂದ 12 ಸಾವಿರ ಮೆಗಾವಾಟ್‌ಗೆ ಇಳಿಕೆಯಾಗಿತ್ತು' ಎಂದು ಸ್ಪೇನ್‌ನ ವಿದ್ಯುತ್ ಜಾಲದ ಜಾಲತಾಣದಲ್ಲಿ ದಾಖಲಾಗಿತ್ತು.

8ನೇ ಪುಟ ನೋಡಿ

'ಸೈಬರ್ ಅಪರಾಧ: ತನಿಖಾ ಬ್ಯೂರೊ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈಬರ್ ಅಪರಾಧಗಳನ್ನು ನಿಭಾಯಿಸುವಲ್ಲಿ ಸಾಂಪ್ರದಾಯಿಕ ಪೊಲೀಸಿಂಗ್ ವಿಧಾನಗಳು ನಿರೀಕ್ಷಿತ ಕ್ಷಮತೆಯಿಂದ ಕೂಡಿಲ್ಲ' ಎಂದು ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ಈ ನಿಟ್ಟಿನಲ್ಲಿ ಸೈಬರ್ ಅಪರಾಧಗಳಿಗೆ ಎಂದೇ ಮೀಸಲಾದ 'ಸೈಬರ್ ಅಪರಾಧಗಳ ತನಿಖಾ ಬ್ಯೂರೊ' ಸ್ಥಾಪಿಸುವಂತೆ ರಾಜ್ಯ ಸರ್ಕಾರಕ್ಕೆ ಮಹತ್ವದ ಸಲಹೆ ನೀಡಿದೆ.

'ಡ್ರೋನ್ ತಂತ್ರಜ್ಞಾನ ದತ್ತಾಂಶ ಕಳವು ಪ್ರಕರಣದ ತನಿಖೆಗಾಗಿ ಎಸ್‌ಐಟಿ (ವಿಶೇಷ ತನಿಖಾ ತಂಡ) ರಚಿಸಲು ನಿರ್ದೇಶಿಸಬೇಕು' ಎಂದು ಕೋರಿ

ಬೆಂಗಳೂರಿನ, 'ನ್ಯೂ ಸ್ಪೇಸ್ ರಿಸರ್ಚ್ ಅಂಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ'ಯ ಅಧಿಕೃತ ಪ್ರತಿನಿಧಿ ಭಾವನಾ ವಿಜಯಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

7ನೇ ಪುಟ ನೋಡಿ

ಕಣಿವೆಯಲ್ಲಿ ಹೆಚ್ಚಿದ ಬೇಗುದಿ

ಪ್ರಜಾವಾಣಿ
ಮಂಗಳವಾರ • ಏಪ್ರಿಲ್ 29, 2025

‘ಉಗ್ರರ ಮನೆ ಇದ್ದದ್ದು ಮೊದಲೇ ಗೊತ್ತಿರಲಿಲ್ಲವೇ?’

ಪ್ರಜಾವಾಣಿ ವಾರ್ತೆ

ಸಂತೋಷ್ ಲಾಡ್

ಬೆಂಗಳೂರು: ‘ಪಹಲ್ಗಾಮ್ ದಾಳಿಯ ಬಳಿಕ ಕಾಶ್ಮೀರದಲ್ಲಿ ಉಗ್ರರ ಮನೆಗಳನ್ನು ಧ್ವಂಸ ಮಾಡಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಹಾಗಿದ್ದರೆ, ಉಗ್ರರ ಮನೆ ಅಲ್ಲಿ ಇದ್ದದ್ದು ಗೊತ್ತಿರಲಿಲ್ಲವೇ’ ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಆ ತಂತ್ರಜ್ಞಾನ, ಈ ತಂತ್ರಜ್ಞಾನ, ಎಐ ತಂತ್ರಜ್ಞಾನ ಎಂದು ಮೋದಿ ಹೇಳುತ್ತಾರೆ. ಆದರೆ, ಕಾಶ್ಮೀರದಲ್ಲಿ ಒಂದು ಡ್ರೋನ್ ಕೂಡ ಇಲ್ಲ’ ಎಂದರು.

‘ಪಾಕಿಸ್ತಾನಕ್ಕೆ ನೀರು ನಿಲ್ಲಿಸಲು ಸಾಧ್ಯವಿದೆಯೇ? ಈ ಬಗ್ಗೆ ಪರಾಮರ್ಶೆ ಆಗಿದೆಯೇ? ಸರ್ಕಾರ ನಿರ್ಣಯ ತೆಗೆದುಕೊಳ್ಳುವ ಮೊದಲೇ ಮಾಧ್ಯಮಗಳಿಗೆ ಸುದ್ದಿ ನೀಡಲಾಗುತ್ತಿದೆ. ವಾಸ್ತವ ವಿಷಯ ಮರೆಮಾಚಿ, ಜನರ ದಾರಿ ತಪ್ಪಿಸಲು ಇಂತಹ ವಿಚಾರ ಚರ್ಚೆಗೆ ಬರುತ್ತಿದೆ’ ಎಂದು ವಾಗ್ದಾಳಿ ನಡೆಸಿದರು.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಭಾವುಕ ಭಾಷಣ

ಭಯೋತ್ಪಾದನೆ ಅಂತ್ಯದ ಆರಂಭ: ಒಮರ್

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನ ಸಭೆಯಲ್ಲಿ ಭಾವುಕ ಭಾಷಣ ಮಾಡಿದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ‘ಪಹಲ್ಗಾಮ್ ದಾಳಿಗೆ ಸಾರ್ವಜನಿಕರು ತೋರಿರುವ ಪ್ರತಿಕ್ರಿಯೆಯು ಭಯೋತ್ಪಾದನೆ ವಿರುದ್ಧ ಈ ಪ್ರದೇಶದಲ್ಲಿ ನಡೆಯುತ್ತಿರುವ ಸುದೀರ್ಘ ಹೋರಾಟದ ಐತಿಹಾಸಿಕ ತಿರುವು’ ಎಂದು ಬಣ್ಣಿಸಿದ್ದಾರೆ.

ಉಗ್ರರ ದಾಳಿಯನ್ನು ಖಂಡಿಸಿ ನಿರ್ಣಯ ಕೈಗೊಳ್ಳಲು ಕರೆದಿದ್ದ ವಿಶೇಷ ಅಧಿವೇಶನ ದಲ್ಲಿ ಮಾತನಾಡಿದ ಅವರು, ‘ಕಾಶ್ಮೀರದಾದ್ಯಂತ ಜನರು ದುಃಖವನ್ನು ಸ್ವಯಂಪ್ರೇರಿತ ರಾಗಿ ವ್ಯಕ್ತಪಡಿಸಿರುವುದು ಭಯೋತ್ಪಾದನೆಯ ಅಂತ್ಯದ ಆರಂಭವನ್ನು ಸೂಚಿಸುತ್ತದೆ’ ಎಂದಿದ್ದಾರೆ.

‘ಎರಡು ದಶಕಗಳಲ್ಲಿ ಇದೇ ಮೊದಲ ಬಾರಿಗೆ ಕಾಶ್ಮೀರದ ಸಾಮಾನ್ಯ ಜನರು ರಾಜಕೀಯ ಪಕ್ಷಗಳ ಮನವಿ



ಒಮರ್ ಅಬ್ದುಲ್ಲಾ

> ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳ ಕ್ಷಮೆಯಾಚಿಸುವುದು ಹೇಗೆ ಎಂಬುದೇ ತಿಳಿಯುತ್ತಿಲ್ಲ. ಕ್ಷಮೆ ಕೇಳಲು ನನ್ನಲ್ಲಿ ಪದಗಳಿಲ್ಲ
> **ಒಮರ್ ಅಬ್ದುಲ್ಲಾ,** ಮುಖ್ಯಮಂತ್ರಿ

ಅಥವಾ ಸರ್ಕಾರದ ಸೂಚನೆಯಿಲ್ಲದೆಯೇ, ಹಿಂಸೆಯ ವಿರುದ್ಧ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಮೊಂಬತ್ತಿ ಬೆಳಗಿಸಿ, ಮೌನ ಮೆರವಣಿಗೆ ನಡೆಸುವ ಮೂಲಕ ಉಗ್ರರಿಗೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ’ ಎಂದು ಹೇಳಿದರು.

ಜಮ್ಮು ಮತ್ತು ಕಾಶ್ಮೀರದಾದ್ಯಂತ ನಡೆದ ಪ್ರತಿಭಟನೆಯನ್ನು ಉಲ್ಲೇಖಿಸಿದ ಅವರು, ಉಗ್ರರ ದಾಳಿಗೆ ಬಲಿಯಾದವರಿಗಾಗಿ ಇದೇ ಮೊದಲ ಬಾರಿಗೆ ಶ್ರೀನಗರದ ಜಾಮಿಯಾ ಮಸೀದಿ ಮತ್ತು ಇತರ ಮಸೀದಿಗಳಲ್ಲಿ ಶುಕ್ರವಾರದ ಪ್ರಾರ್ಥನೆಗೆ ಮೊದಲು ಎರಡು ನಿಮಿಷಗಳ ಮೌನ ಆಚರಿಸಲಾಯಿತು ಎಂದರು.

ದಾಳಿಯ ಬಳಿಕ ತಾವು ಪೊಲೀಸ್ ನಿಯಂತ್ರಣ ಕೊಠಡಿಗೆ ಭೇಟಿ ನೀಡಿದ್ದನ್ನು ನೆನಪಿಸಿದ ಅಬ್ದುಲ್ಲಾ, ‘ಶಾಂತಿ, ಸಂತಸವನ್ನು ಹುಡುಕಿಕೊಂಡು ಬಂದವರು ತಮ್ಮ ಪ್ರಾಣವನ್ನೇ ಕಳೆದುಕೊಳ್ಳಬೇಕಾಯಿತು’ ಎಂದು ಭಾವುಕರಾಗಿ ತಿಳಿಸಿದರು.

ಉಗ್ರರ ದಾಳಿಯಿಂದ ಹಲವು ಪ್ರವಾಸಿಗರನ್ನು ರಕ್ಷಿಸಿದ ಯುವಕರು, ಪ್ರವಾಸಿ ತಾಣದಲ್ಲಿ ದಿಕ್ಕು ತೋಚದೆ ನಿಂತಿದ್ದವರಿಗೆ ಹಣ್ಣುಗಳನ್ನು ನೀಡಿದ ಅಂಬಿಗರು ಮತ್ತು ಯಾವುದೇ ಹಣ ಪಡೆಯದೆ ತಮ್ಮ ಮನೆಗಳಲ್ಲಿ ಪ್ರವಾಸಿಗರ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಿಕೊಟ್ಟ ಕಾಶ್ಮೀರಿಗಳ ಬಗ್ಗೆಯೂ ಅವರು ಮಾತನಾಡಿದರು.

‘ಕಾಶ್ಮೀರದ ನಿಜವಾದ ಚೈತನ್ಯ ಇದೇ ಆಗಿದೆ. ಇಲ್ಲಿನ ಜನರ ಅತಿಥಿ ಸತ್ಕಾರ, ಧೈರ್ಯ ಮತ್ತು ಪರೋಪಕಾರವನ್ನು ಹಿಂಸೆಯಿಂದ ನಾಶಪಡಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

ಉಗ್ರರ ದಾಳಿಯನ್ನು ಖಂಡಿಸುವ ಮತ್ತು ಸಂತ್ರಸ್ತರು ಹಾಗೂ ಅವರ ಕುಟುಂಬಗಳ ಪರ ಒಗ್ಗಟ್ಟು ತೋರುವ ನಿರ್ಣಯವನ್ನು ವಿಧಾನಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

‘ಸರ್ವ ಪಕ್ಷ ಸಭೆಗೆ ಪ್ರಧಾನಿ ಗೈರಾಗಿದ್ದು ದೇಶದ ದುರ್ದೈವ’

ಜೈಪುರ (ಪಿಟಿಐ): ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಗೆ ಸಂಬಂಧಿಸಿ ದೆಹಲಿಯಲ್ಲಿ ನಡೆದ ಸರ್ವ ಪಕ್ಷಗಳ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಹಾಜರಾಗದಿರುವುದನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಸೋಮವಾರ ಇಲ್ಲಿ ನಡೆದ ‘ಸಂವಿಧಾನ ಉಳಿಸಿ’ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿ, ‘ದೇಶದ ಪ್ರತಿಷ್ಠೆಗೆ ಧಕ್ಕೆಯಾದಾಗ ನೀವು (ಪ್ರಧಾನಿ ಮೋದಿ) ಬಿಹಾರದಲ್ಲಿ ಚುನಾವಣಾ ಭಾಷಣ ಮಾಡುತ್ತಿದ್ದೀರಿ. ಇದು ದೇಶದ ದುರ್ದೈವ’ ಎಂದು ದೂರಿದರು.

‘ಸಭೆಯಲ್ಲಿ ಎಲ್ಲ ಪಕ್ಷಗಳ ಪ್ರತಿನಿಧಿಗಳು ಹಾಜರಿದ್ದರು. ಆದರೆ, ಪ್ರಧಾನಿ ಅವರೇ ಗೈರಾಗಿದ್ದರು. ಬಿಹಾರವು ದೆಹಲಿಯಿಂದ ಬಹಳ

> ಕಾಂಗ್ರೆಸ್ ಪಕ್ಷವು ಒಗ್ಗಟ್ಟಿನ ಮಾತನಾಡುತ್ತದೆ. ಆದರೆ, ಬಿಜೆಪಿ ಒಗ್ಗಟ್ಟು ಮುರಿಯುವ ಮಾತನಾಡುತ್ತದೆ
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

ದೂರದಲ್ಲಿತ್ತೇ? ಪ್ರಧಾನಿ ಅವರು ಸಭೆಗೆ ಹಾಜರಾಗಿ ತಮ್ಮ ಮುಂದಿನ ಯೋಜನೆಗಳ ಬಗ್ಗೆ ವಿವರಣೆ ನೀಡಬೇಕಿತ್ತು. ನಮ್ಮಿಂದ ಏನು ಸಹಕಾರ ಬೇಕು ಎಂಬುದನ್ನು ತಿಳಿಸಬೇಕಿತ್ತು’ ಎಂದರು.

‘ದೇಶದ ಹಿತಾಸಕ್ತಿಯ ವಿಚಾರದಲ್ಲಿ ಕೇಂದ್ರ ಸರ್ಕಾರವು ಯಾವುದೇ ನಿರ್ಧಾರ ಕೈಗೊಂಡರೂ ನಾವು ಸರ್ಕಾರವನ್ನು ಬೆಂಬಲಿಸುತ್ತೇವೆ. ಏಕೆಂದರೆ, ಪಕ್ಷಗಳು ಅಥವಾ ಧರ್ಮಗಳಿಗಿಂತ ದೇಶವೇ ಪರಮೋಚ್ಚ. ದೇಶಕ್ಕಾಗಿ ಎಲ್ಲರೂ ಒಟ್ಟಾಗಬೇಕು’ ಎಂದರು.



ಮಲ್ಲಿಕಾರ್ಜುನ ಖರ್ಗೆ

ಭಾರತದಿಂದ ಹಠಾತ್ ದಾಳಿ ಸನ್ನಿಹಿತ: ಖ್ವಾಜಾ



ಖ್ವಾಜಾ ಮಹಮ್ಮದ್ ಆಸಿಫ್

ಇಸ್ಲಾಮಾಬಾದ್ (ರಾಯಿಟರ್ಸ್): ಭಾರತೀಯ ಸೇನೆಯು ಹಠಾತ್ ದಾಳಿ ನಡೆಸುವ ಸಮಯ ಸನ್ನಿಹಿತವಾಗಿದೆ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಮಹಮ್ಮದ್ ಆಸಿಫ್ ಸೋಮವಾರ ಹೇಳಿದರು.

‘ಅನಿರೀಕ್ಷಿತ ದಾಳಿ ಸನ್ನಿಹಿತವಾಗಿರುವ ಕಾರಣ ನಾವು ಸೈನ್ಯವನ್ನು ಸಜ್ಜುಗೊಳಿಸುತ್ತಿದ್ದೇವೆ. ಕೆಲ ಸಂದರ್ಭದಲ್ಲಿ ಕೆಲವು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ. ಅದರ ಭಾಗವಾಗಿ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ’ ಎಂದು ಅವರು ಹೇಳಿದರು.

‘ಭಾರತವು ದಾಳಿ ನಡೆಸುವ ಸಾಧ್ಯತೆಯ ಬಗ್ಗೆ ಪಾಕ್ ಸೇನೆಯು ಸರ್ಕಾರಕ್ಕೆ ಮಾಹಿತಿ ನೀಡಿದೆ’ ಎಂದರು.

‘ದೇಶದಲ್ಲಿ ಕಟ್ಟೆಚ್ಚರ ಇದೆ. ನಮ್ಮ ಅಸ್ತಿತ್ವಕ್ಕೆ ನೇರ ಬೆದರಿಕೆ ಬಂದಾಗ ಮಾತ್ರ ಪರಮಾಣು ಶಸ್ತ್ರಾಸ್ತ್ರವನ್ನು ಬಳಸುತ್ತೇವೆ’ ಎಂದು ಅವರು ಹೇಳಿದರು.

ಪಹಲ್ಗಾಮ್‌ನಲ್ಲಿ ಉಗ್ರ ದಾಳಿ ನಡೆದ ನಂತರ ಉಭಯ ದೇಶಗಳ ಮಧ್ಯೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ತಾಕತ್ತಿದ್ದರೆ ಭಾರತಕ್ಕೆ ಬಾ: ಭುಟ್ಟೊಗೆ ಪಾಟೀಲ ತಿರುಗೇಟು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ‘ಸಿಂಧೂ ನದಿ ನೀರು ನಿಲ್ಲಿಸಿದರೆ ಭಾರತೀಯರ ರಕ್ತ ಹರಿಸುತ್ತೇವೆ’ ಎಂದು ಬೆದರಿಕೆ ಹಾಕಿರುವ ಪಾಕಿಸ್ತಾನದ ಬಿಲಾವಲ್ ಭುಟ್ಟೊ ಜರ್ದಾರಿ ಹೇಳಿಕೆಗೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ತಿರುಗೇಟು ನೀಡಿದ್ದಾರೆ. ‘ಪಾಕಿಸ್ತಾನದ ರಾಜಕಾರಣಿ ಅರುಚುತ್ತಿದ್ದಾನೆ. ಅವನಿಗೆ ತಾಕತ್ತು ಇದ್ದರೆ ಭಾರತಕ್ಕೆ ಕಾಲಿಡಲಿ’ ಎಂದು ಅವರು ಸವಾಲು ಹಾಕಿದ್ದಾರೆ.

ಸೂರತ್‌ನ ಅಹಿರ್ ಸಮಾಜ ಜಲ ಪಂಚಾಯತ್ ಸಮಿತಿ ಆಯೋಜಿಸಿದ್ದ ಮಳೆನೀರು ಸಂಗ್ರಹ ಕುರಿತ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಸಿಂಧೂ ಜಲ ಒಪ್ಪಂದ ಸ್ಥಗಿತಗೊಳಿಸುವ ಸರ್ಕಾರದ ನಿರ್ಧಾರ ಉಲ್ಲೇಖಿಸಿದ ಪಾಟೀಲ, ‘ನದಿಯಲ್ಲಿ ನೀರು ಹರಿಸುವುದನ್ನು ನಿಲ್ಲಿಸಿದರೆ, ಭಾರತದಲ್ಲಿ ರಕ್ತದ ನದಿ ಹರಿಯುತ್ತದೆ ಎಂದು ಬಿಲಾವಲ್ ಹೇಳಿದಾಕ್ಷಣ ನಾವು ಭೀತಿಗೊಳಗಾಗುವ ಜನರೇ? ನಾನು ಆತನಿಗೆ ಹೇಳುತ್ತೇನೆ, ಸಹೋದರ, ನೀವು ಶಾಂತವಾಗಿರಿ. ನಿಮಗೆ ಧೈರ್ಯವಿದ್ದರೆ ಭಾರತಕ್ಕೆ ಬನ್ನಿ. ಇಂತಹ ನಿಮ್ಮ ಗೊಡ್ಡು ಬೆದರಿಕೆಗಳ ಬಗ್ಗೆ ನಾವು ಚಿಂತಿಸದೆ, ನೀರನ್ನು ಉಳಿಸುವ ಸಂರಕ್ಷಿಸುವ ಪ್ರಯತ್ನ ಮುಂದುವರಿಸುತ್ತೇವೆ’ ಎಂದು ಹೇಳಿದ್ದಾರೆ.

4 ಅಣುಬಾಂಬ್ ಹಾಕಿದರೆ ಪಾಕ್ ಸರ್ವನಾಶ: ಯತ್ನಾಳ

ಬಸನಗೌಡ ಯತ್ನಾಳ

ಹುಬ್ಬಳ್ಳಿ: ‘ನಮ್ಮಲ್ಲಿರುವ 4 ಅಣುಬಾಂಬ್‌ಗಳನ್ನು ಎಸೆದರೆ, ಪಾಕಿಸ್ತಾನ ಸರ್ವನಾಶವಾಗುತ್ತದೆ. ಭಾರತದ ಶಕ್ತಿಯನ್ನು ಯಾರೂ ಹಗುರವಾಗಿ ಪರಿಗಣಿಸಬಾರದು. ಈ ಸಲ ಪಾಕಿಸ್ತಾನ ಅಂತ್ಯವಾಗಬೇಕು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ಕಾಂಗ್ರೆಸ್ ಹಿಂದೂಗಳ ಪಕ್ಷವಲ್ಲ. ಅದು ಹುಟ್ಟಿದ್ದೇ ಮುಸ್ಲಿಮರಿಗಾಗಿ. ಎಲ್ಲಿಯವರೆಗೆ ಮುಸ್ಲಿಮರು ದೇಶದಲ್ಲಿ ಇರ್ತಾರೋ ಅಲ್ಲಿಯವರೆಗೆ ಅವರು ಕಲ್ಲು ಹೊಡೆಯುತ್ತಾರೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಮೋದಿ ಬಗ್ಗೆ ಮಾತನಾಡಲು ಕಾಂಗ್ರೆಸ್‌ಗೆ ನೈತಿಕತೆ ಇಲ್ಲ. ಪ್ರಧಾನಿ ಮೋದಿ ಎದುರು ಸಚಿವ ಸಂತೋಷ ಲಾಡ್ ಬಚ್ಚಾ. ಹಿಂಗೆ ಮಾತನಾಡಿದ್ರೆ ರಾಹುಲ್ ಗಾಂಧಿ ಖುಷಿಯಾಗುತ್ತಾರೆ. ಸಚಿವ ಸ್ಥಾನ ಉಳಿಯುತ್ತೆ ಎಂಬ ಭಾವನೆಯಲ್ಲಿ ಅವರು ಮಾತನಾಡುತ್ತಾರೆ’ ಎಂದರು.

ದಾಳಿ: ತನಿಖೆಗೆ ಚೀನಾ ಕರೆ

ಬೀಜಿಂಗ್ (ಪಿಟಿಐ): ಪಹಲ್ಗಾಮ್ ದಾಳಿ ಕುರಿತಾಗಿ ‘ತ್ವರಿತವಾಗಿ, ನ್ಯಾಯಸಮ್ಮತವಾಗಿ ತನಿಖೆ’ ಆಗಬೇಕು ಎಂದು ಚೀನಾ ಹೇಳಿದೆ.

ಮಿತ್ರ ರಾಷ್ಟ್ರವಾದ ಪಾಕಿಸ್ತಾನಕ್ಕೆ ತನ್ನ ಸಾರ್ವಭೌಮತ್ವ ಮತ್ತು ರಕ್ಷಣಾ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕೆ ಅಗತ್ಯವಿರುವ ಬೆಂಬಲ ಒದಗಿಸುವುದಾಗಿಯೂ ಚೀನಾ ಭರವಸೆ ಇತ್ತಿದೆ.

ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಪಾಕಿಸ್ತಾನದ ಉಪ ಮುಖ್ಯಮಂತ್ರಿ ಮತ್ತು ವಿದೇಶಾಂಗ ಸಚಿವ ಇಶಾಕ್ ಡಾರ್ ಅವರ ಜೊತೆ ಭಾನುವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದರು ಎಂದು ಚೀನಾದ ಕ್ಸಿನ್ಹುವಾ ಸುದ್ದಿಸಂಸ್ಥೆ ವರದಿ ಮಾಡಿದೆ.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ದಾಳಿ ನಡೆಸಿದ ನಂತರದಲ್ಲಿ ಪಾಕಿಸ್ತಾನ ಮತ್ತು ಭಾರತ ನಡುವೆ ಉಂಟಾಗಿರುವ ಬಿಗುವಿನ ಪರಿಸ್ಥಿತಿ ಬಗ್ಗೆ ಡಾರ್ ಅವರು ವಾಂಗ್ ಯಿ ಅವರಿಗೆ ಮಾಹಿತಿ ನೀಡಿದರು ಎಂದು ಆ ವರದಿಯು ಹೇಳಿದೆ.

‘ಬಿಕ್ಕಟ್ಟಿನಿಂದ ಭಾರತ ಅಥವಾ ಪಾಕಿಸ್ತಾನದ ಮೂಲಭೂತ ಹಿತಾಸಕ್ತಿಗಳಿಗೆ ಒಳಿತಾಗುವುದು ಏನೂ ಇಲ್ಲ. ಬಿಕ್ಕಟ್ಟಿನಿಂದ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಕೂಡ ಪ್ರಯೋಜನ ಇಲ್ಲ’ ಎಂದು ವಾಗ್ ಹೇಳಿದರು.

ಭಾರತ ಮತ್ತು ಪಾಕಿಸ್ತಾನ ಬಿಕ್ಕಟ್ಟು ಶಮನಗೊಳಿಸಲು ಒಟ್ಟಾಗಿ ಕೆಲಸ ಮಾಡುತ್ತವೆ ಎಂಬ ಆಶಾಭಾವನೆಯನ್ನು ಚೀನಾ ವ್ಯಕ್ತಪಡಿಸಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ನಿನ್ನ ಅಜ್ಜ, ತಾಯಿ ಕೊಂದವರು ಯಾರೆಂದು ಗೊತ್ತಿಲ್ಲವೇ?’



ಅಸಾದುದ್ದೀನ್ ಒವೈಸಿ

ಅಹಮದಾಬಾದ್: ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್ ಮುಖ್ಯಸ್ಥ ಮತ್ತು ಹೈದರಾಬಾದ್ ಸಂಸದ ಅಸಾದುದ್ದೀನ್ ಒವೈಸಿ ಕೂಡ ಭುಟ್ಟೊ ಹೇಳಿಕೆಗೆ ಕಿಡಿಕಾರಿದ್ದಾರೆ.

‘ತಾನೇನು ಮಾತನಾಡುತ್ತಿರುವೆ ಎನ್ನುವುದು ಗೊತ್ತಿದೆಯೇ? ಇಂತಹ ಬಾಲಿಶ ಹೇಳಿಕೆಗಳನ್ನು ನೀಡುವ ಮೊದಲು ತನ್ನ ತಾಯಿ ಮಾಜಿ ಪ್ರಧಾನಿ ಬೆನಜೀರ್ ಭುಟ್ಟೊ ಮತ್ತು ತನ್ನ ಅಜ್ಜ ಜುಲ್ಫಿಕರ್ ಅಲಿ ಭುಟ್ಟೊ ಅವರನ್ನು ಕೊಂದವರು ಭಯೋತ್ಪಾದಕರು ಎನ್ನುವುದನ್ನು ಮರೆಯಬೇಡ’ ಎಂದು ತಿರುಗೇಟು ನೀಡಿದ್ದಾರೆ.

‘ನಿಮಗೆ ಅಮೆರಿಕ ಒಂದಿಷ್ಟು ಕೊಡದಿದ್ದರೆ ನಿಮಗೆ ದೇಶ ನಡೆಸುವ ಶಕ್ತಿಯೇ ಇಲ್ಲ. ಅಂತಹದರಲ್ಲಿ ನೀವು ನಮ್ಮನ್ನು ಕೆಕ್ಕರಿಸಿಕೊಂಡು ನೋಡುತ್ತಿದ್ದೀರಾ’ ಎಂದು ಮೂದಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಪಾಕ್‌ನಿಂದ 4ನೇ ಬಾರಿ ಕದನ ವಿರಾಮ ಉಲ್ಲಂಘನೆ’

ಜಮ್ಮು (ಪಿಟಿಐ): ‘ಸತತ ನಾಲ್ಕನೇ ಬಾರಿಗೆ ಪಾಕಿಸ್ತಾನವು ಕದನ ವಿರಾಮ ಉಲ್ಲಂಘಿಸಿದೆ. ಜಮ್ಮು ಮತ್ತು ಕಾಶ್ಮೀರದ ಪೂಂಚ್ ಮತ್ತು ಕುಪ್ವಾರ ಜಿಲ್ಲೆಗಳಲ್ಲಿನ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಸಣ್ಣ ಪ್ರಮಾಣದ ಗುಂಡಿನ ದಾಳಿ ನಡೆಸಿದೆ’ ಎಂದು ಸೇನೆಯ ಅಧಿಕಾರಿಗಳು ಸೋಮವಾರ ಮಾಹಿತಿ ನೀಡಿದರು. ‘ಏ. 27 ಮತ್ತು 28ರಂದು ಪಾಕಿಸ್ತಾನ ಪಡೆಗಳು ಪೂಂಚ್ ಹಾಗೂ ಕುಪ್ವಾರದ ಎಲ್‌ಒಸಿ ಬಳಿ ಅಪ್ರಚೋದಿತ ದಾಳಿ ನಡೆಸಿವೆ. ಈ ದಾಳಿಗಳಿಗೆ ಸೂಕ್ತ ಪ್ರತ್ಯುತ್ತರ ನೀಡಲಾಗಿದೆ’ ಎಂದು ರಕ್ಷಣಾ ಸಚಿವಾಲಯದ ವಕ್ತಾರರು ತಿಳಿಸಿದರು. ಈ ವೇಳೆ ಸಾವು–ನೋವಿನ ಘಟನೆ ವರದಿಯಾಗಿಲ್ಲ.

ಸಹಾಯಕ ಪ್ರಾಧ್ಯಾಪಕಿ ವಿರುದ್ಧ ದೂರು

ಲಖನೌ: ಪಹಲ್ಗಾಮ್ ದಾಳಿಯ ಕುರಿತಂತೆ ವಿಡಿಯೊ ಹೇಳಿಕೆ ನೀಡಿದ್ದ ಲಖನೌ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿಯೊಬ್ಬರ ವಿರುದ್ಧ ಹಸನ್‌ಗಂಜ್ ಪೊಲೀಸ್ ಠಾಣೆಯಲ್ಲಿ ಎಬಿವಿಪಿ ಕಾರ್ಯಕರ್ತರು ದೂರು ದಾಖಲಿಸಿದ್ದಾರೆ. ‘ಧರ್ಮವನ್ನು ಕೇಳಿ ಪ್ರವಾಸಿಗರನ್ನು ಕೊಂದಿದ್ದು ಹಾಗೂ ಉಗ್ರರ ವಿಳಾಸ ಪತ್ತೆ ಹಚ್ಚಿ ಅವರ ಮನೆಗಳನ್ನು ಧ್ವಂಸಗೊಳಿಸಿರುವುದು ಸಹ ಭಯೋತ್ಪಾದನಾ ಕೃತ್ಯವೇ’ ಎಂದು ಸಹಾಯಕ ಪ್ರಾಧ್ಯಾಪಕಿ ಮಾದ್ರಿ ಕಾಕೋಟಿ ಹೇಳಿದ್ದರು.

ಗಾಯಕಿ ನೇಹಾ ಸಿಂಗ್ ವಿರುದ್ಧ ದೇಶದ್ರೋಹ ಪ್ರಕರಣ

ಪ್ರಜಾವಾಣಿ ವಾರ್ತೆ

ಲಖನೌ: ಪಹಲ್ಗಾಮ್ ದಾಳಿಗೆ ಸಂಬಂಧಿಸಿ ಜಾಲತಾಣದಲ್ಲಿ ಪೋಸ್ಟ್ ಹಾಕಿದ ಆರೋಪದಲ್ಲಿ ಖ್ಯಾತ ಬೋಜ್ಪುರಿ ಗಾಯಕಿ ನೇಹಾ ಸಿಂಗ್ ರಾಥೋಡ್ ವಿರುದ್ಧ ಉತ್ತರ ಪ್ರದೇಶ ಪೊಲೀಸರು ದೇಶದ್ರೋಹ ಪ್ರಕರಣ ದಾಖಲಿಸಿದ್ದಾರೆ.

ನೇಹಾ ಅವರು ಕೋಮು ಉದ್ವಿಗ್ನತೆಯನ್ನು ಪ್ರಚೋದಿಸಲು ಮತ್ತು ದೇಶ ವಿರೋಧಿ ಹೇಳಿಕೆ ನೀಡಲು ಜಾಲತಾಣ ಖಾತೆಯನ್ನು ಬಳಸಿಕೊಂಡಿದ್ದಾರೆ ಎಂದು ಅಭಯ್ ಸಿಂಗ್ ಅವರು ದೂರು ನೀಡಿದ್ದರು. ಇದರ ಆಧಾರದಲ್ಲಿ ನೇಹಾ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ನೇಹಾ ಅವರು ‘ಎಕ್ಸ್’ನಲ್ಲಿ ಸರ್ಕಾರದ ವೈಫಲ್ಯದ ಪರಿಣಾಮವಾಗಿ ಪಹಲ್ಗಾಮ್ ದಾಳಿ ನಡೆದಿದೆ. ಬಿಜೆಪಿಯು ಈ ದಾಳಿಯನ್ನು ಮುಂಬರುವ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಮತಗಳಿಕೆಗೆ ಬಳಸಿಕೊಳ್ಳಲಿದೆ ಎಂದು ಆರೋಪಿಸಿದ್ದಾರೆ.

ಭರತ್ ಮನೆಗೆ ಎನ್‌ಐಎ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದಿದ್ದ ಉಗ್ರರ ದಾಳಿಯಲ್ಲಿ ಮೃತಪಟ್ಟಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಭರತ್ ಭೂಷಣ್ ಅವರ ಮನೆಗೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳು ಭೇಟಿ ನೀಡಿ, ಘಟನೆ ಕುರಿತು ಭೂಷಣ್ ಅವರ ಪತ್ನಿ ಸುಜಾತ ಅವರಿಂದ ಮಾಹಿತಿ ಪಡೆದುಕೊಂಡಿದ್ದಾರೆ.

ಮತ್ತಿಕೆರೆಯ ಸುಂದರ್ ನಗರದಲ್ಲಿರುವ ಭರತ್ ಭೂಷಣ್ ನಿವಾಸಕ್ಕೆ ಭೇಟಿ ನೀಡಿದ್ದ ಎನ್‌ಐಎ ಅಧಿಕಾರಿಗಳು, ಸುಜಾತ ಅವರಿಗೆ ಘಟನೆ ಕುರಿತು ಕೆಲವು ಪ್ರಶ್ನೆ ಕೇಳಿ, ಮಾಹಿತಿ ಸಂಗ್ರಹಿಸಿಕೊಂಡರು.

‘ಪಹಲ್ಗಾಮ್‌ಗೆ ಏಪ್ರಿಲ್ 22ರಂದು ಯಾವ ಸಮಯದಲ್ಲಿ ಭೇಟಿ ನೀಡಿದ್ದಿರಿ? ಕೃತ್ಯಕ್ಕೆ ಮುನ್ನ ತಮ್ಮೊಂದಿಗೆ ಉಗ್ರರು ಏನೆಲ್ಲಾ ಮಾತನಾಡಿದ್ದರು? ಅವರ ಮುಖಚಹರೆ ಹೇಗಿತ್ತು ಎಂಬುದಾಗಿ ಪ್ರಶ್ನೆ ಕೇಳಿ ಮಾಹಿತಿ ಪಡೆದುಕೊಂಡಿದ್ದಾರೆ. ಕೆಲವು ಫೋಟೊಗಳನ್ನು ತೋರಿಸಿ ಮಾಹಿತಿ ಸಂಗ್ರಹಿಸಿ ತೆರಳಿದ್ದಾರೆ’ ಎಂದು ಗೊತ್ತಾಗಿದೆ.

‘ನಾವೆಲ್ಲಾ ಇಲ್ಲಿ ಕಷ್ಟಪಡುತ್ತಿದ್ದೇವೆ. ನಮ್ಮ ಮಕ್ಕಳನ್ನು ಹೊಡೆದು ಸಾಯಿಸುತ್ತಿದ್ದಾರೆ. ನೀವು ಮಾತ್ರ ಇಲ್ಲಿಗೆ ಬಂದು ಖುಷಿಯಾಗಿ ಓಡಾಟ ನಡೆಸುತ್ತಿದ್ದೀರಿ. ನೀವು ಮಾತ್ರವೇ ಸಂತೋಷವಾಗಿರಬೇಕೆ ಎಂದು ಉಗ್ರನೊಬ್ಬ ಹೇಳುತ್ತಲೇ ನನ್ನ ಪತಿಯ ತಲೆಗೆ ಗುಂಡಿಟ್ಟ’ ಎಂದು ಘಟನೆ ಕುರಿತು ಸುಜಾತ ಅವರು ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಕಣಿವೆಯಲ್ಲಿ ಭದ್ರತೆ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಪ್ರವಾಸಿಗರು ಶ್ರೀನಗರವನ್ನು ತೊರೆಯುತ್ತಿದ್ದು, ಕಾಶ್ಮೀರದಾದ್ಯಂತ ಭದ್ರತೆ ಹೆಚ್ಚಿಸಲಾಗಿದೆ ಪಿಟಿಐ ಚಿತ್ರ

ಪಾಕ್ 16 ಚಾನೆಲ್‌ಗಳಿಗೆ ನಿರ್ಬಂಧ

ಒಂದನೇ ಪುಟದಿಂದ...

ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಉಗ್ರರ ಪತ್ತೆಗೆ ನಡೆಯುತ್ತಿರುವ ಸೇನಾ ಕಾರ್ಯಾಚರಣೆಯ ನೇರ ಪ್ರಸಾರ ಮಾಡಬಾರದು ಮತ್ತು ‘ಮೂಲಗಳನ್ನು ಉಲ್ಲೇಖಿಸಿ’ ವರದಿಗಳನ್ನು ಪ್ರಕಟಿಸದಂತೆ ಮಾಧ್ಯಮಗಳಿಗೆ ಕೇಂದ್ರ ಸರ್ಕಾರ ಶನಿವಾರ ಸೂಚಿಸಿತ್ತು.

ಕೆಲವು ಮಾಧ್ಯಮ ಸಂಸ್ಥೆಗಳು ಸೇನೆಗೆ ಸಂಬಂಧಿಸಿದ ನಿರ್ದಿಷ್ಟ ವಿಷಯಗಳ ಮೇಲೆ ಸಂವಾದ ಕಾರ್ಯಕ್ರಮ ನಡೆಸಿವೆ ಎಂದು ಸೇನೆಯ ಮೂಲಗಳು ಕಳವಳ ವ್ಯಕ್ತಪಡಿಸಿವೆ.

ನಾಲ್ವರು ಪಾಕ್ ಪ್ರಜೆಗಳ ಗಡಿಪಾರು

ಒಂದನೇ ಪುಟದಿಂದ...

‘ಅನಧಿಕೃತವಾಗಿ ವಾಸವಾಗಿದ್ದ ನಾಲ್ವರ ದಾಖಲಾತಿ ಪರಿಶೀಲನೆ ನಡೆಸಿ ಗಡುವಿನೊಳಗೆ ರಾಜ್ಯ ತೊರೆಯುವಂತೆ ಸೂಚನೆ ನೀಡಲಾಗಿತ್ತು. ಎರಡು ದಿನಗಳ ಹಿಂದೆಯೇ ರಾಜ್ಯದಿಂದ ಹೊರಟಿದ್ದ ಅವರು ಅಟ್ಟಾರಿ–ವಾಘಾ ಗಡಿ ತಲುಪಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ಗಡಿಯಲ್ಲಿರುವ ಅಧಿಕಾರಿಗಳು ನಾಲ್ವರನ್ನೂ ಪಾಕಿಸ್ತಾನಕ್ಕೆ ಕಳುಹಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಆ ಮಕ್ಕಳಿಗೆ ಏನು ಉತ್ತರಿಸಲಿ?’

ಒಂದನೇ ಪುಟದಿಂದ...

ರಾಜ್ಯದ ಸ್ಥಾನಮಾನಕ್ಕೆ ಈಗ ಒತ್ತಾಯಿಸುವುದಿಲ್ಲ: ‘ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತೆ ಒದಗಿಸುವುದು ಇಲ್ಲಿನ ಚುನಾಯಿತ ಸರ್ಕಾರದ ಜವಾಬ್ದಾರಿಯಲ್ಲ, ಆದರೆ ನಾನು ಈ ಅವಕಾಶವನ್ನು (ಪಹಲ್ಗಾಮ್ ದಾಳಿ) ರಾಜ್ಯದ ಸ್ಥಾನಮಾನ ಕೇಳಲು ಬಳಸುವುದಿಲ್ಲ. ಈ ಘಟನೆಯನ್ನು ಮುಂದಿಟ್ಟುಕೊಂಡು ರಾಜ್ಯದ ಸ್ಥಾನಮಾನ ಕೊಡಿ ಎಂದು ಒತ್ತಾಯಿಸುವುದು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು.

ಯುವ ಕಾಂಗ್ರೆಸ್ ಅಧ್ಯಕ್ಷ ವಶಕ್ಕೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಈಚೆಗೆ ನಡೆದ ಉಗ್ರರ ದಾಳಿಯನ್ನು ಖಂಡಿಸಿ ದೆಹಲಿಯಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿ ಎದುರು ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್‌ನ (ಐವೈಸಿ) ಹಲವು ಕಾರ್ಯಕರ್ತರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದಾರೆ.

ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಘಟಕದ ಅಧ್ಯಕ್ಷ ಉದಯ್ ಭಾನು ಛಿಬ್ ಹಾಗೂ ಮಾಧ್ಯಮ ಮೇಲ್ವಿಚಾರಕ ವರುಣ್ ಪಾಂಡೆ ಸೇರಿದಂತೆ ಪಕ್ಷದ ನೂರಾರು ಕಾರ್ಯಕರ್ತರು ಹಾಗೂ ಬೆಂಬಲಿಗರು ತೀನ್ ಮೂರ್ತಿ ಚೌಕ್‌ನಿಂದ ಪಾಕಿಸ್ತಾನ ರಾಯಭಾರ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪ್ರತಿಭಟನಕಾರರು ಪಾಕಿಸ್ತಾನ ರಾಯಭಾರ ಕಚೇರಿ ತಲುಪುದನ್ನು ತಡೆಯಲು ಪೊಲೀಸರು ಹಾಗೂ ಅರೆಸೇನಾ ಪಡೆಯನ್ನು ನಿಯೋಜಿಸಲಾಗಿತ್ತು. ಆದರೂ ಹಲವು ಬ್ಯಾರಿಕೇಡ್‌ಗಳನ್ನು ದಾಟಿ ಕಚೇರಿ ಆವರಣವನ್ನು ತಲುಪಿದರು. ಅಲ್ಲಿ ಅವರನ್ನು ಪೊಲೀಸರು ವಶಕ್ಕೆ ಪಡೆದರು.

ಪ್ರತಿಭಟನೆ ವೇಳೆ ಮಾತನಾಡಿದ ಉದಯ್ ಭಾನು ‘ಸಮಾಜದಲ್ಲಿ ದ್ವೇಷ ಮತ್ತು ಭಯವನ್ನು ಸೃಷ್ಟಿಸುವ ಉದ್ದೇಶದಿಂದ ನಡೆಸಿರುವ ಪಹಲ್ಗಾಮ್ ದಾಳಿಯು ಭಯಾನಕವಾಗಿದೆ. ಭಾರತವು ಪ್ರೀತಿ ಮತ್ತು ಸಹೋದರತ್ವದ ದೇಶವಾಗಿದೆ. ಇಲ್ಲಿ ದ್ವೇಷ ಹಾಗೂ ಭಯೋತ್ಪಾದನೆಗೆ ಜಾಗವಿಲ್ಲ’ ಎಂದರು.

ಅಲ್ಲದೇ ‘ದಾಳಿ ನಡೆದು ಐದು ದಿನಗಳು ಕಳೆದರೂ ಪಾಕಿಸ್ತಾನದ ವಿರುದ್ಧ ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಹೇಳಿದರು.

‘ವಿಮಾನಗಳ ಹಾರಾಟ: ಪರಿಶೀಲನೆ ಬಳಿಕ ನಿರ್ಧಾರ’

ನವದೆಹಲಿ (ಪಿಟಿಐ): ಪಾಕಿಸ್ತಾನವು ತನ್ನ ವಾಯುಪ್ರದೇಶದಲ್ಲಿ ಭಾರತದ ವಿಮಾನಗಳ ಹಾರಾಟಕ್ಕೆ ನಿರ್ಬಂಧ ಹೇರಿದ್ದರಿಂದ ಎದುರಾಗಿರುವ ತೊಂದರೆಗಳ ಕುರಿತು ಸಮಗ್ರ ಪರಿಶೀಲನೆಯ ಬಳಿಕ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್‌ನಾಯ್ಡು ಸೋಮವಾರ ಹೇಳಿದ್ದಾರೆ.

ಈಗಿನ ಪರಿಸ್ಥಿತಿಯನ್ನು ಸರ್ಕಾರವು ವಿಮಾನಯಾನ ಸಂಸ್ಥೆಗಳೊಂದಿಗೆ ಅವಲೋಕಿಸುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಭಯೋತ್ಪಾದಕ ದಾಳಿಯ ಬಳಿಕ ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನತೆ ಹೆಚ್ಚಿದೆ. ಪಾಕಿಸ್ತಾನ ಕಳೆದ ವಾರ ತನ್ನ ವಾಯುಪ್ರದೇಶವನ್ನು ಭಾರತೀಯ ವಿಮಾನಯಾನ ಸಂಸ್ಥೆಗಳು ಬಳಸುವುದನ್ನು ನಿಷೇಧಿಸಿತ್ತು.

ಇದು ಉತ್ತರ ಭಾರತದ ಪ್ರಮುಖ ನಗರಗಳಿಂದ ಸಾಗುವ ಅಂತರರಾಷ್ಟ್ರೀಯ ವಿಮಾನಗಳ ಮೇಲೆ ಪರಿಣಾಮ ಬೀರಿದೆ. ಪ್ರಯಾಣದ ಅವಧಿ ಹೆಚ್ಚಳ, ಇಂಧನ ವೆಚ್ಚ ಹೆಚ್ಚಾಗಲಿದೆ. ಅದರ ಜತೆಗೆ ಪ್ರಯಾಣ ದರದಲ್ಲೂ ಏರಿಕೆಯಾಗಲಿದೆ. ಈ ಎಲ್ಲ ವಿಷಯಗಳನ್ನು ಅವಲೋಕಿಸಲಾಗುತ್ತಿದೆ ಎಂದು ಸಚಿವರು ಹೇಳಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ವಿಮಾನಯಾನ ಸಚಿವಾಲಯವು ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಿದೆ ಎಂದು ಸಚಿವರು ತಿಳಿಸಿದ್ದಾರೆ.

ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ಸೇರಿದ 800ಕ್ಕೂ ಹೆಚ್ಚು ವಿಮಾನಗಳು ಪ್ರತಿ ವಾರ ಉತ್ತರ ಭಾರತದ ಪ್ರಮುಖ ನಗರಗಳಿಂದ ಬ್ರಿಟನ್ ಸೇರಿದಂತೆ ಯುರೋಪ್‌ನ ವಿವಿಧ ದೇಶಗಳು, ಉತ್ತರ ಅಮೆರಿಕ, ಮತ್ತು ಮಧ್ಯಪ್ರಾಚ್ಯದತ್ತ ಸಂಚರಿಸುತ್ತವೆ ಎಂದು ಅಂಕಿ ಅಂಶಗಳು ತಿಳಿಸುತ್ತವೆ.

ಅರೆ ಸೈನಿಕ ಪಡೆಗಳಲ್ಲಿ 1.11 ಲಕ್ಷ ಹುದ್ದೆ ಖಾಲಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಹಲ್ಗಾಮ್ ಉಗ್ರರ ದಾಳಿಯ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳಲ್ಲಿನ ಖಾಲಿ ಹುದ್ದೆಗಳ ಬಗ್ಗೆ ವಿರೋಧ ಪಕ್ಷಗಳು ಧ್ವನಿ ಎತ್ತುತ್ತಿರುವ ಹೊತ್ತಿನಲ್ಲಿ, ಸರ್ಕಾರಿ ಅಂದಾಜಿನ ಪ್ರಕಾರ ಅಸ್ಸಾಂ ರೈಫಲ್ಸ್ ಹಾಗೂ ಐದು ಅರೆ ಸೈನಿಕ ಪಡೆಗಳಲ್ಲಿ ಒಟ್ಟು 1.11 ಲಕ್ಷ ಹುದ್ದೆಗಳು ಖಾಲಿ ಇವೆ.

ಅಸ್ಸಾಂ ರೈಫಲ್ಸ್, ಬಿಎಸ್‌ಎಫ್, ಸಿಐಎಸ್‌ಎಫ್, ಸಿಆರ್‌ಪಿಎಫ್, ಐಟಿಬಿಪಿ ಮತ್ತು ಎಸ್‌ಎಸ್‌ಬಿಗೆ ಮಂಜೂರಾದ ಸಿಬ್ಬಂದಿ 10.59 ಲಕ್ಷ, ಈಗ 9.47 ಲಕ್ಷ ಸಿಬ್ಬಂದಿ ಇದ್ದಾರೆ, ಅಸ್ಸಾಂ ರೈಫಲ್ಸ್, ಬಿಎಸ್‌ಎಫ್, ಐಟಿಬಿಪಿ ಮತ್ತು ಎಸ್‌ಎಸ್‌ಬಿ ಮುಖ್ಯವಾಗಿ ಗಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿವೆ.

ಈ ದತ್ತಾಂಶವನ್ನು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯವು ಗೃಹ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಇತ್ತೀಚೆಗೆ ನೀಡಿದೆ. ಇದು ಬಜೆಟ್ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಮಂಡಿಸಲಾದ ವರದಿಯ ಭಾಗವಾಗಿದೆ. 43,130 ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

ಅಧಿಕೃತ ಅಂಕಿಅಂಶಗಳ ಪ್ರಕಾರ, ಸಿಐಎಸ್‌ಎಫ್‌ನಲ್ಲಿ 43,250, ಸಿಆರ್‌ಪಿಎಫ್‌ನಲ್ಲಿ 34,860, ಬಿಎಸ್‌ಎಫ್‌ನಲ್ಲಿ 14,367, ಅಸ್ಸಾಂ ರೈಫಲ್ಸ್‌ನಲ್ಲಿ 3,769, ಐಟಿಬಿಪಿಯಲ್ಲಿ 10,249 ಮತ್ತು ಎಸ್‌ಎಸ್ ಬಿಯಲ್ಲಿ 5,189 ಖಾಲಿ ಹುದ್ದೆಗಳಿವೆ. ನಿವೃತ್ತಿ, ರಾಜೀನಾಮೆ, ಬಡ್ತಿ, ಸಿಬ್ಬಂದಿಯ ನಿಧನ, ಹೊಸ ಹುದ್ದೆಗಳ ಸೃಷ್ಟಿ ಮತ್ತಿತರ ಕಾರಣಗಳಿಂದ ಈ ಹುದ್ದೆಗಳು ಖಾಲಿ ಇವೆ. ಹುದ್ದೆಗಳ ಭರ್ತಿ ನಿರಂತರ ಪ್ರಕ್ರಿಯೆ ಎಂದು ಗೃಹ ಸಚಿವಾಲಯ ತಿಳಿಸಿದೆ.

ಎಷ್ಟು ಹುದ್ದೆಗಳು ಖಾಲಿ

ಪಡೆ	ಮಂಜೂರಾದ ಹುದ್ದೆ	ಈಗಿರುವ ಸಿಬ್ಬಂದಿ	ನೇಮಕಾತಿ ಪ್ರಕ್ರಿಯೆ
ಅಸ್ಸಾಂ ರೈಫಲ್ಸ್	65,536	61,757	2,335
ಬಿಎಸ್‌ಎಫ್	2,72,447	2,58,080	11,097
ಸಿಐಎಸ್‌ಎಫ್	1,93,970	1,50,720	13,230
ಸಿಆರ್‌ಪಿಎಫ್	3,30,980	2,96,114	8,962
ಐಟಿಬಿಪಿ	98,859	88,610	5,711
ಎಸ್‌ಎಸ್‌ಬಿ	97,879	92,690	1,790
ಒಟ್ಟು	10,59,674	9,47,981	43,130

ಪ್ರಾತಿನಿಧ್ಯ

ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಮಹಿಳೆ
1,61,410	1,06,657	42,470

ರಕ್ಷಣೆ: ಪಾಕ್‌ಗಿಂತ ಭಾರತದ ವೆಚ್ಚ 9 ಪಟ್ಟು ಅಧಿಕ

ರಕ್ಷಣಾ ವಲಯಕ್ಕೆ ಪಾಕಿಸ್ತಾನವು ವಾರ್ಷಿಕವಾಗಿ ವೆಚ್ಚ ಮಾಡುವುದಕ್ಕಿಂತಲೂ 9 ಪಟ್ಟು ಅಧಿಕ ವೆಚ್ಚವನ್ನು ಭಾರತವು ಮಾಡುತ್ತಿದೆ. ಸ್ವೀಡನ್‌ನ ಚಿಂತಕರ ಚಾವಡಿ ‘ಸ್ಟಾಕ್‌ಹೋಮ್ ಇಂಟರ್ ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಎಸ್‌ಐಪಿಆರ್‌ಐ) ತನ್ನ 2024ನೇ ಆವೃತ್ತಿಯ ವರದಿ ಬಿಡುಗಡೆ ಮಾಡಿದೆ. ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿದ ನಂತರ ಎರಡೂ ದೇಶಗಳ ಮಧ್ಯೆ ಬಿಗುವಿನ ವಾತಾವರಣ ಸೃಷ್ಟಿಯಾಗಿದೆ. ಇದೇ ಹೊತ್ತಿನಲ್ಲಿ ಈ ವರದಿ ಬಿಡುಗಡೆಯಾಗಿದೆ. ವಿಶ್ವದ ರ‍್ಯಾಂಕಿಂಗ್‌ನಲ್ಲಿ ಭಾರತವು 5ನೇ ಸ್ಥಾನದಲ್ಲಿದೆ.

ಒಂದು ಸ್ಥಾನ ಕುಸಿದ ಭಾರತ



ಭಾರತದ ವೆಚ್ಚವು 2023ರಲ್ಲಿ 83.6 ಬಿಲಿಯನ್ ಡಾಲರ್‌ನಷ್ಟಿತ್ತು (ಸುಮಾರು ₹7.11 ಲಕ್ಷ ಕೋಟಿ). 2024ರಲ್ಲಿ ಭಾರತವು ತನ್ನ ವೆಚ್ಚವನ್ನು 86.1 ಬಿಲಿಯನ್ ಡಾಲರ್‌ನಷ್ಟು (ಸುಮಾರು ₹7.33 ಲಕ್ಷ ಕೋಟಿ) ಹೆಚ್ಚಿಸಿಕೊಂಡಿದೆ. ಆದರೂ, 2023ಕ್ಕೆ ಹೋಲಿಸಿದರೆ ಭಾರತವು ಒಂದು ಸ್ಥಾನ ಕುಸಿದಿದೆ. ಇತರೆ ದೇಶಗಳು ವೆಚ್ಚ ಮಾಡುವ ಸರಾಸರಿ ವೆಚ್ಚಕ್ಕೆ ಹೋಲಿಸಿಕೊಂಡರೆ, ಭಾರತ ಮಾಡುವ ವೆಚ್ಚವು ಕಡಿಮೆಯಾಗಿದೆ.

ಆಧಾರ: ಎಸ್‌ಐಪಿಆರ್‌ಐ ವರದಿ

ಆಮದು ತಗ್ಗಿಸುವ ನೀತಿ

ವಿಶ್ವದಲ್ಲಿಯೇ ಅತಿ ಹೆಚ್ಚು ಶಸ್ತ್ರಾಸ್ತ್ರ ಖರೀದಿ ಮಾಡುವ ದೇಶ ಭಾರತ. ಆದರೆ, ಭಾರತವು ತನ್ನ ನೀತಿ ಬದಲಿಸಿಕೊಳ್ಳುವ ಹಾದಿಯಲ್ಲಿದೆ. ಇದಕ್ಕಾಗಿ ನೀತಿಯನ್ನು ರೂಪಿಸಿಕೊಂಡಿದೆ. ರಕ್ಷಣಾ ವಲಯಕ್ಕೆ ತಾನು ಮಾಡುವ ಒಟ್ಟು ವೆಚ್ಚದ ಶೇ 22ರಷ್ಟು ಪ್ರಮಾಣವನ್ನು ದೇಶೀಯ ಕಂಪನಿಗಳಿಂದಲೇ ಖರೀದಿಸಲು ಭಾರತ ನೀತಿ ರೂಪಿಸಿಕೊಂಡಿದೆ. ಇದರಿಂದಾಗಿ ಸೇನಾ ವಾಹನಗಳು, ಹೆಲಿಕಾಪ್ಟರ್‌ಗಳು, ಜಲಾಂತರ್ಗಾಮಿ ನೌಕೆಗಳನ್ನು ಭಾರತವು ತಾನೇ ತಯಾರಿಸಿಕೊಳ್ಳುತ್ತಿದೆ. ಆದರೂ, ಕೆಲವು ಅತ್ಯಾಧುನಿಕ ಸೇನಾ ವ್ಯವಸ್ಥೆಗಳನ್ನು, ಯುದ್ಧವಿಮಾನಗಳನ್ನು ಆಮದು ಮಾಡಿಕೊಳ್ಳುತ್ತಿದೆ.



ಜಾಹೀರಾತು

NANDI INFRASTRUCTURE CORRIDOR ENTERPRISE LIMITED
NANDI IS NICE
Bangalore - Mysore
INFRASTRUCTURE CORRIDOR

ಕನ್‌ಸ್ಟ್ರಕ್ಷನ್ ಇಂಡಸ್ಟ್ರಿ ಡೆವಲಪ್‌ಮೆಂಟ್ ಕೌನ್ಸಿಲ್ (CIDC)

(ಯೋಜನಾ ಆಯೋಗ, ಭಾರತ ಸರ್ಕಾರ ಮತ್ತು ನಿರ್ಮಾಣ ಉದ್ಯಮದಿಂದ ಸ್ಥಾಪಿಸಲಾಗಿದೆ)

ಬಿಎಂಐಸಿ ಯೋಜನೆಗಾಗಿ ನೈಸ್/ನೀಸ್ ಲಿಮಿಟೆಡ್‌ಗೆ ಪ್ರತಿಷ್ಠಿತ ವಿಶ್ವಕರ್ಮ ಪ್ರಶಸ್ತಿಯನ್ನು ನೀಡಲಾಗಿರುತ್ತದೆ

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಯನ್ನು ಉತ್ತಮವಾಗಿ ಕಾರ್ಯಗತಗೊಳಿಸಿದ್ದಕ್ಕಾಗಿ ನಂದಿ ಎಕನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್/ನೀಸ್) ಲಿಮಿಟೆಡ್‌ಗೆ ಕನ್‌ಸ್ಟ್ರಕ್ಷನ್ ಇಂಡಸ್ಟ್ರಿ ಡೆವಲಪ್‌ಮೆಂಟ್ ಕೌನ್ಸಿಲ್ (ಸಿಐಡಿಸಿ) ಭಾರತದ ಅತ್ಯುತ್ತಮ ನಿರ್ಮಾಣ ಯೋಜನೆ ಎಂದು ಪ್ರತಿಷ್ಠಿತ ವಿಶ್ವಕರ್ಮ ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದು ಕರ್ನಾಟಕಕ್ಕೆ ಹೆಮ್ಮೆಯ ಕ್ಷಣವಾಗಿದೆ.

ಸಿಐಡಿಸಿ ಪ್ರದಾನಿಸುವ ಈ ಪ್ರಶಸ್ತಿಯನ್ನು ಮೂಲಸೌಕರ್ಯ ಮತ್ತು ಕೈಗಾರಿಕಾ ಅಭಿವೃದ್ಧಿಯಲ್ಲಿನ ಶ್ರೇಷ್ಠತೆಯನ್ನು ಗುರುತಿಸಿ ನೀಡಲಾಗುತ್ತದೆ. ಬಿಎಂಐಸಿ ಯೋಜನೆಯು ಈ ವರ್ಷ ಮಾನ್ಯತೆ ಪಡೆದ ಕರ್ನಾಟಕದ ಏಕೈಕ ಯೋಜನೆಯಾಗಿದ್ದು, ದೂರದೃಷ್ಟಿಯ ಯೋಜನೆ ಮತ್ತು ಎಂಜಿನಿಯರಿಂಗ್ ಉತ್ಕೃಷ್ಟತೆಗೆ ಮಾದರಿಯಾಗಿ ತನ್ನ ಸ್ಥಾನವನ್ನು ಬಲಪಡಿಸಿದೆ.

ಬೆಸ್ಟ್ ಕನ್ಸ್ಟ್ರಕ್ಷನ್ ಪ್ರಾಜೆಕ್ಟ್ ಇನ್ ಇಂಡಿಯಾ ಫಾರ್ 2024

ಸಿಐಡಿಸಿ ಪ್ರಶಸ್ತಿ

Construction Industry Development Council
16th CIDC Vishwakarma Awards 2025
Upon the Recommendation of Jury
The Trophy & Scroll of Commendation are hereby presented to
Nandi Economic Corridor Enterprises Ltd.
Bangalore Mysore Infrastructure Coridor Project, Bangalore
For Category
Best Construction Projects
11th April, 2025
New Delhi
Dr. P. S. Rana
Chairman, CIDC

ಸಿಐಡಿಸಿ ಪ್ರಶಸ್ತಿ


The
Board of Governors
of
Construction Industry Development Council
CIDC Vishwakarma Awards 2025
Upon the recommendation of Jury,
This Commemorative Trophy is presented to
Nandi Economic Corridor Enterprises Ltd.
for Bangalore Mysore Infrastructure Corridor Project,
Bangalore
For category
Best Construction Project
11th April 2025, New Delhi



ಪ್ರಶಸ್ತಿ ಸ್ವೀಕರಿಸುತ್ತಿರುವುದು

ಫೆರಿಫೆರಲ್ ರಸ್ತೆ

ಬಿಎಂಐಸಿ ಯೋಜನೆಯು ಬೃಹತ್ ಹೂಡಿಕೆಯ ಒಂದು ಸಮಗ್ರ ಯೋಜನೆಯಾಗಿದೆ, ವಿವಿಧ ಸರ್ಕಾರಿ ಇಲಾಖೆಗಳೊಂದಿಗೆ ಸಮನ್ವಯ ಮತ್ತು ಅನುಮೋದನೆಗಳ ಅಗತ್ಯವಿದೆ. ವಿಶ್ವದರ್ಜೆಯ ಕಾಂಕ್ರೀಟ್ ಲಿಂಕ್ ರಸ್ತೆ ಮತ್ತು ಪೆರಿಫೆರಲ್ ರಸ್ತೆ ನಿರ್ಮಾಣ ಸೇರಿದಂತೆ ಪ್ರಮುಖ ಅಂಶಗಳನ್ನು ನೈಸ್ ಕಂಪನಿಯು ಯಶಸ್ವಿಯಾಗಿ ಕಾರ್ಯಗತಗೊಳಿಸಿ ರಾಷ್ಟ್ರೀಯ ಪ್ರಶಸ್ತಿಗಳು ಮತ್ತು ಮೆಚ್ಚುಗೆಯನ್ನು ಗಳಿಸಿದೆ. ಕಳೆದ ಎರಡು ದಶಕಗಳಿಂದ ಪ್ರತಿದಿನ ಸಂಚರಿಸುವ ಲಕ್ಷಾಂತರ ಪ್ರಯಾಣಿಕರಿಗೆ ಈ ರಸ್ತೆ ಅನುಕೂಲವಾಗಿದೆ. ಆದರೂ, ರಾಜ್ಯ ಸರ್ಕಾರದ ಕೆಲವು ಅಧಿಕಾರಿಗಳು ಯೋಜನೆಯ ಸಾಧನೆಗಳನ್ನು ನಿರ್ಲಕ್ಷಿಸಿ, ರಸ್ತೆಯ ಗುಣಮಟ್ಟದ ಬಗ್ಗೆ ತಮಗೇ ತಿಳಿದಿರುವ ಕಾರಣಗಳಿಂದಾಗಿ ಕಳವಳ ವ್ಯಕ್ತಪಡಿಸುತ್ತಿದ್ದಾರೆ.

"ಈ ಪ್ರಶಸ್ತಿಯು ಪ್ರತಿಯೊಬ್ಬ ಕನ್ನಡಿಗನಿಗೆ ಸಂದ ಗೌರವವಾಗಿದೆ ಮತ್ತು ಕರ್ನಾಟಕದ ಮೂಲಸೌಕರ್ಯ ಪ್ರಯಾಣದಲ್ಲಿ ಒಂದು ಮೈಲಿಗಲ್ಲಾಗಿದೆ. ಬಿಎಂಐಸಿಯಂತಹ ಮೆಗಾ ಯೋಜನೆಗಳನ್ನು ಕಾರ್ಯಗತಗೊಳಿಸಲು ನೂರಾರು ಜವಾಬ್ದಾರಿಯುತ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳು ಹೆಚ್ಚಿನ ಪರಿಶ್ರಮದಿಂದ ಕೆಲಸ ಮಾಡಿರುತ್ತಾರೆ. ಆದರೆ ಯೋಜನೆಯನ್ನು ಹಾಳುಮಾಡಲು ದುರಾಲೋಚನೆ ಹೊಂದಿರುವ ಕೇವಲ ಒಬ್ಬ ಪ್ರಮುಖ ಅಧಿಕಾರಿ ಸಾಕು, ಇದು ಪಟ್ಟಭದ್ರ ಕುಟುಂಬ ಹಿತಾಸಕ್ತಿಗಳು ಒಡ್ಡುವ ಸವಾಲುಗಳನ್ನು ಎತ್ತಿ ತೋರಿಸುತ್ತದೆ. ನೈಸ್ ಪೆರಿಫೆರಲ್ ರಸ್ತೆಗೆ ಸಂಪರ್ಕ ಕಲ್ಪಿಸುವ ಬಿಎಚ್‌ಇಎಲ್ ಜಂಕ್ಷನ್ ವೆಸ್ಟ್ ಆಫ್ ಕಾರ್ಡ್ ರಸ್ತೆ / ಮೈಸೂರು ರಸ್ತೆಯಿಂದ ಪಿಇಎಸ್ ಕಾಲೇಜು ಬಳಿಯ ಹೊರ ವರ್ತುಲ ರಸ್ತೆ, ಬಿಡದಿ ಎನ್ ಎಚ್ –275 ಜಂಕ್ಷನ್ ನಿಂದ ನೈಸ್ ಪೆರಿಫೆರಲ್ ರಸ್ತೆ ಇತ್ಯಾದಿಗಳಲ್ಲಿ ನೈಸ್ ಪೆರಿಫೆರಲ್ ರಸ್ತೆಗೆ ಸಂಪರ್ಕಿಸುವ ಸಣ್ಣ ಭಾಗಗಳನ್ನು (ಈಗಾಗಲೇ ಅಧಿಸೂಚನೆಯಾಗಿದೆ) ಸರ್ಕಾರ ತ್ವರಿತವಾಗಿ ಸ್ವಾಧೀನಪಡಿಸಿಕೊಂಡು ವರ್ಗಾಯಿಸಿದರೆ, ಅದು ಪೆರಿಫೆರಲ್ ಪ್ರದೇಶಗಳು / ಜಂಕ್ಷನ್‌ಗಳಲ್ಲಿನ ಬೆಂಗಳೂರು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಮತ್ತು ಪ್ರಯಾಣಿಕರಿಗೆ ಹೆಚ್ಚಿನ ಪ್ರಯಾಣದ ಸಮಯವನ್ನು ಉಳಿಸುತ್ತದೆ. ಒಟ್ಟಾರೆಯಾಗಿ, ಯೋಜನಾ ಕಂಪನಿಯು ಉದ್ದೇಶಿಸಿದಂತೆ ಬಿಎಂಐಸಿ ಯೋಜನೆಯನ್ನು ಕಾರ್ಯಗತಗೊಳಿಸಲು ಅವಕಾಶ ನೀಡಿದ್ದರೆ, ಇಡೀ ಬೆಂಗಳೂರು–ಮೈಸೂರು ಪ್ರದೇಶವು ದೇಶದ ಮೊದಲ ರಚನಾತ್ಮಕ ಮೆಗಾಲೊಪೊಲಿಸ್ ಅನ್ನು ನೋಡುತ್ತಿತ್ತು ಮತ್ತು ಲಕ್ಷಾಂತರ ಜನರಿಗೆ ಪ್ರಯೋಜನವಾಗುತ್ತಿತ್ತು ಹಾಗೂ ಕರ್ನಾಟಕವನ್ನು ಪರಿವರ್ತಿಸಲು ಹೊಸ ಬೆಳವಣಿಗೆಯ ಕ್ರಮವನ್ನು ತರಬಹುದಿತ್ತು. ಆದರೆ, ಕೆಲವು "ಪಟ್ಟಭದ್ರ ಕುಟುಂಬ ಹಿತಾಸಕ್ತಿಗಳ" ಕಾರಣದಿಂದಾಗಿ ಈ ಯೋಜನೆಯು ಅಧಿಕಾರಶಾಹಿ ಅಡೆತಡೆಗಳು ಮತ್ತು ವಿಳಂಬಗಳಿಂದ ಹಾಳಾಗಿದೆ ಮತ್ತು ರಾಷ್ಟ್ರೀಯ ಹಿತಾಸಕ್ತಿ, ರಾಜ್ಯ ಹಿತಾಸಕ್ತಿ ಮತ್ತು ಸಾರ್ವಜನಿಕ ಹಿತಾಸಕ್ತಿಗಳಿಗಿಂತಲೂ, ಪಟ್ಟಭದ್ರ ಹಿತಾಶಕ್ತಿಗಳು ಹೆಚ್ಚು ಆದ್ಯತೆ ಪಡೆಯುತ್ತಿದೆ ಎಂದು ತೋರುತ್ತಿದೆ."

ಅಶೋಕ್ ಖೇಣಿ, ವ್ಯವಸ್ಥಾಪಕ ನಿರ್ದೇಶಕರು, ನೈಸ್ ಕಂಪನಿ

ನೈಸ್ ನಿರ್ಮಿಸಿದ ಬಿಎಂಐಸಿ ಯೋಜನೆಯು ದಕ್ಷಿಣ ಪೆರಿಫೆರಲ್ ರಸ್ತೆ ಹಾಗೂ ಬಿಡಿಎ ನಿರ್ಮಿಸಲಿರುವ ಉತ್ತರ ಪೆರಿಫೆರಲ್ ರಸ್ತೆ (ಹೊಸೂರು ರಸ್ತೆಯನ್ನು ಬಳ್ಳಾರಿ ರಸ್ತೆಯ ಮೂಲಕ ತುಮಕೂರು ರಸ್ತೆಗೆ ಸಂಪರ್ಕಿಸುತ್ತದೆ) ಏಕಕಾಲದಲ್ಲಿ ನಿರ್ಮಾಣವನ್ನು ಪ್ರಾರಂಭಿಸಿತು. ಆದರೆ, ನೈಸ್ ರಸ್ತೆ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರೂ, ಉತ್ತರ ಪೆರಿಫೆರಲ್ ರಸ್ತೆಯು ಸರ್ಕಾರದ ಸಂಪೂರ್ಣ ಬೆಂಬಲದ ಹೊರತಾಗಿಯೂ ಒಂದು ಇಂಚು ಸಹ ನಿರ್ಮಿಸಲಾಗಿಲ್ಲ.

'ಇಂಥದೊಂದು ಸ್ಪಷ್ಟ ವ್ಯತಿರಿಕ್ತತೆಯು ಅಸಮರ್ಥತೆಯನ್ನು ಪ್ರತಿಫಲಿಸುವುದು ಅಷ್ಟೇ ಅಲ್ಲದೆ, ಕೆಲವು ಆಯ್ದ ಅಡೆತಡೆಗಳ ಆಳವಾದ ಸಮಸ್ಯೆಯನ್ನು ಕೂಡ ಪ್ರತಿಬಿಂಬಿಸುತ್ತದೆ' ಎಂದು ಅಶೋಕ್ ಖೇಣಿ ಹೇಳುತ್ತಾರೆ.

ಕರ್ನಾಟಕವನ್ನು, ವಿಶೇಷವಾಗಿ ಬೆಂಗಳೂರು–ಮೈಸೂರು ಪ್ರದೇಶವನ್ನು ಪರಿವರ್ತಿಸುವ ಸಾಮರ್ಥ್ಯ ಈ ಯೋಜನೆಗಿದ್ದರೂ, ಕೆಲವು ಪಟ್ಟಭದ್ರ ಕುಟುಂಬದ ಹಿತಾಸಕ್ತಿಗಳು ಅದರ ಪ್ರಗತಿಗೆ ಅಡ್ಡಿಯಾಗಿವೆ. ಇದಲ್ಲದೆ, ಯೋಜನಾ ಕಂಪನಿಯು ಯೋಜನೆಯಿಂದ ಭೂಮಿಯನ್ನು ಕಳೆದುಕೊಂಡಿರುವವರ ಹಿತಾಶಕ್ತಿಗೆ ಬದ್ಧವಾಗಿದೆ ಹಾಗೂ ಈ ಯೋಜನೆಗೆ ಭೂಮಿಯನ್ನು ವರ್ಗಾಯಿಸಿ ಅನುಮೋದನೆ ನೀಡಿದ ತಕ್ಷಣ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಪ್ಯಾಕೇಜ್‌ನ ಭಾಗವಾಗಿ ಎಲ್ಲಾ ಉಪಯುಕ್ತತೆಗಳು ಹಾಗೂ ಉತ್ತಮ ಸೇವೆಗಳೊಂದಿಗೆ ಅತ್ಯಾಧುನಿಕ ವಸತಿ ವಿನ್ಯಾಸಗಳನ್ನು ನಿರ್ಮಿಸಲಾಗುತ್ತದೆ. ಆದಾಗ್ಯೂ ಅಧಿಕಾರದಲ್ಲಿರುವ ಕೆಲವು ಪಟ್ಟಭದ್ರ ಕುಟುಂಬದ ಹಿತಾಶಕ್ತಿಗಳು ಯೋಜನಾ ಕಂಪನಿಯ ವಿರುದ್ಧ ಸಾರ್ವಜನಿಕರ (ಭೂಮಿ ಕಳೆದುಕೊಳ್ಳುವವರ) ಕೋಪವನ್ನು ಹುಟ್ಟುಹಾಕಲು ಜಮೀನು ಕಳೆದುಕೊಳ್ಳುವವರಿಗೆ ಅಭಿವೃದ್ಧಿಪಡಿಸಿದ ನಿವೇಶನಗಳ ವಿತರಣೆಯನ್ನು ದಶಕಗಳವರೆಗೆ ತಡೆಹಿಡಿದರು.

ಈಗಾಗಲೇ ನಿರ್ಮಿಸಲಾದ ಪೆರಿಫೆರಲ್ ರಸ್ತೆಯಲ್ಲಿನ ಇಂಟರ್‌ಚೇಂಜ್ ಪ್ರದೇಶಗಳಲ್ಲಿ ಪ್ರಸ್ತಾಪಿಸಲಾದ ಅಭಿವೃದ್ಧಿಗಳು ನಗರದ ಜಿಡಿಪಿಯನ್ನು ಸುಧಾರಿಸಬಹುದಾದ ಮಿಶ್ರ ಭೂ ಬಳಕೆಯ ಅಭಿವೃದ್ಧಿಗಳನ್ನು ಒಳಗೊಂಡಿವೆ. ಅವುಗಳೆಂದರೆ, ವಸತಿ, ಕಚೇರಿ, ವಾಣಿಜ್ಯ, ವೈದ್ಯಕೀಯ, ಲಾಜಿಸ್ಟಿಕ್ಸ್, ಕ್ರೀಡೆ ಮತ್ತು ಮನರಂಜನಾ ಚಟುವಟಿಕೆಗಳು.

ಸ್ಪೋರ್ಟ್ಸ್ ಅಕಾಡೆಮಿ / ನಗರದಲ್ಲಿ ಎತ್ತರದ ಹನುಮಾನ್ ಪ್ರತಿಮೆಯೊಂದಿಗೆ ವಿಶ್ವದರ್ಜೆಯ ವಿವಿಧೋದ್ದೇಶ ಕ್ರೀಡಾಂಗಣವನ್ನು ಯುವಕರನ್ನು ಪ್ರೇರೇಪಿಸಲು ವಿನ್ಯಾಸಗೊಳಿಸಲಾಗಿದೆ. ಇದು ಮಾಗಡಿ ರಸ್ತೆಯ ಇಂಟರ್‌ಚೇಂಜ್ ಪ್ರದೇಶ (6/7) ಹಗಲು ಮತ್ತು ರಾತ್ರಿ ಪಂದ್ಯಗಳಿಗೆ ಹೊಂದಿಕೊಳ್ಳುವ ಛಾವಣಿ ಮತ್ತು ಪಿಚ್ ಹೊಂದಿರುವ ಕ್ರಿಕೆಟ್ ಕ್ರೀಡಾಂಗಣವನ್ನು ಒಳಗೊಂಡಿದೆ, ಸುಮಾರು 60,000 ಪ್ರೇಕ್ಷಕರ ಆಸನ ಸಾಮರ್ಥ್ಯವನ್ನು ಹೊಂದಿದೆ ಮತ್ತು ಇದು ಅದರ ಅಪ್ರತಿಮ ವಾಸ್ತುಶಿಲ್ಪ ಮತ್ತು ಎಂಜಿನಿಯರಿಂಗ್‌ನ ಅದ್ಭುತ ರಚನೆಯಲ್ಲಿ ಕನಿಷ್ಠ 2 ಲಕ್ಷ ಪ್ರೇಕ್ಷಕರಿಗೆ ಆತಿಥ್ಯ ವಹಿಸಲು ಸುಂದರವಾದ ಈವೆಂಟ್ ಸ್ಥಳವನ್ನು ಒದಗಿಸುತ್ತದೆ.

ತುಮಕೂರು ರಸ್ತೆ ಇಂಟರ್‌ಚೇಂಜ್ ಪ್ರದೇಶದಲ್ಲಿ (7/7) ಈಗಾಗಲೇ ನಿರ್ಮಿಸಲಾಗಿರುವ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ) ಇಡೀ ದಕ್ಷಿಣ ಭಾರತದ ಅತಿದೊಡ್ಡ ಸಮ್ಮೇಳನ ಮತ್ತು ಪ್ರದರ್ಶನ ಕೇಂದ್ರವಾಗಿದೆ ಮತ್ತು ಮಲ್ಟಿ-ಮಾಡಲ್ ಲಾಜಿಸ್ಟಿಕ್ ಪಾರ್ಕ್ ಮತ್ತು ಸ್ಯಾಟಲೈಟ್ ಟೌನ್ ರಿಂಗ್ ರಸ್ತೆಯ (ಎಸ್‌ಟಿಆರ್‌ಆರ್) ಅನೇಕ ಗೋದಾಮುಗಳು ಮತ್ತು ಕೈಗಾರಿಕಾ ಪ್ರದೇಶಗಳಿಗೆ ಉತ್ತಮ ಸಂಪರ್ಕ ಹೊಂದಿದೆ.

ನಂದಿಯ ಆಕಾರದಲ್ಲಿ (ಸಮಾಜ ಸುಧಾರಕ ಬಸವಣ್ಣನವರ ಮೌಲ್ಯಗಳನ್ನು ಪ್ರತಿನಿಧಿಸುವ) 50 ಮೀಟರ್ ಎತ್ತರದ ಐಕಾನಿಕ್ ಪ್ರಾಜೆಕ್ಟ್ ಆಫೀಸ್ ಕಟ್ಟಡವು ಅದರ ಆಯಕಟ್ಟಿನ ಸ್ಥಳದಿಂದಾಗಿ ಇಡೀ ಬೆಂಗಳೂರಿನ 360 ಡಿಗ್ರಿ ನೋಟವನ್ನು ಒದಗಿಸುತ್ತದೆ. ಈ ಅಪ್ರತಿಮ ಕಟ್ಟಡವು ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ದೀಪಾವಳಿ, ಕ್ರಿಸ್ಮಸ್ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲು ಮತ್ತು ಚಿತ್ರೀಕರಿಸಲು ಅನುಕೂಲಕರ ಸ್ಥಾನಗಳಲ್ಲಿ ಎಲ್‌ಇಡಿ ಲೈಟಿಂಗ್ಸ್‌ಗಳನ್ನು ಹೊಂದಿರುತ್ತದೆ.

ಬೆಂಗಳೂರಿನ ಜನದಟ್ಟಣೆಯನ್ನು ಕಡಿಮೆ ಮಾಡಲು ಬಸ್ ಟರ್ಮಿನಸ್ / ಟ್ರಕ್ ಟರ್ಮಿನಸ್ ನಂತಹ ಅತ್ಯಾಧುನಿಕ ಸಾರಿಗೆ ಮೂಲಸೌಕರ್ಯವನ್ನು ಲಿಂಕ್ ರಸ್ತೆ ಇಂಟರ್‌ಚೇಂಜ್ ಪ್ರದೇಶದಲ್ಲಿ ಹಬ್ ಮತ್ತು ಸ್ಪೋಕ್ ಮಾದರಿಯಾಗಿ ಯೋಜಿಸಲಾಗಿದೆ.



ನಮ್ಮ ಮೆಟ್ರೋ ವಿವಿಧ ಹಂತಗಳನ್ನು ಸಂಪರ್ಕಿಸಲು ಯೋಜನಾ ಕಂಪನಿಯು ತನ್ನ ಪೆರಿಫೆರಲ್ ರಸ್ತೆಯ ಮಧ್ಯದಲ್ಲಿ ಮೆಟ್ರೋವನ್ನು ನಿರ್ಮಿಸಲು ಉದ್ದೇಶಿಸಿದೆ.

ಯೋಜನಾ ಕಂಪನಿಯು ಮೇಲಿನ ಪ್ರಸ್ತಾಪಗಳನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿದೆ ಮತ್ತು ಈ ಪ್ರಸ್ತಾಪಗಳನ್ನು ಅನುಮೋದಿಸಿ ಕಾರ್ಯಗತಗೊಳಿಸಿದರೆ, ಬೆಂಗಳೂರಿನ ಒಟ್ಟಾರೆ ವಾಸಯೋಗ್ಯ ಸೂಚ್ಯಂಕವನ್ನು ಹೆಚ್ಚಿಸಬಹುದು.

ನೈಸ್ ಯೋಜನೆಯ ಅಡಿಯಲ್ಲಿ ಕೈಗೊಳ್ಳಲಾದ ಇತರೆ ಕಾಮಗಾರಿಗಳು

ಶಿಥಿಲ ದೇವಾಲಯ

ನೂತನ ದೇವಾಲಯ

ಹಳೆಯ ಮನೆಗಳು

ಹಳೆಯ ಮನೆಗಳು

ನೂತನ ಮನೆಗಳು

ಇನ್ಸ್ಟಿಟ್ಯೂಟ್ ಆಫ್ ಸೋಷಿಯಲ್ ಎಕನಾಮಿಕ್ ಚೇಂಜ್ (ಐಎಸ್‌ಇಸಿ) ಸ್ಥಾಪಕ ಸದಸ್ಯ **ಪ್ರೊಫೆಸರ್ ಡಾ.ಅಬ್ದುಲ್ ಅಜೀಜ್,** "ಇದು (ಬಿಎಂಐಸಿ ಯೋಜನೆ) ಖಂಡಿತವಾಗಿಯೂ ಆ ಪ್ರದೇಶದ ವಿವಿಧ ಕ್ಷೇತ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ ಮತ್ತು ರಾಜ್ಯಕ್ಕೆ ಅನೇಕ ಪ್ರಯೋಜನಗಳನ್ನು ನೀಡುತ್ತದೆ" ಎಂದು ಹೇಳಿದ್ದಾರೆ.

ವಿಳಾಸ: ನಂದಿ ಎಕನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್, 1, ಮಿಡ್‌ಫೋರ್ಡ್ ಹೌಸ್, ಮಿಡ್‌ಫೋರ್ಡ್ ಗಾರ್ಡನ್ಸ್, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, ಕರ್ನಾಟಕ 560001

ಸುಭಾಷಿತ

ವಿವೇಕಿಯಾದವನು ಬೇರೆಯವರಲ್ಲಿ ಇರುವ ತಪ್ಪನ್ನು ಕಂಡು ತನ್ನ ತಪ್ಪನ್ನು ತಿದ್ದಿಕೊಳ್ಳುತ್ತಾನೆ.

–ಸ್ವಾಮಿ ವಿವೇಕಾನಂದ

ಗ್ರೇಟರ್ ಬೆಂಗಳೂರು ಕಾಯ್ದೆಗೆ ಅಸ್ತು ಚುನಾವಣೆಗೆ ಪುನಃ ಬಾರದಿರಲಿ ವಿಘ್ನ

ಬೆಂಗಳೂರು ಮಹಾನಗರದ ವ್ಯಾಪ್ತಿಯನ್ನು ಮತ್ತಷ್ಟು ಹಿಗ್ಗಿಸಿ, ಪ್ರತ್ಯೇಕ ಆಡಳಿತಾಂಗವೊಂದನ್ನು ರಚಿಸುವ ಉದ್ದೇಶ ಹೊಂದಿರುವ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024' ಜಾರಿಯಾಗಿದೆ. ಇದರ ಅನ್ವಯ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ಅಸ್ತಿತ್ವಕ್ಕೆ ಬಂದ ಬಳಿಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಕೆಲವು ನಗರಸಭೆ, ಪುರಸಭೆ ಹಾಗೂ ಗ್ರಾಮ ಪಂಚಾಯಿತಿಗಳು ಇದರೊಳಗೆ ಲೀನವಾಗಲಿವೆ. 2007ರಲ್ಲಿ ಏಳು ನಗರಸಭೆ, ಒಂದು ಪುರಸಭೆ ಹಾಗೂ 110 ಹಳ್ಳಿಗಳನ್ನು ಸೇರಿಸಿಕೊಂಡು ಬಿಬಿಎಂಪಿಯನ್ನು ಘೋಷಿಸಿ, ಮಹಾನಗರದ ಸರಹದ್ದನ್ನು ವಿಸ್ತರಿಸಲಾಗಿತ್ತು. ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ. ಮಹಾನಗರದ ವ್ಯಾಪ್ತಿಯನ್ನು ಹಿಗ್ಗಿಸುವುದರ ಜತೆಗೆ, ಆಡಳಿತ ಅನುಕೂಲಕ್ಕಾಗಿ ನಗರಪಾಲಿಕೆಗಳನ್ನು ಗರಿಷ್ಠ ಏಳರವರೆಗೆ ರಚಿಸುವ ಉದ್ದೇಶವನ್ನು ಹೊಂದಿದೆ. ಬಿಬಿಎಂಪಿ ಗಡಿಗೆ ತಾಕಿಕೊಂಡಿರುವ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆಯ ಕೆಲವು ಪ್ರದೇಶಗಳು 'ಗ್ರೇಟರ್ ಬೆಂಗಳೂರು' ವ್ಯಾಪ್ತಿಗೆ ಸೇರ್ಪಡೆಯಾಗಲಿವೆ. ಹೊಸ ವ್ಯವಸ್ಥೆಯು 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ), ನಗರಪಾಲಿಕೆ ಹಾಗೂ ವಾರ್ಡ್‌ಗಳೆಂಬ ಮೂರು ಹಂತದ ಆಡಳಿತ ಒಳಗೊಂಡಿದೆ. ಆಡಳಿತವನ್ನು ವಿವಿಧ ಪಾಲಿಕೆಗಳಿಗೆ ಹಂಚಿ, ವಿಕೇಂದ್ರೀಕರಣ ಮಾಡುವುದು ಕಾಯ್ದೆಯ ಉದ್ದೇಶ ಎಂದು ಸರ್ಕಾರ ಹೇಳಿಕೊಂಡಿದೆ. ಕಾಯ್ದೆಯನ್ನು ಅವಲೋಕಿಸಿದರೆ, ಎಲ್ಲ ಅಧಿಕಾರವೂ ಪ್ರಾಧಿಕಾರದ ವಶದಲ್ಲೇ ಸಿಲುಕಲಿದೆ ಎಂಬುದು ಗೊತ್ತಾಗುತ್ತದೆ. ಮುಖ್ಯಮಂತ್ರಿ ನೇತೃತ್ವದಲ್ಲಿ ರಚನೆಯಾಗಲಿರುವ ಪ್ರಾಧಿಕಾರಕ್ಕೆ ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಲಿದ್ದಾರೆ. ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯ ಸಂಸದರು, ಶಾಸಕರು, ಪಾಲಿಕೆಗಳ ಮೇಯರ್‌ಗಳು ಸದಸ್ಯರಾಗಿರುತ್ತಾರೆ. ಗ್ರೇಟರ್ ಬೆಂಗಳೂರಿನ ಯೋಜನೆ, ಅನುದಾನ, ವೆಚ್ಚ, ಸಿಬ್ಬಂದಿ ನೇಮಕಾತಿ ಎಲ್ಲವೂ ಪ್ರಾಧಿಕಾರದ ಹಿಡಿತದಲ್ಲೇ ಇರಲಿವೆ. ಈಗ ಪ್ರತ್ಯೇಕವಾಗಿರುವ ಜಲಮಂಡಳಿ, ಬೆಸ್ಕಾಂ, ಬಿಎಂಟಿಸಿ, ಬಿಡಿಎ, ಮೆಟ್ರೊ, ಬಿಎಂಆರ್‌ಡಿಎ ಸೇರಿದಂತೆ ನಗರಕ್ಕೆ ಸಂಬಂಧಿಸಿದ ಎಲ್ಲ ಸಂಸ್ಥೆಗಳು ಪ್ರಾಧಿಕಾರದ ಅಡಿಯಲ್ಲೇ ಕಾರ್ಯನಿರ್ವಹಿಸುವ ವ್ಯವಸ್ಥೆ ಜಾರಿಗೆ ಬರಲಿದೆ.

ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ನಮೂದಿಸಿರುವ ಗಡುವಿನೊಳಗೆ ಚುನಾವಣೆ ನಡೆಸಲು ಸರ್ಕಾರ ಕ್ರಮ ಕೈಗೊಳ್ಳಬೇಕು

ಬಿಬಿಎಂಪಿ ವ್ಯಾಪ್ತಿಗೆ ಸೇರಿ 17 ವರ್ಷಗಳಾದರೂ 110 ಹಳ್ಳಿ ಹಾಗೂ ಏಳು ನಗರಸಭೆ ವ್ಯಾಪ್ತಿಯಲ್ಲಿದ್ದ ಪ್ರದೇಶಗಳು ಹೆಚ್ಚಿನ ಅಭಿವೃದ್ಧಿಯನ್ನೇನೂ ಕಂಡಿಲ್ಲ. ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಸೇರಲಿರುವ ಹೊಸ ಪ್ರದೇಶಗಳ ಪರಿಸ್ಥಿತಿಯೂ ಇದೇ ರೀತಿ ಆಗುವುದಿಲ್ಲ ಎಂಬುದಕ್ಕೆ ಯಾವುದೇ ಖಾತರಿ ಇಲ್ಲ. ಇದಲ್ಲದೆ ಮುಖ್ಯವಾಗಿ ಗಮನಿಸಬೇಕಿರುವುದು, ಪಾಲಿಕೆಯ ಚುನಾವಣೆ. 2020ರ ಸೆಪ್ಟೆಂಬರ್‌ನಲ್ಲಿ ಬಿಬಿಎಂಪಿಯ ಚುನಾಯಿತ ಸದಸ್ಯರ ಅವಧಿ ಮುಗಿದಿದೆ. ಚುನಾಯಿತ ಪ್ರತಿನಿಧಿಗಳು ಇಲ್ಲದೇ ಸರಿಸುಮಾರು ಐದು ವರ್ಷ ಸಮೀಪಿಸುತ್ತಿದೆ. ಹಣ ಮತ್ತು ಅಧಿಕಾರ ತಮ್ಮ ಕುರ್ಚಿಯ ಸುತ್ತಲೇ ಗಿರಕಿ ಹೊಡೆಯಬೇಕೆಂಬ ಸಚಿವರು, ಶಾಸಕರ ದುರಾಸೆಯೇ ಚುನಾವಣೆ ಮುಂದೂಡಲು ಪ್ರಮುಖ ಕಾರಣ. ಈ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನ ಶಾಸಕರಲ್ಲಿ ಭಿನ್ನಭೇದಗಳೇನೂ ಇಲ್ಲ. ಚುನಾವಣೆ ಹೊತ್ತು ಬಂದಾಗ ಪಾಲಿಕೆ ವಿಭಜನೆ, ವಾರ್ಡ್ ಮರುವಿಂಗಡಣೆ, ವಾರ್ಡ್ ಸಂಖ್ಯೆ ಹೆಚ್ಚಳ ಅಥವಾ ವಾರ್ಡ್‌ವಾರು ಮೀಸಲಾತಿ ವಿಷಯ ಮುಂದಿಟ್ಟುಕೊಂಡು ಚುನಾವಣೆಯನ್ನು ಮುಂದೆ ತಳ್ಳುವುದು ಪರಿಪಾಠವಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸಿದ ಎಲ್ಲ ಪಕ್ಷಗಳೂ ಚುನಾವಣೆ ನಡೆಯಗೊಡದಂತೆ ನಾನಾ ಕಸರತ್ತು ನಡೆಸಿವೆ. ಸರ್ಕಾರದ ಅಪೇಕ್ಷೆಯಂತೆ 'ಗ್ರೇಟರ್ ಬೆಂಗಳೂರು' ಕಾಯ್ದೆಗೆ ರಾಜ್ಯಪಾಲರು ಸಮ್ಮತಿ ನೀಡಿದ್ದಾರೆ. ಈ ಕುರಿತ ಅಧಿಸೂಚನೆಯೂ ಹೊರಬಿದ್ದಿದೆ. ಈಗಲಾದರೂ ಸ್ವಾರ್ಥ, ಸೂಲುಬೂಗಳನ್ನು ಬದಿಗಿಟ್ಟು ಚುನಾವಣೆ ನಡೆಸುವುದರತ್ತ ಸರ್ಕಾರ ಗಮನಹರಿಸಬೇಕಿದೆ. 'ಹೊಸ ಪಾಲಿಕೆಗಳ ವಾರ್ಡ್‌ಗಳ ಮರುವಿಂಗಡಣೆ ಕಾರ್ಯವನ್ನು ಜುಲೈ 15ರೊಳಗೆ ಪೂರ್ಣಗೊಳಿಸಲಾಗುತ್ತದೆ. ಆಗಸ್ಟ್ 15ರೊಳಗೆ ವಾರ್ಡ್‌ಗಳ ಮೀಸಲಾತಿ ನಿಗದಿಪಡಿಸಿ, ಅಂತಿಮ ಅಧಿಸೂಚನೆಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗುವುದು' ಎಂದು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಹೇಳಿದೆ. ಪಾಲಿಕೆಯ ಸದಸ್ಯರಿಲ್ಲದ ಕಾರಣ ಸ್ಥಳೀಯರ ಅಹವಾಲುಗಳನ್ನು ಆಲಿಸುವವರೇ ಇಲ್ಲದಂತಾಗಿದೆ. ಶಾಸಕರು–ಅಧಿಕಾರಿಗಳ ಬಳಿ ಕೇಂದ್ರೀಕೃತವಾಗಿರುವ ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವ ಇರಾದೆ ಸರ್ಕಾರಕ್ಕೆ ಇದ್ದರೆ, ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ನಮೂದಿಸಿರುವ ಗಡುವಿನೊಳಗೆ ವಾರ್ಡ್‌ಗಳ ಮರುವಿಂಗಡಣೆ, ಮೀಸಲಾತಿ ಪ್ರಕ್ರಿಯೆ ಪೂರ್ಯೆಸಬೇಕು, ಅದಾದ ತಕ್ಷಣ ಚುನಾವಣೆ ನಡೆಸಬೇಕು.

ದಿನದ ಟ್ವೀಟ್

ನಿಯಮ ಪಾಲನೆ ಎಲ್ಲರ ಹೊಣೆ

ಅತ್ಯಂತ ಸ್ವಾಗತಾರ್ಹವಾದ ಕ್ರಮ. ಕಟ್ಟುನಿಟ್ಟಿನ ನಡೆ ಇರಲಿ. ಎಲ್ಲರ ಹಿತದೃಷ್ಟಿಯಿಂದ ಇಂತಹ ಕ್ರಮಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು.

(ಬೆಂಗಳೂರಿನ 'ನಮ್ಮ ಮೆಟ್ರೊ' ರೈಲಿನಲ್ಲಿ ಆಹಾರ ಸೇವಿಸುತ್ತಿದ್ದ ಯುವತಿಯೊಬ್ಬರಿಗೆ ಸಿಬ್ಬಂದಿ ದಂಡ ವಿಧಿಸಿರುವುದಕ್ಕೆ ಪ್ರತಿಕ್ರಿಯೆ)

ವೆಂಕಟೇಶ್ ಪೈ ಜೆ.

ಕಿಡಿನುಡಿ



ಮೊದಲಿಗೆ, ಲೂಟಿ ಮಾಡಲು ಮತ್ತು ದೇಶದಿಂದ ಪರಾರಿಯಾಗಲು ಅವರಿಗೆ ಅವಕಾಶ ನೀಡಲಾಯಿತು. ಈಗ, ಜಾರಿ ನಿರ್ದೇಶನಾಲಯದ ಬಳಿ ಇದ್ದ, ಅವರಿಗೆ ಸಂಬಂಧಿಸಿದ ಕಡತಗಳು ಸಹ ನಾಶವಾದವೇ?

(ಮುಂಬೈನಲ್ಲಿ ಜಾರಿ ನಿರ್ದೇಶನಾಲಯದ ಕಚೇರಿಯಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಇದರಿಂದಾಗಿ ಮೆಹುಲ್ ಚೋಕ್ಸಿ, ನೀರವ್ ಮೋದಿ ಅಂತಹವರಿಗೆ ಸಂಬಂಧಿಸಿದ ಪ್ರಕರಣಗಳ ಕಡತಗಳಿಗೆ ಹಾನಿಯಾಗಿರುವ ಸಾಧ್ಯತೆ ಇದೆ ಎಂಬ ವರದಿಗೆ ಪ್ರತಿಕ್ರಿಯೆ)

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

25 ವರ್ಷಗಳ ಹಿಂದೆ

ಶನಿವಾರ, 29-4-2000

● ಆಲಮಟ್ಟಿ: ಪೂರ್ಣ ನೀರು ಬಳಕೆಗೆ ಅಗತ್ಯ ಕ್ರಮ

ಬೆಂಗಳೂರು, ಏ. 28– ಆಲಮಟ್ಟಿ ಜಲಾಶಯದ ಎತ್ತರವನ್ನು 519.6 ಮೀಟರ್‌ವರೆಗೆ ಹೆಚ್ಚಿಸಲು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಕೃಷ್ಣಾ ನದಿ ನೀರಿನ ತನ್ನ ಪಾಲಿನ ಹಕ್ಕನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಇಂದು ಸೇರಿದ್ದ ಎಲ್ಲ ರಾಜಕೀಯ ಪಕ್ಷಗಳ ನಾಯಕರ ಸಭೆ ಒಮ್ಮತದಿಂದ ತೀರ್ಮಾನ ತೆಗೆದುಕೊಂಡಿತು.

ರಾಜ್ಯ ಸರ್ಕಾರ ಸಂಜೆ ವಿಧಾನಸೌಧದಲ್ಲಿ ಕರೆದಿದ್ದ ಎಲ್ಲ ಪಕ್ಷಗಳ ನಾಯಕರು, ಇತರೆ ಸಂಘ ಸಂಸ್ಥೆಗಳು, ನೀರಾವರಿ ತಜ್ಞರ ಸಭೆ ಈ ತೀರ್ಮಾನ ತೆಗೆದುಕೊಂಡಿತು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

● ಚಿನ್ನದ ಗಣಿ ಪುನಶ್ಚೇತನಕ್ಕೆ ಕೇಂದ್ರದ ಷರತ್ತಿನ ಒಪ್ಪಿಗೆ

ಬೆಂಗಳೂರು, ಏ. 28– ನಷ್ಟದಲ್ಲಿರುವ ಕೋಲಾರ ಚಿನ್ನದ ಗಣಿಯನ್ನು ಷರತ್ತಿನ ಮೇಲೆ ಪುನಶ್ಚೇತನಗೊಳಿಸಲು ಕೇಂದ್ರ ಸರ್ಕಾರ ಒಪ್ಪಿದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಸ್ಪಷ್ಟಪಡಿಸಿದರು.

ಶೂನ್ಯವೇಳೆಯಲ್ಲಿ ಜನತಾದಳ (ಯು) ಗುಂಪಿನ ನಾಯಕ ಪಿ.ಜಿ.ಆರ್. ಸಿಂಧ್ಯಾ ಅವರು ಕೋಲಾರ ಚಿನ್ನದ ಗಣಿಯನ್ನು ಉಳಿಸಿಕೊಳ್ಳಬೇಕೆಂದು ಒತ್ತಾಯಿಸಿದಾಗ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಯವರು, ಚಿನ್ನದ ಗಣಿಯಲ್ಲಿ ಕೆಲಸ ಮಾಡುತ್ತಿರುವ 4,500 ಕಾರ್ಮಿಕರ ಪೈಕಿ 2,700 ಮಂದಿಯನ್ನು ಸ್ವಯಂ ನಿವೃತ್ತಿಗೊಳಿಸುವುದಾದರೆ ಅಲ್ಲಿ ಗಣಿಗಾರಿಕೆಯನ್ನು ಮುಂದುವರಿಸಲು ಪರಿಶೀಲಿಸಬಹುದಾಗಿದೆ ಎಂಬುದಾಗಿ ಕೇಂದ್ರವು ತಿಳಿಸಿದೆ ಎಂದರು.

50 ವರ್ಷಗಳ ಹಿಂದೆ

ಮಂಗಳವಾರ, 29-4-1975

● ಸಂಕೇಶ್ವರದಲ್ಲಿ ಕಾಂಗ್ರೆಸ್ಸಿಗೆ ಜಯ ನಗರದಲ್ಲಿ ಸೋಲು

ಬೆಂಗಳೂರು, ಏ. 28– ಪ್ರತಿಷ್ಠೆಯ ಸಂಕೇಶ್ವರ ವಿಧಾನಸಭಾ ಕ್ಷೇತ್ರ ಸ್ಥಾನವನ್ನು ಸಂಸ್ಥಾ ಕಾಂಗ್ರೆಸ್ಸಿನಿಂದ ಮರಳಿ ಪಡೆಯುವಲ್ಲಿ ಯಶಸ್ವಿಯಾದ ಕಾಂಗ್ರೆಸ್, ತೀವ್ರ ಪೈಪೋಟಿ ನಡೆದ ಚಾಮರಾಜಪೇಟೆ ಕ್ಷೇತ್ರದಲ್ಲಿ, ಕನ್ನಡ ಚಳವಳಿಗಾರರ ಕೈಯಲ್ಲಿ ಸೋಲನ್ನು ಅನುಭವಿಸಿತು.

ಈ ಎರಡು ವಿಧಾನಸಭಾ ಕ್ಷೇತ್ರಗಳ ಚುನಾವಣೆಯ ಫಲಿತಾಂಶವು ಇಂದು ಪ್ರಕಟವಾದಾಗ, ಸಂಕೇಶ್ವರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಾಳಾಸಾಹೇಬ ಸಾರವಾಡ ಅವರು ತಮ್ಮ ಪ್ರತಿಸ್ಪರ್ಧಿ ಸಂಸ್ಥಾ ಕಾಂಗ್ರೆಸ್ಸಿನ ಬಿ.ಎ. ಪಾಟೀಲ ಅವರನ್ನು 4,790 ಅಧಿಕ ಮತಗಳಿಂದ ಸೋಲಿಸಿದರು. ಪಕ್ಷೇತರ ಅಭ್ಯರ್ಥಿ ಠೇವಣಿ ಕಳೆದುಕೊಂಡಿದ್ದಾರೆ.

ಕನ್ನಡ ಚಳವಳಿಗಾರರ ಅಭ್ಯರ್ಥಿಗೆ ಜಯ: ಏಳು ಮಂದಿ ಸ್ಪರ್ಧಿಸಿದ್ದ ಚಾಮರಾಜಪೇಟೆ ಕ್ಷೇತ್ರದಲ್ಲಿ ಕನ್ನಡ ಚಳವಳಿಗಾರರ ಅಭ್ಯರ್ಥಿ ಪ್ರಭಾಕರ ರೆಡ್ಡಿ ಅವರು ಕಾಂಗ್ರೆಸ್ಸಿನ ವೈ. ರಾಮಚಂದ್ರ ಅವರಿಗಿಂತ ಎರಡು ಸಾವಿರಕ್ಕೂ ಹೆಚ್ಚು ಮತಗಳನ್ನು ಗಳಿಸಿ ವಿಜಯಿಯಾದರು. ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿ ಸಿ.ಎಂ. ಇಬ್ರಾಹಿಂ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟರು.

ಅತಿಸಣ್ಣ ಜಾತಿಗಳಿಗೂ ಮಾನ್ಯತೆ ಸಿಗಲಿ, ದೊಡ್ಡಜಾತಿಗಳು ಮಾತೃಹೃದಯ ತೋರಲಿ

ದೊಡ್ಡವರೆಲ್ಲಾ ಜಾಣರು, ಚಿಕ್ಕವರೆಲ್ಲಾ ಕೋಣರು!

ಅನುಸಂಧಾನ

ರವೀಂದ್ರ ಭಟ್ಟ

ಹಾಸ್ಯನಟ ದ್ವಾರಕೀಶ್ ಅಭಿನಯದ 'ಗುರುಶಿಷ್ಯರು' ಚಿತ್ರದಲ್ಲಿ 'ದೊಡ್ಡವರೆಲ್ಲಾ ಜಾಣರಲ್ಲ, ಚಿಕ್ಕವರೆಲ್ಲಾ ಕೋಣರಲ್ಲ' ಎಂಬ ಪ್ರಸಿದ್ಧವಾದ ಹಾಡಿದೆ. ಆದರೆ ಸ್ವಾತಂತ್ರ್ಯಾನಂತರದ ರಾಜಕೀಯವನ್ನು ಗಮನಿಸಿದರೆ ಮತ್ತು ರಾಜ್ಯದಲ್ಲಿ ಇತ್ತೀಚೆಗೆ ಬಹಿರಂಗವಾದ ಜಾತಿ ಜನಗಣತಿ ಕುರಿತ ಪ್ರತಿಕ್ರಿಯೆಗಳನ್ನು ನೋಡಿದರೆ, ನಮ್ಮಲ್ಲಿ ದೊಡ್ಡವರೇ ಜಾಣರು ಮತ್ತು ಚಿಕ್ಕವರು ಕೋಣರು ಎನ್ನುವುದು ಸ್ಪಷ್ಟವಾಗುತ್ತದೆ.

ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಇದನ್ನೇ ಜಾತಿ ಜನಗಣತಿ ಎಂದು ಕರೆಯಲಾಗುತ್ತಿದೆ) ವರದಿಯ ದತ್ತಾಂಶ ಬಹಿರಂಗಗೊಂಡ ನಂತರ ಜೋರಾಗಿ ಕೂಗಾಡುತ್ತಿರುವವರು ದೊಡ್ಡ ದೊಡ್ಡ ಜಾತಿಗಳ ದೊಡ್ಡ ದೊಡ್ಡ ನಾಯಕರು. ಸಣ್ಣ, ಅತಿಸಣ್ಣ, ಲೆಕ್ಕಕ್ಕೇ ಸಿಗದ ಜಾತಿಗಳ ಕನವರಿಕೆಯೂ ಕೇಳಿಸುತ್ತಿಲ್ಲ. ಲಿಂಗಾಯತ, ಒಕ್ಕಲಿಗ, ಕುರುಬ, ಬ್ರಾಹ್ಮಣ ಮುಂತಾದ ಪ್ರಬಲ ಜಾತಿಗಳ ಆರ್ಭಟದಲ್ಲಿ ಚಿಕ್ಕ ಪುಟ್ಟ ಜಾತಿಗಳ ದನಿಗಳು ಅಡಗಿಹೋಗಿವೆ.

ಸ್ವಾತಂತ್ರ್ಯಾನಂತರ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಪ್ರಾತಿನಿಧ್ಯ ಪಡೆದ ಜಾತಿಗಳೇ ಈಗಲೂ ಕೂಗೆಬ್ಬಿಸಿವೆ. ಈ ಜಾತಿಗಳ ಮುಖಂಡರಿಗೆ ಸಾಮಾಜಿಕ ನ್ಯಾಯದ ಬಗ್ಗೆ ನಿಜವಾಗಿಯೂ ಪ್ರೀತಿ ಇದ್ದರೆ, ಹೇಳಹೆಸರಿಲ್ಲದ ಜಾತಿಗಳ ಕಡೆಗೆ ಗಮನ ನೀಡಲು ಇದೊಂದು ಪರ್ವ ಕಾಲ. 'ಹೌದು, ಇಷ್ಟು ದಿನ ನಾವು ಅನುಭವಿಸಿದ್ದೇವೆ. ಇನ್ನಾದರೂ ನಿಮಗೆ ಸೂಕ್ತ ಪಾಲು ಸಿಗಲಿ' ಎಂದು ಹಾರೈಸುವ, ಅದಕ್ಕೆ ಅವಕಾಶ ಕಲ್ಪಿಸುವ ಕೆಲಸವನ್ನು ಪ್ರಬಲ ಜಾತಿಗಳು ಮಾಡಬೇಕಾಗಿದೆ. ದೊಡ್ಡ ಜನಸಂಖ್ಯೆಯ ಜಾತಿಗಳು ಸಣ್ಣ ಮತ್ತು ದುರ್ಬಲ ಜಾತಿಗಳ ಬಗ್ಗೆ ಮಾತೃಹೃದಯದ ಪ್ರೀತಿಯನ್ನು ತೋರಬೇಕಿದೆ. ಅವರನ್ನು ಕೈಹಿಡಿದು ಮೇಲೆತ್ತುವ ಔದಾರ್ಯ ಬೇಕಿದೆ ಮತ್ತು ಅದೇ ನಿಜವಾದ ಸಾಮಾಜಿಕ ನ್ಯಾಯದ ಪರಿ.

ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ಸಮುದಾಯಗಳಿಗೆ ದನಿ ನೀಡಲು ಜಾತಿವಾರು ಜನಗಣತಿ ನಡೆಸಲಾಗಿದೆ. ಜನಸಂಖ್ಯೆಯ ಆಧಾರದಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ಸಮೀಕ್ಷೆ ಸಹಕಾರಿಯಾಗುತ್ತದೆ ಎಂದು ಹೇಳಲಾಗುತ್ತಿದೆ. ಇದು ನಿಜ. ಆದರೆ ಈಗ ನಡೆಯುತ್ತಿರುವುದು ತಮ್ಮ ಜಾತಿಯ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ ಎಂಬ ಹುಯಿಲೇ ವಿನಾ ಅತ್ಯಂತ ಕಡಿಮೆ ಜನಸಂಖ್ಯೆ ಇರುವ ಜಾತಿಗಳಿಗೆ ಪ್ರಾತಿನಿಧ್ಯ ಕಲ್ಪಿಸಬೇಕು ಎಂಬ ಅಭಿಲಾಷೆ ಅಲ್ಲ. ಅಲ್ಲದೆ ಹಿಂದುಳಿದ ಜಾತಿಗಳಿಗೆ ಸೌಲಭ್ಯ ಕಲ್ಪಿಸಲು, ಅಧಿಕಾರ ನೀಡಲು ಬೇಕಾಗಿದ್ದು ಸಮೀಕ್ಷೆಯಲ್ಲ, ಮನಸ್ಸು ಮತ್ತು ಇಚ್ಛಾಶಕ್ತಿ. ಅತಿಸಣ್ಣ ಸಮುದಾಯದ ಜನ ತಮಗೆ ಸೌಲಭ್ಯ ನೀಡಿ ಎಂದು ಅತ್ತು ಕರೆದು ಗಲಾಟೆಯನ್ನು ಮಾಡಬೇಕಾಗಿಲ್ಲ ಎನ್ನುವುದನ್ನು ದೇವರಾಜ ಅರಸು ಅವರು ತೋರಿಸಿ ಕೊಟ್ಟಿದ್ದರು. ಅವರಿಗಿಂತಲೂ ಮೊದಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಾಡಿದ್ದರು. ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದಕ್ಕೆ, ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರಿಂದಲೇ ಪ್ರಬಲ ವಿರೋಧ ವ್ಯಕ್ತವಾಗಿದ್ದರೂ ಅದನ್ನು ಲೆಕ್ಕಿಸದೆ ಅವರು ಮೀಸಲಾತಿ ಜಾರಿಗೊಳಿಸಿದ್ದರು. ಅದೇ ಹಾದಿಯಲ್ಲಿ ದೇವರಾಜ ಅರಸು ನಡೆದಿದ್ದರು.

ಸ್ವಾತಂತ್ರ್ಯ ಗಳಿಸಿದ ನಂತರ ರಾಜಕೀಯ ಅಧಿಕಾರವು ಆರ್ಥಿಕವಾಗಿ, ಸಾಮಾಜಿಕವಾಗಿ ಬಲಾಢ್ಯವಾಗಿದ್ದ ವರ್ಗಗಳ ಪಾಲಾಯಿತು. ಇದು ಅರಸು ಅವರಿಗೆ ಗೊತ್ತಿತ್ತು. ಅಲ್ಲದೆ ಶೋಷಿತ ಸಮುದಾಯಗಳಿಗೆ ಸಾಮಾಜಿಕ ಸ್ಥಾನಮಾನ, ಶೈಕ್ಷಣಿಕ ಅವಕಾಶ, ಆರ್ಥಿಕ ಸಬಲತೆ ಜೊತೆಗೆ ರಾಜಕೀಯ ಅಧಿಕಾರ ದೊರೆತಾಗ ಮಾತ್ರ ಸಾಮಾಜಿಕ ನ್ಯಾಯ ಸಿದ್ಧಾಂತದ ಪ್ರಕ್ರಿಯೆ ಪೂರ್ಣವಾಗುತ್ತದೆ ಎಂಬ ಅರಿವು ಅವರಿಗೆ ಇತ್ತು. ಪುರೋಹಿತಶಾಹಿಗಳು ಮತ್ತು ಯಜಮಾನಿಕೆ ಸಂಸ್ಕೃತಿಯ ವಾರಸುದಾರರ ಪ್ರಭುತ್ವಕ್ಕೆ ಕಡಿವಾಣ ಹಾಕಿ, ಶತಮಾನಗಳಿಂದ ಶೋಷಣೆಗೆ ಒಳಗಾದ ಮತ್ತು ಅಧಿಕಾರದಿಂದ ವಂಚಿತರಾಗಿದ್ದ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರಿಗೆ ರಾಜಕೀಯ ಅಧಿಕಾರ ನೀಡಬೇಕು ಎಂದು ಅವರು ಸಂಕಲ್ಪಿಸಿದ್ದರು. ಅದರ ಪರಿಣಾಮವಾಗಿಯೇ ಅವರು 1972ರ ವಿಧಾನಸಭಾ ಚುನಾವಣೆಯಲ್ಲಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ 133 ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶವನ್ನು ನೀಡಿದ್ದರು.

ಮುಖ್ಯಮಂತ್ರಿ ಆಡಳಿತಾವಧಿಯ ದೃಷ್ಟಿಯಿಂದ ದೇವರಾಜ ಅರಸು ಅವರ ದಾಖಲೆಯನ್ನು ಇನ್ನೇನು ಕೆಲವೇ ದಿನಗಳಲ್ಲಿ ಮುರಿಯುವುದಕ್ಕೆ ಸಿದ್ಧರಾಗಿರುವ ಸಿದ್ದರಾಮಯ್ಯ ಅವರಿಗೂ ಈಗ ನಿಜವಾದ ಅರ್ಥದಲ್ಲಿ ಸಾಮಾಜಿಕ ನ್ಯಾಯ ಸ್ಥಾಪನೆ ಮಾಡುವ ಸುವರ್ಣ ಅವಕಾಶ ದೊರಕಿದೆ. 'ನಿಜ ಅಧಿಕಾರದ ನೆಲೆಯಲ್ಲಿ ಬಹುಸಂಖ್ಯಾತ ಸಮುದಾಯಗಳಿಗೆ ನ್ಯಾಯಯುತವಾದ ಪಾಲನ್ನು ನೀಡದ ಜನತಾಂತ್ರಿಕ ವ್ಯವಸ್ಥೆಗೆ ಅರ್ಥವೇ ಇಲ್ಲ' ಎಂದು ಅಂಬೇಡ್ಕರ್ ಹೇಳಿದ್ದರು. ಈ ಮಾತನ್ನು ಪರಿಪಾಲಿಸುವ ಮತ್ತು ಜನತಾಂತ್ರಿಕ ವ್ಯವಸ್ಥೆಗೆ ನಿಜವಾದ ಅರ್ಥ ತಂದುಕೊಡುವ ಅವಕಾಶ ಸಿದ್ದರಾಮಯ್ಯ ಅವರಿಗೆ ಈಗ ದೊರಕಿದೆ.

ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ದತ್ತಾಂಶದ ಅಧ್ಯಯನ ವರದಿ– 2024ರ ಪ್ರಕಾರ, ಈವರೆಗೂ ಗುರುತಿಸದೇ ಇರುವ 398 ಹೊಸ ಜಾತಿಗಳು ಪತ್ತೆಯಾಗಿವೆ. ಅಲ್ಲದೆ 200ಕ್ಕಿಂತ ಕಡಿಮೆ ಜನಸಂಖ್ಯೆ ಇರುವ 47 ಜಾತಿಗಳು ಪತ್ತೆಯಾಗಿವೆ. ಒಂದು ಕೋಟಿ, 75 ಲಕ್ಷ, 50 ಲಕ್ಷ ಜನಸಂಖ್ಯೆ ಇರುವ ಮತ್ತು ಈಗಾಗಲೇ ಎಲ್ಲ ಸೌಲಭ್ಯ ಮತ್ತು ಅಧಿಕಾರವನ್ನು ಅನುಭವಿಸಿರುವ ಜಾತಿಗಳು ಕಡಿಮೆ ಜನಸಂಖ್ಯೆ ಇರುವ ಜಾತಿಗಳತ್ತ ಕರುಣಾದೃಷ್ಟಿ ಬೀರಬೇಕಲ್ಲವೇ? ಈಗ ಉದಾಹರಣೆಗೆ, ಪ್ರವರ್ಗ 1ಬಿಗೆ ಒಟ್ಟು 73,92,313 ಜನರನ್ನು ಸೇರಿಸಬಹುದು ಎಂದು ಶಿಫಾರಸು ಮಾಡಲಾಗಿದೆ. ಇದರಲ್ಲಿ ಕುರುಬ ಮತ್ತು ಕುರುಬರ ಉಪಜಾತಿಗಳ ಜನಸಂಖ್ಯೆ 43,72,847 ಇದೆ. ಇದೇ ಗುಂಪಿನಲ್ಲಿ 33,355ರಷ್ಟು ಜನಸಂಖ್ಯೆ ಇರುವ ಸವಿತ ಸಮಾಜವೂ ಇದೆ. 1,01,728 ಜನಸಂಖ್ಯೆ ಇರುವ ಭಜಂತ್ರಿ ಸಮಾಜವೂ ಇದೆ. ಬಂಡಾರಿ, ಹಡಪದ, ಹೂಗಾರ್, ಮಾಲಿ, ಕುಲಾಲ, ಬೋವಿ, ಯಾದವ, ಚೆಟ್ಟಿಯಾರ್, ಸಾಧುಶೆಟ್ಟಿ, ಗ್ರಾಮ ಒಕ್ಕಲ್, ಹಾಲಕ್ಕಿ ಒಕ್ಕಲ್, ಕೆರೆ ಒಕ್ಕಲು, ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ ಪರಿಶಿಷ್ಟ ಜಾತಿಯವರೂ ಇದ್ದಾರೆ. ಇವರ ಜೊತೆಗೆ ಐದು ಜನರನ್ನು ಹೊಂದಿರುವ 'ಮುರುವತ್ತುವರ್', 11 ಜನರನ್ನು ಹೊಂದಿರುವ 'ರಾವಲ' ಎಂಬ ಜಾತಿಗಳೂ ಸೇರಿದಂತೆ 200ಕ್ಕಿಂತ ಕಡಿಮೆ ಜನಸಂಖ್ಯೆ ಇರುವ 16 ಜಾತಿಗಳಿವೆ.

ಪ್ರವರ್ಗ 1ಎಯಲ್ಲಿ 147, ಪ್ರವರ್ಗ 1ಬಿಯಲ್ಲಿ 386, ಪ್ರವರ್ಗ 2ಎಯಲ್ಲಿ 363, ಪ್ರವರ್ಗ 2ಬಿಯಲ್ಲಿ ಮುಸ್ಲಿಂ ಮತ್ತು ಉಪಜಾತಿಗಳು, ಪ್ರವರ್ಗ 3ಎಯಲ್ಲಿ 85, 3ಬಿಯಲ್ಲಿ 109 ಜಾತಿಗಳಿವೆ ಎಂದು ದತ್ತಾಂಶ ಅಧ್ಯಯನ ವರದಿ ಹೇಳಿದೆ. ಈ ಎಲ್ಲ ಪ್ರವರ್ಗಗಳಲ್ಲಿ 200 ಜನಸಂಖ್ಯೆಗಿಂತ ಕಡಿಮೆ ಇರುವ 47 ಜಾತಿಗಳಿವೆ. ಪ್ರವರ್ಗ 1ಎಯಲ್ಲಿ 200ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಮೂರು ಜಾತಿಗಳಿವೆ. ಪ್ರವರ್ಗ 2ಎಯಲ್ಲಿ ತಲಾ ನಾಲ್ಕು ಜನರಿರುವ ಶಿಲ್ಪಿ, ಒಸ್ತಾ, ಪಟ್ಟು ನಾಲ್ಕರ್, ಆರು ಜನರಿರುವ ನಂಬೀಶನ್, ಏಳು ಜನರಿರುವ ಕೊಟ್ಟಿಯಾ ಸೇರಿ 200ಕ್ಕೂ ಕಡಿಮೆ ಜನಸಂಖ್ಯೆ ಇರುವ 17 ಜಾತಿಗಳಿವೆ. ಪ್ರವರ್ಗ 3ಬಿಯಲ್ಲಿ ಲಿಂಗಾಯತ ಉಪಗುಂಪುಗಳಲ್ಲಿ ಬರುವ, ಬರೀ ಮೂರು ಜನ ಇರುವ ಲಿಂಗದಾರ್, ಒಂಬತ್ತು ಜನರಿರುವ ವೀರಶೈವ ಮುಲ್ಲಾವರ, 11 ಜನರಿರುವ ವೀರಶಿವ ಜಂಗಮ ಸೇರಿ 200ಕ್ಕೂ ಕಡಿಮೆ ಜನಸಂಖ್ಯೆ ಇರುವ ಎಂಟು ಜಾತಿಗಳಿವೆ. ಇವುಗಳನ್ನು ನೋಡಿದರೆ ನಮ್ಮ ಆದ್ಯತೆ ಏನಾಗಬೇಕು ಎನ್ನುವುದು ಸ್ಪಷ್ಟವಾಗುತ್ತದೆ.

'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂದು ಬಸವಣ್ಣ ಹೇಳಿದ್ದಾರೆ. ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದ ಸಿದ್ದರಾಮಯ್ಯ ಅವರನ್ನು ಸಣ್ಣಪುಟ್ಟ ಜಾತಿಯವರು 'ಅಯ್ಯಾ' ಎಂದರೆ ಅವರಿಗೆ 'ಸ್ವರ್ಗ' ಸಿಗಬಹುದೇ?

ಚುರುಮುರಿ

ಯಾರು ನೀ ಯಾರು?

● ಡಿ.ಎಸ್.ಲಿಂಗರಾಜು

'ಲೇಯ್', ಯಾವನ್ಲಾ ಅವನು ಪಕ್ಕಾ ಕಳ್ಳನಂಗಿದ್ದೀಯ. ಅಪರಾತ್ರೀಲಿ ಇಲ್ಲೇನು ಮಾಡ್ತಿದ್ದಯೋ? ಸ್ಲೀಪರ್ ಸೆಲ್ಲಿನೋನೇನೋ?'

'ಅಣ್ಣೈ, ಕಳ್ತನ ಮಾಡಕ್ಕೆ ಬಂದುದನಿ. ಕೂಗಿ ಗಲಾಟೆ ಮಾಡಿ ಬಾಯಿಗೆ ಮಣ್ಣಾಕಬ್ಯಾಡ ಸುಮ್ಮಗಿರು. ಉಚಾಯ್ಸಿ ಮಾತಾಡ್ತಿದ್ದೀರಲ್ಲ ಅಣ್ತಮ್ಮ ತಾವು ಯಾರು?'

'ನಾನು ಪಾಲಿಟಿಕ್ಸಲ್ಲಿ ದೊಡ್ಡ ಪಿಗರು ಕನೋ. ರಾಜ್ಯದ ಸ್ಥಿತಿಗತಿ ನೋಡಿಕ್ಯಂದು ಬರಮು ಅಂತ ಸಿಟಿ ರೌಂಡ್ ಹೊಂಟಿದ್ದೀನಿ. ರಾತ್ರೆಲ್ಲ ನಿದ್ದೆಗೆಟ್ಕಂದು ಏನು ದಬ್ಬಾಕಿದ್ದೀಲಾ? ಕಳ್ತನ ಬುಟ್ಟು ನಮ್ಮ ಜೊತೆಗೆ ಸೇರಿಕ್ಯಂದು ರಾಜಾರೋಸವಾಗಿ ಹಗಲೊತ್ತೇ ಯವಾರ ಮಾಡಬೋದಲ್ಲೋ?'

'ಅದೆಂಗಣ್ಣಾ ವಸಿ ಬುಡುಸೇಳಿ'.

'ನಮ್ಮದೂವೆ ಚಾಪರ್ ಸೆಲ್ ಕಲಾ. ಕಂಡುದ್ದೆಲ್ಲ ಕತ್ತರಿಸಿ ಬಿಸಾಕ್ತೀವಿ. ಜನ ನೆಮ್ಮದಿಯಾಗಿರಬಾರ್ದು ಅಂತ ಥರಂಥರ ಟ್ಯಾಕ್ಸು ಜಡಿದು ಅವರ ಕೈಲಿ ಮೂರು ಕಾಸಿಲ್ದಂಗೆ ಮಾಡಿಬುಡ್ತೀವಿ. ಏನೋ ಒಂದು ಕಿತಾಪತಿ ಮಾತಾಡಿ ಅಮಾಕ 'ನಾನು ಹಂಗಂದೇ ಇಲ್ಲ. ನನ್ನ ಮಾತ ತಿರುಚಿ ಹೇಳ್ತಾವ್ರೆ' ಅಂದುಬುಡ್ತೀವಿ'.

'ಜನಕ್ಕೆ ಏನನ್ನಾ ಕೊಟ್ಟದೀರ?'

'ಯಾಕಿಲ್ಲವುಲಾ, ಇಲ್ಲೀಗಂಟ ಎಂಬತ್ತು ಸಾವಿರ ಕೋಟಿ ರೂಪಾಯಿ ಜನದ ಜೋಬಲ್ಲಿ ಹಾಕಿದ್ದೀವಿ. ಪೆದ್ದು ಜನ ಅದು ಎಲ್ಲೆಲ್ಲಿಗೆ ಸೇರ್ಯದೆ ಅಂತ ಹುಡೀಕ್ಕಬಕು'.

'ಸುಳ್ಳೇ ನಿಮ್ಮ ಮಂದೇವರು ಅಂದಂಗಾತು'.

'ದಿಟ. ತಟವಟ, ಹುನ್ನಾರ ಇರಬೇಕು ಕಯ್ಯಾ. ನಮ್ಮ ಅಕ್ರಮ, ಅನಾಚಾರದ ಮುಂದೆ ಯಾವ ಕಾನೂನೂ ದಕ್ಕುಕುಲ್ಲ ಕನೋ. ಓದಕ್ಕೆ ಬರದೇ ಇದ್ರೂ ಕಾನೂನು ಮಾಡ್ತೀವಿ ಅಂತೀನಿ'.

'ಅಣ್ಣೈ, ಇಲ್ಲೀಗಂಟ ಈಟಂಬಲಿ ತಿನಕಂದಿದ್ದೆ. ಇನ್ನು ನಾನೇನು ಮಾಡಿದ್ರೂ ಬಾರಾ ಖೂನ್ ಮಾಫಿ ಅಂದುದ್ದರಿ. ವತ್ತರಿಂದ ಸಂದೇಗಂಟ ನಿಮ್ಮ ಜೊತೇಗೇ ಇದ್ದು ಮನಿಮನಿಗೂಡಿದರೆ ಕಳ್ಳ ಅನ್ನದು ದಿಟ ಮಾಡಿ ತೋರಿಸ್ತೀನಿ'.

'ಭೇಸ್ ಕಾ ಅಣ್ತಮ್ಮ, ನಿನ್ನ ಮೆಹನತ್ತಿಗೆ ಬೆಲೆ ಬರಬಕು ಅಂದ್ರೆ ನಮ್ಮ ಜೊತೆಗೆ ಶಾಮೀಲಾಗಬಕು'.

ಸಂಗತ

ನಾಯಿಗೆ ಅನ್ನ ಹಾಕುವ ಮುನ್ನ...

ಬೀದಿನಾಯಿಗಳನ್ನು ಪೋಷಿಸುವವರು ಕೆಲವು ಕನಿಷ್ಠ ಜವಾಬ್ದಾರಿಗಳನ್ನು ನಿಭಾಯಿಸಬೇಕಿರುವುದು ಸಮುದಾಯ ಸ್ವಾಸ್ಥ್ಯದ ದೃಷ್ಟಿಯಿಂದ ಅಪೇಕ್ಷಣೀಯ

● ಡಾ. ಮುರಳೀಧರ ಕಿರಣಕೆರೆ

ಕಾರ್ಯಕ್ರಮವೊಂದರಲ್ಲಿ ಪರಿಚಯವಾದ ಯುವತಿಯೊಬ್ಬಳು, ನಾನು ವೃತ್ತಿಯಲ್ಲಿ ಪಶುವೈದ್ಯ ಎಂದೊಡನೆ 'ಸರ್, ಒಂದು ಮಾಹಿತಿ ಕೇಳ್ಬಹುದಾ?' ಎಂದಳು ಸ್ವಲ್ಪ ಹಿಂಜರಿಕೆಯಿಂದಲೆ. ನಾನು 'ಕೇಳಿ, ಅದಕ್ಕೇಕೆ ಮುಜುಗರ?' ಎಂದೊಡನೆ ಅವಳ ಕಣ್ಣುಗಳು ಅರಳಿದ್ದವು. 'ನಾಯಿಗಳಿಗೆ ಯಾವಾಗ ಇಂಜಕ್ಷನ್ ಹಾಕಿಸಬೇಕು?' ಅವಳ ಪ್ರಶ್ನೆ ವ್ಯಾಕ್ಸಿನ್‌ಗಳ ಕುರಿತಾದ್ದರಿಂದ ವಿವರವಾಗಿಯೇ ಮಾಹಿತಿ ನೀಡಿದೆ. ಮಧ್ಯೆ ಮಧ್ಯೆ ಸಂದೇಹಗಳನ್ನು ನಿವಾರಿಸಿಕೊಳ್ಳುತ್ತಾ ಲಸಿಕೆಗಳ ಹೆಸರು, ಹಾಕುವ ವೇಳಾಪಟ್ಟಿಯನ್ನು ಮೊಬೈಲಲ್ಲಿ ದಾಖಲಿಸಿಕೊಂಡಳು. ಅವಳ ಕುಟುಂಬ ಇರುವುದು ಬೆಂಗಳೂರಿನಲ್ಲಿ. ಐಟಿ ಉದ್ಯೋಗಿಯ ಈ ಪರಿಯ ಶ್ವಾನಪ್ರೀತಿ ಅಚ್ಚರಿ ತಂದಿತು.

'ಎಷ್ಟು ನಾಯಿ ಸಾಕಿದ್ದೀರಿ, ಒಂದೋ ಎರಡೋ?' ಕುತೂಹಲದಿಂದ ಕೇಳಿದೆ. 'ಒಟ್ಟು ಹನ್ನೊಂದು ಇವೆ. ಆರು ನಾಯಿ ನಮ್ಮನೇಲಿ, ಅಮ್ಮನ ಮನೇಲಿ ಐದು. ಎಲ್ಲಾ ಬೀದಿನಾಯಿಗಳು. ಆದರೆ ನಮ್ಮ ಮನೆಯ ಶೆಡ್ಡಲ್ಲೇ ಇರ್ತವೆ' ಎನ್ನುತ್ತಾ ನನ್ನನ್ನು ಮತ್ತಷ್ಟು ಅಚ್ಚರಿಗೆ ದೂಡಿದ್ದಳು! ಅನಾಥ ಬೀದಿನಾಯಿಗಳ ಮೇಲಿನ ಅವಳ ಕಕ್ಕುಲಾತಿ, ಜಂತುನಾಶಕ ಔಷಧ, ಲಸಿಕೆ ಹಾಕಿಸಿ ಸ್ವಾಸ್ಥ್ಯ ಕಾಪಾಡುವ ಕಾಳಜಿ ನಿಜಕ್ಕೂ ಮೆಚ್ಚುವಂತಿತ್ತು.

ಹೌದು, ಶ್ವಾನಪ್ರಿಯರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ವಿವಿಧ ತಳಿಯ ನಾಯಿಗಳನ್ನು ಮನೆಯಲ್ಲಿ ಸಾಕುತ್ತಾ ಅವುಗಳ ಅವಶ್ಯಕತೆಗಳನ್ನು ಪೂರೈಸುತ್ತಾ ಪೂರ್ಣ ಕಾಳಜಿ ತೋರುವವರು ಒಂದೆಡೆಯಾದರೆ, ಬೀದಿನಾಯಿಗಳಿಗೆ ಅನ್ನ ಹಾಕುತ್ತಾ ಸಂತೋಷ, ಧನ್ಯತೆಯ ಭಾವ ಅನುಭವಿಸುವವರು ಹಲವರು. ಆದರೆ, ಹೀಗೆ ತಾವು ಆಹಾರ ಹಾಕಿ ಬೆಳೆಸುವ ಬೀಡಾಡಿ ನಾಯಿಗಳ ಆರೋಗ್ಯ ರಕ್ಷಣೆಯ ಹೊಣೆಯೂ ತಮ್ಮದೆಂದು ಅರಿತು ಔಷಧೋಪಚಾರ ಮಾಡುವವರ ಸಂಖ್ಯೆ ತುಂಬಾ ಕಡಿಮೆ. ಹೆಚ್ಚಿನವರ ಕಾಳಜಿ ಆಹಾರ ಕೊಡುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆಯೇ ವಿನಾ ಅಂತಹ ಪ್ರಾಣಿಗಳ ಇನ್ನಿತರ ಅಗತ್ಯಗಳ ಬಗ್ಗೆ ಜವಾಬ್ದಾರಿ ಹೊರಲು ಹಿಂದೇಟು ಹಾಕುತ್ತಾರೆ.

ಬೀದಿನಾಯಿಗಳ ಹೆಚ್ಚಳದಿಂದ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ತಪ್ಪಿಸುವ ದಿಸೆಯಲ್ಲಿ ತಮ್ಮ ಕರ್ತವ್ಯಗಳನ್ನು ಪಾಲಿಸುವ ಪ್ರಾಣಿಪ್ರಿಯರ ಸಂಖ್ಯೆ ವಿರಳ.

ಶ್ವಾನಗಳು ಸೇರಿದಂತೆ ಸಾಕುಪ್ರಾಣಿಗಳ ಸಾಂಗತ್ಯದಿಂದ ಮಾನವನಿಗೆ ಲಾಭಗಳು ಹಲವು. ಪ್ರಾಣಿಗಳ ಒಡನಾಟದಿಂದ ಶರೀರದಲ್ಲಿ 'ಸಂತಸ' ತರುವ ರಸದೂತಗಳು ಉತ್ಪತ್ತಿಯಾಗುತ್ತವೆ. ದೇಹದಲ್ಲಿ ಸ್ರವಿಕೆಯಾಗುವ ಡೋಪಮಿನ್, ಆಕ್ಸಿಟೋಸಿನ್, ಎಂಡಾರ್ಫಿನ್ಸ್ ಮನಸ್ಸಿಗೆ ಸಂತೋಷ ತುಂಬುವುದರ ಜೊತೆಗೆ ದಣಿದ ದೇಹಕ್ಕೆ ಆರಾಮ ನೀಡುತ್ತವೆ. ಮಾನಸಿಕ ಒತ್ತಡ, ಉದ್ವೇಗ ಕಡಿಮೆ ಮಾಡುತ್ತವೆ. ಅರಳಿದ ಮನಸ್ಸು ದೈಹಿಕ ಸ್ಥಿತಿಯ ಮೇಲೂ ಸಕಾರಾತ್ಮಕ ಪರಿಣಾಮ ಬೀರುತ್ತದೆ. ದೇಹದ ರೋಗನಿರೋಧಕ ಸಾಮರ್ಥ್ಯ ಹೆಚ್ಚುತ್ತದೆ. ರಕ್ತದೊತ್ತಡ ಇಳಿಯುತ್ತದೆ. ಖಿನ್ನತೆ, ಬೇಸರ, ಏಕಾಂಗಿತನದಂತಹ ಭಾವಗಳು ಕಳೆಯುತ್ತವೆ. ಮಕ್ಕಳಲ್ಲಿ ಪ್ರೀತಿ, ವಾತ್ಸಲ್ಯ, ದಯೆ, ಅನುಕಂಪ, ಹೊಂದಾಣಿಕೆ, ಸಹಾನುಭೂತಿ, ಸಹಬಾಳ್ವೆಯ ಗುಣಗಳನ್ನು ಬೆಳೆಸಲು ಪ್ರಾಣಿಗಳ ಪಾಲನೆ ಒಂದು ಉತ್ತಮ ಮಾರ್ಗ.

ನಾಯಿಯನ್ನು ಸಾಕಲು ಮನೆಯಲ್ಲಿ ಸ್ಥಳಾವಕಾಶ ಇಲ್ಲದಿದ್ದರೆ, ಅವುಗಳ ಜೊತೆಗಿರಲು, ಹೊರಗೆ ಓಡಾಡಿಸಲು ಸಮಯ ಇಲ್ಲದಿದ್ದರೆ ಸಾಕುವ ಗೊಡವೆಗೆ ಹೋಗಬಾರದು. ಇಕ್ಕಟ್ಟಿನ ಜಾಗದಲ್ಲಿ ಕೂಡಿಹಾಕುವುದು, ದಿನವಿಡೀ ಮನೆಯಲ್ಲಿ ಒಂಟಿಯಾಗಿ ಬಿಟ್ಟುಹೋಗುವುದು, ಸದಾ ಬಂಧನದಲ್ಲಿ ಇಡುವುದು ಪ್ರಾಣಿ ದೌರ್ಜನ್ಯವಷ್ಟೇ ಅಲ್ಲ ಅಕ್ಷಮ್ಯವೂ ಹೌದು. ಮಾನವನ ಈ ಪರಿಯ ವರ್ತನೆ ಶ್ವಾನಗಳಿಗೆ ಮಾನಸಿಕ ಮತ್ತು ಶಾರೀರಿಕ ಒತ್ತಡ ಉಂಟುಮಾಡುತ್ತದೆ. ಅವುಗಳ ವರ್ತನೆ ಬದಲಾಗುವುದರ ಜೊತೆಗೆ ಡಯಾಬಿಟಿಸ್, ಥೈರಾಯ್ಡ್ ತೊಂದರೆ, ಸಂಧಿವಾತ, ಚರ್ಮರೋಗದಂತಹ ದೀರ್ಘಕಾಲೀನ ಸಮಸ್ಯೆಗಳಿಗೂ ಕಾರಣವಾಗುತ್ತದೆ.

ಬೀದಿನಾಯಿಗಳಿಗೆ ಆಹಾರ ಹಾಕಿ ಬೆಳೆಸುವುದರಿಂದ ಅಪಾಯವೂ ಬಹಳಷ್ಟಿದೆ. ನಿತ್ಯ ಸುಲಭವಾಗಿ ಸಿಕ್ಕುವ ಆಹಾರದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗುವುದರಿಂದ ಅನ್ನ ಹುಡುಕಿಕೊಳ್ಳುವ ಅವುಗಳ ಸಾಮರ್ಥ್ಯ, ಕೌಶಲ ಕುಂದುತ್ತದೆ. ಆಹಾರ ಸಿಗುವುದು ಹಠಾತ್ತನೆ ನಿಂತುಹೋದರೆ ಹಸಿವೆಯಿಂದ ಸಾಯುವ ಸಂಭವ ಇರುತ್ತದೆ. ಅಲ್ಲದೆ ಆಹಾರ ಸುಲಭವಾಗಿ ಸಿಗುವ ತಾಣ ಮತ್ತಷ್ಟು ನಾಯಿಗಳನ್ನು ಆಕರ್ಷಿಸುತ್ತದೆ. ಅವುಗಳ ಸಂಖ್ಯೆ ಏರಿದಂತೆ ಬೊಗಳಾಟ, ಗದ್ದಲ, ಜಗಳ ಹೆಚ್ಚಿ ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟಾಗುತ್ತದೆ. ಮಾನವರ ಮೇಲೆ ಆಕ್ರಮಣ, ಕಡಿತ, ಜೀವಹಾನಿ ಪ್ರಕರಣಗಳು ಏರುತ್ತವೆ. ಅಪಾಯಕಾರಿ ರೇಬಿಸ್ ರೋಗ ಹರಡುವ ಸಾಧ್ಯತೆ ಜಾಸ್ತಿ ಆಗುತ್ತದೆ. ಹಠಾತ್ತಾಗಿ ಅಡ್ಡಬರುವ ನಾಯಿಗಳಿಂದ ವಾಹನ ಅಪಘಾತಗಳ ಅಪಾಯವೂ ಇದೆ.

ಮನೆಯಲ್ಲಿ ಸಾಕಲು ಅನನುಕೂಲದ ಕಾರಣ ಬೀದಿನಾಯಿಗಳನ್ನು ಪೋಷಿಸಿ ಸಮಾಧಾನ ಪಡೆಯುವವರು ಕೆಲವು ಕನಿಷ್ಠ ಜವಾಬ್ದಾರಿಗಳನ್ನು ನಿಭಾಯಿಸಬೇಕಿರುವುದು ಸಮುದಾಯ ಸ್ವಾಸ್ಥ್ಯದ ದೃಷ್ಟಿಯಿಂದ ಅಪೇಕ್ಷಣೀಯ. ತಾವು ಅನ್ನ ಹಾಕಿ ಸಲಹಿದ ನಾಯಿಗಳಿಗೆ ನಿಯಮಿತವಾಗಿ ಜಂತುನಾಶಕ ಔಷಧ ನೀಡುವುದು, ರೇಬಿಸ್ ಸೇರಿದಂತೆ ಅಪಾಯಕಾರಿ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕಿಸುವುದರಿಂದ ಅವುಗಳ ಆರೋಗ್ಯ ರಕ್ಷಣೆಯ ಹೊಣೆ ಹೊತ್ತಂತೆ ಆಗುತ್ತದೆ. ಅವುಗಳ ಸಂಖ್ಯೆ ಹೆಚ್ಚದಂತೆ ತಡೆಯಲು ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ ಮಾಡಿಸುವ ಜವಾಬ್ದಾರಿಯೂ ಅನ್ನ ಹಾಕುವವರದ್ದೇ. ಈ ದಿಸೆಯಲ್ಲಿ ಸ್ಥಳೀಯ ಪ್ರಾಣಿ ಕಲ್ಯಾಣ ಸಂಘಗಳ ಸಹಾಯ ಪಡೆಯಬಹುದು.

ವಾಚಕರ ವಾಣಿ

ಅಂಗಾಂಗ ದಾನ: ಮೂಡಲಿ ಜಾಗೃತಿ

'ಅಂಗಾಂಗ ದಾನಕ್ಕೆ ಕುಟುಂಬಸ್ಥರಿಂದಲೇ ಅಡ್ಡಿ' ಎಂಬ ವರದಿ (ಪ್ರ.ವಾ., ಏ. 28) ಓದಿ ವಿಷಾದ ಆವರಿಸಿತು. ಆಕಸ್ಮಿಕವಾಗಿ ಮೃತಪಟ್ಟ ವ್ಯಕ್ತಿಯ ಸಂಬಂಧಿಕರು ಮೌಢ್ಯ, ಅರಿವಿನ ಕೊರತೆಯಂತಹ ಕಾರಣಗಳಿಂದ ಅಂಗಾಂಗ ದಾನಕ್ಕೆ ಹಿಂದೇಟು ಹಾಕುವುದು ವಿಪರ್ಯಾಸ. ಇದರ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಲು ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

2024ರ ಸೆಪ್ಟೆಂಬರ್‌ನಲ್ಲಿ ತಿಪಟೂರಿನಲ್ಲಿ ಮೃತಪಟ್ಟ 19 ವರ್ಷದ ಎಂಬಿಬಿಎಸ್ ವಿದ್ಯಾರ್ಥಿಯೊಬ್ಬನ ಪೋಷಕರು ಇಲ್ಲಿ ಸ್ಮರಣಾರ್ಹರು. ಆ ಯುವಕ ಅಪಘಾತದಲ್ಲಿ ಮೃತಪಟ್ಟ ಕೆಲವೇ ಗಂಟೆಗಳಲ್ಲಿ ಆತನ ಪೋಷಕರು ಅವನ ಎರಡೂ ಕಣ್ಣುಗಳನ್ನು ದಾನವಾಗಿ ನೀಡಿದರು ಎಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅತ್ಯಂತ ದುಃಖದ ಸಂದರ್ಭದಲ್ಲೂ ಹೆತ್ತವರ ಆ ನಡೆ ಆದರ್ಶಪ್ರಾಯ ಎನಿಸಿತು.

ಆಶಾ ಅಪ್ರಮೇಯ, ದಾವಣಗೆರೆ

ಯುದ್ಧದ ದಾಹ ಬೇಡ, ಏಕೆಂದರೆ...

ಪಹಲ್ಗಾಮ್ ದಾಳಿ ಕುರಿತಂತೆ ದೇಶದೆಲ್ಲೆಡೆ ವೀರಾವೇಶದ ಮಾತುಗಳು ಕೇಳಿಬರುತ್ತಿವೆ. ಸಂಭಾವ್ಯ ಯುದ್ಧ 'ಬೇಡ' ಎನ್ನುವವರನ್ನು ಹೇಡಿಗಳು, ದೇಶದ್ರೋಹಿಗಳೆಂದು ಅರ್ಥೈಸಲಾಗುತ್ತಿದೆ. ಆದರೆ, ಒಂದು ದೇಶವಾಗಿ ನಾವು ಯುದ್ಧದ ಪರಿಣಾಮಗಳೆಂಬ ವಾಸ್ತವವನ್ನು ಪರಿಗಣಿಸಲೇಬೇಕಾಗುತ್ತದೆ. ಪ್ರಸ್ತುತ ಸಂಘರ್ಷವು ತಾರಕಕ್ಕೇರಿದರೆ ಅದು ಮೂರನೇ ವಿಶ್ವಯುದ್ಧದ ಆರಂಭವಾದೀತು. ಏಕೆಂದರೆ, ಪಾಕಿಸ್ತಾನವು ಬಡಪೆಟ್ಟಿಗೆ ಸುಮ್ಮನಾಗುವ ದೇಶ ಅಲ್ಲ. ಮೇಲಾಗಿ, ಅದಕ್ಕೆ ಚೀನಾದ ಬೆಂಬಲ ಮತ್ತು ಪ್ರಚೋದನೆ ಇದ್ದೇ ಇರುತ್ತದೆ. ಭಾರತವನ್ನು ಬೆಂಬಲಿಸುವ ಎರಡು ಶಕ್ತಿಯುತ ರಾಷ್ಟ್ರಗಳಲ್ಲಿ ಒಂದಾದ ರಷ್ಯಾವು ಇಂದು ತನ್ನ ಅವನತಿಯಿಂದ ತಾನೇ ಪಾರಾಗಬೇಕಾದ ದುಃಸ್ಥಿತಿಯನ್ನು ತಲುಪಿದೆ. ಇನ್ನೊಂದು ರಾಷ್ಟ್ರ ಅಮೆರಿಕವು ಹೊರಗಿನಿಂದ ಏನೇ ಶಾಂತಿಮಂತ್ರ ಜಪಿಸಿದರೂ ಸ್ವಹಿತಾಸಕ್ತಿಯಿಂದಾಗಿ ಒಳಗೊಳಗೇ ಯುದ್ಧಗಳಿಗೆ ಕುಮ್ಮಕ್ಕು ಕೊಡುತ್ತಾ ಬಂದಿರುವ ದೇಶ ಎಂಬುದನ್ನು ಇತಿಹಾಸವೇ ಹೇಳುತ್ತದೆ. ಹೀಗಿರುವಾಗ, ಭಾರತ- ಪಾಕಿಸ್ತಾನ ಪರಸ್ಪರ ಕದನಕ್ಕಿಳಿದರೆ, ಉಭಯ ದೇಶಗಳೂ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಭೌತಿಕವಾಗಿ ಅಪಾಯಕರ ಹಂತಗಳನ್ನು ತಲುಪುವುದು ಖಂಡಿತ. ಇಲ್ಲಿ ಉಲ್ಲೇಖಿಸಿರುವ ಐದೂ ದೇಶಗಳು ಅಣ್ವಸ್ತ್ರಸನ್ನದ್ಧ ಎಂಬುದನ್ನು ನಾವು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಬೇಕು.

ಯುದ್ಧಕ್ಕೂ ಇಳಿಯದೆ, ನಮ್ಮ ನ್ಯಾಯಪರತೆ ಮತ್ತು ಪ್ರತಿಷ್ಠೆಗೂ ಧಕ್ಕೆ ತಂದುಕೊಳ್ಳದೆ ಪಾಕಿಸ್ತಾನವನ್ನು ಮಟ್ಟಹಾಕುವ ಅನೇಕ ಮಾರ್ಗಗಳಿವೆ. ಆ ದಿಸೆಯಲ್ಲೇ ನರೇಂದ್ರ ಮೋದಿ ನೇತೃತ್ವದ ಭಾರತ ಇಂದು ಸಾಗುತ್ತಿದೆ ಎಂದು ಅನ್ನಿಸುತ್ತಿದೆ. ಯುದ್ಧ ಮಾಡಿ ಪಾಕಿಸ್ತಾನವನ್ನು ಇಲ್ಲವಾಗಿಸಿಬಿಡೋಣ ಎನ್ನುವ ವೀರಾಗ್ರಣಿಗಳಿಗೆ ಒಂದು ಕಿವಿಮಾತು: ಯುದ್ಧ ಆಗಬೇಕೆಂದರೆ, ಆಗ ಕನಿಷ್ಠಪಕ್ಷ, ನಿಮ್ಮ ಮಕ್ಕಳು, ಮೊಮ್ಮಕ್ಕಳು ಈ ಎರಡು ತಲೆಮಾರುಗಳು ತಮ್ಮ ಜೀವನವಿಡೀ ಭಾರಿ ಕ್ಷೋಭೆಯನ್ನು ಎದುರಿಸಿ ಜೀವಿಸಬೇಕಾದ ವಿಷಮ ಪರಿಸ್ಥಿತಿಯನ್ನು ನೀವು ಸಹಿಸಿಕೊಳ್ಳಲು ತಯಾರಿರಬೇಕು. ಜೊತೆಗೆ, ಶಾಂತ, ಸುಭದ್ರ, ವಿಕಸಿತ ಭಾರತವನ್ನು ಹೊಂದಲು ಆ ಎರಡು ತಲೆಮಾರುಗಳ ನಂತರದವರೆಗೂ ಕಾಯಬೇಕು.

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಪಲ್ಲಕ್ಕಿ ಹೊತ್ತರೂ ಚಟ ಬಿಡರು!

ಪಾನ್‌ಮಸಾಲ ತಿಂದು ಎಲ್ಲೆಂದರಲ್ಲಿ ಉಗಿಯುವುದಕ್ಕೆ ಕಡಿವಾಣ ಹಾಕಬೇಕೆಂದು ಮನೋಹರ್ ಉಪ್ಪಳ ಕಳಕಳಿ ವ್ಯಕ್ತಪಡಿಸಿದ್ದಾರೆ (ಪ್ರ.ವಾ., ಏ. 25). ಕೆಲವರು ಈ ಬಗ್ಗೆ ಏನಾದರೂ ತಿಳಿಹೇಳಿದರೆ ತಿದ್ದಿಕೊಳ್ಳುತ್ತಾರೆ. ಇನ್ನು ಕೆಲವರು ಜಗಳಕ್ಕೆ ಬರುವುದುಂಟು. ಈಗಂತೂ ಈ ಚಟವು ಊಟ, ಉಪಾಹಾರದಷ್ಟೇ ಮಾಮೂಲಿಯಾಗಿದೆ. ಹಾನಿಕಾರಕ ಎಂದು ಗೊತ್ತಿದ್ದರೂ ಇದಕ್ಕೆ ಅಂಟಿಕೊಂಡಿರುತ್ತಾರೆ.

ಮೊನ್ನೆ ಒಂದೂರಿನ ಜಾತ್ರಾ ಮಹೋತ್ಸವದಲ್ಲಿ ದೇವರ ಪಲ್ಲಕ್ಕಿ ಹೊತ್ತ ಹತ್ತಾರು ಯುವಕರಿಗೆ ತಾವು ದೇವರ ಮೂರ್ತಿಯನ್ನು ಹೆಗಲ ಮೇಲೆ ಹೊತ್ತುಕೊಂಡಿದ್ದೇವೆ ಎಂಬ ಭಕ್ತಿಭಾವ ಅಥವಾ ನಂಬಿಕೆ ಇದ್ದಂತೆ ಕಾಣಲಿಲ್ಲ. ಪಾನ್‌ಮಸಾಲ ಸ್ಯಾಷೆಗಳನ್ನು ಒಬ್ಬರಿಂದ ಒಬ್ಬರು ತೆಗೆದುಕೊಂಡು ಅದನ್ನು ಮಿಶ್ರ ಮಾಡಿಕೊಂಡು ಬಾಯಿಗೆ ಸುರಿದುಕೊಳ್ಳುತ್ತಿದ್ದರು. ಸಾವಿರಾರು ಜನ ಸೇರಿದ್ದ, ಓಡಾಡುವ ರಸ್ತೆಯ ಮಧ್ಯದಲ್ಲೇ ಉಗಿಯುತ್ತಿದ್ದರು. ಅಲ್ಲಿದ್ದವರು ಯಾರೂ ಏನನ್ನೂ ಹೇಳುವ ಉಸಾಬರಿಗೆ ಹೋಗಲಿಲ್ಲ. ಇದನ್ನು ನೋಡಿ ಬೇಸರವಾಯಿತು ಎಂದು ಹೇಳಬಹುದಷ್ಟೇ. ಬದಲಾವಣೆ ಎಲ್ಲಿಂದ ಆರಂಭವಾಗಬೇಕು? ಅದು ದೇವರ ಕಾರ್ಯ ನಡೆಯುವ ಸ್ಥಳದಲ್ಲಿಯೂ ಆಗಲಿಲ್ಲವೆಂದರೆ...!

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಸಹನೆಯಿಂದ ನಡೆಯಲಿ ಮೌಲ್ಯಮಾಪನ

ಈ ಬಾರಿಯ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಮರುಮೌಲ್ಯಮಾಪನದ ನಂತರ ಕೆಲವು ಬದಲಾವಣೆಗಳಾಗಿವೆ. ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ದೀಕ್ಷಾ ಅವರಿಗೆ ರಸಾಯನಶಾಸ್ತ್ರ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳನ್ನು ಕೊಡುವುದರ ಬದಲಾಗಿ 99 ಅಂಕಗಳನ್ನು ಕೊಡಲಾಗಿತ್ತು. ಅವರು ಆತ್ಮವಿಶ್ವಾಸದೊಂದಿಗೆ ತಮ್ಮ ಉತ್ತರಪತ್ರಿಕೆಯನ್ನು ಮರುಮೌಲ್ಯಮಾಪನ ಮಾಡಿಸಿ 600ಕ್ಕೆ 600 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯೊಬ್ಬರು ತೃತೀಯ ಸ್ಥಾನದಿಂದ ದ್ವಿತೀಯ ಸ್ಥಾನಕ್ಕೆ ಬಂದಿದ್ದಾರೆ. ಈ ರೀತಿ ಮೌಲ್ಯಮಾಪನದಲ್ಲಿ ಆಗುವಂತಹ ಲೋಪಗಳು ವಿದ್ಯಾರ್ಥಿಗಳಲ್ಲಿ ನಿರಾಸೆ ಮೂಡಿಸುತ್ತವೆ. ಪೋಷಕರಲ್ಲಿಯೂ ಗೊಂದಲಗಳು ಉಂಟಾಗುತ್ತವೆ. ಮೌಲ್ಯಮಾಪನ ವ್ಯವಸ್ಥೆಯ ಬಗ್ಗೆ ನಂಬಿಕೆ ಇಲ್ಲದಂತೆ ಆಗುತ್ತದೆ.

ಫಲಿತಾಂಶ ಪ್ರಕಟಿಸಲು ಎರಡು ದಿನ ತಡವಾದರೂ ಪರವಾಗಿಲ್ಲ, ಮೌಲ್ಯಮಾಪಕರು ಬಹಳ ಸಹನೆ, ತಾಳ್ಮೆಯಿಂದ ಮೌಲ್ಯಮಾಪನ ಮಾಡಬೇಕಾಗುತ್ತದೆ. ಯಾವುದೇ ಒಂದು ಉತ್ತರಪತ್ರಿಕೆ 95ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಲ್ಲಿ ಅದನ್ನು ಮತ್ತೆ ಎರಡು ಹಂತಗಳಲ್ಲಿ ಮರುಮೌಲ್ಯಮಾಪನ ಮಾಡಲಾಗುತ್ತದೆ, ಮೌಲ್ಯಮಾಪಕರು ಮೈಯೆಲ್ಲ ಕಣ್ಣಾಗಿರಿಸಿಕೊಂಡು ಉತ್ತರಪತ್ರಿಕೆಗಳನ್ನು ಗಮನಿಸುತ್ತಾರೆ ಎನ್ನುವಂತಹ ಸಂಪ್ರದಾಯ ಇದೆ. ಆದರೆ ಈ ಬಾರಿ ಆಗಿರುವ ಬೆಳವಣಿಗೆಗಳು ಮೌಲ್ಯಮಾಪನ ವ್ಯವಸ್ಥೆಯ ಬಗ್ಗೆ ಇರುವ ನಂಬಿಕೆ, ವಿಶ್ವಾಸವನ್ನು ಅಲುಗಾಡಿಸುವಂತೆ ಇವೆ.

ಕೆ.ಎನ್.ರಂಗನಾಥ್, ಉಜಿರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎನ್‌ಸಿಇಆರ್‌ಟಿ ಮತ್ತೆ ‘ಪಠ್ಯ’ ವಿವಾದ

ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) 7ನೇ ತರಗತಿಯ ಸಮಾಜ ವಿಜ್ಞಾನದ ಪಠ್ಯಪುಸ್ತಕದಲ್ಲಿ ಮಾಡಿರುವ ಪರಿಷ್ಕರಣೆ ವಿವಾದಕ್ಕೆ ಗುರಿಯಾಗಿದೆ. ದೆಹಲಿ ಸುಲ್ತಾನರು, ಮೊಘಲರಿಗೆ ಸಂಬಂಧಿಸಿದ ವಿವರಗಳನ್ನು ಕೈಬಿಡಲಾಗಿದೆ. ಆ ಜಾಗದಲ್ಲಿ ಮಗದ, ಮೌರ್ಯರಂಥ ಭಾರತದ ಪ್ರಾಚೀನ ರಾಜಮನೆತನಗಳ ಕುರಿತ ಪಾಠವನ್ನು ಸೇರಿಸಲಾಗಿದೆ. ಕುಂಭಮೇಳ, ಜ್ಯೋತಿರ್ಲಿಂಗಗಳ ಮಾಹಿತಿಗಳನ್ನು ಸೇರಿಸಲಾಗಿದೆ. ಹಿಂದೆಯೂ ಪಠ್ಯ ಪರಿಷ್ಕರಣೆ ವಿವಾದದ ಸ್ವರೂಪ ಪಡೆದುಕೊಂಡಿತ್ತು. ಬಿಜೆಪಿ ಸರ್ಕಾರವು ಶಿಕ್ಷಣವನ್ನು ‘ಕೇಸರೀಕರಣ’ ಮಾಡುತ್ತಿದೆ ಎನ್ನುವ ಆರೋಪ ಕೇಳಿಬಂದಿತ್ತು. ಈಗಿನ ಪಠ್ಯ ಪರಿಷ್ಕರಣೆ ಕೂಡ ಅದೇ ಹಾದಿಯಲ್ಲಿ ಸಾಗಿದೆ



ಪ್ರಜಾವಾಣಿ ವಾರ್ತೆ

ದೇಶದ ಶೈಕ್ಷಣಿಕ ವ್ಯವಸ್ಥೆಗೆ ಅಗತ್ಯವಾದ ಪಠ್ಯಗಳನ್ನು ರೂಪಿಸುವುದು, ಸಂಶೋಧನೆಗಳನ್ನು ಕೈಗೊಳ್ಳುವುದು ಎನ್‌ಸಿಇಆರ್‌ಟಿಯ ಮುಖ್ಯ ಕೆಲಸ. ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಜಾರಿಯಾದ ನಂತರ ಅದಕ್ಕೆ ತಕ್ಕಂತೆ ಶಿಕ್ಷಣ ಚೌಕಟ್ಟು ರೂಪಿಸಲಾಗಿತ್ತು. ಅದರ ಶಿಫಾರಸು, ಸಲಹೆಗಳಿಗನುಗುಣವಾಗಿ ಪಠ್ಯಗಳಲ್ಲಿ ಬದಲಾವಣೆ ಮಾಡಲಾಗುತ್ತಿದೆ. ಕಳೆದ ವರ್ಷ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 3 ಮತ್ತು 6ನೇ ತರಗತಿಯ ಪಠ್ಯಪುಸ್ತಕಗಳನ್ನು ಎನ್‌ಸಿಇಆರ್‌ಟಿ ಬದಲಾಯಿಸಿತ್ತು. ಈ ವರ್ಷ 4 ಮತ್ತು 7ನೇ ತರಗತಿಯ ಪಠ್ಯಪುಸ್ತಕಗಳನ್ನು ಬದಲಾಯಿಸುವ ಪ್ರಕ್ರಿಯೆ ಆರಂಭಿಸಿದೆ. ಈಗಾಗಲೇ 7ನೇ ಸಮಾಜ ವಿಜ್ಞಾನ ಹೊಸ ಪಠ್ಯಪುಸ್ತಕದ ಮೊದಲ ಭಾಗ ಬಿಡುಗಡೆಯಾಗಿದ್ದು, ಎರಡನೇ ಭಾಗ ಮುಂದಿನ ದಿನಗಳಲ್ಲಿ ಬಿಡುಗಡೆಯಾಗಲಿದೆ.

ಸಮಾಜ ವಿಜ್ಞಾನದ ಮೊದಲ ಭಾಗದಲ್ಲಿ ದೆಹಲಿ ಸುಲ್ತಾನರು, ಮೊಘಲರಿಗೆ ಸಂಬಂಧಿಸಿದ ಬಗೆಗಿನ ಅಧ್ಯಾಯಗಳನ್ನು ಕೈಬಿಟ್ಟು, ಕುಂಭಮೇಳ, ಜ್ಯೋತಿರ್ಲಿಂಗ, ಬೇಟಿ ಬಚಾವೊ, ಬೇಟಿ ಪಢಾವೊ ಮುಂತಾದ ಹೊಸ ಅಧ್ಯಾಯ/ಮಾಹಿತಿ ಸೇರಿಸಿರುವುದು ಚರ್ಚೆಗೆ ಗ್ರಾಸವಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಈ ಹಿಂದೆಯೂ ಹಲವು ಬಾರಿ ಪಠ್ಯಪುಸ್ತಕ ಬದಲಾವಣೆ ಮಾಡಿದ್ದು, ಕೇಸರೀಕರಣದ ಆರೋಪಗಳಿಗೆ ಗುರಿಯಾಗಿದೆ.

2017ರಲ್ಲಿ ‘ಭಾರತೀಯ ರಾಜಕಾರಣದಲ್ಲಿ ಇತ್ತೀಚಿನ ಬೆಳವಣಿಗೆಗಳು’ ಎನ್ನುವ (12ನೇ ತರಗತಿಯ ರಾಜ್ಯಶಾಸ್ತ್ರ) ಪುಸ್ತಕದಲ್ಲಿ ‘ಗುಜರಾತ್‌ನ ಮುಸ್ಲಿಂ ವಿರೋಧಿ ಗಲಭೆಗಳು’ ಎನ್ನುವುದನ್ನು ‘ಗುಜರಾತ್ ಗಲಭೆಗಳು’ ಎಂದು ಬದಲಿಸಲಾಗಿತ್ತು. ಇನ್ನೊಂದು ಪಠ್ಯದಲ್ಲಿ, ಮೊಘಲರ ಬಗೆಗಿನ ಅಧ್ಯಾಯವನ್ನು ಸಂಕ್ಷಿಪ್ತಗೊಳಿಸಲಾಗಿತ್ತು. ಹಿಂದೂ ರಾಷ್ಟ್ರೀಯವಾದಿಗಳು ಮಹಾತ್ಮ ಗಾಂಧಿ ಅವರನ್ನು ವಿರೋಧಿಸುತ್ತಿದ್ದರು ಎನ್ನುವ ಅಂಶವನ್ನೂ ತೆಗೆದುಹಾಕಲಾಗಿತ್ತು. ಜತೆಗೆ, ಬಿಜೆಪಿಯ ಗುಪ್ತ ಕಾರ್ಯಸೂಚಿಯಂತೆ ಹಿಂದೂ ರಾಷ್ಟ್ರೀಯವಾದಿ ಸಾವರ್ಕರ್ ಅವರ ಬಗ್ಗೆ ಪಾಠ ಅಳವಡಿಸಲಾಗಿದೆ, ಗಾಂಧಿ ಹಂತಕ ನಾಥೂರಾಮ ಗೋಡ್ಸೆ ಬಗ್ಗೆ ‘ಮೃದು’ ಧೋರಣೆ ತಳೆಯಲಾಗಿದೆ ಎನ್ನುವ ಟೀಕೆಗಳು ವ್ಯಕ್ತವಾಗಿದ್ದವು. ಪಠ್ಯಕ್ರಮ ಬದಲಾವಣೆಯ ಹಿಂದೆ ಬಿಜೆಪಿ ಸರ್ಕಾರದ ಕೈವಾಡ ಇದ್ದು, ಶಾಲಾ ಪಠ್ಯಗಳ ಮೂಲಕ ಹಿಂದುತ್ವವನ್ನು ಹೇರುವ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂದು ವಿಪಕ್ಷಗಳು ಆರೋಪಿಸಿದ್ದವು.

2014ರಲ್ಲಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಹಲವು ಬಾರಿ ಪಠ್ಯ ಪರಿಷ್ಕರಣೆ ಮಾಡಲಾಗಿದೆ. ಮೊದಲ ಬಾರಿಗೆ 2017ರಲ್ಲಿ 182 ಪಠ್ಯಪುಸ್ತಕಗಳಲ್ಲಿ 1,334 ಬದಲಾವಣೆ, ತಿದ್ದುಪಡಿ, ದತ್ತಾಂಶ ಪರಿಷ್ಕರಣೆ ಮಾಡಲಾಯಿತು. ಎರಡನೇ ಬಾರಿಗೆ 2019ರಲ್ಲಿ, ಮತ್ತೆ 2021, 2023, 2024ರಲ್ಲಿಯೂ ಪರಿಷ್ಕರಣೆ ಮಾಡಲಾಗಿದೆ. ‘ತರ್ಕಬದ್ಧವಾಗಿ ಇತಿಹಾಸವನ್ನು ಮರುರೂಪಿಸುವ ಸಲುವಾಗಿ ಬದಲಾವಣೆ ಮಾಡಲಾಗಿದೆ’ ಎಂದು ಎನ್‌ಸಿಇಆರ್‌ಟಿ ಪ್ರತಿಪಾದಿಸಿತ್ತು. ಆದರೆ, ಕೆಲವು ವಿಷಯಗಳಲ್ಲಿ ಮಾಡಲಾದ ಬದಲಾವಣೆಗಳು ಅತಾರ್ಕಿಕ, ಅವೈಜ್ಞಾನಿಕವಾಗಿವೆ ಎಂದು ಟೀಕಿಸಲಾಗಿತ್ತು.

‘ಯುರೋಪ್‌ಗಿಂತ ಹಲವು ಶತಮಾನಗಳ ಮೊದಲು ಭಾರತ ತನ್ನದೇ ಆದ ಅವಿಭಾಜ್ಯ ರೇಖಾಂಶವನ್ನು ಹೊಂದಿತ್ತು. ಅದನ್ನು ಮಧ್ಯರೇಖೆ ಎಂದು ಕರೆಯಲಾಗುತ್ತಿತ್ತು. ಅದು ಉಜ್ಜಯಿನಿ ನಗರದ ಮೂಲಕ ಹಾದುಹೋಗುತ್ತಿತ್ತು. ಉಜ್ಜಯಿನಿ ನಗರವು ಹಲವು ಶತಮಾನಗಳಿಂದಲೂ ಖಗೋಳ ವಿಜ್ಞಾನದ ಪ್ರಸಿದ್ಧ ಕ್ಷೇತ್ರವಾಗಿದೆ’ ಎಂದು 6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಸೇರಿಸಿದ್ದರ ಬಗ್ಗೆಯೂ ಟೀಕೆಗಳು ವ್ಯಕ್ತವಾಗಿದ್ದವು.

ಶೈಕ್ಷಣಿಕ ಕ್ಷೇತ್ರದ ತಜ್ಞರು, ವಿಷಯ ಪರಿಣತರಿಂದಲೂ ಬದಲಾದ ಪಠ್ಯಗಳ ಬಗ್ಗೆ ಆಕ್ಷೇಪ, ವಿರೋಧ ವ್ಯಕ್ತವಾಗಿತ್ತು. ಪಠ್ಯಪುಸ್ತಕ ಸಮಿತಿಯಿಂದ ತಮ್ಮ ಹೆಸರನ್ನು ಕೈಬಿಡುವಂತೆ ದೇಶದ ವಿವಿಧ ವಿಶ್ವವಿದ್ಯಾಲಯಗಳ 33 ಪ್ರಾಧ್ಯಾಪಕರು, ಶಿಕ್ಷಣ ತಜ್ಞರು ಪತ್ರ ಬರೆದಿದ್ದರು. ಈಗ ಎನ್‌ಸಿಇಆರ್‌ಟಿ ಮತ್ತೆ ಪಠ್ಯಪುಸ್ತಕ ಬದಲಾವಣೆ ಮಾಡಿದ್ದು, ಬಿಜೆಪಿ ಸರ್ಕಾರವು ಮತ್ತೆ ಕೇಸರೀಕರಣ ಪ್ರಕ್ರಿಯೆಯನ್ನು ಮುಂದುವರಿಸುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.



- Prayagraj hosts the **Kumbh Mela** every six years. Prayag is located at the confluence of three rivers—Ganga, Yamuna and the invisible Sarasvati. A few years ago, UNESCO listed the Kumbh Mela as an ‘intangible heritage of the world’.
- An estimated 660 million people participated in the Kumbh Mela of 2025. What proportion of the population of India is this?

Kumbh Mela

The *Kumbh Mela* originates in the legend of *amrita manthana*. The *devas* and *asuras* (i.e., more or less, gods and demons), traditional enemies, for once joined forces in churning the cosmic ocean to extract amrita, the divine nectar that would give them immortality. To prevent the asuras from getting the *amrita*, Vishnu, in the form of Mohini, a beautiful lady, snatched the pitcher or kumbha which contained the *amrita*. In the process, a few drops fell over four places—Haridwar, Prayagraj, Nashik, and Ujjain. These are the places where the Kumbh Mela has been held, and a dip in the rivers there during a prescribed period is considered most auspicious.

ಏಳನೇ ತರಗತಿ ಸಮಾಜವಿಜ್ಞಾನ ಪಠ್ಯಪುಸ್ತಕದಲ್ಲಿ ಕುಂಭಮೇಳದ ಬಗ್ಗೆ ವಿವರಿಸಲಾಗಿದೆ

ಹಿಂದಿನ ಪಠ್ಯ ಪರಿಷ್ಕರಣೆಯ ವಿವಾದಿತ ಅಂಶಗಳು

- ಅಯೋಧ್ಯೆ ವಿವಾದ, ಬಾಬರಿ ಮಸೀದಿ ನೆಲಸಮ, ಹಿಂದುತ್ವದ ರಾಜಕಾರಣದ ಬಗೆಗಿನ ಮಾಹಿತಿ ತಿದ್ದುಪಡಿ ಮಾಡಲಾಗಿತ್ತು
- ‘ಹರಪ್ಪ ನಾಗರಿಕತೆಯನ್ನು ‘ಸಿಂಧು ಸರಸ್ವತಿ’ ನಾಗರಿಕತೆ ಎಂದೂ ಕರೆಯಲಾಗಿದೆ’ ಎಂದು ಉಲ್ಲೇಖಿಸಲಾಗಿತ್ತು
- ‘ಗಾಂಧಿ ಹತ್ಯೆಯ ನಂತರ ಆರ್‌ಎಸ್‌ಎಸ್ ಅನ್ನು ನಿಷೇಧಿಸಲಾಗಿತ್ತು’ ಎನ್ನುವ ಮಾಹಿತಿಯನ್ನು ಕೈಬಿಡಲಾಗಿತ್ತು
- ನಾಥೂರಾಮ್ ಗೋಡ್ಸೆ ಕುರಿತ ಉಲ್ಲೇಖದಲ್ಲಿ ‘ಬ್ರಾಹ್ಮಣ’ ಎನ್ನುವ ಮಾಹಿತಿ ಕೈಬಿಡಲಾಗಿತ್ತು. ಗೋಡ್ಸೆ ಹಿಂದೂ ತೀವ್ರಗಾಮಿ ಪತ್ರಿಕೆಯ ಸಂಪಾದಕ ಎನ್ನುವ ಅಂಶವನ್ನು ತೆಗೆಯಲಾಗಿತ್ತು
- ಹಿಂದಿನ ಪಠ್ಯಪುಸ್ತಕಗಳಲ್ಲಿದ್ದ ಜಾತಿ ವ್ಯವಸ್ಥೆ, ಪುರೋಹಿತರು, ಶೂದ್ರರು, ಅಸ್ಪೃಶ್ಯತೆ ಕುರಿತ ಅಂಶಗಳನ್ನು ಕೈಬಿಡಲಾಗಿತ್ತು

30,822 ದೇಶದಲ್ಲಿ ಸಿಬಿಎಸ್‌ಇ ಪಠ್ಯಕ್ರಮವನ್ನು ಅನುಸರಿಸುವ ಶಾಲೆಗಳು

ಸಿಬಿಎಸ್‌ಇ ವ್ಯಾಪ್ತಿಯಲ್ಲಿ ಬರುವ ಶಾಲೆಗಳು ಹಾಗೂ ಕೆಲವು ರಾಜ್ಯಗಳಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುವ ಶಾಲಾ ಕಾಲೇಜುಗಳು ಕೂಡ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ಬಳಸಿಕೊಂಡು ಬೋಧನೆ ಮಾಡುತ್ತವೆ

240 ಜಗತ್ತಿನ 28 ದೇಶಗಳಲ್ಲಿರುವ ಸಿಬಿಎಸ್‌ಇ ಪಠ್ಯಕ್ರಮದ ಶಾಲೆಗಳು

ಆಧಾರ: ಪಿಟಿಐ, ಎನ್‌ಸಿಇಆರ್‌ಟಿ ವೆಬ್‌ಸೈಟ್, ಕಮ್ಯುನಲೈಸೇಷನ್ ಆಫ್ ಎಜುಕೇಷನ್: ದಿ ಹಿಸ್ಟರಿ ಟೆಕ್ಸ್ಟ್‌ಬುಕ್ ಕಾಂಟ್ರವರ್ಸಿ ಆ್ಯನ್ ಓವರ್‌ವೀವ್, ಮಾಧ್ಯಮ ವರದಿಗಳು

ಪರಿಷ್ಕರಣೆ ಮತ್ತು ವಿವಾದ

ಕೇಂದ್ರ ಸರ್ಕಾರ 1961ರಲ್ಲಿ ಎನ್‌ಸಿಇಆರ್‌ಟಿಯನ್ನು ಸ್ಥಾಪಿಸಿತ್ತು. ಆಡಳಿತದಲ್ಲಿರುವ ಪಕ್ಷಗಳು ಎನ್‌ಸಿಇಆರ್‌ಟಿ ಮೂಲಕ ಶಿಕ್ಷಣದಲ್ಲಿ ತಮ್ಮ ರಾಜಕೀಯ ಕಾರ್ಯಸೂಚಿಯನ್ನು ಜಾರಿಗೊಳಿಸಲು ಯತ್ನಿಸುತ್ತಿವೆ ಎಂಬ ಆರೋಪ ಮೊದಲಿನಿಂದಲೂ ಇದೆ. ಎನ್‌ಸಿಇಆರ್‌ಟಿ ಪಠ್ಯಪರಿಷ್ಕರಣೆ ಮಾಡಿದ ಬಹುತೇಕ ಸಂದರ್ಭಗಳಲ್ಲಿ ವಿವಾದ ಉಂಟಾಗಿದೆ. 1977–79ರ ಅವಧಿಯಲ್ಲಿ ಜನತಾ ಸರ್ಕಾರ ಇದ್ದಾಗ, 2002–04ರಲ್ಲಿ ಎನ್‌ಡಿಎ ಸರ್ಕಾರದ ಅವಧಿಯಲ್ಲಿ, ನಂತರ ಅಧಿಕಾರಕ್ಕೆ ಬಂದ ಯುಪಿಎ ಅವಧಿಯಲ್ಲೂ ಪಠ್ಯಪರಿಷ್ಕರಣೆ ಪ್ರಕ್ರಿಯೆ ವಿವಾದ ಹುಟ್ಟುಹಾಕಿದ್ದವು.

2014ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಐದು ಬಾರಿ ಪರಿಷ್ಕರಣೆ ನಡೆದಿದೆ. 12, 11, 10, 8ನೇ 7ನೇ ತರಗತಿ ಸೇರಿದಂತೆ ಹಲವು ತರಗತಿಗಳ ಪಠ್ಯಪುಸ್ತಕಗಳನ್ನು ಪರಿಷ್ಕರಣೆಗೆ ಒಳಪಡಿಸಿದೆ. ಪ್ರತಿ ಬಾರಿ ಪಠ್ಯ ತಿದ್ದುಪಡಿ ಮಾಡುವಾಗಲೂ ವಿವಾದ ಉಂಟಾಗಿದೆ. ವಿರೋಧ ಪಕ್ಷಗಳ ಮುಖಂಡರು ಹಾಗೂ ಶಿಕ್ಷಣ, ಇತಿಹಾಸ ತಜ್ಞರು ಬಿಜೆಪಿಯು ದೇಶದ ಇತಿಹಾಸವನ್ನು ತಿರುಚಿ ಶಿಕ್ಷಣವನ್ನು ‘ಕೇಸರೀಕರಣ’ ಮಾಡುತ್ತಿದೆ ಎಂದು ಆರೋಪಿಸುತ್ತಲೇ ಬಂದಿದ್ದಾರೆ. ಆದರೆ, ಬಿಜೆಪಿ ಮತ್ತು ಎನ್‌ಸಿಇಆರ್‌ಟಿಯು ಪರಿಷ್ಕರಣೆಯನ್ನು ಸಮರ್ಥಿಸುತ್ತಾ ಬಂದಿವೆ.

- 1977-79ರ ಅವಧಿಯಲ್ಲಿ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಪಕ್ಷದ ಸರ್ಕಾರ ಇದ್ದಾಗ ಜನಸಂಘವು ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿತ್ತು. ‘ಮಧ್ಯಕಾಲೀನ ಭಾರತ’ ಮತ್ತು ‘ಆಧುನಿಕ ಭಾರತ’ ಎಂಬ ಎರಡು ಪುಸ್ತಕಗಳನ್ನು ವಾಪಸ್ ಪಡೆಯುವಂತೆ ಪ್ರಧಾನಿಯವರಿಗೆ ಮನವಿಯನ್ನೂ ಮಾಡಿತ್ತು. ಸಿಬಿಎಸ್‌ಇ ಪಠ್ಯದಲ್ಲಿ ಸೇರ್ಪಡೆಗೊಳಿಸಲಾಗಿದ್ದ ಆರ್.ಎಸ್.ಶರ್ಮಾ ಅವರ ‘ಪ್ರಾಚೀನ ಭಾರತ’ ಪುಸ್ತಕಕ್ಕೂ ಜನಸಂಘ ತಕರಾರು ತೆಗೆದಿತ್ತು. ಪುಸ್ತಕದಲ್ಲಿ ಭಾರತ ವಿರೋಧಿ ಅಂಶಗಳಿವೆ ಎಂದು ಪ್ರತಿಪಾದಿಸಿತ್ತು. ಅದರಲ್ಲಿ ಉಲ್ಲೇಖಿಸಲಾಗಿದ್ದ ‘ಮುಘಲ್ ಆಡಳಿತ’ ಮತ್ತು ‘ಭಾರತದಲ್ಲಿ ಇಸ್ಲಾಂ’ ಎಂಬ ವಿಷಯಗಳ ಬಗ್ಗೆ ಆರ್‌ಎಸ್‌ಎಸ್ ಆಕ್ಷೇಪ ಎತ್ತಿತ್ತು. 1978ರಲ್ಲಿ ಸಿಬಿಎಸ್‌ಇ ಪಠ್ಯದಿಂದ ‘ಪ್ರಾಚೀನ ಭಾರತ’ ಪಠ್ಯವನ್ನು ಸರ್ಕಾರ ತೆಗೆದು ಹಾಕಿತ್ತು
- 2022ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಹೊಸ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಅಡಿಯಲ್ಲಿ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಲ್ಲಿ ಬದಲಾವಣೆ ಮಾಡಲು ಮುಂದಾಗಿತ್ತು. ಭಾರತೀಯ ಇತಿಹಾಸ, ಪರಂಪರೆಗೆ ಸಂಬಂಧಿಸಿದ ವಿವರಗಳನ್ನು ತಿದ್ದುಪಡಿ ಮಾಡಿ ಶಿಕ್ಷಣವನ್ನು ಕೇಸರೀಕರಣಗೊಳಿಸಲು ಬಿಜೆಪಿ ಯತ್ನಿಸುತ್ತಿದೆ ಎಂಬ ಆರೋಪವನ್ನು ಪ್ರಗತಿಪರ ಶಿಕ್ಷಣ ತಜ್ಞರು, ವಿರೋಧ ಪಕ್ಷಗಳ ಮುಖಂಡರು ಮಾಡಿದ್ದರು. 2004ರಲ್ಲಿ ಎನ್‌ಡಿಎ ಸರ್ಕಾರ ಸೋತು, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಪಠ್ಯಪುಸ್ತಕಗಳನ್ನು ಪರಿಷ್ಕರಣೆಗೆ ಒಳಪಡಿಸುವ ಘೋಷಣೆ ಮಾಡಿತ್ತು. ಮರುವರ್ಷ ಹೊಸ ಪಠ್ಯಪುಸ್ತಕಗಳನ್ನು ಪ್ರಕಟಿಸಿದ್ದ ಎನ್‌ಸಿಇಆರ್‌ಟಿ 2002ಕ್ಕೂ ಮೊದಲಿದ್ದ ಅಂಶಗಳನ್ನು ಪಠ್ಯದಲ್ಲಿ ಸೇರ್ಪಡೆಗೊಳಿಸಿತ್ತು
- 2006ರಲ್ಲಿ 12ನೇ ತರಗತಿಯ ಇತಿಹಾಸ ಪಠ್ಯಪುಸ್ತಕದಲ್ಲಿ ಸಿಖ್ ಧರ್ಮಗುರು ಗುರು ಗೋವಿಂದ್ ಸಿಂಗ್ ಅವರ ಬಗ್ಗೆ ಆಕ್ಷೇಪಾರ್ಹ ಪದ ಬಳಸಲಾಗಿದೆ ಎಂದು ಸಿಖ್ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ನಂತರ ಎನ್‌ಸಿಇಆರ್‌ಟಿಯು ಆ ನಿರ್ದಿಷ್ಟ ಪ್ಯಾರಾವನ್ನು ತೆಗೆದುಹಾಕುವ ನಿರ್ಧಾರ ಕೈಗೊಂಡಿತ್ತು
- 2012ರಲ್ಲಿ ದಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾವು 11ನೇ ತರಗತಿಯ ಪಠ್ಯಪುಸ್ತಕದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ವ್ಯಂಗ್ಯಚಿತ್ರವೊಂದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಸಂಸತ್ತಿನಲ್ಲೂ ಭಾರಿ ಚರ್ಚೆ ಹುಟ್ಟುಹಾಕಿತ್ತು. ಅಂತಿಮವಾಗಿ ಶಿಕ್ಷಣ ಸಚಿವರಾಗಿದ್ದ ಕಪಿಲ್ ಸಿಬಲ್ ಅವರು ಕ್ಷಮೆ ಯಾಚಿಸಿ, ಪಠ್ಯಪುಸ್ತಕದಿಂದ ಆ ವ್ಯಂಗ್ಯಚಿತ್ರವನ್ನು ತೆಗೆಯುವ ಘೋಷಣೆ ಮಾಡಿದ್ದರು. ಆಗ ಎನ್‌ಸಿಆರ್‌ಟಿಯ ಮುಖ್ಯ ಸಲಹೆಗಾರರಾಗಿದ್ದ ಯೋಗೇಂದ್ರ ಯಾದವ್ ಮತ್ತು ಸುಹಾಸ್ ಪಲ್ಶೀಕರ್ ಅವರು ರಾಜೀನಾಮೆಯನ್ನೂ ನೀಡಿದ್ದರು.

ಹಿಂದಿ ಹೆಸರಿಗೆ ವಿರೋಧ

ಎನ್‌ಸಿಇಆರ್‌ಟಿಯು ಇಂಗ್ಲಿಷ್ ಪಠ್ಯಪುಸ್ತಕಗಳಿಗೆ ಹಿಂದಿ ಹೆಸರನ್ನು ಇಟ್ಟಿದ್ದು ಕೂಡ ವಿವಾದಕ್ಕೀಡಾಗಿದೆ. ಇಂಗ್ಲಿಷ್ ಮಾಧ್ಯಮದ ಪಠ್ಯಪುಸ್ತಕಗಳಿಗೆ ‘ಸಂತೂರ್’, ‘ಮೃದಂಗಂ’ ಎಂದು ಹೆಸರಿಟ್ಟದ್ದನ್ನು ಕೇರಳ ಮತ್ತು ತಮಿಳುನಾಡು ಸರ್ಕಾರಗಳು ಆಕ್ಷೇಪಿಸಿವೆ.

ರಾಜ್ಯದಲ್ಲೂ ಸದ್ದು ಮಾಡಿದ ಪರಿಷ್ಕರಣೆ

ಪಠ್ಯಪುಸ್ತಕ ವಿವಾದ ದೇಶದ ಮಟ್ಟಕ್ಕೆ ಸೀಮಿತವಾಗಿಲ್ಲ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಇದ್ದಾಗ 2022–23ರಲ್ಲಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿದ್ದು ವಿವಾದಕ್ಕೆ ಒಳಗಾಗಿತ್ತು. ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪರಿಶೀಲನಾ ಸಮಿತಿಯು ಪಠ್ಯಪುಸ್ತಕಗಳಲ್ಲಿ ನಾರಾಯಣ ಗುರು, ಬಸವಣ್ಣ, ಪೆರಿಯಾರ್ ಅವರಂತಹ ಸಮಾಜ ಸುಧಾರಕರ ಕುರಿತಾಗಿ ಇದ್ದ ವಿವರಗಳನ್ನು ತೆಗೆದುಹಾಕಿತ್ತು. ಆಕ್ಷೇಪ ಬಂದ ನಂತರ ಅವುಗಳನ್ನು ಮತ್ತೆ ಸೇರ್ಪಡೆಗೊಳಿಸಲಾಗಿತ್ತು. ಅಂಬೇಡ್ಕರ್, ರಾಷ್ಟ್ರಕವಿ ಕುವೆಂಪು, ಕನಕದಾಸರು ಸೇರಿದಂತೆ ಹಲವು ಮಹನೀಯರ ಕುರಿತ ವಿವರಗಳಿಗೆ ಕತ್ತರಿ ಹಾಕಲಾಗಿತ್ತು. ಕನ್ನಡ ಭಾಷಾ ಪುಸ್ತಕಗಳಿಂದ ಮುಸ್ಲಿಂ, ದಲಿತ ಲೇಖಕರ ಪಾಠಗಳನ್ನು ತೆಗೆಯಲಾಗಿತ್ತು. 10ನೇ ತರಗತಿ ಪಠ್ಯದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಅವರ ಭಾಷಣ ಸೇರಿಸಲಾಗಿತ್ತು. 2023ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, 2022ಕ್ಕೂ ಮೊದಲಿದ್ದ ಪಠ್ಯಕ್ರಮದ ಆಧಾರದಲ್ಲಿ ಬೋಧನೆ ಮಾಡಬೇಕು ಎಂದು ಆದೇಶಿಸಿತ್ತು.

ರಾಷ್ಟ್ರೀಯ

ಷರಿಯಾ ನ್ಯಾಯಾಲಯಕ್ಕೆ ಮಾನ್ಯತೆ ಇಲ್ಲ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆದೇಶ ಪಾಲಿಸಬೇಕಾಗಿಲ್ಲ, ಬಲವಂತ ಜಾರಿಗೆ ಅವಕಾಶವೂ ಇಲ್ಲ
- ಅರ್ಜಿದಾರರಿಗೆ ಜೀವನಾಂಶ ನೀಡಲು ಸೂಚಿಸಿದ ನ್ಯಾಯಪೀಠ

ನವದೆಹಲಿ: ‘ಕಾಜಿ ನ್ಯಾಯಾಲಯ, ಕಾಜಿಯತ್ ನ್ಯಾಯಾಲಯ, ಷರಿಯಾ ನ್ಯಾಯಾಲಯ ಎಂಬ ಹೆಸರುಗಳು ಏನೇ ಇರಲಿ. ಅವುಗಳಿಗೆ ಕಾನೂನಿನ ಅಡಿಯಲ್ಲಿ ಯಾವುದೇ ಮಾನ್ಯತೆ ಇಲ್ಲ’ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಮುಸ್ಲಿಂ ಮಹಿಳೆಯೊಬ್ಬರು ಜೀವನಾಂಶ ಕೋರಿ ಸಿಆರ್‌ಪಿಸಿಯ ಸೆಕ್ಷನ್ 125ರ ಅಡಿಯಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ಮಾನ್ಯ ಮಾಡಿದೆ.

ಇಂತಹ ನ್ಯಾಯಾಲಯಗಳು ನೀಡುವ ಯಾವುದೇ ಆದೇಶವನ್ನು ಯಾರೊಬ್ಬರೂ ಕಡ್ಡಾಯವಾಗಿ ಪಾಲಿಸಬೇಕಾಗಿಲ್ಲ, ಆದೇಶಗಳನ್ನು ಬಲವಂತದ ಕ್ರಮದ ಮೂಲಕ ಜಾರಿಗೆ ತರಲು ಅವಕಾಶವೂ ಇಲ್ಲ ಎಂದು ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

‘ಅಂತಹ ನ್ಯಾಯಾಲಯಗಳು ನೀಡುವ ಆದೇಶಗಳನ್ನು ಸಂಬಂಧಪಟ್ಟವರು ಪಾಲಿಸಿದಾಗ, ಆದೇಶಗಳು ಯಾವುದೇ ಕಾನೂನಿಗೆ ವಿರುದ್ಧವಾಗಿ ಇಲ್ಲದಿದ್ದಾಗ ಮಾತ್ರ ಅಂತಹ ಆದೇಶಗಳು ಕಾನೂನಿನ ಪರೀಕ್ಷೆಯಲ್ಲಿ ಉತ್ತೀರ್ಣಗೊಳ್ಳಬಲ್ಲವು’ ಎಂದು ಪೀಠ ಹೇಳಿದೆ.

ಅಲಹಾಬಾದ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಶಾಹಜಹಾನ್ ಎನ್ನುವವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಝಾನ್ಸಿಯ ಕೌಟುಂಬಿಕ ನ್ಯಾಯಾಲಯವೊಂದು ತಮಗೆ ಜೀವನಾಂಶ ನಿರಾಕರಿಸಿದ್ದನ್ನು ಪ್ರಶ್ನಿಸಿ ಶಾಹಜಹಾನ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಶಾಹಜಹಾನ್ ಅವರ ಮಕ್ಕಳಿಗೆ ಮಾತ್ರ ಅನ್ವಯವಾಗುವಂತೆ ₹2,500 ಕೊಡಲು ಕೌಟುಂಬಿಕ ನ್ಯಾಯಾಲಯ ಸೂಚಿಸಿತ್ತು.

ಶಾಹಜಹಾನ್ ಅವರ ವಿವಾಹವು 2002ರಲ್ಲಿ ಇಸ್ಲಾಮಿಕ್ ಸಂಪ್ರದಾಯಕ್ಕೆ ಅನುಗುಣವಾಗಿ ನಡೆದಿತ್ತು. ಇದು ಪತಿ, ಪತ್ನಿಗೆ ಎರಡನೆಯ ಮದುವೆಯಾಗಿತ್ತು.

ಅರ್ಜಿದಾರ ಮಹಿಳೆಗೆ ಜೀವನಾಂಶ ನಿರಾಕರಿಸಬಾರದಿತ್ತು ಎಂದು ಪೀಠವು ಹೇಳಿದೆ. ಆಕೆಗೆ ಪ್ರತಿ ತಿಂಗಳು ₹4,000 ಜೀವನಾಂಶ ಕೊಡಬೇಕು ಎಂದು ಆದೇಶಿಸಿದೆ. ದ್ವಿಚಕ್ರ ವಾಹನ ಹಾಗೂ ₹50 ಸಾವಿರ ಕೊಡಲು ಆಗದೆ ಇದ್ದುದಕ್ಕಾಗಿ ಪತಿಯು ತನ್ನ ಮೇಲೆ ಕ್ರೌರ್ಯ ಎಸಗಿದ್ದಾನೆ ಎಂದು ಪತ್ನಿ ದೂರಿದ್ದರು.

ಲಂಚ ಪ್ರಕರಣ: ಮೂವರು ಸಿಬಿಐ ಅಧಿಕಾರಿಗಳು ಸಿಬಿಐ ಕಸ್ಟಡಿಗೆ

ನವದೆಹಲಿ(ಪಿಟಿಐ): ಮಹತ್ವದ ಬೆಳವಣಿಗೆಯೊಂದರಲ್ಲಿ ದೆಹಲಿ ಹೈಕೋರ್ಟ್, ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ಲಂಚದ ಆರೋಪ ಎದುರಿಸುತ್ತಿರುವ ಮೂವರು ಸಿಬಿಐ ಅಧಿಕಾರಿಗಳನ್ನು ಎರಡು ದಿನಗಳ ಮಟ್ಟಿಗೆ ಸಿಬಿಐ ಕಸ್ಟಡಿಗೆ ಒಪ್ಪಿಸಿದೆ.

ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು ಏ.25ರಂದು ನೀಡಿದ ಆದೇಶದಲ್ಲಿ, ‘ಇದು ಸಿಬಿಐ, ಇ.ಡಿ ಮತ್ತು ಇತರ ಇಲಾಖೆಗಳಲ್ಲಿನ ಅತಿರೇಕದ ಭ್ರಷ್ಟಾಚಾರದ ವಿಶಿಷ್ಟ ಪ್ರಕರಣಗಳಲ್ಲಿ ಒಂದಾಗಿದೆ. ಇದು ನಮ್ಮ ಕಾರ್ಯಾಂಗ ಮತ್ತು ತನಿಖಾ ಯಂತ್ರದ ಸಂಪೂರ್ಣ ವ್ಯವಸ್ಥೆಯನ್ನು ಅಲುಗಾಡಿಸುತ್ತದೆ. ಈ ಅಪರಾಧದ ತನಿಖೆ ನಡೆಯುವುದು ಪ್ರಾಥಮಿಕ ಕರ್ತವ್ಯವಾಗಿದೆ. ಅಲ್ಲದೆ ಅಪರಾಧಿಗಳನ್ನು ತಾವು ನಡೆಸಿದ ಭ್ರಷ್ಟಾಚಾರಕ್ಕೆ ಶಿಕ್ಷೆ ಎದುರಿಸುವಂತೆ ಮಾಡಬೇಕಿದೆ’ ಎಂದು ಹೇಳಿದ್ದಾರೆ.

ಮೂವರು ಆರೋಪಿ ಅಧಿಕಾರಿಗಳನ್ನು ಏಜೆನ್ಸಿ ಕಸ್ಟಡಿಗೆ ನೀಡಲು ನಿರಾಕರಿಸಿದ ವಿಚಾರಣಾ ನ್ಯಾಯಾಲಯದ ಆದೇಶದ ವಿರುದ್ಧ ಸಿಬಿಐ ಸಲ್ಲಿಸಿದ ಅರ್ಜಿಯ ಮೇರೆಗೆ ಈ ಆದೇಶ ಹೊರಬಿದ್ದಿದೆ.

ತಾನು ಭಾಗಿಯಾಗಿರುವ ಎರಡು ಪ್ರಕರಣಗಳನ್ನು ಇತ್ಯರ್ಥಪಡಿಸಲು ಆರೋಪಿ ಸಿಬಿಐ ಅಧಿಕಾರಿಗಳು ₹50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ನಂತರ ಅದನ್ನು ₹35 ಲಕ್ಷಕ್ಕೆ ಇಳಿಸಿದರು ಎಂದು ದೂರುದಾರರು ಆರೋಪಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಇ.ಡಿ ಅಧಿಕಾರಿಗಳ ಮೇಲೆ ಪ್ರಭಾವ ಬೀರಿದ್ದಕ್ಕಾಗಿ ಹಣಕಾಸು ಸಚಿವಾಲಯದ ಮತ್ತೊಬ್ಬ ಅಧಿಕಾರಿ ಗೂಗಲ್ ಪೇ ಮೂಲಕ ₹ 50,000 ಸ್ವೀಕರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಏ.10ರಂದು, ವಿಚಾರಣಾ ನ್ಯಾಯಾಲಯವು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. 10 ದಿನಗಳ ಕಸ್ಟಡಿಗೆ ನೀಡುವಂತೆ ಸಿಬಿಐ ಸಲ್ಲಿಸಿದ್ದ ಮನವಿಯನ್ನು ತಳ್ಳಿಹಾಕಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಯುದ್ಧ ಟ್ಯಾಂಕ್‌ಗಳು ಸೇರಿದಂತೆ ಸೇನಾ ವಾಹನಗಳು ಸಾಗುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯ ನಂತರ ಪಾಕಿಸ್ತಾನವು ಭಾರತದ ಗಡಿಯಲ್ಲಿ ಹೋವಿಟ್ಜರ್ ಯುದ್ಧ ಟ್ಯಾಂಕ್‌ಗಳನ್ನು ನಿಯೋಜಿಸುತ್ತಿದೆ ಎಂಬ ಪ್ರತಿಪಾದನೆಯೊಂದಿಗೆ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ತುಣಕಿನ ಒಂದು ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ, ಹಲವರು ಈ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ಮತ್ತಷ್ಟು ಹುಡುಕಾಟ ನಡೆಸಿದಾಗ ‘ಎಕ್ಸ್’ ಬಳಕೆದಾರ ಓಲ್ಗಾ ರಾಬಿನ್‌ಸನ್ ಎನ್ನುವವರು, ಈ ವಿಡಿಯೊಕ್ಕೂ ಈಗ ಭಾರತ ಮತ್ತು ಪಾಕಿಸ್ತಾನದ ನಡುವೆ ಉಂಟಾಗಿರುವ ಉದ್ವಿಗ್ನತೆಯೂ ಸಂಬಂಧವಿಲ್ಲ ಎಂದು ಹೇಳಿಕೊಂಡಿರುವ ಪೋಸ್ಟ್ ಸಿಕ್ಕಿತು. 2024ರ ಮಾರ್ಚ್‌ನಲ್ಲಿ ಈ ವಿಡಿಯೊವನ್ನು ಟಿಕ್ ಟಾಕ್‌ನಲ್ಲಿ ಪೋಸ್ಟ್ ಮಾಡಲಾಗಿತ್ತು. ಟಿಕ್‌ಟಾಕ್‌ನಲ್ಲಿದ್ದ ವಿಡಿಯೊದ ಸ್ಕ್ರೀನ್‌ಶಾಟ್ ಕೂಡ ಓಲ್ಗಾ ಅವರ ಪೋಸ್ಟ್‌ನಲ್ಲಿತ್ತು. ಟಿಕ್‌ಟಾಕ್‌ಗೆ ಭಾರತದಲ್ಲಿ ನಿರ್ಬಂಧ ವಿಧಿಸಿರುವುದರಿಂದ ಟಿಕ್‌ಟಾಕ್‌ನಲ್ಲಿ ಇದನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ. ಆದರೆ, ಟಿಕ್‌ಟಾಕ್ ಪೋಸ್ಟ್‌ನ ಇದೇ ಸ್ಕ್ರೀನ್ ಶಾಟ್‌ಗೆ ಸಂಬಂಧಿಸಿದ ಮತ್ತೊಂದು ಪೋಸ್ಟ್ ‘ಎಕ್ಸ್’ನಲ್ಲಿ ಕಂಡುಬಂತು. ಇದರಿಂದ ಈ ವಿಡಿಯೊ 2024 ಮಾರ್ಚ್‌ನಿಂದ ಇಂಟರ್‌ನೆಟ್‌ನಲ್ಲಿ ಇರುವುದು ಖಚಿತವಾಯಿತು. ಹಾಗಾಗಿ, ಇದು ಹಳೆಯ ವಿಡಿಯೊವಾಗಿದ್ದು ಭಾರತ ಮತ್ತು ಪಾಕಿಸ್ತಾನದ ನಡುವಿನ ಈಗಿನ ಸಂಘರ್ಷಕ್ಕೆ ಸಂಬಂಧಿಸಿದ್ದಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ದೇವ ಮೆಚ್ಚುವ ಹಾಗೆ ಬದುಕಬೇಕು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

183

ಮನುಷ್ಯ ಮೂರು ಸಂಗತಿಗಳನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಬದುಕಿನಲ್ಲಿ ಮೂರು ಪ್ರಮುಖ ಘಟನೆಗಳು ಜರುಗುತ್ತವೆ; ಒಂದು ಹುಟ್ಟು, ಇನ್ನೊಂದು ಸಾವು. ಈ ಹುಟ್ಟು ಮತ್ತು ಸಾವಿನ ನಡುವೆ ಬದುಕಿದೆ. ಈ ಮೂರೂ ಸಂಗತಿಗಳನ್ನು ಯಾವ ವ್ಯಕ್ತಿ ಸರಿಯಾಗಿ ಅರಿತುಕೊಳ್ಳುವುದಿಲ್ಲವೋ ಅವನ ಬದುಕು ಬಹಳ ಕಷ್ಟವಾಗುತ್ತದೆ. ಹುಟ್ಟು ನಮ್ಮ ಕೈಯಲ್ಲಿ ಇಲ್ಲ. ನಾನು ಇಂತಹವರ ಮನೆಯಲ್ಲಿಯೇ ಹುಟ್ಟಬೇಕು, ಇಂತಹ ಕುಲದಲ್ಲಿ ಹುಟ್ಟಬೇಕು, ಇದೇ ಜಾತಿಯಲ್ಲಿ, ಇದೇ ಧರ್ಮದಲ್ಲಿ ಹುಟ್ಟಬೇಕು ಎಂದು ಮೊದಲೇ ಅಂದಾಜಿಸುವಂತಿಲ್ಲ. ಆಗಲೇ ಹುಟ್ಟಾಗಿದೆ. ಅದೇ ರೀತಿ ಸಾವು ಕೂಡ ನಾವು ಬೇಡ ಎಂದರೂ ಬರುವ ಅತಿಥಿ ಅದು. ಹಾಗಾದರೆ ನಮ್ಮ ಕೈಯಲ್ಲಿ ಉಳಿದಿದ್ದು ಯಾವುದು ಎಂದರೆ, ಪವಿತ್ರ ಬದುಕು ಮಾತ್ರ. ಈ ಬದುಕನ್ನು ಹೇಗೆ ಬದುಕಬೇಕು? ಬದುಕಿನ ಸ್ವರೂಪ ಹೇಗಿದೆ ಎಂದರೆ ಅದೂ ಕೂಡ ಸಾವಿನ ಕಡೆ ಮುಖ ಮಾಡಿ ನಿಂತಿದೆ. ಪ್ರತಿ ಕ್ಷಣ ಅದು ನಾಶವಾಗುತ್ತದೆ. ಯಾವುದು ಕಣ್ಣಿಗೆ ಕಾಣುತ್ತದೋ ಅದು ಹಾಗೆ ಇರುವುದಿಲ್ಲ. ನಮಗೆ ಕಾಣುವುದು ಒಂದು. ಅದು ಇರುವುದು ಒಂದು. ‘ನಾನು ಯಾರ ಮುಲಾಜಿನಲ್ಲಿಯೂ ಇಲ್ಲ. ನನ್ನ ಕಾಲ ಮೇಲೆ ನಾನು ನಿಂತಿದ್ದೇನೆ’ ಎಂದು ಹೇಳುತ್ತಿರುತ್ತೇವೆ. ಆದರೆ ನಾವು ಕಾಯಂ ಹೀಗೆಯೇ ಇರಲು ಸಾಧ್ಯವೇನು? 50–60 ವರ್ಷ ಹೀಗೆ ಹೇಳಬಹುದು. 70ರ ನಂತರ ಕಾಲಿನ ಜೊತೆ ಒಂದು ಕೋಲು ಬೇಕಾಗುತ್ತದೆ. ಕಾಣುವುದು ಜೀವನ ಎಂದು ಅನಿಸುತ್ತದೆ. ಆದರೆ ಇರುವುದು ಸಾವು ಮಾತ್ರ.

ನಾವು ಸಾಮಾನ್ಯವಾಗಿ ಟೈಮ್ ಪಾಸ್ ಮಾಡುತ್ತಿದ್ದೇವೆ ಎಂದು ಹೇಳುತ್ತಿರುತ್ತೇವೆ. ಆದರೆ ನಿಜವಾಗಿ ನಾವು ಟೈಮ್ ಪಾಸ್ ಮಾಡೋದಿಲ್ಲ. ಟೈಮೇ ಒಂದು ದಿನ ನಮ್ಮನ್ನು ಪಾಸ್ ಮಾಡಿಬಿಡುತ್ತದೆ. ಮನುಷ್ಯ ಸುಂದರವಾದ ಬದುಕು ಕಟ್ಟಿಕೊಳ್ಳಲು ವಿವೇಕದಿಂದ ಕೆಲಸ ಮಾಡಬೇಕು. ಬದುಕು ಎಂದ ಮೇಲೆ ಕೆಲವು ಒಳ್ಳೆಯದು ಇರುತ್ತದೆ, ಕೆಟ್ಟದ್ದೂ ಇರುತ್ತದೆ. ಬದುಕು ಸಮ್ಮಿಶ್ರಣ. ಇದರ ಮಧ್ಯದಲ್ಲಿ ಬದುಕು ಕಟ್ಟಿಕೊಳ್ಳಬೇಕು. ಕೋಳಿ ಜೀವನ ನೋಡಿ. ಅದು ತಿಪ್ಪೆಗೆ ಹೋಗಿ ಕಸ ಮುಟ್ಟುವುದಿಲ್ಲ. ಕೇವಲ ಜೋಳದ ಕಾಳುಗಳನ್ನು ತಿನ್ನುತ್ತದೆ. ಇದು ನಿಜವಾದ ಬದುಕು. ಮನುಷ್ಯ ಕೂಡ ಹಾಗೆ ಜೀವನದಲ್ಲಿ ಒಳ್ಳೆಯದನ್ನು ಮಾತ್ರ ಹೆಕ್ಕಬೇಕು. ಈಗ ಬೆಂಗಳೂರನ್ನು ನೋಡಿ. ಅಲ್ಲಿ ಬೇಕಾದಷ್ಟು ಗಟಾರಗಳಿವೆ. ಆದರೂ ಬೆಂಗಳೂರನ್ನು ಉದ್ಯಾನ ನಗರಿ ಎನ್ನುತ್ತಾರೆಯೇ ವಿನಾ ಗಟಾರಗಳ ನಗರ ಎನ್ನುವುದಿಲ್ಲ. ಗಟಾರ ಇದೆ ನಿಜ. ಆದರೆ ನೋಡುವ ಕಣ್ಣು ಉದ್ಯಾನಗಳನ್ನು ನೋಡಿದೆ. ಊರ ಮುಂದೆ ಹೊಲಸು ಇದೆ. ಹೂವೂ ಇದೆ. ಹೊಲಸನ್ನು ನೋಡಬಾರದು. ಹೂವನ್ನು ನೋಡುವುದನ್ನು ರೂಢಿಸಿಕೊಳ್ಳಬೇಕು.

ನಮ್ಮ ಜೀವನ ಹೇಗಿರಬೇಕು ಎಂದರೆ ನನಗೆ ಸಂತೋಷ ಆಗೋದಲ್ಲ. ನಮ್ಮನ್ನು ನಿರ್ಮಾಣ ಮಾಡಿದ ದೇವನಿಗೂ ಸಂತೋಷವಾಗುವ ಹಾಗೆ ನಾವು ಬದುಕಬೇಕು. ಈ ಬದುಕು ದೇವನ ಕೊಡುಗೆ. ನಾನು ಮಾಡುವ ಒಳ್ಳೆಯ ಕಾರ್ಯಗಳು ನಾನು ದೇವನಿಗೆ ಕೊಡುವ ಉಡುಗೊರೆ. ಮನುಷ್ಯ ಹಾಗೆ ಬದುಕಬೇಕು. ನಿಸರ್ಗ ಸುಂದರವಾಗಿ ಬದುಕುವ ಅವಕಾಶವನ್ನು ಕೊಟ್ಟಿದೆ. ಆದರೆ ಮನುಷ್ಯನಿಗೆ ಬದುಕಲು ಬರೋದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಏಪ್ರಿಲ್ 29, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ದ್ವಿತೀಯ ಗಂ.17-32 ನಕ್ಷತ್ರ: ಕೃತ್ತಿಕ ಗಂ. 18-47 ಯೋಗ: ಸೌಭಾಗ್ಯ ಗಂ. 15-54 ಕರಣ: ಬಾಲವ ಗಂ. 7-20, ಮೇಷ ಮಾಸದ 16 ನೇ ದಿನ.

ರಾಹುಕಾಲ : ಮಧ್ಯಾಹ್ನ 03-00 – 04-30

ಸೂರ್ಯೋದಯ : 06-14 ಸೂರ್ಯಾಸ್ತ : 06-42

ಮುಸ್ಲಿಂ ದಿನಾಂಕ : 30 ಶವ್ವಾಲ್

ಅದೃಷ್ಟ ಸಂಖ್ಯೆ : 3, 11

ಮೇಷ: ವಿಮರ್ಶಿಕೊಳ್ಳಿ. ಸರಿ ತಪ್ಪುಗಳ ಅರಿವಾಗುವುದು. ಮೀನುಗಾರರು ಉದ್ಯೋಗದಲ್ಲಿ ಜಾಗರೂಕತೆ ವಹಿಸಬೇಕಾಗುತ್ತದೆ. ಭವಿಷ್ಯ ಭದ್ರವಾಗಿರುವುದರಿಂದ ಮಾನಸಿಕ ನೆಮ್ಮದಿ.

ವೃಷಭ: ಸರ್ಕಾರಿ ವ್ಯವಹಾರಗಳಿಂದ ನಿರೀಕ್ಷೆಗೂ ಮೀರಿದ ಲಾಭ ಅನುಭವಿಸುತ್ತೀರಿ. ಕೆಲಸವನ್ನು ಆಯಾ ದಿನವೇ ಮುಗಿಸುವುದನ್ನು ಕಾರ್ಯರೂಪಕ್ಕೆ ತಂದುಕೊಳ್ಳುವುದು ಉತ್ತಮ.

ಮಿಥುನ: ಕೆಲಸದಲ್ಲಿ ಹೊಣೆಗಾರಿಕೆ ನಿಮ್ಮದಾಗಲಿದೆ. ಸ್ವಸಾಮರ್ಥ್ಯವನ್ನು ಪ್ರದರ್ಶಿಸಿದಲ್ಲಿ, ಹುದ್ದೆಯನ್ನು ಪಡೆದುಕೊಳ್ಳುವಿರಿ. ಅಬಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ.

ಕರ್ಕಾಟಕ: ಕುಟುಂಬದಲ್ಲಿ ಸಾಮರಸ್ಯದ ಜೀವನ ನಡೆಸುವಿರಿ. ಕೆಲವೊಂದು ಸನ್ನಿವೇಶಗಳು ಅಥವಾ ವ್ಯಕ್ತಿಗಳು ಪರವಾಗಿರುವಂತೆ ತೋರಿದರೂ ವಿರೋಧವಿರುವುದು ಅನುಭವಕ್ಕೆ ಬರಲಿದೆ.

ಸಿಂಹ: ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಸಹವರ್ತಿಗಳ ಅಭಿಪ್ರಾಯ ಪಡೆದುಕೊಳ್ಳಿ. ಒಪ್ಪಂದ ವ್ಯವಹಾರಗಳಿಂದ ವರಮಾನ ಹೆಚ್ಚಲಿದೆ. ಮಗನಿಗೆ ಖಾಸಗಿ ಕಂಪನಿಯಲ್ಲಿ ಉತ್ತಮ ಹುದ್ದೆ ಲಭಿಸಿದ್ದಕ್ಕೆ ಸಂತೋಷವಾಗುವುದು.

ಕನ್ಯಾ: ಕುಟುಂಬದ ಕಲಹಗಳು ಕೋರ್ಟ್‌ಗೆ ಹೋಗದೆ ಇತ್ಯರ್ಥವಾಗಲಿವೆ. ಹೊಸ ಮನೆಯನ್ನು ಬಾಡಿಗೆಗೆ ಅಥವಾ ಭೋಗ್ಯಕ್ಕೆ ಕೊಡಲು ಮಾತುಕತೆ ನಡೆಯುವುದು. ರಾಜಕೀಯ ವ್ಯಕ್ತಿಗಳೊಂದಿಗಿನ ಭೇಟಿ ಲಾಭ ತರಲಿದೆ.

ತುಲಾ: ಮನೋಬಲದಿಂದ ಕಾರ್ಯ ಸಾಧಿಸಿಕೊಳ್ಳುವಿರಿ. ಮಕ್ಕಳ ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದು ಮಾರ್ಗದರ್ಶಿಗಳ ಮಾತಿನಂತೆ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮನಸ್ಸಾಗುವುದು.

ವೃಶ್ಚಿಕ: ಸಾಂಸಾರಿಕವಾಗಿ ಮುಖ್ಯ ವಿಷಯದಲ್ಲಿ ಶುಭ ವಾರ್ತೆ ಕೇಳುವಿರಿ. ಸಕಾರಾತ್ಮಕವಾಗಿ ಯೋಚಿಸುವುದನ್ನು ಅಭ್ಯಾಸ ಮಾಡಿ. ಆಹಾರ ಸೇವನೆಯ ವಿಧಾನ ಬದಲಾಯಿಸಿಕೊಳ್ಳಬೇಕಾಗುವುದು.

ಧನು: ಜೀವನದ ನಡೆ-ನುಡಿಗಳು ಕಿರಿಯರ ಜೀವನಕ್ಕೆ ಮಾರ್ಗದರ್ಶನ ನೀಡಲಿದೆ. ನಿಮ್ಮ ಆಂತರಿಕ ಸಮಸ್ಯೆ ಬಗೆಹರಿಯಬೇಕಾದರೆ ನೀವು ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುವುದು.

ಮಕರ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿದ್ದ ನಿಮಗೆ, ಅತಿ ಹೆಚ್ಚಿನ ವರಮಾನದ ಮಾರ್ಗವನ್ನು ಸ್ನೇಹಿತರೊಬ್ಬರು ತೋರುವರು. ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಹರಕೆ ಹೊತ್ತಿರುವ ವಿಚಾರವನ್ನು ಮರೆಯದಿರಿ.

ಕುಂಭ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಎದುರಾಗಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ, ಧೈರ್ಯದಿಂದಿರಿ. ಸಮಸ್ಯೆ ಬಗೆಹರಿಸಲು ಜಾಣತನವನ್ನು ತೋರಿಸಿ. ನೀಲಿ ಬಣ್ಣ ಶುಭ ತರಲಿದೆ.

ಮೀನ: ಸಲಹೆ ಸೂಚನೆಗಳನ್ನು ಮೇಲಧಿಕಾರಿಗಳು ಮಾನ್ಯ ಮಾಡಿದ್ದಕ್ಕೆ ಸಂತೋಷವಾಗಲಿದೆ. ಗುರಿ ಸಾಧನೆಯತ್ತ ಲಕ್ಷ್ಯವಿರಿಸಲು ಮಕ್ಕಳಿಗೆ ತಿಳಿ ಹೇಳಿ. ಗುರುವಿನ ಉಪದೇಶ ತಿಳಿಸುವುದು ಒಳ್ಳೆಯದು.

ಪದಬಂಧ 6026

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೇರವಲ್ಲದ ನುಡಿ (5)
4.ವಾದ್ಯ ನುಡಿಸುವವನು ಇಲ್ಲಿದ್ದಾನೆ (3)
5.ರಸದೊಳಗಿನ ವೇಗ! (3)
6.ಗಡಿಯ ಹತ್ತಿರ ತಲೆದೋರಿದ ಶೀತ (3)
8.ನೆನಪಿಗೆ ಬಾರದಿರುವುದು (3)
9.ಸತಿಯಿರುವ ಅತಿಥಿಗೃಹ (3)
12.ಅಸಲಿಯ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (3)
15.ಹಾಸ್ಯ ಈ ವಿಧವಾಗಿ ಬಂದಿದೆ (3)
16.ಬರಗು ತುಂಬಲು ಹಿಡಿದ ಪೊರಕೆ (3)
17.ಬೆಂಗಳೂರಿನಲ್ಲಿರುವ ಭವ್ಯ ಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ

1.ಆಹುತಿ ಕೊಡುವುದು (4)
2.ಅತ್ಯಂತ ಚಲುವಾದುದು ಸುರದೊಳಗಿದೆ (5)
3.ಆತುರವಾಗಿ ಓಡುತ್ತಿರುವ ಕುದುರೆ (3)
4.ಒಳ್ಳೆಯ ಅಥವಾ ಕೆಟ್ಟ ನಾತ (3)
7.ಗರ ಬಡಿದಂತೆ ಕುಳಿತ ಪತಿವ್ರತೆ (3)
8.ಕರುವಿಗೆ ತೋರಿದ ದಯೆ (3)
10.ಕಡಲಿನ ಮೇಲೆ ಕೈಗೊಂಡ ಪಯಣ (5)
11.ಒಪ್ಪವಾಗಿ ಬಂದಿರುವ ಸಂಬಂಧ (4)
13.ನಲಿಯುತಿರುವ ರಾಷ್ಟ್ರ ಪಕ್ಷಿ (3)
14.ಪದ ಹೇಳಿ ಕನ್ನಡಿಗನು ಪಡೆದ ಡಿಗ್ರಿ (3)



6025ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಾತ 3.ವಸನ 5.ವರೋಪಚಾರ 6.ಶರ 8.ನಾಕ 9.ಅಂಕೆ 10.ಕದ 14.ಗಾಳಿಗೋಪುರ 15.ಕಮರಿ 16.ಹಾರೈಕೆ

ಮೇಲಿಂದ ಕೆಳಕ್ಕೆ: 1.ಪರವಶ 2.ತವಕ 3.ವರಹ 4.ನಕ್ಷತ್ರಕ 7.ರಸಿಕೆ 8.ನಾಸಿಕ 9.ಅಂಗಾರಕ 11.ದಬ್ಬಾಳಿಕೆ 12.ನಗಾರಿ 13.ವರಹಾ

ಸುಡೊಕು 6411

3		2	1		4		6	
							3	2
7			6		2	5		
2					3			5
				4		2	9	
			9					1
	4		2				8	
9				7	8		5	
	6			5		4	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6410 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಮಂಗಳವಾರ • ಏಪ್ರಿಲ್ 29, 2025 ಪ್ರಜಾವಾಣಿ

ವಿಜಯಪುರ: ಶಾಸಕ ಯತ್ನಾಳ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ವಿಜಯಪುರ: ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರನ್ನು ಅವಹೇಳನ ಮಾಡಿರುವ ಆರೋಪ ಹೊತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ವಿಜಯಪುರದಲ್ಲಿ ಮುಸ್ಲಿಮರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ ಸಾವಿರಾರು ಮುಸ್ಲಿಮರು, 'ಧರ್ಮ ವಿರೋಧಿ ಬಸನಗೌಡ ಯತ್ನಾಳಗೆ ಧಿಕ್ಕಾರ. ಅವರನ್ನು ಕೂಡಲೇ ಬಂಧಿಸಿ' ಎಂದು ಆಗ್ರಹಿಸಿದರು.

ಸಚಿವ ಶಿವಾನಂದ ಪಾಟೀಲ ಮಾತನಾಡಿ, 'ವಿಶ್ವಗುರು ಬಸವಣ್ಣ, ಪ್ರವಾದಿ ಮೊಹಮ್ಮದ್ ಪೈಗಂಬರ್ ಸೇರಿ ಎಲ್ಲರನ್ನೂ ಬಾಯಿಗೆ ಬಂದಂತೆ ಬಯ್ಯುವ ಯತ್ನಾಳ ಮನುಷ್ಯ ಅಲ್ಲ, ಅವನೊಬ್ಬ ಹೈವಾನ್' ಎಂದರು.

ಶಾಸಕ ಯಶವಂತರಾಯಗೌಡ ಪಾಟೀಲ ಮಾತನಾಡಿ, 'ಯತ್ನಾಳರ ಮಾತುಗಳಿಂದ ಆತನ ವ್ಯಕ್ತಿತ್ವಕ್ಕೆ ಮಾತ್ರವಲ್ಲ, ಸರ್ವರನ್ನು ಸಮಾನವಾಗಿ ಕಂಡ ಇಡೀ ಬಸವ ನಾಡಿಗೆ ಅವಮಾನವಾಗಿದೆ. ಸಮಾಜದ ಶಾಂತಿಗೆ ಭಂಗ ತರುತ್ತಿರುವ ಯತ್ನಾಳ ವಿರುದ್ಧ ಮುಖ್ಯಮಂತ್ರಿ, ಗೃಹ ಸಚಿವರು ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಶಾಸಕರಾದ ಅಶೋಕ ಮನಗೂಳಿ, ವಿಠಲ ಕಟಕಧೋಂಡ, ವಿಜಯಾನಂದ ಕಾಶಪ್ಪನವರ, ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ, ಮಾಜಿ ಶಾಸಕ ಪ್ರೊ.ರಾಜು ಆಲಗೂರ, ಕರ್ನಾಟಕ ಅಹಲೆ ಸುನ್ನತ್ ರಾಜ್ಯ ಘಟಕದ ಅಧ್ಯಕ್ಷ ಸಯ್ಯದ್ ತನ್ವೀರ್ ಪೀರಾ ಹಾಶ್ಮೀ, ಕಾಂಗ್ರೆಸ್ ನಾಯಕರು ಮತ್ತು ಮಠಾಧೀಶರು ಪಾಲ್ಗೊಂಡಿದ್ದರು.

ಬಿಬಿಎಂಪಿ: ಮೂರು ವಲಯದಲ್ಲಿ ಗಣತಿ ಆರಂಭವಾಗಿಲ್ಲ; ಟೆಂಡರ್ ಆಹ್ವಾನ

5 ವಲಯದಲ್ಲಿ 6 ಲಕ್ಷ ಮರ ಗಣತಿ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಐದು ವಲಯಗಳಲ್ಲಿ ಆರು ಲಕ್ಷ ಗಿಡ–ಮರಗಳ ಗಣತಿಯಾಗಿದ್ದು, ಇನ್ನೂ ಮೂರು ವಲಯಗಳಲ್ಲಿ ಹೊಸದಾಗಿ ಆರಂಭವಾಗಬೇಕಿದೆ.

ಒಂದು ವರ್ಷದ ಮುನ್ನವೇ ಮುಗಿಯಬೇಕಿದ್ದ ಗಿಡ–ಮರಗಳ ಗಣತಿ ಕಾರ್ಯ ಐದು ವಲಯಗಳಲ್ಲಿ ಪ್ರಗತಿಯಲ್ಲಿದೆ. ಇನ್ನೂ ಮೂರು ವಲಯಗಳಲ್ಲಿ ಹೊಸದಾಗಿ ಟೆಂಡರ್ ಆಹ್ವಾನಿಸಲಾಗಿದ್ದು, ಅದರ ನಂತರ ಪ್ರಕ್ರಿಯೆ ಆರಂಭವಾಗಬೇಕಿದೆ.

ಬೆಂಗಳೂರಿನಲ್ಲಿರುವ ಮರಗಳ ಗಣತಿ ಮಾಡಿ, ಅದನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಮೂರು ತಿಂಗಳಲ್ಲಿ ಗಣತಿ ಪ್ರಕ್ರಿಯೆ ಆರಂಭಿಸಬೇಕು ಎಂದು ಹೈಕೋರ್ಟ್ 2019ರಲ್ಲಿ ಬಿಬಿಎಂಪಿಗೆ ಸೂಚಿಸಿತ್ತು. ಆದರೆ, ಗಣತಿ ಇನ್ನೂ ಮುಗಿದಿಲ್ಲ.

2023ರ ಅಕ್ಟೋಬರ್‌ನಲ್ಲಿ ಎಂಟು ವಲಯಗಳಲ್ಲಿ ಗಿಡ–ಮರ ಗಣತಿ ಕಾರ್ಯ ಆರಂಭವಾಗಿತ್ತು. 2024ರ ಮಾರ್ಚ್ ಅಂತ್ಯಕ್ಕೆ ಮುಗಿಯಬೇಕಿದ್ದ ಗಣತಿ ಕಾರ್ಯ ಆರಂಭವಾದಾಗಿನಿಂದ ಒಂದು ವರ್ಷ ನಿಧಾನಗತಿಯಲ್ಲಿತ್ತು. 2024ರ ಸೆಪ್ಟೆಂಬರ್‌ನಲ್ಲಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ) ಸಿದ್ಧಪಡಿಸಿದ ಮೊಬೈಲ್ ಆ್ಯಪ್‌ನಿಂದ ವೇಗ ದೊರೆಯಿತು. ಇಷ್ಟಾದರೂ, ಮಹದೇವಪುರ, ದಾಸರಹಳ್ಳಿ, ಪೂರ್ವ ವಲಯದಲ್ಲಿ ಟೆಂಡರ್ ಪಡೆದ ಗುತ್ತಿಗೆದಾರರ ವೈಫಲ್ಯದಿಂದ ಗಣತಿ ನಡೆದಿಲ್ಲ. ಹೀಗಾಗಿ, ಈ ಮೂರು ವಲಯಗಳಲ್ಲಿ ಗಣತಿಗೆ ಹೊಸದಾಗಿ ಟೆಂಡರ್ ಕರೆಯಲಾಗಿದೆ.

ನಗರದಲ್ಲಿ ನಡೆಸಲಾಗಿರುವ ಗಿಡ–ಮರಗಳ ಗಣತಿಯ ವಿವರಗಳನ್ನು ತಿಳಿಯಲು ನಾಗರಿಕರಿಗೆ ಅವಕಾಶ ಮಾಡಿಕೊಡಲಾಗಿದೆ. ಗಿಡ– ಮರದ ವಯಸ್ಸು, ಅದರ ಜಾತಿ, ಹೆಸರು– ಜೈವಿಕ ಹೆಸರು, ಅದರ ಸುತ್ತಳತೆ ಸೇರಿದಂತೆ ಮರದ ಮಾಹಿತಿಗಳನ್ನು ಪಡೆಯಲು ಪ್ರಾಯೋಗಿಕವಾಗಿ https://kgis.ksrsac.in/test/ನಲ್ಲಿ ಪ್ರಕಟಿಸಲಾಗಿದೆ.

ಮರದ ಚಿತ್ರದೊಂದಿಗೆ ಅದರ ಮಾಹಿತಿಯನ್ನು ವಾರ್ಡ್‌ವಾರು ಪಡೆಯಬಹುದು. ವಿಸ್ತಾರವಾದ ನಕ್ಷೆಯಲ್ಲಿ ವಾರ್ಡ್ ಆಯ್ಕೆ ಮಾಡಿಕೊಂಡು, ಅಡ್ಡ ರಸ್ತೆ ಅಥವಾ ಮುಖ್ಯ ರಸ್ತೆಯಲ್ಲಿ ಗುರುತಿಸಲಾದ ಮರದ ಚಿತ್ರದ ಮೇಲೆ ಕ್ಲಿಕ್ ಮಾಡಿದರೆ ಅದರ ಮಾಹಿತಿ ಸಿಗುತ್ತದೆ. ಪ್ರತಿಯೊಂದು ಮರಕ್ಕೂ ವಾರ್ಡ್ ಹೆಸರು ಹಾಗೂ ಸಂಖ್ಯೆಗಳನ್ನು ನೀಡಲಾಗಿದೆ.

'ವೆಬ್‌ಸೈಟ್ ಪ್ರಾಯೋಗಿಕ ಹಂತದಲ್ಲಿದ್ದು ಯಾವುದೇ ಬದಲಾವಣೆಯನ್ನು ಮಾಡಿಕೊಳ್ಳಬಹುದಾಗಿದೆ. ಅದ್ದರಿಂದ ನಾಗರಿಕರು ಸಲಹೆಗಳನ್ನು ಕಳುಹಿಸಬಹುದು. ಇದೀಗ ಇಂಗ್ಲಿಷ್‌ನಲ್ಲಿ ಮಾತ್ರ ಮಾಹಿತಿ ಲಭ್ಯವಿದೆ. ಅಂತಿಮವಾಗಿ ವೆಬ್‌ಸೈಟ್ ಅಧಿಕೃತವಾಗಿ ಅನಾವರಣವಾಗುವ ಸಂದರ್ಭದಲ್ಲಿ ಕನ್ನಡದಲ್ಲೂ ಮಾಹಿತಿ ಸಿಗಲಿದೆ' ಎಂದು ಅರಣ್ಯ ವಿಭಾಗದ ಡಿಸಿಎಫ್ ಬಿ.ಎಲ್.ಜಿ. ಸ್ವಾಮಿ ಹೇಳಿದರು.

5.5 ಸೆಂ.ಮೀ ಸುತ್ತಳತೆ ಅಥವಾ 1 ಮೀಟರ್ ಎತ್ತರವಿರುವ ಎಲ್ಲ ಮರ–ಗಿಡಗಳ ಗಣತಿ, ಪ್ರಭೇದದ ಸೇರಿದಂತೆ ಹಲವು ಮಾಹಿತಿ ಸಂಗ್ರಹ ನಡೆಯುತ್ತಿದೆ. ಗಣತಿ ಸಂದರ್ಭದಲ್ಲೇ ಪ್ರತಿ ಮರದ ಮೇಲೆ ಸಂಖ್ಯೆ ನಮೂದಿಸಲಾಗುತ್ತದೆ. ಎಲ್ಲವೂ ಅಂತಿಮವಾದ ಮೇಲೆ, ಮರದ ಚಿತ್ರ, ಅದರ ಸಂಖ್ಯೆ ಜತೆಗೆ ಅದರ ವಯಸ್ಸು, ಪ್ರಭೇದದ ಮಾಹಿತಿಯನ್ನು ಬಾರ್‌ಕೋಡ್‌ನಲ್ಲಿ ಮೂಲಕ ಪಡೆದುಕೊಳ್ಳಬಹುದು. ರಸ್ತೆಯ ಒಂದು ಬದಿ ನಿಂತರೆ ಕಾಣುವ ಮರಗಳಿಗೆ ಸಂಬಂಧಿಸಿದ ಬಾರ್‌ಕೋಡ್/ ಕ್ಯೂಆರ್ ಕೋಡ್ ಫಲಕವನ್ನು ಹಾಕಲಾಗುತ್ತದೆ. ಈ ಮೂಲಕ ಸಾರ್ವಜನಿಕರಿಗೆ ತಮ್ಮ ಪ್ರದೇಶದಲ್ಲಿರುವ ಮರಗಳ ಸಂಪೂರ್ಣ ಮಾಹಿತಿ ಲಭ್ಯವಾಗಲಿದೆ ಎಂದರು.

ಗಣತಿಯಲ್ಲಿ ಮರಗಳಿಗೆ ನೀಡಲಾಗುತ್ತಿರುವ ಸಂಖ್ಯೆ, ದಾಖಲಿಸುತ್ತಿರುವ ಮಾಹಿತಿ

ಅಂಕಿ ಅಂಶ

6 ಲಕ್ಷ
ಗಿಡ–ಮರಗಳ ಗಣತಿ ಕಾರ್ಯ ಪೂರ್ಣ

5 ವಲಯ
ದಕ್ಷಿಣ, ಆರ್.ಆರ್. ನಗರ, ಬೊಮ್ಮನಹಳ್ಳಿ, ಯಲಹಂಕ, ಪೂರ್ವ ವಲಯದಲ್ಲಿ ಪ್ರಗತಿಯಲ್ಲಿರುವ ಗಣತಿ ಕಾರ್ಯ

3 ವಲಯ
ದಾಸರಹಳ್ಳಿ, ಪಶ್ಚಿಮ, ಮಹದೇವಪುರ ವಲಯದಲ್ಲಿ ಗಣತಿಗೆ ಹೊಸ ಟೆಂಡರ್

2.60 ಲಕ್ಷ
ಪ್ರತಿ ವಲಯದಲ್ಲಿ ಗಣತಿಯಾಗಬೇಕಿರುವ ಗಿಡ–ಮರಗಳ ಅಂದಾಜು

₹48.60 ಲಕ್ಷ
ಪ್ರತಿ ವಲಯದಲ್ಲಿ ಗಿಡ–ಮರ ಗಣತಿಗೆ ವೆಚ್ಚ

ಮೂರು ತಿಂಗಳಲ್ಲಿ ಪೂರ್ಣ: ಸ್ವಾಮಿ

'ನಮ್ಮ ಯೋಜನೆಯಂತೆ ಈ ವೇಳೆಗೆ ಗಿಡ–ಮರಗಳ ಗಣತಿ ಕಾರ್ಯ ಪೂರ್ಣಗೊಳ್ಳಬೇಕಿತ್ತು. ಮೂರು ವಲಯಗಳಲ್ಲಿ ಗಣತಿ ಗುತ್ತಿಗೆ ಪಡೆದಿದ್ದ ಸಂಸ್ಥೆಗಳು ನಿರೀಕ್ಷಿತ ಪ್ರಮಾಣದಲ್ಲಿ ಗಣತಿ ಕಾರ್ಯ ಕೈಗೊಳ್ಳಲಿಲ್ಲ. ಇವೇ ಸಂಸ್ಥೆಗಳು ಬೇರೆ ವಲಯದಲ್ಲೂ ಗುತ್ತಿಗೆ ಪಡೆದಿದ್ದವು. ಅಲ್ಲಿ ಪ್ರಗತಿಯಲ್ಲಿ ಗಣತಿ ಕಾರ್ಯ, ಮೂರು ವಲಯದಲ್ಲಿ ಕಾಣಲಿಲ್ಲ. ಹೀಗಾಗಿ ಗುತ್ತಿಗೆಯನ್ನು ರದ್ದುಪಡಿಸಲಾಗಿದ್ದು, ದಾಸರಹಳ್ಳಿ, ಪಶ್ಚಿಮ ಹಾಗೂ ಮಹದೇಪುರ ವಲಯದಲ್ಲಿ ಗಿಡ–ಮರ ಗಣತಿಗೆ ಹೊಸದಾಗಿ ಟೆಂಡರ್ ಕರೆಯಲಾಗಿದೆ. ಎಲ್ಲವನ್ನೂ ಇನ್ನು ಮೂರು ತಿಂಗಳಲ್ಲಿ ಮುಗಿಸಲಾಗುತ್ತದೆ' ಎಂದು ಬಿಬಿಎಂಪಿ ಅರಣ್ಯ ವಿಭಾಗದ ಡಿಸಿಎಫ್ ಬಿ.ಎಲ್.ಜಿ. ಸ್ವಾಮಿ ತಿಳಿಸಿದರು.

ಸುದ್ದಿ 2 ನಿಮಿಷ

ಸಂತ್ರಸ್ತ ಕುಟುಂಬಕ್ಕೆ ತಲಾ ₹1 ಕೋಟಿ ಕೊಡಿ: ತೇಜಸ್ವಿಸೂರ್ಯ ಆಗ್ರಹ

ಬೆಂಗಳೂರು: ರಾಜ್ಯ ಸರ್ಕಾರಕ್ಕೆ ಲವಲೇಶವಾದರೂ ಮಾನವೀಯತೆ ಇದ್ದರೆ, ಭಯೋತ್ಪಾದಕರ ದಾಳಿಯಿಂದ ಮೃತಪಟ್ಟ ಎರಡೂ ಕುಟುಂಬಕ್ಕೆ ಕನಿಷ್ಠ ₹1ಕೋಟಿ ಪರಿಹಾರ ಕೊಡಬೇಕಿತ್ತು ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿಸೂರ್ಯ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮೊತ್ತವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟರೆ ಅದರ ಬಡ್ಡಿಯಿಂದ ಅವರ ಕುಟುಂಬದ ಮಕ್ಕಳ ಶಿಕ್ಷಣ ನಡೆಯುತ್ತದೆ ಎಂದು ತಿಳಿಸಿದ್ದಾರೆ.

'ನೆರೆಯ ರಾಜ್ಯದಲ್ಲಿ ಆನೆ ಕಾಲ್ತುಳಿತಕ್ಕೆ ಒಳಗಾಗಿ ಮೃತಪಟ್ಟವರಿಗೆ ಸರ್ಕಾರ ₹15 ಲಕ್ಷ ಕೊಟ್ಟಿತ್ತು. ಉಗ್ರರ ದಾಳಿಯಲ್ಲಿ ನಮ್ಮ ರಾಜ್ಯದ ಇಬ್ಬರು ಮೃತಪಟ್ಟಿದ್ದು, ಅಷ್ಟು ಮೊತ್ತವಾದರೂ ಕೊಡಬೇಕಿತ್ತು. ಮುಸ್ಲಿಂ ವೋಟಿಗೆ ತಮ್ಮನ್ನು ತಾವು ಮಾರಿಕೊಂಡ ಕಾಂಗ್ರೆಸ್ ಪಕ್ಷದಿಂದ ಇದಕ್ಕಿಂತ ಜಾಸ್ತಿ ನಿರೀಕ್ಷೆ ಮಾಡಲು ಸಾಧ್ಯವೇ ಇಲ್ಲ. ಈ ಕುಟುಂಬಗಳಿಗೆ ಶಕ್ತಿಕೊಡುವ ಜವಾಬ್ದಾರಿ ಹಿಂದೂ ಸಮಾಜಕ್ಕೆ ಇದೆ' ಎಂದರು.

'ಬಿಜೆಪಿ ವತಿಯಿಂದ ನಾಳೆ ಭರತ್ ಭೂಷಣ್ ಮನೆಗೆ ಹೋಗಿ ₹10 ಲಕ್ಷ ಮತ್ತು ಒಂದೆರಡು ದಿನಗಳಲ್ಲಿ ಮಂಜುನಾಥ್ ಅವರ ಮನೆಗೆ ಹೋಗಿ ₹10 ಲಕ್ಷ ಕೊಡಲಿದ್ದೇವೆ' ಎಂದರು.

'ಭಯೋತ್ಪಾದಕರು ಹಿಂದೂಗಳನ್ನು ಧರ್ಮದ ಆಧಾರದಲ್ಲಿ ಕೊಂದಿದ್ದು ಸರಿಯಲ್ಲ ಎಂದು ಅಸಾದುದ್ದೀನ್ ಒವೈಸಿ ಒಪ್ಪಿಕೊಂಡಿದ್ದಾರೆ. ಆದರೆ, ಕಾಂಗ್ರೆಸ್‌ನವರು ಮಾತ್ರ ಒಪ್ಪಲು ತಯಾರಿಲ್ಲ. ಎಂತಹ ದರಿದ್ರ, ದೈನೇಸಿ ಸ್ಥಿತಿಗೆ ಕಾಂಗ್ರೆಸ್ ಪಕ್ಷ ಇಳಿದಿದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕಿಲ್ಲ' ಎಂದು ಕಿಡಿಕಾರಿದರು.

ರೈಲ್ವೆ: ಮರಗಳ ತೆರವಿಗೆ ವಿರೋಧ

ಬೆಂಗಳೂರು: ವಸಂತನಗರದಲ್ಲಿರುವ ದಂಡು ಪ್ರದೇಶದ ಬಳಿಯ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಕೇಂದ್ರ ಅಭಿವೃದ್ಧಿಗೆ 368 ಮರ ತೆರವುಗೊಳಿಸಲು ರೈಲ್ವೆ ಇಲಾಖೆ ನಿರ್ಧರಿಸಿರುವುದಕ್ಕೆ ಪರಿಸರ ಕಾರ್ಯಕರ್ತರಿಂದ ವಿರೋಧ ವ್ಯಕ್ತವಾಗಿದೆ.

'ಬೆಂಗಳೂರಿನ ತಂಪು ವಾತಾವರಣಕ್ಕೆ ಕಾರಣವಾಗಿರುವ ಬೃಹತ್ ಮರಗಳು ನೂರಾರು ಪಕ್ಷಿಗಳಿಗೆ, ಸಾವಿರಾರು ಸೂಕ್ಷ್ಮ ಜೀವಿಗಳಿಗೆ ಆಶ್ರಯ ತಾಣವಾಗಿದೆ. ಈ ಮರಗಳನ್ನು ಕಡಿಯುವುದರಿಂದ ಈ ಪಕ್ಷಿಸಂಕುಲ ಮತ್ತು ಇತರ ಸೂಕ್ಷ್ಮ ಜೀವಿಗಳು ನೆಲೆ ಕಳೆದುಕೊಳ್ಳುತ್ತವೆ. ಬೆಂಗಳೂರಿನ ನಾಗರಿಕರಷ್ಟೇ ಅಲ್ಲದೇ ಪರಿಸರದ ಸಮತೋಲನದ ಪರವಾಗಿರುವವರೆಲ್ಲರೂ ಈ ಪರಿಸರ ವಿರೋಧಿ ಕ್ರಮವನ್ನು ಬಲವಾಗಿ ವಿರೋಧಿಸುತ್ತೇವೆ' ಎಂದು 'ಪರಿಸರಕ್ಕಾಗಿ ನಾವು ಸಂಘಟನೆ'ಯ ಸದಸ್ಯರು ಹೇಳಿದ್ದಾರೆ.

'ಕಂಟೊನ್ಮೆಂಟ್ ರೈಲ್ವೇಸ್ ಕಾಲೊನಿ ಆವರಣದಲ್ಲಿ 'ವಾಣಿಜ್ಯ ಅಭಿವೃದ್ಧಿ ಯೋಜನೆಗಾಗಿ' 368 ಮರಗಳನ್ನು ತೆರವುಗೊಳಿಸಲಾಗುತ್ತಿದೆ. ನಾಗರಿಕರು 10 ದಿನಗಳಲ್ಲಿ ಆಕ್ಷೇಪಣೆ ಸಲ್ಲಿಸಬಹುದು' ಎಂದು ಬಿಬಿಎಂಪಿ ಅರಣ್ಯ ವಿಭಾಗ ಏ. 25ರಂದು ಪ್ರಕಟಣೆ ಹೊರಡಿಸಿದೆ.

'ರೈಲು ಹಳಿ ಅಭಿವೃದ್ಧಿ ಹಾಗೂ ವಿಸ್ತರಣೆ ಕಾಮಗಾರಿಗಳಿಗಾಗಿ ಕಂಟೋನ್ಮೆಂಟ್ ರೈಲು ನಿಲ್ದಾಣ ಸುತ್ತಮುತ್ತ ಮರಗಳನ್ನು ತೆರವು ಮಾಡಲು ಬಿಬಿಎಂಪಿಯಿಂದ ಅನುಮತಿ ಕೇಳಲಾಗಿದೆ. ತೆರವುಗೊಳಿಸಲಾಗುವ ಮರಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಪೋಷಿಸಲಾಗುವುದು' ಎಂದು ರೈಲ್ವೆ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಆಂಧ್ರದಿಂದ ಡ್ರಗ್ಸ್ ತಂದು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ವಿಶಾಖಪಟ್ಟಣದಿಂದ ಕಡಿಮೆ ಬೆಲೆಗೆ ಡ್ರಗ್ಸ್ ತಂದು ನಗರದ ಪಿ.ಜಿಗಳಲ್ಲಿ (ಪೇಯಿಂಗ್ ಗೆಸ್ಟ್) ನೆಲಸಿರುವ ವಿದ್ಯಾರ್ಥಿಗಳು ಹಾಗೂ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಪೂರೈಸುತ್ತಿದ್ದ ಇಬ್ಬರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತ್ರಿಪುರಾದ ರೂಸಾನ್ ಹಾಗೂ ನಗರದ ಕಾಸಿಫ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಸಿಸಿಬಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಆಂಧ್ರಪ್ರದೇಶದಿಂದ ಕಡಿಮೆ ಬೆಲೆಗೆ ಡ್ರಗ್ಸ್ ಅನ್ನು ತರಿಸಿಕೊಳ್ಳುತ್ತಿದ್ದರು. ಅದನ್ನು ಗೊರಗುಂಟೆಪಾಳ್ಯದ ಬಳಿ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಇನ್‌ಸ್ಪೆಕ್ಟರ್ ಸಿ.ಎ.ಮಂಜಪ್ಪ ಅವರಿಗೆ ಬಂದ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಲಾಯಿತು' ಎಂದು ಮೂಲಗಳು ತಿಳಿಸಿವೆ.

ಕ್ಯಾಬ್ ಚಾಲಕನ ಮೇಲೆ ಹಲ್ಲೆಗೆ ಯತ್ನ

ಬೆಂಗಳೂರು: ನಗರದ ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ವಾಹನ ನಿಲುಗಡೆಯ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಕ್ಯಾಬ್ ಚಾಲಕನ ಮೇಲೆ ಹಲ್ಲೆಗೆ ಯತ್ನಿಸಲಾಗಿದೆ. ಆಟೊ ಚಾಲಕ ಪರಾರಿ ಆಗಿದ್ದಾನೆ ಎಂಬ ಆರೋಪವಿದೆ. ಕ್ಯಾಬ್ ಅನ್ನು ಅಡ್ಡಗಟ್ಟಿ ಹಲ್ಲೆಗೆ ಮುಂದಾಗಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಶುಕ್ರವಾರ ಸಂಜೆ 5.30ರ ಸುಮಾರಿಗೆ ಕ್ಯಾಬ್ ಚಾಲಕರೊಬ್ಬರು ಬಿವಿಕೆ ಅಯ್ಯಂಗಾರ್ ರಸ್ತೆಗೆ ವ್ಯಕ್ತಿಯೊಬ್ಬರನ್ನು ಬಿಡಲು ಬಂದಿದ್ದರು. ಅದೇ ಸ್ಥಳಕ್ಕೆ ಬಂದಿದ್ದ ಆಟೊ ಚಾಲಕ, ಕ್ಯಾಬ್ ತೆಗೆಯುವಂತೆ ಹೇಳಿದ್ದ. ಚಾಲಕ ಸುಂದರ್ ಅಲ್ಲಿಂದ ಕ್ಯಾಬ್ ಹಿಂದಕ್ಕೆ ತೆಗೆದಿದ್ದಾರೆ. ಅದಾದ ಕೆಲವೇ ಕ್ಷಣಗಳ ಬಳಿಕ ಆಟೊ ಚಾಲಕ ವಾಪಸ್ ಬಂದು, 'ಇದು ನನ್ನ ಜಾಗ' ಎಂದು ಕಿರಿಕ್ ಮಾಡಿದ್ದಾನೆ. ಮಾತಿನ ಚಕಮಕಿ ನಡೆದು ಆಟೊದಿಂದ ಕ್ಯಾಬ್‌ಗೆ ಡಿಕ್ಕಿ ಹೊಡೆಸಿದ್ದಾನೆ. ಕ್ಯಾಬ್ ಚಾಲಕ ಘಟನೆಯ ವಿಡಿಯೊ ಮಾಡಲು ಮುಂದಾದ ವೇಳೆ ಹಲ್ಲೆಗೆ ಯತ್ನಿಸಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಲಿಂಗತ್ವ ಅಲ್ಪಸಂಖ್ಯಾತೆ ಕೊಲೆ: ಮೂವರ ಸೆರೆ

ಕೃತ್ಯ ಎಸಗಿ ತಿರುಪತಿಯಲ್ಲಿ ಕೇಶಮುಂಡನ ಮಾಡಿಸಿಕೊಂಡಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ತನುಶ್ರೀ ಅಲಿಯಾಸ್ ನವೀನ್ ಕೊಲೆ ಮಾಡಿದ್ದ ಆರೋಪದಡಿ ಮೂವರು ಆರೋಪಿಗಳನ್ನು ಕೆ.ಆರ್.ಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸೀಗೇಹಳ್ಳಿ ನಿವಾಸಿ ಜಗದೀಶ್(29), ಪ್ರಭಾಕರ್(34) ಮತ್ತು ಸುಶಾಂತ್(32) ಬಂಧಿತರು. ಆರೋಪಿಗಳ ಪೈಕಿ ಜಗದೀಶ್ ಎಂಬಾತ ತನುಶ್ರೀ ಅವರ ಸ್ನೇಹಿತ ಎಂದು ಪೊಲೀಸರು ಹೇಳಿದರು.

ಏಪ್ರಿಲ್ 17ರಂದು ತನುಶ್ರೀ ಅವರನ್ನು ಕೊಲೆ ಮಾಡಿ ಆರೋಪಿಗಳು ಪರಾರಿ ಆಗಿದ್ದರು. ತನುಶ್ರೀ ಕಡೆಯವರು ನೀಡಿದ ದೂರು ಆಧರಿಸಿ ಶಿಡ್ಲಘಟ್ಟದಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

'ಆರೋಪಿ ಜಗದೀಶ್ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಮದುವೆಯಾಗಿದ್ದ ಆತನಿಗೆ ಮಗುವಿದೆ. ವರ್ಷದ ಹಿಂದೆ ತನುಶ್ರೀ ಅವರ ಪರಿಚಯವಾಗಿತ್ತು. ಸಮಾಜ ಸೇವೆಗಾಗಿ ಬೇರೆ ಬೇರೆ ಊರುಗಳಿಗೆ ಇಬ್ಬರೂ ಒಟ್ಟಿಗೆ ಪ್ರಯಾಣಿಸಿದ್ದರು. ಇಬ್ಬರು ಆತ್ಮೀಯವಾಗಿದ್ದರು. ತನುಶ್ರೀ ಅವರ ಮನೆಯಲ್ಲೇ ಜಗದೀಶ್ ಹೆಚ್ಚು ಸಮಯ ಕಳೆಯುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

'ತನ್ನನ್ನು ಮದುವೆಯಾಗುವಂತೆ ತನುಶ್ರೀ ಅವರು ಜಗದೀಶ್‌ನನ್ನು ಒತ್ತಾಯಿಸಿದ್ದರು. ಆದರೆ, ಜಗದೀಶ್ ನಿರಾಕರಿಸಿದ್ದ. ಈ ವಿಚಾರಕ್ಕೆ ಇಬ್ಬರ ಮಧ್ಯೆ ಗಲಾಟೆ ಆಗಿತ್ತು. ತನುಶ್ರೀ ಕೂಡ ಬೆದರಿಕೆ ಹಾಕಿದ್ದರು. ಬೆದರಿಕೆ ಹಾಕಿದ್ದರಿಂದ ಕೋಪಗೊಂಡಿದ್ದ ಜದಗೀಶ್ ಕೊಲೆಗೆ ಸಂಚು ರೂಪಿಸಿದ್ದ. ತನ್ನ ಸ್ನೇಹಿತರಿಗೆ ವಿಷಯ ತಿಳಿಸಿದ್ದ. ಏಪ್ರಿಲ್ 17ರಂದು ತನುಶ್ರೀ ಮನೆಯಲ್ಲೇ ಆರೋಪಿಗಳು ಪಾರ್ಟಿ ನಡೆಸಿದ್ದರು. ನಂತರ ತನುಶ್ರೀಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಕೃತ್ಯ ಎಸಗಿದ ಬಳಿಕ ಜಗದೀಶ್ ಮತ್ತು ಆತನ ಸಹಚರರ ಆಂಧ್ರ ಪ್ರದೇಶದ ತಿರುಪತಿಗೆ ತೆರಳಿ ಕೇಶ ಮುಂಡನ ಮಾಡಿಸಿಕೊಂಡಿದ್ದರು. ಬಳಿಕ ಶಿಡ್ಲಘಟ್ಟದಲ್ಲಿ ಬಂದು ಪರಿಚಯಸ್ಥರ ಮನೆಯಲ್ಲಿ ವಾಸವಾಗಿದ್ದರು. ಖಚಿತ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಸಂಚಾರ ನಿಯಮ ಉಲ್ಲಂಘನೆ 853 ಮಂದಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಮದ್ಯ ಸೇವಿಸಿ ಹಾಗೂ ಅತಿವೇಗದಿಂದ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರೆಸಿರುವ ನಗರ ಸಂಚಾರ ಪೊಲೀಸರು, ಒಟ್ಟು 853 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಏಪ್ರಿಲ್ 21ರಿಂದ 27ರ ವರೆಗೆ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು.

ವಿವಿಧ ಮಾದರಿಯ 43,253 ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಯಿತು. ಆ ಪೈಕಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದ 668 ಚಾಲಕರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಯಿತು. ಅಲ್ಲದೇ, ಅತಿವೇಗದಿಂದ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ 185 ಪ್ರಕರಣ ದಾಖಲಿಸಿಕೊಂಡು ಅವರಿಂದ ₹1.89 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

'ಮದ್ಯಪಾನ ಮಾಡಿ ವಾಹನ ಚಲಾಯಿಸುವ ಹಾಗೂ ಅತಿವೇಗದಿಂದ ವಾಹನ ಚಾಲನೆ ಮಾಡುವವರ ವಿರುದ್ಧ ಮುಂದಿನ ದಿನಗಳಲ್ಲಿಯೂ ವಿಶೇಷ ಕಾರ್ಯಾಚರಣೆ ಮುಂದುವರೆಸಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದ್ದಾರೆ.

ಹಜ್ ಯಾತ್ರೆಗೆ ಚಾಲನೆ

ಬೆಂಗಳೂರಿನ ಹೆಗಡೆ ನಗರದಲ್ಲಿರುವ ಹಜ್ ಭವನದಲ್ಲಿ ಪ್ರಸಕ್ತ ಸಾಲಿನ ಹಜ್ ಯಾತ್ರೆಗೆ ಸೋಮವಾರ ಚಾಲನೆ ನೀಡಿದ ಸಿದ್ದರಾಮಯ್ಯ ಅವರನ್ನು ಹಜ್ ಸಮಿತಿಯ ವತಿಯಿಂದ ಗೌರವಿಸಲಾಯಿತು. ಜಮೀರ್ ಅಹಮದ್ ಖಾನ್, ರಹೀಂ ಖಾನ್, ನಸೀರ್ ಅಹಮದ್, ಸಲೀಂ ಅಹಮದ್, ಹಜ್ ಸಮಿತಿ ಅಧ್ಯಕ್ಷ ಜುಲ್ಫಿಖಾರ್ ಅಹಮದ್ ಖಾನ್ ಟಿಪ್ಪು ಪಾಲ್ಗೊಂಡಿದ್ದರು

ಸ್ನೇಹಿತರ ಜೊತೆ ಬೆಟ್ಟಿಂಗ್ ಮದ್ಯ ಕುಡಿದ ಯುವಕ ಸಾವು

ಮುಳಬಾಗಿಲು: ಸ್ನೇಹಿತರ ಜೊತೆ ಬೆಟ್ಟಿಂಗ್ ಕಟ್ಟಿ ನೀರು ಬೆರಸದೆ ಐದಾರು ಬಾಟಲ್ ಮದ್ಯ ಸೇವಿಸಿ ಅಸ್ವಸ್ಥನಾದ ತಾಲ್ಲೂಕಿನ ಪೂಜಾರಹಳ್ಳಿ ಯುವಕ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾನೆ.

ತಾಲ್ಲೂಕಿನ ಪೂಜಾರಹಳ್ಳಿ ಗ್ರಾಮದ ಕಾರ್ತೀಕ್ (21) ಮೃತ ಯುವಕ. ನೀರು ಬೆರಸದೆ ಮದ್ಯ ಸೇವಿಸುವುದಾಗಿ ಗ್ರಾಮದ ಸ್ನೇಹಿತರಾದ ವೆಂಕಟರೆಡ್ಡಿ, ಸುಬ್ರಮಣಿ ಹಾಗೂ ಇತರರೊಂದಿಗೆ ₹10 ಸಾವಿರ ಬೆಟ್ಟಿಂಗ್ ಕಟ್ಟಿದ್ದ.

ಐದಾರು ಚಿಕ್ಕ ಬಾಟಲ್ ಮದ್ಯ ಸೇವಿಸಿದ ಯುವಕ ಅಸ್ವಸ್ಥನಾದ. ಸ್ಥಳೀಯರು ಆತನನ್ನು ಮುಳಬಾಗಿಲು ಆಸ್ಪತ್ರೆಗೆ ಸಾಗಿಸಿದರು. ಚಿಕಿತ್ಸೆಗೆ ಸ್ಪಂದಿಸದೆ ಆತ ಮೃತಪಟ್ಟ. ಒಂಬತ್ತು ದಿನಗಳ ಹಿಂದೆಯಷ್ಟೇ ಆತನ ಪತ್ನಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು.

ಕಾರ್ತಿಕ್

ಮದ್ಯ ಕುಡಿಯಲು ಪ್ರಚೋದನೆ ನೀಡಿದ ಆರೋಪದ ಮೇಲೆ ಸ್ನೇಹಿತರಾದ ವೆಂಕಟರೆಡ್ಡಿ, ಸುಬ್ರಮಣಿ ಹಾಗೂ ಇನ್ನೂ ನಾಲ್ವರ ವಿರುದ್ಧ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ವೆಂಕಟರೆಡ್ಡಿ ಹಾಗೂ ಸುಬ್ರಮಣಿಯನ್ನು ಬಂಧಿಸಿದ್ದು, ಉಳಿದ ನಾಲ್ವರು ಪರಾರಿಯಾಗಿದ್ದಾರೆ. ನಂಗಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇ 3ಕ್ಕೆ ರಂಗನಾಥ ಸ್ವಾಮಿ ತಿಂಗಳ ತೇರು

ಮಾಗಡಿ: ತಿರುಮಲೆ ರಂಗನಾಥ ಸ್ವಾಮಿಯ ತಿಂಗಳ ತೇರು ಮೇ 3ರಂದು ನಡೆಯಲಿದೆ ಎಂದು ಡ್ರೈವರ್ ನಾರಾಯಣಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಳೆದ 15 ವರ್ಷಗಳಿಂದ ರಂಗನಾಥ ಸ್ವಾಮಿ ತಿಂಗಳ ತೇರನ್ನು ನಮ್ಮ ಕುಟುಂಬಸ್ಥರು ನೆರವೇರಿಸಿಕೊಂಡು ಬರುತ್ತಿದ್ದು, ಬ್ರಹ್ಮರಥೋತ್ಸವ ನಡೆದ ಒಂದು ತಿಂಗಳ ನಂತರ ತಿಂಗಳ ತೇರನ್ನು ನಡೆಸಲಾಗುತ್ತದೆ' ಎಂದರು.

ರಂಗನಾಥ ಸ್ವಾಮಿಗೆ ಪೂಜೆ ಸಲ್ಲಿಸಿ, ಉತ್ಸವ ಮೂರ್ತಿಯನ್ನು ಚಿಕ್ಕೇರಿನಲ್ಲಿ ಕೂರಿಸಿ ರಂಗನಾಥ ಸ್ವಾಮಿ ತೇರನ್ನು ಭಕ್ತರು ಎಳೆಯುತ್ತಾರೆ. ಭಕ್ತರಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ನಿವೇಶನ ಅಕ್ರಮ ನೋಂದಣಿ ಇಬ್ಬರ ಅಮಾನತು

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ನಗರದ ವ್ಯಾಪ್ತಿಯ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ (ಐಡಿಎಸ್ ಎಂಟಿ) ಯೋಜನೆಯ ನಿವೇಶನಗಳನ್ನು ಅಕ್ರಮವಾಗಿ ನೋಂದಣಿ ಮಾಡಿದ ಆರೋಪ ಸಾಬೀತಾಗಿದ್ದರಿಂದ ನಗರಸಭೆಯ ಅಂದಿನ ಪೌರಾಯುಕ್ತ ಓಂಕಾರ ಪೂಜಾರಿ ಹಾಗೂ ಎಫ್‌ಡಿಸಿ ಮಾನಪ್ಪ ಅವರನ್ನು ಅಮಾನತು ಮಾಡಲಾಗಿದೆ.

ಸುರಪುರ ಸಮುದಾಯ ಸಂಘಟನಾಧಿಕಾರಿಯಾಗಿ ವರ್ಗಾವಣೆಗೊಂಡಿದ್ದ ಓಂಕಾರ ಪೂಜಾರಿ ಈವರೆಗೂ ಹುದ್ದೆಯನ್ನು ಸ್ವೀಕರಿಸಿರಲಿಲ್ಲ. ಅನಧಿಕೃತವಾಗಿ ಗೈರಾಗಿದ್ದು, ಇವರ ವಿರುದ್ಧ ಶಿಸ್ತು ಕ್ರಮಕ್ಕೆ ಪತ್ರ ಬರೆಯಲಾಗಿದೆ. ಅಲ್ಲದೇ ಸಂಘಟನಾಧಿಕಾರಿ ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಶಹಾಪುರ ನಗರಸಭೆಯಲ್ಲಿ ಎಫ್‌ಡಿಸಿಯಾಗಿದ್ದ ಮಾನಪ್ಪ ಸದ್ಯ ಕಕ್ಕೇರಿ ಪುರಸಭೆಯಲ್ಲಿ ವ್ಯವಸ್ಥಾಪಕರಾಗಿದ್ದರು. ತಕ್ಷಣದಿಂದಲೇ ಅವರನ್ನೂ ಅಮಾನತುಗೊಳಿಸಿ ಮುಂದಿನ ಆದೇಶದವರೆಗೆ ಕೊಪ್ಪಳ ನಗರಸಭೆಯಲ್ಲಿ ಕಚೇರಿ ವ್ಯವಸ್ಥಾಪಕರ ಹುದ್ದೆಗೆ ಅವರನ್ನು ವರ್ಗಾವಣೆ ಮಾಡಲಾಗಿದೆ ಎಂದು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪ್ರಭುಲಿಂಗ ಕವಳಿಕಟ್ಟಿ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಏನಿದು ಪ್ರಕರಣ?: ನಗರದ ವ್ಯಾಪ್ತಿಯಲ್ಲಿ ಬರುವ ಐಡಿಎಸ್ ಎಂಟಿ ಯೋಜನೆ ನಿವೇಶನಗಳನ್ನು ಈ ಹಿಂದೆ ಹಂಚಿಕೆ ಮಾಡಲಾಗಿತ್ತು. ಅದರಲ್ಲಿ ಪೂರ್ಣ ಹಣ ಪಾವತಿಸಿರುವ ಹಾಗೂ ಅರ್ಧ ಹಣ ಪಾವತಿಸಿರುವ ನಿವೇಶನಗಳನ್ನು ಉಪ ನೋಂದಣಿ ಕಚೇರಿಯಲ್ಲಿ ನೋಂದಣಿಯಾಗಿರುತ್ತವೆ. ಆದರೆ, ಹಂಚಿಕೆದಾರರ ಬದಲಾಗಿ ಇದೇ ಹೆಸರು ಇರುವ ಬೇರೆ ಅವರಿಗೆ ಕೆಲವು ನಿವೇಶನಗಳನ್ನು 2021–22ನೇ ಸಾಲಿನಲ್ಲಿ ಬೇರೆ ವ್ಯಕ್ತಿಗಳ ಹೆಸರಿಗೆ ನೋಂದಣಿ ಮಾಡಲಾಗಿತ್ತು.

ನಿವೇಶನ ಸಂಖ್ಯೆ 777, 730, 749, 73, 748, 422, 384, 749, 447ಗಳಲ್ಲಿ ಒಟ್ಟು ₹35.64 ಲಕ್ಷ ಮೊತ್ತವನ್ನು ನಗರಸಭೆಯ ಖಾತೆಗೆ ಪಾವತಿ ಮಾಡದಿರುವುದು ತನಿಖಾ ವರದಿಯಿಂದ ಕಂಡು ಬಂದಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಗರದಲ್ಲಿ ಇಂದು

ರಾಜ್ಯಮಟ್ಟದ ಕಲಾ ಸಂಸ್ಕೃತಿ ಉತ್ಸವ: ಉದ್ಘಾಟನೆ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿಗಳು: ಜಾಣಗೆರೆ ವೆಂಕಟರಾಮಯ್ಯ, ಎಸ್.ವಿ. ರಾಜೇಂದ್ರ ಪ್ರಸಾದ್, ಅಧ್ಯಕ್ಷತೆ: ಪ್ರೇಮಾ ಸಿದ್ಧರಾಜು, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಲಲಿತಮ್ಮ ಚನ್ನಬಸಪ್ಪ ಸಭಾಂಗಣ, ಎಸ್.ಜೆ.ಆರ್. ಮಹಿಳಾ ಪದವಿ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10.20



ಮಲ್ಲೇಪುರಂ ಜಿ. ವೆಂಕಟೇಶ್

'ಡೇಟಾ ಆ್ಯಂಡ್ ಎಐ–ಎನ್‌ಹ್ಯಾನ್ಸಡ್ ಡಿಸಿಶನ್ ಮೇಕಿಂಗ್' ಸಂವಾದ: ಜೆ.ಬಿ. ಸಿಂಹ, ಶರತ ಶ್ರೀಭಾಷ್ಯಂ, ಆಯೋಜನೆ: ಚಾಣಕ್ಯ ವಿಶ್ವವಿದ್ಯಾಲಯ, ಸ್ಥಳ: ಯುವಕ ಸಂಘ, ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಮಾಧುರಿ ಕೌಶಿಕ್, ಅದಿತಿ ಕೃಷ್ಣಪ್ರಕಾಶ್, ಕೌಶಿಕ್ ಶ್ರೀಧರ್, ಶ್ರೀನಿಧಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಸುಮಾ ಸುಧೀಂದ್ರ, ಮೈಸೂರು ಶ್ರೀಕಾಂತ್, ಎಚ್.ಎಸ್. ಸುಧೀಂದ್ರ, ಬಿ.ಎಸ್. ರಘುನಂದನ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

'ಮಾರ್ಕಂಡೇಯ ಪುರಾಣಾಂತರ್ಗತ ವೆಂಕಟಾಚಲ ಮಹಾತ್ಮೆ' ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಸಂಜೆ 6.15

'ಶ್ರೀನಿವಾಸ ಕಲ್ಯಾಣ' ಪ್ರವಚನ: ಐತರೇಯ ಆಚಾರ್ಯ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಎರಡನೇ ಮುಖ್ಯರಸ್ತೆ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಒಳ ಮೀಸಲಾತಿ ಸಮೀಕ್ಷೆಗೆ ತರಬೇತಿ

ರಾಮನಗರ: ರಾಜ್ಯ ಸರ್ಕಾರದ ಆದೇಶದಂತೆ ನ್ಯಾಯಮೂರ್ತಿ ಡಾ. ಎಚ್.ಎನ್. ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗದ ವತಿಯಿಂದ ಮೇ 5ರಿಂದ ನಡೆಯಲಿರುವ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ವರ್ಗೀಕರಣ ಕುರಿತು ಸಮೀಕ್ಷಾ ಕಾರ್ಯದ ಕುರಿತು, ನಗರದ ಜಿಲ್ಲಾ ಪಂಚಾಯಿತಿಯಲ್ಲಿರುವ ಮಿನಿ ಸಭಾಂಗಣದಲ್ಲಿ ತರಬೇತಿ ಕಾರ್ಯಾಗಾರ ಸೋಮವಾರ ಜರುಗಿತು.

ಸಮೀಕ್ಷೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಮಾಸ್ಟರ್ ಟ್ರೈನರ್‌ಗಳು ತಾಲ್ಲೂಕು ಮಟ್ಟದ ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಿದರು. ಸಮೀಕ್ಷೆಯ ಮಹತ್ವವನ್ನು ಟ್ರೈನರ್‌ಗಳು ಮನವರಿಕೆ ಮಾಡಿಕೊಟ್ಟರು. ಅಲ್ಲದೆ ಸಮೀಕ್ಷೆ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಗಳು, ಮಾಹಿತಿ ಸಂಗ್ರಹ, ಗೊಂದಲಗಳ ನಿವಾರಣೆ, ಫಾರಂ ಭರ್ತಿ ಮಾಡುವ ವಿಧಾನ ಕುರಿತು ಸೂಚನೆಗಳನ್ನು ನೀಡಿದರು.

ಪರಿಶಿಷ್ಟ ಸಮುದಾಯಗಳ ಪ್ರತಿ ಕುಟುಂಬದ ಸ್ಥಿತಿಗತಿ ಹಾಗೂ ವೈಯಕ್ತಿಕ ಮಾಹಿತಿಯನ್ನು ನಿವಾಸಿಗಳ ಹೇಳಿಕೆ ಮೇರೆಗೆ ನಿಖರವಾಗಿ ದಾಖಲಿಸಬೇಕು ಎಂದು ಸಲಹೆ ನೀಡಿದರು.

ಕೂಡಲಸಂಗಮದಲ್ಲಿ ಬಸವಾದಿ ಶರಣರ ವೈಭವ ಇಂದು, ನಾಳೆ

ಉತ್ಸವಕ್ಕೆ ಅದ್ದೂರಿ ಸಿದ್ಧತೆ; ಸ್ಥಳೀಯರ ಬೇಸರ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಸಾಂಸ್ಕೃತಿಕ ನಾಯಕ ಬಸವಣ್ಣನ ಜಯಂತಿ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲೆಯ ಕೂಡಲಸಂಗಮದಲ್ಲಿ ಹಮ್ಮಿಕೊಂಡಿರುವ 'ಅನುಭವ ಮಂಟಪ–ಬಸವಾದಿ ಶರಣರ ವೈಭವ' ಇಂದಿನಿಂದ ಎರಡು ದಿನ ನಡೆಯಲಿದೆ. ಆದರೆ, ಸ್ಥಳೀಯರಿಗೆ ಅವಕಾಶ ನೀಡದಿರುವ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ.

ಎರಡನೇ ಬಾರಿ ಆಹ್ವಾನ ಪತ್ರಿಕೆ ಮುದ್ರಣ: ಶರಣರ ವೈಭವದ ಆಹ್ವಾನ ಪತ್ರಿಕೆಯ ಮುಖಪುಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರ ಭಾವಚಿತ್ರ ಮಾತ್ರ ಇತ್ತು. ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ, ಸ್ಥಳೀಯ ಶಾಸಕ ವಿಜಯಾನಂದ ಕಾಶಪ್ಪನವರ ಭಾವಚಿತ್ರವಿರಲಿಲ್ಲ. 'ತಮ್ಮ ಭಾವಚಿತ್ರ ಹಾಕದ ಕಾರಣಕ್ಕೆ ಶಾಸಕ ವಿಜಯಾನಂದ ಕಾಶಪ್ಪನವರ ಅಸಮಾಧಾನ ವ್ಯಕ್ತಪಡಿಸಿದ್ದು, ಮತ್ತೊಮ್ಮೆ ಆಮಂತ್ರಣ ಪತ್ರಿಕೆ ಮುದ್ರಿಸಿ, ಹಂಚಲಾಯಿತು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿ ದೆಹಲಿಯ ಅಕ್ಷರಧಾಮ ಮಾದರಿಯಲ್ಲಿ ನಿರ್ಮಿಲಾಗುತ್ತಿರುವ ಬಸವ ಅಂತರರಾಷ್ಟ್ರೀಯ ಕೇಂದ್ರದ ಕಟ್ಟಡ ನಿರ್ಮಾಣ ಕಾರ್ಯ ಇನ್ನೂ ಪೂರ್ಣವಾಗಿಲ್ಲ

ಸ್ಥಳೀಯರ ಅಸಮಾಧಾನ: 'ಕಾರ್ಯಕ್ರಮದಲ್ಲಿ ನಾಲ್ಕು ವಿಚಾರಗೋಷ್ಠಿಗಳು ಇವೆ. ಅದರಲ್ಲಿ ಬಾಗಲಕೋಟೆ ಜಿಲ್ಲೆಯ ಒಬ್ಬ ಸಾಹಿತಿಯ ಹೆಸರೂ ಇಲ್ಲ. ಬಸವಣ್ಣನ ಬಗ್ಗೆ ತಿಳಿದವರು ಯಾರೂ ಜಿಲ್ಲೆಯಲ್ಲಿ ಇಲ್ಲವೇ? ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮಕ್ಕೂ ಬೆಂಗಳೂರಿನವರು, ಬಾಗಲಕೋಟೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೂ ಬೆಂಗಳೂರಿನವರೇ ಬರುತ್ತಾರೆ. ಕಾರ್ಯಕ್ರಮದ ಆಚರಣೆ ಸಮಿತಿಯಲ್ಲಿ ಇರುವ ಮೂವರು, ವಿಚಾರಗೋಷ್ಠಿಯಲ್ಲೂ ಇದ್ದಾರೆ. ಜಿಲ್ಲೆಯಲ್ಲಿ ಸಂಪನ್ಮೂಲ ವ್ಯಕ್ತಿಗಳು ಇಲ್ಲವೇ' ಎಂದು ಸಾಹಿತಿ ಲಕ್ಷ್ಮಣ ಬದಾಮಿ ಬೇಸರ ವ್ಯಕ್ತಪಡಿಸಿದರು.

'ಆಹ್ವಾನ ಪತ್ರಿಕೆಯಲ್ಲಿ ರಾಜಕಾರಣಿಗಳ ಹೆಸರೇ ತುಂಬಿವೆ. ವಚನಕಾರರ, ಬಸವಾದಿ ಶರಣರ ಹೆಸರು ಹಾಕಿಲ್ಲ. ನೀವೇ (ರಾಜಕಾರಣಿಗಳೇ) ಇರುವುದಾದರೆ, ಬಸವಣ್ಣವರ ಹೆಸರಿನಲ್ಲಿ ಮಾಡುವುದೇಕೆ?' ಎಂದು ಮೇಘಮೈತ್ರಿ ಸಂಸ್ಥೆಯ ಅಧ್ಯಕ್ಷ ರಮೇಶ ಬೇಸರ ವ್ಯಕ್ತಪಡಿಸಿದ್ದಾರೆ.

ಬಳಕೆಯಾಗದ ಅಂತರರಾಷ್ಟ್ರೀಯ ಕೇಂದ್ರ

ಕೂಡಲಸಂಗಮದಲ್ಲಿ 1998ರಲ್ಲಿ ನಿರ್ಮಾಣ ಕಾರ್ಯ ಆರಂಭಗೊಂಡು 2006ರಲ್ಲಿ ಪೂರ್ಣಗೊಂಡ ₹ 15 ಕೋಟಿ ವೆಚ್ಚದ ಬಸವ ಅಂತರರಾಷ್ಟ್ರೀಯ ಕೇಂದ್ರವು ಬಳಕೆಯಾಗದೇ, ಬೀಗ ಹಾಕಲಾಗಿದೆ. ಈ ಕೇಂದ್ರವನ್ನು ಯಾವ ರೀತಿ ಸದ್ಬಳಕೆ ಮಾಡಬೇಕು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಅದು ಸಣ್ಣದಾಯಿತು ಎಂಬ ಕಾರಣಕ್ಕೆ ಪಕ್ಕದಲ್ಲೇ ದೆಹಲಿಯ ಅಕ್ಷರಧಾಮ ಮಾದರಿಯಲ್ಲಿ 2018ರಿಂದ ಮತ್ತೊಂದು ಕಟ್ಟಡ ನಿರ್ಮಿಸಲಾಗುತ್ತಿದೆ. ₹75 ಕೋಟಿ ವೆಚ್ಚವಾಗಿದೆ. ಅದೂ ಪೂರ್ಣಗೊಂಡಿಲ್ಲ.

> ಬಸವ ವೇದಿಕೆಯಲ್ಲಿ ಮಂಗಳವಾರ, ಬುಧವಾರ ಕಾರ್ಯಕ್ರಮ ನಡೆಯಲಿದೆ. ಎರಡನೇ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳಬಹುದು.
> **ಆರ್.ಬಿ. ತಿಮ್ಮಾಪುರ,** ಸಚಿವ

14ರ ಪೋರನ ಬೀಸಾಟಕ್ಕೆ ಬೆಚ್ಚಿದ ಟೈಟನ್ಸ್ ಬೌಲರ್‌ಗಳು • ಜೈಸ್ವಾಲ್ ಅಜೇಯ ಅರ್ಧಶತಕ

ಜೈಪುರದಲ್ಲಿ ಸೂರ್ಯವಂಶಿ 'ವೈಭವ'

ಶತಕ ಸಿಡಿಸಿದ ವೈಭವ್ ಅವರನ್ನು ಅಭಿನಂದಿಸಿದ ಯಶಸ್ವಿ ಜೈಸ್ವಾಲ್ ಪಿಟಿಐ ಚಿತ್ರ

ಜೈಪುರ (ಪಿಟಿಐ): ಗುಲಾಬಿ ರಂಗಿನ ನಗರದ ಹೊನಲು ಬೆಳಕಿನಲ್ಲಿ 14 ವರ್ಷ ವಯಸ್ಸಿನ ಪೋರ ವೈಭವ್ ಸೂರ್ಯವಂಶಿ (101; 38ಎ) ಸಿಕ್ಸರ್, ಬೌಂಡರಿಗಳ ಸುರಿಮಳೆಯೊಡನೆ ಮಿಂಚಿದರು. ಐಪಿಎಲ್‌ನಲ್ಲಿ ಕೇವಲ ಮೂರನೇ ಪಂದ್ಯ ಆಡುತ್ತಿರುವ ವೈಭವ್ ಸ್ಫೋಟಕ ಇನಿಂಗ್ಸ್ ಮೂಲಕ ಎರಡನೇ ಅತಿ ವೇಗದ ಶತಕ ಸಿಡಿಸಿದರು. ವೈಭವ್ ಅಬ್ಬರದಾಟಕ್ಕೆ ರಾಜಸ್ಥಾನ ರಾಯಲ್ಸ್ ತಂಡದ ಎದುರು ಸೋಮವಾರ ಗುಜರಾತ್ ಟೈಟನ್ಸ್ ಶರಣಾಗಬೇಕಾಯಿತು.

ಗುಜರಾತ್ ಟೈಟನ್ಸ್ 210 ರನ್‌ಗಳ ಗುರಿಯೊಡ್ಡಿದಾಗ, ಅಂಕಪಟ್ಟಿಯಲ್ಲಿ 9ನೇ ಸ್ಥಾನದಲ್ಲಿರುವ ರಾಜಸ್ಥಾನ ರಾಯಲ್ಸ್ ಆ ಮೊತ್ತ ಬೆನ್ನಟ್ಟುವ ಸಾಧ್ಯತೆ ಕಡಿಮೆ ಎಂಬಂತೆ ಕಂಡಿತ್ತು. ಆದರೆ ವೈಭವ್ ಮತ್ತು ಯಶಸ್ವಿ ಜೈಸ್ವಾಲ್ (ಔಟಾಗದೇ 70;40ಎ, 4x9, 6x2) ಅವರ ಆಟದ ಎದುರು ಆ ಮೊತ್ತ ಲೆಕ್ಕಕ್ಕೇ ಇಲ್ಲದಂತೆ ಆಯಿತು. ರಿಯಾನ್ ಪರಾಗ್ ಪಡೆ ಎಂಟು ವಿಕೆಟ್‌ಗಳ ಭರ್ಜರಿ ಜಯ ಪಡೆಯಿತು. ಇದು ಹತ್ತು ಪಂದ್ಯಗಳಲ್ಲಿ ತಂಡಕ್ಕೆ ಮೂರನೇ ಜಯ.

ವೈಭವ್ ಆಟದಲ್ಲಿ ಏಳು ಬೌಂಡರಿ, 11 ಸಿಕ್ಸರ್‌ಗಳಿದ್ದವು. ಇಶಾಂತ್ ಶರ್ಮಾ ಮಾಡಿದ ಇನಿಂಗ್ಸ್‌ನ ನಾಲ್ಕನೇ ಓವರಿನಲ್ಲಿ 26 ರನ್ ಗಳಿಸುವ ಮೂಲಕ ಅವರ ಅಬ್ಬರದ ಆಟ ಆರಂಭವಾಯಿತು. ಕೇವಲ 17 ಎಸೆತಗಳಲ್ಲಿ ಅರ್ಧ ಶತಕ ದಾಟಿದರು. ಕರೀಂ ಜನ್ನತ್ ಅವರ ಒಂದೇ ಓವರಿನಲ್ಲಿ (ಇನಿಂಗ್ಸ್‌ನ ಹತ್ತನೇ ಓವರ್) ಅವರು ಮೂರು ಸಿಕ್ಸರ್, ಮೂರು ಬೌಂಡರಿಗಳಿದ್ದ 30 ರನ್ ಸಿಡಿಸಿ ತಮ್ಮ ತಾಕತ್ತು ಮೆರೆದರು. 7.4 ಓವರುಗಳಲ್ಲಿ ತಂಡದ ಮೊತ್ತ ನೂರು ದಾಟಿತು. 10.2 ಓವರುಗಳಲ್ಲಿ 150 ದಾಟಿ ನಾಗಾಲೋಟ ಪಡೆಯಿತು. ಕ್ರೀಸಿನ ಇನ್ನೊಂದು ಕಡೆಯಿದ್ದ ಜೈಸ್ವಾಲ್ ಕೂಡ ಎದುರಾಳಿಯ ಆಟ ಆಸ್ವಾದಿಸಿದರು.

ಅನುಭವಿ ಬೌಲರ್‌ಗಳನ್ನು ಒಳಗೊಂಡ ಟೈಟನ್ಸ್ ವಿರುದ್ಧ ಸವಾರಿ ನಡೆಸಿದ ವೈಭವ್ ಅವರು ರಶೀದ್ ಖಾನ್ ಎಸೆತದಲ್ಲಿ ಮಿಡ್‌ವಿಕೆಟ್‌ಗೆ ಸಿಕ್ಸರ್ ಎತ್ತುವ ಮೂಲಕ ಶತಕ ಪೂರೈಸಿದರು. 35ನೇ ಎಸೆತದಲ್ಲಿ ಮೂರಂಕಿ ಗಡಿ ದಾಟಿದ ಅವರು, ಈ ಸಾಧನೆ ಮಾಡಿದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಹಿರಿಮೆಗೂ ಪಾತ್ರವಾದರು. ಶತಕ ಸಿಡಿಸಿ ಸಂಭ್ರಮಿಸಿದ ಬೆನ್ನಲ್ಲೇ ಪ್ರಸಿದ್ಧ ಕೃಷ್ಣ (47ಕ್ಕೆ 1) ಅವರ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಮುಂದಾದ ವೈಭವ್ ಬೌಲ್ಡ್ ಆದರು. 18 ವರ್ಷಗಳ ಐಪಿಎಲ್‌ನಲ್ಲಿ 14 ವರ್ಷ ವಯಸ್ಸಿನ ಈ ಬಾಲಕನ ಅತ್ಯಮೋಘ ಆಟ ಕೊನೆಗೊಂಡಾಗ ತಕ್ಷಣ ಜೈಸ್ವಾಲ್ ಮುಂದೆ ಹೋಗಿ ಅವರನ್ನು ಆಲಂಗಿಸಿಕೊಂಡು ಅಭಿನಂದಿಸಿದರು. ಎದುರಾಳಿ ಟೈಟನ್ಸ್ ಆಟಗಾರರೂ ಬೆನ್ನುತಟ್ಟಿದರು.

ವೈಭವ್ ಮತ್ತು ಜೈಸ್ವಾಲ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 161 ರನ್ ಸೇರಿಸಿದರು. ನಿತೀಶ್ ರಾಣಾ (4) ನಿರಾಸೆ ಮೂಡಿಸಿದರು. ನಂತರದಲ್ಲಿ ಜೈಸ್ವಾಲ್ ಅವರನ್ನು ಸೇರಿಕೊಂಡ ನಾಯಕ ರಿಯಾನ್ ಪರಾಗ್ (ಔಟಾಗದೇ 32;15ಎ, 4x2, 6x2) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು. ತಂಡವು 15.5 ಓವರ್‌ಗಳಲ್ಲಿ 2 ವಿಕೆಟ್‌ಗೆ 212 ರನ್ ಗಳಿಸಿತು.

ಗಿಲ್ ಅಬ್ಬರ: ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಇಳಿದ ಗುಜರಾತ್ ತಂಡವು ನಾಯಕ ಶುಭಮನ್ ಗಿಲ್ (84;50ಎ, 4x5, 6x4) ಅವರ ಬ್ಯಾಟಿಂಗ್ ಬಲದಿಂದ 4 ವಿಕೆಟ್‌ಗೆ 209 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಗಿಲ್ ಮತ್ತು ಸಾಯಿ ಸುದರ್ಶನ್ (39, 30ಎಸೆತ) ಅವರು ಮೊದಲ ವಿಕೆಟ್‌ಗೆ 61 ಎಸೆತಗಳಲ್ಲಿ 93 ರನ್ ಸೇರಿಸಿ ತಂಡಕ್ಕೆ ಉತ್ತಮ ಬುನಾದಿ ಹಾಕಿಕೊಟ್ಟರು. ನಂತರದಲ್ಲಿ ಜೋಸ್ ಬಟ್ಲರ್ ಅವರೂ ಬಿರುಸಿನ ಅರ್ಧ ಶತಕ (ಔಟಾಗದೇ 50, 26 ಎಸೆತ) ಹೊಡೆದರು. ನಾಲ್ಕು ಭರ್ಜರಿ ಸಿಕ್ಸರ್‌ಗಳ ಜೊತೆ ಮೂರು ಬೌಂಡರಿಗಳನ್ನು ಅವರು ಸಿಡಿಸಿ ತಂಡ 200ರ ಮೊತ್ತ ದಾಟಲು ನೆರವಾದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರುಗಳಲ್ಲಿ 4ಕ್ಕೆ 209 (ಸಾಯಿ ಸುದರ್ಶನ್ 39, ಶುಭಮನ್ ಗಿಲ್ 84, ಜೋಸ್ ಬಟ್ಲರ್ ಔಟಾಗದೇ 50; ಮಹೀಷ ತೀಕ್ಷಣ 35ಕ್ಕೆ2). ರಾಜಸ್ಥಾನ ರಾಯಲ್ಸ್: 15.5 ಓವರ್‌ಗಳಲ್ಲಿ 2 ವಿಕೆಟ್‌ಗೆ 212 (ಯಶಸ್ವಿ ಜೈಸ್ವಾಲ್ ಔಟಾಗದೇ 70, ವೈಭವ್ ಸೂರ್ಯವಂಶಿ 101, ರಿಯಾನ್ ಪರಾಗ್ ಔಟಾಗದೇ 32; ರಶೀದ್ ಖಾನ್ 24ಕ್ಕೆ 1). ಪಂದ್ಯದ ಆಟಗಾರ: ವೈಭವ್ ಸೂರ್ಯವಂಶಿ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	10	7	3	14	0.521
ಮುಂಬೈ ಇಂಡಿಯನ್ಸ್	10	6	4	12	0.889
ಗುಜರಾತ್ ಟೈಟನ್ಸ್	9	6	3	12	1.748
ಡೆಲ್ಲಿ ಕ್ಯಾಪಿಟಲ್ಸ್	9	6	3	12	0.482
ಪಂಜಾಬ್ ಕಿಂಗ್ಸ್	9	5	3	11	0.177
ಲಖನೌ ಸೂಪರ್ ಜೈಂಟ್ಸ್	10	5	5	10	-0.325
ಕೋಲ್ಕತ್ತ ನೈಟ್ ರೈಡರ್ಸ್	9	3	5	7	0.212
ರಾಜಸ್ಥಾನ ರಾಯಲ್ಸ್	10	3	7	6	-0.349
ಸನ್‌ರೈಸರ್ಸ್ ಹೈದರಾಬಾದ್	9	3	6	6	-1.103
ಚೆನ್ನೈ ಸೂಪರ್ ಕಿಂಗ್ಸ್	9	2	7	4	-1.302

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 456 ರನ್

ಪರ್ಪಲ್ ಕ್ಯಾಪ್
ಜೋಶ್ ಹೇಜಲ್‌ವುಡ್ (ಆರ್‌ಸಿಬಿ) 18 ವಿಕೆಟ್

ಐಪಿಎಲ್‌ನಲ್ಲಿ ವೇಗದ ಶತಕ

ಆಟಗಾರ	ತಂಡ	ಎಸೆತ	ವರ್ಷ	ಸ್ಥಳ
ಕ್ರಿಸ್ ಗೇಲ್	ಆರ್‌ಸಿಬಿ	30	2013	ಬೆಂಗಳೂರು
ವೈಭವ್ ಸೂರ್ಯವಂಶಿ	ಆರ್‌ಆರ್	35	2025	ಜೈಪುರ
ಯೂಸುಫ್ ಪಠಾಣ್	ಆರ್‌ಆರ್	37	2010	ಮುಂಬೈ
ಡೇವಿಡ್ ಮಿಲ್ಲರ್	ಕಿಂಗ್ಸ್ ಇಲೆವನ್	38	2013	ಮೊಹಾಲಿ
ಟ್ರಾವಿಸ್ ಹೆಡ್	ಎಸ್‌ಆರ್‌ಎಚ್	39	2024	ಬೆಂಗಳೂರು
ಪ್ರಿಯಾಂಶ್ ಆರ್ಯ	ಪಿಬಿಕೆಸ್	39	2025	ಮುಲ್ಲನಪುರ

ಟಿ20: ಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರರು

ಪ್ರಾಯ	ಆಟಗಾರ	ತಂಡ	ಎದುರಾಳಿ	ವರ್ಷ
14 ವರ್ಷ 32 ದಿನ	ವೈಭವ್ ಸೂರ್ಯವಂಶಿ	ಆರ್‌ಆರ್	ಜಿಟಿ	2025
18 ವರ್ಷ 118 ದಿನ	ವಿಜಯ್ ಜೋಲ್	ಮಹಾರಾಷ್ಟ್ರ	ಮುಂಬೈ	2013
18 ವರ್ಷ 149 ದಿನ	ಪರ್ವೇಜ್ ಹುಸೇನ್	ಬಾರಿಶಾಲ್	ರಾಜ್‌ಶಾಹಿ	2020
18 ವರ್ಷ 280 ದಿನ	ಗುಸ್ತಾವ್ ಮೆಕಿಯಾನ್	ಫ್ರಾನ್ಸ್	ಸ್ವಿಟ್ಜರ್ಲೆಂಡ್	2022

ಕ್ಯಾಪಿಟಲ್ಸ್‌ಗೆ ಕೋಲ್ಕತ್ತ ಸವಾಲು

ಅಕ್ಷರ್ ಪಟೇಲ್

ಅಜಿಂಕ್ಯ ರಹಾನೆ

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡ ಮಧ್ಯಮ ಹಂತದ ಓವರುಗಳಲ್ಲಿ ಪರದಾಡುತ್ತಿರುವುದು ಕಳೆದ ಕೆಲವು ಪಂದ್ಯಗಳಲ್ಲಿ ಎದ್ದುಕಂಡಿದೆ. ಮಂಗಳವಾರ ತವರಿನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸುವಾಗ ಡೆಲ್ಲಿ ತಂಡವು ಈ ಹಿನ್ನಡೆಯನ್ನು ಸುಧಾರಿಸಿಕೊಳ್ಳುವ ಗುರಿಯಲ್ಲಿದೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡ ಕೊನೆಯ ನಾಲ್ಕು ಪಂದ್ಯಗಳಲ್ಲಿ ಎರಡನ್ನು ಸೋತಿದೆ. ಭಾನುವಾರ ತವರಿನಲ್ಲೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಮಣಿದಿದೆ. ಲೀಗ್ ಮುಕ್ತಾಯದತ್ತ ಸಾಗುತ್ತಿರುವ ಈ ಹಂತದಲ್ಲಿ ಅಡಚಣೆಗಳು ಎದುರಾಗದಂತೆ ನಿಭಾಯಿಸುವ ಸವಾಲು ಆತಿಥೇಯ ತಂಡದ ಮುಂದಿದೆ.

ಅಭಿಷೇಕ್ ಪೊರೆಲ್ ಬೀಸಾಟವಾಡುತ್ತಿದ್ದಾರೆ. ಆದರೆ ಫಾಫ್ ಡು ಪ್ಲೆಸಿ ಪಿಚ್‌ನ ಸ್ವಭಾವಕ್ಕೆ ಬೇಗನೇ ಒಗ್ಗಿಕೊಳ್ಳಬೇಕಾಗಿದೆ. ಡೆಲ್ಲಿ ಪರ ಈ ಋತುವಿನ ಯಶಸ್ವಿ ಆಟಗಾರ ಕೆ.ಎಲ್.ರಾಹುಲ್ ಅವರಿಗೆ ಆರ್‌ಸಿಬಿ ಸ್ಪಿನ್ನರ್‌ಗಳ ಎದುರು ರನ್ ವೇಗ ಹೆಚ್ಚಿಸಲು ಆಗಿರಲಿಲ್ಲ.

ಕರುಣ್ ನಾಯರ್ ಅವರಿಂದ ಉತ್ತಮ ಇನಿಂಗ್ಸ್ ಬಂದರೆ ರಾಹುಲ್ ಮೇಲಿನ ಒತ್ತಡ ಕಡಿಮೆಯಾಗಲಿದೆ. ಬೌಲಿಂಗ್ ವಿಭಾಗದಲ್ಲಿ ನಾಯಕ ಅಕ್ಷರ್ ಪಟೇಲ್ ಲಯ ಕಂಡುಕೊಂಡಿದ್ದಾರೆ. ಅವರಿಗೆ ಇತರ ಬೌಲರ್‌ಗಳ ಬೆಂಬಲ ದೊರೆಯಲಿಲ್ಲ. ಡೆಲ್ಲಿ ತಂಡದ ಕ್ಷೇತ್ರರಕ್ಷಣೆಯೂ ಉತ್ತಮವಾಗಿರಲಿಲ್ಲ. ಪೊರೆಲ್ ಸುಲಭ ಕ್ಯಾಚ್ ಬಿಟ್ಟಿದ್ದು, ಕೃಣಾಲ್ ಪಾಂಡ್ಯ ಅವರಿಗೆ ವರದಾನವಾಯಿತು.

ಕಳೆದ ಬಾರಿಯ ಚಾಂಪಿಯನ್ ನೈಟ್‌ರೈಡರ್ಸ್ ಈ ಬಾರಿ ಪರದಾಡುತ್ತಿದೆ. ಅಜಿಂಕ್ಯ ಬಳಗ ಕೊನೆಯ ಮೂರು ಪಂದ್ಯಗಳಲ್ಲಿ ಎರಡು ಸೋತಿದ್ದು, ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯ ಮಳೆಯ ಪಾಲಾಯಿತು. ಹೀಗಾಗಿ ತಂಡದ ವಿಶ್ವಾಸ ಕೆಳಮಟ್ಟದಲ್ಲಿದೆ.

ಪ್ಲೇ ಆಫ್ ಅವಕಾಶ ಜೀವಂತ ವಿರಿಸಬೇಕಾದರೆ ಕೋಲ್ಕತ್ತಕ್ಕೆ ಗೆಲುವು ಅನಿವಾರ್ಯ. ಇನ್ನೊಂದು ಸೋಲು ಅದರ ಆಸೆ ಭಗ್ನಗೊಳಿಸಬಲ್ಲದು. ತಂಡದ ಬ್ಯಾಟಿಂಗ್ ಹೇಳಿಕೊಳ್ಳುವಂತಿಲ್ಲ. ಅಜಿಂಕ್ಯ ರಹಾನೆ ಮತ್ತು ಯುವತಾರೆ ಅಂಗ್‌ಕ್ರಿಶ್ ರಘುವಂಶಿ ಮಾತ್ರ ಯಶಸ್ಸು ಗಳಿಸಿದ್ದಾರೆ. ವೆಂಕಟೇಶ್ ಅಯ್ಯರ್, ರಸೆಲ್ ಮತ್ತು ರಮಣದೀಪ್ ಸಿಂಗ್ ಯಶಸ್ಸು ಕಾಣುತ್ತಿಲ್ಲ.

ಬೌಲರ್‌ಗಳಿಂದ ಸ್ಥಿರ ಪ್ರದರ್ಶನ ಬಂದಿಲ್ಲ. ವರುಣ್ ಚಕ್ರವರ್ತಿ, ವೈಭವ್ ಅರೋರಾ ಮತ್ತು ಹರ್ಷಿತ್ ರಾಣಾ ಅವರಿಗೆ ಡೆಲ್ಲಿ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಇದೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ದಿಗ್ಗಜರಿಗೆ ಪದ್ಮ ಪ್ರದಾನ

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಸೋಮವಾರ ದಿಗ್ಗಜ ಹಾಕಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರಿಗೆ ಪದ್ಮಭೂಷಣ ಮತ್ತು ಸ್ಪಿನ್ ತಾರೆ ರವಿಚಂದ್ರನ್ ಅಶ್ವಿನ್ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರದಾನ ಮಾಡಿದರು ಪಿಟಿಐ ಚಿತ್ರ

ಪಂತ್‌ಗೆ ₹24 ಲಕ್ಷ ದಂಡ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ವಿರುದ್ಧ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ನಿಗದಿತ ಅವಧಿಯೊಳಗೆ ಲಖನೌ ತಂಡ ಓವರುಗಳನ್ನು ಪೂರೈಸಲು ವಿಫಲವಾಗಿದ್ದಕ್ಕೆ ನಾಯಕ ರಿಷಭ್ ಪಂತ್ ಅವರಿಗೆ ₹24 ಲಕ್ಷ ದಂಡ ವಿಧಿಸಲಾಗಿದೆ.

ತಂಡ ಎರಡನೇ ಬಾರಿ ಈ ತಪ್ಪು ಮಾಡಿದ ಕಾರಣ ಐಪಿಎಲ್ ನೀತಿಸಂಹಿತೆಯ 2.22 ವಿಧಿಯನ್ವಯ ಪಂತ್‌ಗೆ ಈ ದಂಡ ವಿಧಿಸಲಾಗಿದೆ ಎಂದು ಐಪಿಎಲ್ ಪ್ರಕಟಣೆ ತಿಳಿಸಿದೆ.

ಇಂಪ್ಯಾಕ್ಟ್ ಪ್ಲೇಯರ್ ಸೇರಿ ತಂಡದ ಪ್ಲೇಯಿಂಗ್ ಇಲೆವನ್ ಆಟಗಾರರಿಗೆ ₹6 ಲಕ್ಷ ಅಥವಾ ಪಂದ್ಯ ಸಂಭಾವನೆಯ ಶೇ 25ರಷ್ಟು (ಇದರಲ್ಲಿ ಯಾವುದು ಕಡಿಮೆಯೊ ಅದನ್ನು) ದಂಡವಾಗಿ ವಿಧಿಸಲಾಗುತ್ತದೆ ಎಂದೂ ತಿಳಿಸಿದೆ.

ಬೆಂಗಳೂರಿನಲ್ಲಿ ಇ ಕ್ರಿಕೆಟ್ ಲೀಗ್

ಬೆಂಗಳೂರು: 'ಸಿಲಿಕಾನ್ ಸಿಟಿ' ಖ್ಯಾತಿಯ ಬೆಂಗಳೂರಿಗೆ 'ಗ್ಲೋಬಲ್ ಇ – ಕ್ರಿಕೆಟ್ ಪ್ರಿಮಿಯರ್ ಲೀಗ್' ಕಾಲಿಟ್ಟಿದೆ.

ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಗ್ಲೋಬಲ್ ಇ ಕ್ರಿಕೆಟ್ ಪ್ರಿಮಿಯರ್ ಲೀಗ್ ಆರಂಭವಾಯಿತು. ಮೇ 2ರವರೆಗೆ ಲೀಗ್ ನಡೆಯಲಿದೆ. ಇದು ಎರಡನೇ ಆವೃತ್ತಿಯಾಗಿದೆ. ಆರು ತಂಡಗಳು ಕಣದಲ್ಲಿವೆ.

ಸುದ್ದಿಗಾರರೊಂದಿಗೆ ಮಾತ ನಾಡಿದ ಲೀಗ್ ಆಯೋಜಕರಾದ ಜೆಟ್ ಸಿಂಥೆಸಿಸ್ ಸಂಸ್ಥೆ ಸಂಸ್ಥಾಪಕ ಮತ್ತು ಸಿಇಒ ರಾಜನ್ ನವನಿ, 'ಭಾರತದಲ್ಲಿ ವಿಡಿಯೊ ಗೇಮಿಂಗ್ ಮತ್ತು ಕ್ರೀಡಾ ಸಂಸ್ಕೃತಿಯನ್ನು ಒಂದುಗೂಡಿಸಿ ನವಪೀಳಿಗೆಗೆ ಇ ಕ್ರಿಕೆಟ್ ಲೀಗ್ ನೀಡುವುದು ನಮ್ಮ ಉದ್ದೇಶವಾಗಿದೆ.

ಭಾರತದಲ್ಲಿ ಕ್ರಿಕೆಟ್ ಅತ್ಯಂತ ಜನಪ್ರಿಯ ಕ್ರೀಡೆ. ಐಪಿಎಲ್ ಶುರುವಾದ ಮೇಲೆ ಕ್ರಿಕೆಟ್ ಅಗಾಧವಾಗಿ ಮತ್ತು ಬಹು ಆಯಾಮಗಳಲ್ಲಿ ಬೆಳೆಯುತ್ತಿದೆ. ಯುವ ಜನರ ಆಕರ್ಷಣೆಯಾಗಿದೆ. ಇಲ್ಲಿ ನಡೆಯುತ್ತಿರುವುದು ಎರಡನೇ ಆವೃತ್ತಿಯಾಗಿದೆ. ಆರು ತಂಡಗಳನ್ನು ರಚಿಸಲಾಗಿದೆ. ವೃತ್ತಿ ಪರ ರೀತಿಯಲ್ಲಿ ಬಿಡ್ ಮೂಲಕ ತಂಡಗಳ ರಚನೆಯಾಗಿದೆ.

ಕೌರ್ ಪಡೆಗೆ ದಕ್ಷಿಣ ಆಫ್ರಿಕಾ ಸವಾಲು

ಕೊಲಂಬೊ: ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳೆಯರ ಕ್ರಿಕೆಟ್ ತಂಡವು ತ್ರಿಕೋನ ಸರಣಿಯ ತನ್ನ ಎರಡನೇ ಪಂದ್ಯದಲ್ಲಿ ಮಂಗಳವಾರ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಭಾನುವಾರ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಶ್ರೀಲಂಕಾ ತಂಡವನ್ನು ಒಂಬತ್ತು ವಿಕೆಟ್‌ಗಳಿಂದ ಮಣಿಸಿರುವ ಭಾರತದ ವನಿತೆಯರು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದ್ದಾರೆ.

ಭಾರತ ತಂಡವು ಮೂರು ವಿಭಾಗಗಳಲ್ಲಿಯೂ ಅತ್ಯುತ್ತಮ ಪ್ರದರ್ಶನ ನೀಡಿತ್ತು. ಸ್ಪಿನ್ನರ್‌ಗಳಾದ ಸ್ನೇಹಾ ರಾಣಾ, ದೀಪ್ತಿ ಶರ್ಮಾ ಮತ್ತು ಶ್ರೀಚಾರಣಿ ಅವರನ್ನು ಲಂಕಾ ತಂಡವನ್ನು ಅಲ್ಪ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಯಶಸ್ವಿಯಾಗಿದ್ದರು. ಅಗ್ರ ಬ್ಯಾಟರ್‌ಗಳಾದ ಪ್ರತೀಕಾ ರಾವಲ್, ಸ್ಮೃತಿ ಮಂದಾನ ಮತ್ತು ಹರ್ಲೀನ್ ಡಿಯೋಲ್ ಅವರು ಸೊಗಸಾಗಿ ಆಡಿ ತಂಡವನ್ನು ಗೆಲುವಿನ ದಡ ಸೇರಿಸಿದ್ದರು. ಫೀಲ್ಡಿಂಗ್ ಕೂಡ ಅತ್ಯಂತ ಚುರುಕಾಗಿತ್ತು.

ಭಾರತ ತಂಡವು 2022ರಿಂದ ಈ ಮಾದರಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸೋತಿಲ್ಲ. ಈ ಬಾರಿಯೂ ಕೌರ್ ಪಡೆ ಜಯದ ಓಟ ಮುಂದುವರಿಸುವ ಛಲದಲ್ಲಿದೆ.

ಅವ್ಯಕ್ತ್‌ಗೆ ಪ್ರಶಸ್ತಿ

ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿ ಬೇಸಿಗೆ ಶಿಬಿರದ ಅಂಗವಾಗಿ ಹಮ್ಮಿಕೊಂಡಿದ್ದ 15 ವರ್ಷದೊಳಗಿನವರ ಚೆಸ್ ಟೂರ್ನಿಯಲ್ಲಿ ಅವ್ಯಕ್ತ್ ಎಂ. ಆರು ಸುತ್ತುಗಳಿಂದ ಗರಿಷ್ಠ ಆರು ಪಾಯಿಂಟ್ಸ್ ಕಲೆಹಾಕಿ ಪ್ರಶಸ್ತಿ ಗೆದ್ದುಕೊಂಡಿದ್ದಾನೆ.

ರಾಜರಾಜೇಶ್ವರಿ ನಗರದ ಕೃಷ್ಣಾ ಗಾರ್ಡನ್‌ನ ಅಕಾಡೆಮಿಯಲ್ಲಿ ನಡೆದ ಟೂರ್ನಿಯಲ್ಲಿ ಗುಹಾನ್ ಎ. (5 ಪಾಯಿಂಟ್ಸ್), ಹ್ಯಯಾನ್ ಶಿವಾನಂದ್ (5), ರಿಶಿಕ್ (4.5) ಮತ್ತುಅನಂತ ಪ್ರಸಾದ್ (4) ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನ ಪಡೆದರು. ಎಸ್.ಕೆ.ಸಾನ್ವಿ (3.5) ಬಾಲಕಿಯರ ವಿಭಾಗದ ಉತ್ತಮ ಆಟಗಾರ್ತಿ ಎನಿಸಿದಳು.

ಸ್ಪಿನ್ ಕೋಚ್: ರೇಸ್‌ನಲ್ಲಿ ಜೋಶಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಸ್ಪಿನ್ ಕೋಚ್ ಹುದ್ದೆಗೆ ಮಾಜಿ ಕ್ರಿಕೆಟಿಗ, ಕನ್ನಡಿಗ ಸುನಿಲ್ ಜೋಶಿ ಹೆಸರು ಮುಂಚೂಣಿಯಲ್ಲಿದೆ.

ವರ್ಷದ ಆರಂಭದಲ್ಲಿ ಸಾಯಿರಾಜ್ ಬಹುತುಳೆ ಅವರಿಂದ ತೆರವಾಗಿದ್ದ ಈ ಸ್ಥಾನಕ್ಕೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಹುಡುಕಾಟ ನಡೆಸುತ್ತಿದೆ. ರಾಜಸ್ಥಾನ ರಾಯಲ್ಸ್ ತಂಡದ ಸ್ಪಿನ್ ಕೋಚ್ ಸ್ಥಾನ ಪಡೆಯುವುದಕ್ಕಾಗಿ ಬಹುತುಳೆ ರಾಜೀನಾಮೆ ನೀಡಿದ್ದರು.

54 ವರ್ಷ ವಯಸ್ಸಿನ ಜೋಶಿ ಅವರು 1996ರಿಂದ 2002ರ ಅವಧಿಯಲ್ಲಿ ಭಾರತ ತಂಡದ ಪರ 69 ಏಕದಿನ ಮತ್ತು 15 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಸದ್ಯ ಅವರು ಪಂಜಾಬ್ ಕಿಂಗ್ಸ್ ತಂಡದ ಕೋಚ್ ರಿಕಿ ಪಾಂಟಿಂಗ್ ಜತೆ ಕಾರ್ಯನಿರ್ವಹಿಸುತ್ತಿದ್ದಾರೆ.

ದೇಶೀಯ ಕ್ರಿಕೆಟ್‌ನಲ್ಲಿ ಅವರು ಉತ್ತರಪ್ರದೇಶ ತಂಡಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ. ಅಲ್ಲದೆ, ಬಾಂಗ್ಲಾದೇಶ ರಾಷ್ಟ್ರೀಯ ಕ್ರಿಕೆಟ್ ತಂಡದ ಸ್ಪಿನ್ ಬೌಲಿಂಗ್ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ ಅನುಭವ ಅವರ ಬೆನ್ನಿಗಿದೆ.

ಬಿಸಿಸಿಐ ಮೂಲಗಳ ಪ್ರಕಾರ ಜೋಶಿ ಅವರು ಈಗಾಗಲೇ ಬಿಸಿಸಿಐನ ಆಯ್ಕೆ ಸಮಿತಿಯ ಮುಂದೆ ಸಂದರ್ಶನಕ್ಕೆ ಹಾಜರಾಗಿದ್ದಾರೆ. ಬಿಸಿಸಿಐನ ಶ್ರೇಷ್ಠತಾ ಕೇಂದ್ರದ (ಸೆಂಟರ್ ಆಫ್ ಎಕ್ಸಲೆನ್ಸ್) ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್, ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್ ಮತ್ತು ವ್ಯವಸ್ಥಾಪಕ ನಿರ್ದೇಶಕ ಅಬೇ ಕುರುವಿಲ್ಲಾ ಅವರು ಸಂದರ್ಶನ ನಡೆಸಿದ್ದಾರೆ.

19 ವರ್ಷದೊಳಗಿನವರ ರಾಷ್ಟ್ರೀಯ ಮಹಿಳಾ ತಂಡದ ಕೋಚ್ ನೂಶಿನ್ ಅಲ್ ಖಾದೀರ್, ಮಾಜಿ ಎಡಗೈ ಸ್ಪಿನ್ನರ್ ರಾಕೇಶ್ ಧ್ರುವ್, ಅನುಭವಿ ಆಫ್ ಸ್ಪಿನ್ನರ್ ಪ್ರೀತಮ್ ಗಂಧೆ ಅವರೂ ಸಂದರ್ಶನಕ್ಕೆ ಹಾಜರಾಗಿದ್ದಾರೆ.

ತಂಪು–ತಂಪು....

ಬಿಸಿಲ ಝಳಕ್ಕೆ ಜನರು ಕಬ್ಬಿನಹಾಲು ಕುಡಿದು ದಣಿವಾರಿಸಿಕೊಂಡ ದೃಶ್ಯ ಹನುಮಂತನಗರದಲ್ಲಿ ಕಂಡುಬಂತು ಚಿತ್ರ: ಕಿಶೋರ್ ಕುಮಾರ್ ಬೋಳಾರ್

'ಎನ್‌ಕೌಂಟರ್ ತಪ್ಪು ಅಲ್ಲ; ವಿಚಾರಣೆ ಅವಶ್ಯ'

ಪ್ರಜಾವಾಣಿ ವಾರ್ತೆ

ಶಾಮ ಭಟ್

ಹುಬ್ಬಳ್ಳಿ: 'ಐದು ವರ್ಷದ ಬಾಲಕಿ ಕೊಲೆ ಆರೋಪಿ ರಿತೇಶಕುಮಾರ್‌ಗೆ ಗುಂಡು ಹೊಡೆದಿದ್ದು ತಪ್ಪು, ಸರಿ ಎಂದು ಹೇಳುತ್ತಿಲ್ಲ. ಆದರೆ, ಆಯೋಗದ ನಿಯಮಾವಳಿ ಪ್ರಕಾರ ವಿಚಾರಣೆಗೆ ಬಂದಿದ್ದೇವೆ' ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ. ಶಾಮ ಭಟ್ ಅವರು ಹೇಳಿದರು.

'ಎಲ್ಲ ವ್ಯಕ್ತಿಗೂ ಜೀವಿಸುವ ಹಕ್ಕು ಇದೆ. ಅದನ್ನು ಯಾರೂ ಕಸಿದುಕೊಳ್ಳಬಾರದು. ಹುಬ್ಬಳ್ಳಿಯ ಪೊಲೀಸರು ಆರೋಪಿಯ ಬದುಕುವ ಹಕ್ಕನ್ನು ಕಿತ್ತುಕೊಂಡಿರುವುದು ಮಾನವ ಹಕ್ಕು ಉಲ್ಲಂಘನೆಯಾಗಿದೆ. ಈ ಹಿನ್ನೆಲೆಯಲ್ಲಿ ಆಯೋಗದಿಂದ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಗುಂಡು ಹಾರಿಸುವ ಅಗತ್ಯವಿತ್ತೆ ಎಂಬುದು ಸೇರಿ ಹಲವು ವಿಷಯಗಳ ಬಗ್ಗೆ ತನಿಖೆ ನಡೆಯಲಿದೆ. ಗುಂಡು ಹಾರಿಸಿದ ಪಿಎಸ್‌ಐ ಅನ್ನಪೂರ್ಣ ವಿಶ್ರಾಂತಿ ಯಲ್ಲಿದ್ದು, ಅವರನ್ನು ವಿಚಾರಣೆಗೆ ಒಳಪಡಿಸಬೇಕಿದೆ. ಡಿವೈಎಸ್‌ಪಿ ನೇತೃತ್ವದ ತಂಡ ತನಿಖೆ ನಡೆಸುತ್ತಿದ್ದು, ಎರಡು ತಿಂಗಳಲ್ಲಿ ಆಯೋಗಕ್ಕೆ ವರದಿ ನೀಡಲಿದೆ' ಎಂದು ಶಾಮ ಭಟ್ ಹೇಳಿದರು.

ಪಿಡಿಒ ಸೇರಿ ಐವರ ಬಂಧನ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ತಾಲ್ಲೂಕಿನ ಹಲಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೃಷಿಯೇತರ (ಎನ್‌ಎ) ಜಮೀನಿನಲ್ಲಿ ಅಭಿವೃದ್ಧಿಪಡಿಸಿದ್ದ ನಿವೇಶನಗಳಿಗೆ ಇ-ಸ್ವತ್ತು ಮಾಡಿಕೊಡಲು ಸೋಮವಾರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಕೆ. ಮಂಜುನಾಥ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ತಿರಕಪ್ಪ ಬೂದಿಹಾಳ, ಸದಸ್ಯರಾದ ಸೋಮಶೇಖರ ಕನ್ನಪ್ಪಳವರ, ಪ್ರಸನ್ನ ಬಣಕಾರ ಮತ್ತು ಸೈಯದ್ ರೆಹಮಾನ ಕರ್ಜಗಿ ಅಲಿಯಾಸ್ ಭಾಷಾಸಾಬ್ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನವೀನ ಮಲ್ಲೇಶಪ್ಪ ಅಂದನೂರ ಅವರು ಕೃಷಿಯೇತರ ಜಮೀನು ಅಭಿವೃದ್ಧಿ ಪಡಿಸಿದ್ದರು. ಒಟ್ಟು 124 ನಿವೇಶನಗಳ ಪೈಕಿ 60 ನಿವೇಶನಗಳಿಗೆ ಇ–ಸ್ವತ್ತು ಉತಾರ ಮಾಡುವುದಕ್ಕೆ ಪಿಡಿಒ ₹1 ಲಕ್ಷ ಲಂಚ ಪಡೆದಿದ್ದರು. ಇನ್ನುಳಿದ ನಿವೇಶನಗಳಿಗೆ ಉತಾರ ಮಾಡಿಕೊಡಲು ಆರೋಪಿಗಳು ₹4 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಕಾರ್ಯಾಚರಣೆ ನಡೆಸಲಾಯಿತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಹೊತ್ತಿ ಉರಿದ ಬಣ್ಣದ ಕಾರ್ಖಾನೆ

ಪ್ರಜಾವಾಣಿ ವಾರ್ತೆ

ಮಾಲೂರಿನ ಕೂರಂಡಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಆಕಸ್ಮಿಕ ಬೆಂಕಿಗೆ ಹೊತ್ತಿ ಉರಿದ ಕಾರ್ಖಾನೆ

ಮಾಲೂರು: ಇಲ್ಲಿಯ ಕೂರಂಡಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಬಣ್ಣ ತಯಾರಿಕಾ ಕಾರ್ಖಾನೆಯಲ್ಲಿ ಸೋಮವಾರ ಬೆಳಗ್ಗೆ ಕಾಣಿಸಿಕೊಂಡ ಬೆಂಕಿಯಿಂದ ಕಾರ್ಖಾನೆ ಏಳು ತಾಸು ಹೊತ್ತಿ ಉರಿದಿದೆ.

ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ 90ಕ್ಕೂ ಹೆಚ್ಚು ಕಾರ್ಮಿಕರು ಹೊರಗೆ ಓಡಿ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ.

ಸೌತ್ ಫೀಲ್ಡ್ ಪೇಂಟ್ಸ್ ಪ್ರೈವೇಟ್ ಲಿಮಿಟೆಡ್ ಕಾರ್ಖಾನೆಯಲ್ಲಿ ಬಣ್ಣ ತಯಾರಿಸಲು ಬಳಸಲು ಇಟ್ಟಿದ್ದ ಕಚ್ಚಾ ರಾಸಾಯನಿಕ ವಸ್ತುಗಳಿಗೆ ಸೋಮವಾರ ಬೆಳಗ್ಗೆ 10ಕ್ಕೆ ಬೆಂಕಿ ತಗುಲಿದೆ. ಸಂಜೆ 5ರವರೆಗೆ ಹೊತ್ತಿ ಉರಿದಿದೆ.

ಬೇಸಿಗೆಯಾದ್ದರಿಂದ ನೋಡ ನೋಡುತ್ತಿದ್ದಂತೆಯೇ ಬೆಂಕಿ ಇಡೀ ಕಾರ್ಖಾನೆಗೆ ಆವರಿಸಿಕೊಂಡಿತು. ಕಾರ್ಖಾನೆ ಸುತ್ತಲೂ ದಟ್ಟವಾದ ಹೊಗೆ ಆವರಿಸಿತ್ತು. ಏಳು ತಾಸು ಹೊತ್ತಿ ಉರಿದ ಕಾರ್ಖಾನೆಯಲ್ಲಿಯ ಎಲ್ಲ ವಸ್ತುಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ. ಮಾಲೂರು ಮತ್ತು ಬಂಗಾರಪೇಟೆ ಅಗ್ನಿಶಾಮಕ ದಳದ ಸಿಬ್ಬಂದಿ ಸಂಜೆ 5ಕ್ಕೆ ಬೆಂಕಿಯನ್ನು ಹತೋಟಿಗೆ ತಂದರು.

ವಿದ್ಯಾ ರೈ ಮತ್ತು ಶಿವರಾಮ ಶೇಷಪ್ಪ ಹೆಗ್ಡೆ ಪಾಲುದಾರಿಕೆಯ ಈ ಕಾರ್ಖಾನೆ 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, 90ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ತಹಶೀಲ್ದಾರ್ ಎಂ.ವಿ.ರೂಪಾ, ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ವರಲಕ್ಷ್ಮಿ, ಮಾಲೂರು ಕಾರ್ಮಿಕ ಇಲಾಖೆಯ ನಿರೀಕ್ಷಕ ರೇಣುಕಾ ಪ್ರಸನ್ನ, ಇನ್‌ಸ್ಪೆಕ್ಟರ್ ವಸಂತ್ ಸ್ಥಳಕ್ಕೆ ಭೇಟಿ ನೀಡಿದ್ದರು.

ನೋಯ್ಡಾದಿಂದ ಬೆಂಗಳೂರಿಗೆ ಮೊಬೈಲ್ ಕಳ್ಳ ಸಾಗಾಣಿಕೆ

7 ಆರೋಪಿಗಳ ಬಂಧನ; 56 ಮೊಬೈಲ್ ವಶ

ಪ್ರಜಾವಾಣಿ ವಾರ್ತೆ

ಮೊಬೈಲ್ ಕಳ್ಳತನಕ್ಕೆ ಸಂಬಂಧಿಸಿದಂತೆ ವಶಕ್ಕೆ ಪಡೆದಿರುವ ಆರೋಪಿಗಳು ಮತ್ತು ಲಾರಿಯೊಂದಿಗೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಚಿಕ್ಕಬಳ್ಳಾಪುರ ಸಿಇಎನ್ ಪೊಲೀಸರು

ಚಿಕ್ಕಬಳ್ಳಾಪುರ: ನೋಯ್ಡಾದಿಂದ ಬೆಂಗಳೂರಿಗೆ ಕಂಟೇನರ್‌ನಲ್ಲಿ ಸಾಗಿಸುತ್ತಿದ್ದ ₹3 ಕೋಟಿ ಮೌಲ್ಯದ ಮೊಬೈಲ್‌ಗಳು ಕಳ್ಳತನ ಮಾಡಿದ ಪ್ರಕರಣದಲ್ಲಿ ಜಿಲ್ಲೆಯ ಪೊಲೀಸರು 7 ಆರೋಪಿಗಳನ್ನು ಬಂಧಿಸಿದ್ದು 56 ಮೊಬೈಲ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

2024ರ ನ.22ರಂದು ನಡೆದಿದ್ದ ಈ ಪ್ರಕರಣವು ಜಿಲ್ಲೆಯಲ್ಲಿ ತೀವ್ರ ಕುತೂಹಲ ಕೆರಳಿಸಿತ್ತು. ನೋಯ್ಡಾದಿಂದ ಬೆಂಗಳೂರಿಗೆ ಕಂಟೇನರ್‌ನಲ್ಲಿ ರೆಡ್‌ಮೀ ಕಂಪನಿಯ 3,400 ಮೊಬೈಲ್‌ಗಳನ್ನು 170 ಬಾಕ್ಸ್‌ಗಳಲ್ಲಿ ಮತ್ತು ಪೋಕ್ ಕಂಪನಿಯ 3,260 ಮೊಬೈಲ್‌ಗಳನ್ನು 163 ಬಾಕ್ಸ್‌ಗಳಲ್ಲಿ ಸಾಗಿಸಲಾಗುತ್ತಿತ್ತು.

ಸೇಫ್ ಸೀಡ್ ಕ್ಯಾರಿಯರ್ ಎನ್ನುವ ಖಾಸಗಿ ಟ್ರಾನ್ಸ್‌ಪೋರ್ಟ್ ಸಂಸ್ಥೆಯ ವಾಹನದ ಮೂಲಕ ಮೊಬೈಲ್‌ಗಳನ್ನು ಬೆಂಗಳೂರಿಗೆ ತರಲಾಗುತ್ತಿತ್ತು.

ತಾಲ್ಲೂಕಿನ ರೆಡ್ಡಿಗೊಲ್ಲಾರಹಳ್ಳಿ ಗ್ರಾಮದ ಕ್ರಾಸ್ ಬಳಿ ಎನ್‌ಎಲ್ 01 ಎಎಫ್ 2743 ಸಂಖ್ಯೆಯ ಕಂಟೇನರ್ ನಿಲ್ಲಿಸಿ ಚಾಲಕ ರಾಹುಲ್ ನಾಪತ್ತೆ ಆಗಿದ್ದ. ಕಂಟೇನರ್ ನಿಗದಿತ ಸಮಯಕ್ಕೆ ಬೆಂಗಳೂರು ತಲುಪಿರಲಿಲ್ಲ. ಕಂಟೇನರ್ ನಿಲುಗಡೆ ಆಗಿರುವುದು ಜಿಪಿಎಸ್ ಮೂಲಕ ಕಂಪನಿಯವರ ಗಮನಕ್ಕೆ ಬಂದಿತ್ತು. ಅವರು ಪೆರೇಸಂದ್ರ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಚಾಲಕ ರಾಹುಲ್ ಇತರೆ ಆರೋಪಿಗಳ ಜೊತೆ ಸೇರಿ ಒಟ್ಟು 257 ಬಾಕ್ಸ್‌ಗಳಲ್ಲಿದ್ದ 5,140 ಮೊಬೈಲ್‌ಗಳನ್ನು ಕಳ್ಳತನ ಮಾಡಿದ್ದರು. ರೆಡ್ಡಿಗೊಲ್ಲಾರಹಳ್ಳಿ ಬಳಿ ಕಂಟೇನರ್ ಬಿಟ್ಟು ಪರಾರಿ ಆಗಿದ್ದರು.

ಈ ಸಂಬಂಧ ಟ್ರಾನ್ಸ್‌ಪೋರ್ಟ್ ಕಂಪನಿ ವ್ಯವಸ್ಥಾಪಕ ಪದ್ಮನಾಭಂ ಪಿ. ಪೆರೇಸಂದ್ರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ಕೈಗೆತ್ತಿಕೊಂಡ ಪೊಲೀಸರು ಕಂಟೇನರ್ ಚಾಲಕ ಹರಿಯಾಣದ ಮಿಯೊ ಗ್ರಾಮದ ರಾಹುಲ್ ಎಂಬಾತನನ್ನು ಬಂಧಿಸಿದ್ದರು. ನಂತರ ಪ್ರಕರಣವನ್ನು ಪೆರೇಸಂದ್ರ ಠಾಣೆಯಿಂದ ಚಿಕ್ಕಬಳ್ಳಾಪುರ ಸಿಇಎನ್ ಠಾಣೆಗೆ ವರ್ಗಾಯಿಸಲಾಗಿತ್ತು.

ನಗರದ ಸಿಇಎನ್ ಪೊಲೀಸ್ ಠಾಣೆಯಲ್ಲಿ ಸೋಮವಾರ ನಡೆದ ಮಾಧ್ಯಮಗೋಷ್ಠಿಯಲ್ಲಿ ಪ್ರಕರಣದ ವಿವರ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಪ್ರಕರಣದ ಪತ್ತೆಗೆ ಮೊಬೈಲ್ ಕಂಪನಿ ಮತ್ತು ಟ್ರಾನ್ಸ್‌ಪೋರ್ಟ್ ಕಂಪನಿಯು ಆರಂಭದಿಂದ ಸಹಕಾರ ನೀಡಿದೆ ಎಂದರು.

'ಬಂಧಿತರು ಈ ಹಿಂದೆಯೂ ಮೊಬೈಲ್ ಸೇರಿದಂತೆ ಹಲವು ಕಳ್ಳತನ ಪ್ರಕರಣಗಳಲ್ಲಿ ಭಾಗಿ ಆಗಿದ್ದಾರೆ. ಆರೋಪಿಗಳು ರಾಜಸ್ತಾನದ ಮೇವಾರ್ ವಲಯದವರಾಗಿದ್ದಾರೆ. ಪಶ್ಚಿಮ ಬಂಗಾಳದ ಇಬ್ಬರನ್ನು ಬಂಧಿಸಿದ್ದೆವು. ಅವರು ಜಾಮೀನಿನ ಮೇಲೆ ಹೊರ ಬಂದಿದ್ದು ತನಿಖೆಗೆ ಸಹಕರಿಸುತ್ತಿದ್ದಾರೆ' ಎಂದು ತಿಳಿಸಿದರು.

ನಮ್ಮ ಪೊಲೀಸರು ಆರೋಪಿಗಳ ಬಂಧನಕ್ಕೆ ಐದು ಸಲ ಹರಿಯಾಣಕ್ಕೆ ತೆರಳಿದ್ದರು. ಕೋಲ್ಕತ್ತ, ಚೆನ್ನೈ, ನವದೆಹಲಿಗೂ ಭೇಟಿ ನೀಡಿದ್ದರು. ಕೊನೆ ಕ್ಷಣದಲ್ಲಿ ಆರೋಪಿಗಳು ತಪ್ಪಿಸಿಕೊಳ್ಳುತ್ತಿದ್ದು ಅಂತಿಮವಾಗಿ ಬಂಧಿಸಲಾಯಿತು. ಆರೋಪಿಗಳು ಕೋಟ್ಯಂತರ ಮೊತ್ತದ ಮೊಬೈಲ್‌ಗಳನ್ನು ₹90 ಲಕ್ಷದಿಂದ ₹95 ಲಕ್ಷದವರೆಗೆ ಮಾರಾಟ ಮಾಡಿದ್ದಾರೆ ಎಂದು ತಿಳಿಸಿದರು.

ಕಳ್ಳತನ ಮಾಡಿರುವ ಮೊಬೈಲ್‌ಗಳನ್ನು ಖರೀದಿಸುವ ಜಾಲವೇ ಇದೆ. ಈ ಮೊಬೈಲ್ ಖರೀದಿಸಿರುವವರ ಮೇಲೂ ಪ್ರಕರಣ ದಾಖಲಿಸಿದ್ದೇವೆ. ನಮಗೆ ಕಳ್ಳತನದ ಮೊಬೈಲ್ ಮಾರಾಟ ಮಾಡುತ್ತಿದ್ದಾರೆ ಎನ್ನುವುದು ಗ್ರಾಹಕರಿಗೂ ತಿಳಿದಿಲ್ಲ. ಇದುವರೆಗೆ ಒಟ್ಟು 56 ಮೊಬೈಲ್‌ಗಳನ್ನು ಪತ್ತೆ ಮಾಡಲಾಗಿದೆ. ಆರೋಪಿಗಳು ಕಳುವು ಮಾಡಿದ ಮೊಬೈಲ್‌ಗಳನ್ನು ನವದೆಹಲಿಯಲ್ಲಿ ಮಾರಾಟ ಮಾಡಿದ್ದಾರೆ. ಅಲ್ಲಿಂದ ದೇಶದ ವಿವಿಧ ರಾಜ್ಯಗಳಿಂದ 300ರಿಂದ 400 ಮೊಬೈಲ್‌ಗಳಂತೆ ಬಿಡಿ ಬಿಡಿಯಾಗಿ ಮಾರಾಟ ಮಾಡಿದ್ದಾರೆ. ಕಳ್ಳತನ ಮಾಡಿರುವ ಎಲ್ಲ ಮೊಬೈಲ್‌ಗಳ ಐಎಂಇಐ ನಂಬರ್‌ಗಳನ್ನು ದೂರ ಸಂಪರ್ಕ ಇಲಾಖೆಗೆ ನೀಡಿದ್ದು ಬ್ಲಾಕ್ ಮಾಡಿಸಲಾಗಿದೆ ಎಂದು ವಿವರಿಸಿದರು.

ಪ್ರಕರಣದ ಪತ್ತೆಯಲ್ಲಿ ಪಾಲ್ಗೊಂಡ ಸಿಬ್ಬಂದಿಗೆ ಬಹುಮಾನ ನೀಡಲಾಗುವುದು ಎಂದು ಪ್ರಕಟಿಸಿದರು.

ಸಿಇಎನ್ ಪೊಲೀಸ್ ಠಾಣೆಯ ಡಿವೈಎಸ್‌ಪಿ ರವಿಕುಮಾರ್ ಹಾಗೂ ಸಿಬ್ಬಂದಿ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಬಂಧಿತ ಆರೋಪಿಗಳು

ಪ್ರಕರಣದ ಸಂಬಂಧ ಒಟ್ಟು 7 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಕಂಟೇನರ್ ಚಾಲಕ ರಾಹುಲ್, ಇಮ್ರಾನ್, ಮೊಹಮದ್ ಮುಸ್ತಫಾ, ಅನೂಪ್ ರಾಯ್, ಅಭಿಜಿತ್ ಪೌಲ್, ಸಕೃಲ್ಲಾ, ಯೂಸಫ್ ಖಾನ್ ಬಂಧಿತರು. ಕಳ್ಳತನ ಮಾಡಿದ ಮೊಬೈಲ್‌ಗಳನ್ನು ಸಾಗಿಸಲು ಬಳಸಿದ ರಾಜಸ್ತಾನ ನೋಂದಣಿಯ ಟ್ರಕ್ ಸಹ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕ್ಷೇಮ ಕುಶಲ



ಕಣ್ಣಿನ ರಕ್ಷಣೆಯತ್ತ ದೃಷ್ಟಿ ಹಾಯಿಸಿ

ಡಾ. ವಿಜಯಲಕ್ಷ್ಮಿ ಪಿ.

ತಲೆಯನ್ನು ಉತ್ತಮಾಂಗವೆಂದರೂ, ಉತ್ತಮಾಂಗದಲ್ಲಿರುವ ನಯನವು ಅತ್ಯುತ್ತಮಾಂಗವೂ ಎಂದೆನಿಸುತ್ತದೆ. ಯಾವುದೇ ಅಂಗವಿಕೃತಿ ಆದರೂ ಜೀವನ ದುರ್ಭರವೇ. ಆದರೆ ಕಣ್ಣು ಅಥವಾ ದೃಷ್ಟಿಯಲ್ಲಿ ವಿಕೃತಿ ಕಂಡುಬಂದರೆ ಜೀವನ ದುರ್ಭರದಲ್ಲಿಯೇ ದುರ್ಭರವಾಗುತ್ತದೆ. ಆದ್ದರಿಂದ ಕಣ್ಣಿನ ರಕ್ಷಣೆ ಅತಿ ಮುಖ್ಯ.

ರೆಪ್ಪೆ, ರೆಪ್ಪೆಯ ಕೂದಲು, ಕಣ್ಣಿನ ಬಿಳಿಯ ಭಾಗ (ಸ್ಕ್ಲೀರ), ಕಣ್ಣಿನ ಕಪ್ಪುಭಾಗ (ಐರಿಸ್), ಕಾರ್ನಿಯಾ, ದೃಷ್ಟಿಯ ಭಾಗ, ಇವುಗಳು ಸೇರುವ ಸಂಧಿಭಾಗಗಳು – ಹೀಗೆ ಕಣ್ಣು ಅನೇಕ ಅವಯವಗಳಿಂದ ಕೂಡಿದೆ. ಈ ಭಾಗಗಳಿಗೆ ಸಂಬಂಧಪಟ್ಟಂತೆ ಸುಮಾರು 90ಕ್ಕೂ ಹೆಚ್ಚು ರೋಗಗಳ ಪಟ್ಟಿಯನ್ನು ಆಯುರ್ವೇದಶಾಸ್ತ್ರ ತಿಳಿಸುತ್ತದೆ. ಈ ಎಲ್ಲ ರೋಗಗಳಿಗೆ ಕಾರಣ, ಲಕ್ಷಣ, ಚಿಕಿತ್ಸೆಗಳನ್ನೂ ಅದು ತಿಳಿಸುತ್ತದೆ.

ಕಣ್ಣಿನ ಅನಾರೋಗ್ಯಕ್ಕೆ ಪ್ರಧಾನವಾದ ಕಾರಣಗಳೆಂದರೆ: ತಲೆಗೆ, ಕಣ್ಣಿಗೆ ಯಾವುದೇ ರಕ್ಷಣೆಯನ್ನು ಧರಿಸದೆ ಅತಿಯಾಗಿ ಬಿಸಿಲಿನಲ್ಲಿ ತಿರುಗಾಡುವುದು; ಅತಿ ಸಣ್ಣ ಅಕ್ಷರಗಳಿರುವ ಪುಸ್ತಕಗಳನ್ನು ನಿರಂತರವಾಗಿ ಓದುವುದು; ಅತಿ ಕಡಿಮೆ ಬೆಳಕಿನಲ್ಲಿ, ಅಥವಾ ಅತಿ ಹೆಚ್ಚು ಪ್ರಖರವಾದ ಬೆಳಕಿನಲ್ಲಿ ನೋಡುವುದು, ಓದುವುದು, ಕೆಲಸ ಮಾಡುವುದು; ನಿರಂತರವಾಗಿ ಮೊಬೈಲ್ ಅಥವಾ ಕಂಪ್ಯೂಟರ್ ವೀಕ್ಷಣೆ; ಅತಿ ಸೂಕ್ಷ್ಮವಸ್ತುಗಳನ್ನು ನಿರಂತರವಾಗಿ ವೀಕ್ಷಿಸುವುದು; ಬಿಸಿಲಿನಲ್ಲಿ ಸಂಚರಿಸಿದ ತಕ್ಷಣವೇ ತಂಪಾದ ನೀರಿನಲ್ಲಿ ಮುಖವನ್ನು ತೊಳೆಯುವುದು ಅಥವಾ ಸ್ನಾನ ಮಾಡುವುದು; ಅತಿಯಾದ ಮದ್ಯ–ಮಾಂಸಗಳ ಸೇವನೆ; ಅತಿಯಾದ ವಿರುದ್ಧಾಹಾರಗಳ ಸೇವನೆ; ಅತಿಯಾದ ಸಂಭೋಗ; ದುಃಖದಿಂದ ಸತತವಾಗಿ ಕಣ್ಣೀರು ಸುರಿಸುತ್ತಿರುವುದು; ಕಣ್ಣಿಗೆ ಪೋಷಣೆ ನೀಡುವ ದ್ರವ್ಯಗಳನ್ನು ಸೇವಿಸದಿರುವುದು – ಹೀಗೆ ಅನೇಕ ಕಾರಣಗಳಿಂದ ಕಣ್ಣಿಗೆ ಸಂಬಂಧಿಸಿದ ರೋಗಗಳು ಬರಬಹುದು. ಕೆಲವು ಸಂದರ್ಭಗಳಲ್ಲಿ ಸಾಂಕ್ರಾಮಿಕವಾಗಿ, ಅಥವಾ ಯಾವುದಾದರೂ ಸೋಂಕಿಗೆ ಒಳಗಾಗಿ ಕಣ್ಣಿನ ರೋಗಗಳು ಬರಬಹುದು.

ಕೆಲವೊಮ್ಮೆ ಕಣ್ಣಿನ ರೋಗಗಳಿಗೆ ಬಾಹ್ಯ ಚಿಕಿತ್ಸೆ ಮಾತ್ರವೇ ಸಾಕಾಗಬಹುದು. ಕೆಲವೊಮ್ಮೆ ಬಾಹ್ಯ ಮತ್ತು ಆಭ್ಯಂತರ ಚಿಕಿತ್ಸೆ ಮತ್ತು ಔಷಧ ಪ್ರಯೋಗಗಳೂ ಅವಶ್ಯಕವಾಗಿರುತ್ತವೆ.

ಬೇಸಿಗೆಯಲ್ಲಿ ಸಾಮಾನ್ಯವಾಗಿರುವ ಕಣ್ಣಿನ ರೋಗಗಳೆಂದರೆ ಕಣ್ಣು ಕೆಂಪಾಗುವುದು, ಕಣ್ಣುರಿ, ಕಣ್ಣಿನ ರೆಪ್ಪೆ ಮೆತ್ತಿಕೊಳ್ಳುವುದು, ರೆಪ್ಪೆಯ ಬುಡದಲ್ಲಿ ಊತ. ಇವುಗಳಿಗೆ ಮನೆಯಲ್ಲಿ ದೊರಕುವ ವಸ್ತುಗಳಿಂದ ಚಿಕಿತ್ಸೆ ಮಾಡಬಹುದಾದರೂ, ಈ ಚಿಕಿತ್ಸೆ ಒಂದು ಅಥವಾ ಎರಡು ದಿನದಲ್ಲಿ ಪರಿಣಾಮ ಬೀರದಿದ್ದರೆ ತಜ್ಞವೈದ್ಯರನ್ನು ಕಂಡು ಚಿಕಿತ್ಸೆಯನ್ನು ಪಡೆಯಬೇಕು.



ದೇಹದಲ್ಲಿ ಪಿತ್ತದ ಅಂಶ ಅಥವಾ ಉಷ್ಣತೆ ಹೆಚ್ಚಾದಾಗ ಸಾಮಾನ್ಯವಾಗಿ ಕಣ್ಣಿನ ಉರಿ, ಕಣ್ಣು ಕೆಂಪಾಗುವುದು ಇತ್ಯಾದಿ ತೊಂದರೆಗಳಾಗುತ್ತವೆ. ಬೇಸಿಗೆಯಲ್ಲಿ ಇಂಥ ಬಾಧೆಗಳು ಹೆಚ್ಚು. ಆದ್ದರಿಂದ ಈ ಸಂದರ್ಭದಲ್ಲಿ ನೀರನ್ನು ಹೆಚ್ಚಾಗಿ ಕುಡಿಯುವುದು, ಎಳನೀರು, ಬಾರ್ಲಿನೀರು, ಸೊಗದೇಬೇರಿನ ಶರಬತ್ತು, ಪುನರ್ಪುಳಿ/ಮುರುಗನ ಹುಳಿ - ಇವುಗಳನ್ನು ಉಪಯೋಗಿಸುವುದು ಸೂಕ್ತ. ಹಾಗೆಯೇ ತ್ರಿಫಲಾಕಷಾಯದಿಂದ ಕಣ್ಣನ್ನು ತೊಳೆದುಕೊಳ್ಳುವುದು, ಕೊತ್ತುಂಬರಿಬೀಜದ ಕಷಾಯ, ಅಥವಾ ಕೊತ್ತುಂಬರಿಬೀಜವನ್ನು ನೆನೆಸಿಟ್ಟ ನೀರಿನಿಂದ ಕಣ್ಣನ್ನು ಆಗಾಗ ತೊಳೆಯುವುದರಿಂದ ಕಣ್ಣುರಿ ಕಡಿಮೆಯಾಗುತ್ತದೆ. ಕಣ್ಣು ಕೆಂಪಾಗುವಿಕೆಯನ್ನು ತಡೆಯಲು ಗುಲಾಬಿಜಲವನ್ನು ಕಣ್ಣಿಗೆ ಹಾಕುವುದು, ಅಥವಾ ಗುಲಾಬಿಜಲದಲ್ಲಿ ಹತ್ತಿಯನ್ನು ಅದ್ದಿ, ಅದನ್ನು ಕಣ್ಣಿನ ಮೇಲೆ ಇಟ್ಟುಕೊಳ್ಳಬಹುದು. ಹರಳೆಣ್ಣೆ, ತುಪ್ಪ, ಅಥವಾ ಹಾಲಿನ ಕೆನೆಯನ್ನು ಕಣ್ಣಿಗೆ ಹಚ್ಚುವುದೂ ಸೂಕ್ತ ಉಪಾಯವಾಗಿದೆ.

ಕಣ್ಣುನೋವು ಇದ್ದಲ್ಲಿ, ಬಿಲ್ವಪತ್ರೆಯಿಂದ ಅಥವಾ ನಂದಿಬಟ್ಟಲು ಹೂವಿನಿಂದ ಅಥವಾ ಹೊನಗೊನ್ನೆ ಸೊಪ್ಪಿನಿಂದ ತಯಾರಿಸಿದ ಕಾಡಿಗೆಯನ್ನು ಕಣ್ಣಿಗೆ ಹಚ್ಚುವುದು ಉಪಯುಕ್ತವಾಗುತ್ತದೆ. ಗರಿಕೆಯನ್ನು ಅರೆದು ಕಣ್ಣಿನ ಮೇಲೆ ಇಟ್ಟುಕೊಳ್ಳುವುದರಿಂದಲೂ ಕಣ್ಣಿನ ನೋವುಗಳು ಕಡಿಮೆಯಾಗುತ್ತವೆ.

ಕಣ್ಣುನೋವು, ನವೆ ಎರಡೂ ಇದ್ದ ಸಂದರ್ಭದಲ್ಲಿ ಕೊತ್ತುಂಬರಿಬೀಜವನ್ನು ತೆಳ್ಳಗಿನ ಬಟ್ಟೆಯಲ್ಲಿ ಕಟ್ಟಿ, ಅದನ್ನು ನೀರಿನಲ್ಲಿ ನೆನೆಸಿ ಆ ಗಂಟನ್ನು ಕಣ್ಣಿನ ಮೇಲೆ ಆಗಾಗ ಆಡಿಸುತ್ತಿದ್ದರೆ ಕಣ್ಣಿನ ನವೆ ಕಡಿಮೆಯಾಗುತ್ತದೆ. ಹಾಗೆಯೇ ಕೊತ್ತುಂಬರಿ ಬೀಜವನ್ನು ನೆನೆಸಿಟ್ಟು ಆ ನೀರನ್ನು ಕುಡಿಯುತ್ತಿದ್ದರೂ ಕಣ್ಣುರಿ, ಊತ, ನವೆಗಳನ್ನು ತಡೆಗಟ್ಟಬಹುದು.

ತಾಯಿಯ ಎದೆಹಾಲು ಸಹಿತ ಕಣ್ಣಿನ ಬಾಧೆಗಳಿಗೆ ರಾಮಬಾಣವಾಗಿದೆ. ಕಣ್ಣಿನ ರೆಪ್ಪೆಗಳು ಮೆತ್ತಿಕೊಳ್ಳುತ್ತಿದ್ದರೆ ತಾಯಿಯ ಹಾಲನ್ನು ಕಣ್ಣಿಗೆ ಹಾಕುವುದರಿಂದ ಕಡಿಮೆಯಾಗುತ್ತದೆ. ತ್ರಿಫಲಾಚೂರ್ಣವನ್ನು ಬಿಸಿನೀರಿನಲ್ಲಿ ನೆನೆಸಿ, ಬಟ್ಟೆಯಲ್ಲಿ ಸೋಸಿ, ಕಷಾಯದಿಂದ ಕಣ್ಣು ತೊಳೆಯುವುದರಿಂದಲೂ ರೆಪ್ಪೆ ಮೆತ್ತಿಕೊಳ್ಳುವುದು ಕಡಿಮೆಯಾಗುತ್ತದೆ. ಅಲ್ಲದೆ ರಾತ್ರಿ ಮಲಗುವಾಗ ತ್ರಿಫಲಾಚೂರ್ಣಕ್ಕೆ ಜೇನು ಮತ್ತು ತುಪ್ಪವನ್ನು ಬೆರೆಸಿ ಸೇವಿಸುವುದರಿಂದಲೂ ಕಣ್ಣಿಗೆ ಸಂಬಂಧಿಸಿದ ಅನೇಕ ರೋಗಗಳು ಪರಿಹಾರವಾಗುತ್ತವೆ.

ನಿತ್ಯವೂ ಅಂಗಾಲಿಗೆ ತುಪ್ಪ ಅಥವಾ ಹರಳೆಣ್ಣೆಯನ್ನು ತಿಕ್ಕುವುದರಿಂದಲೂ ಕಣ್ಣಿನ ಅನೇಕ ರೋಗಗಳು ಪರಿಹಾರವಾಗುತ್ತವೆ. ದುಃಖದಿಂದ ಅತಿಯಾಗಿ ಅಳುತ್ತಿದ್ದಲ್ಲಿ ಬರುವ ಕಣ್ಣಿನ ನೋವು ಮತ್ತು ತಲೆನೋವಿಗೆ ದುಃಖವನ್ನು ಪ್ರಶಮನ ಮಾಡುವುದು, ಅಳುವನ್ನು ನಿಲ್ಲಿಸುವುದು ಮೊದಲ ಮಾರ್ಗ. ಜತೆಗೆ ಶಾಂತವಾದ ಮನಸ್ಸಿನಿಂದ ನಿದ್ರೆ ಮಾಡುವುದರಿಂದ ಕಣ್ಣಿನ ನೋವು, ತಲೆನೋವು, ಕಣ್ಣುಕೆಂಪ–ಇವು ಕಡಿಮೆಯಾಗುತ್ತವೆ. ಇದರೊಡನೆ ಕಣ್ಣಿಗೆ ಹಾಲಿನ ಕೆನೆಯನ್ನು ಆಗಾಗ ಹಚ್ಚುತ್ತಿರುವುದು ಸೂಕ್ತ. ಒಂದೆಲಗ, ಲಾವಂಚ, ಶ್ರೀಗಂಧ ಸೇರಿಸಿ ನೀರನ್ನು ಕಾಯಿಸಿಟ್ಟುಕೊಂಡು ಆಗಾಗ ಈ ನೀರಿನ ಸೇವಿಸಬಹುದು. ಇದರಿಂದ ತಲೆನೋವು, ಕಣ್ಣುನೋವುಗಳು ಕಡಿಮೆಯಾಗುತ್ತವೆ.

ಬಿಸಿಲಿನಲ್ಲಿ, ದೂಳಿನಲ್ಲಿ ಓಡಾಡುವಾಗ ಅವಶ್ಯವಾಗಿ ಕನ್ನಡಕವನ್ನು ಧರಿಸಬೇಕು. ತಲೆಗೆ ಯಾವುದೇ ಬಗೆಯ ಶಿರಸ್ತ್ರಾಣವನ್ನು ಧರಿಸುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಕಣ್ಣಿನ ತೊಂದರೆ ಇರುವಾಗ ಈಜಾಡಬಾರದು. ಸಕಾಲದಲ್ಲಿ ನಿದ್ರೆ ಮಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ❖

ಓದು ಏಕಾಗ್ರತೆಯ ಯೋಗ

ರಘು ವಿ.

ಏಕಾಗ್ರತೆಯಿಂದ ಓದಬೇಕೆಂಬ ಮಾತು ಕೇಳಿದ್ದೇವೆ. ಆದರೆ ಓದುವುದರಿಂದ ಏಕಾಗ್ರತೆಯೂ ಹೆಚ್ಚುತ್ತದೆ ಎಂದರೆ ಆಶ್ಚರ್ಯವಾಗಬಹುದು. ಇಂದಿನ ಯುಗದಲ್ಲಿ ಏಕಾಗ್ರತೆಯು ಅಮೂಲ್ಯವಾದ ಕೌಶಲ. ಯಾವುದೇ ವಿದ್ಯೆ, ವೃತ್ತಿ, ಕ್ಷೇತ್ರ - ಒಟ್ಟಿನಲ್ಲಿ ಇಡೀ ಬದುಕಿಗೆ ಬೇಕಾದ್ದು ಏಕಾಗ್ರತೆ. ಇಂದಿನ ಮೊಬೈಲ್, ಸೋಶಿಯಲ್ ಮೀಡಿಯಾ, ಮತ್ತು ನಿರಂತರವಾದ ಮಾಹಿತಿ ಹರಿವಿನ ಸಮಯದಲ್ಲಿ, ಒಂದು ಕೆಲಸದ ಮೇಲೆ ಗಮನವನ್ನು ಕೇಂದ್ರೀಕರಿಸುವುದು ಸವಾಲಾಗಿದೆ. ಆದರೆ, ಈ ಸವಾಲನ್ನು ಗೆಲ್ಲಲು ಓದುವುದು ಒಂದು ಸರಳವಾದ ಮತ್ತು ಪ್ರಭಾವಿ ಸಾಧನವಾಗಿದೆ. ಓದು ಕೇವಲ ಜ್ಞಾನವನ್ನು ಹೆಚ್ಚಿಸುವುದಿಲ್ಲ, ಅದು ಮನಸ್ಸಿನ ಏಕಾಗ್ರತೆ ಮತ್ತು ಸ್ಥಿರತೆಗಳನ್ನೂ ಬೆಳೆಸುತ್ತದೆ.

ಅಕ್ಷರಪ್ರೇಮ: ಓದುವುದು ಒಂದು ಸಕ್ರಿಯ ಮಾನಸಿಕ ಪ್ರಕ್ರಿಯೆ. ಪುಸ್ತಕದ ಪುಟಗಳ ಮೂಲಕ ಸಾಗುವಾಗ ಮನಸ್ಸು ಪಾತ್ರಗಳು, ಸನ್ನಿವೇಶಗಳು ಮತ್ತು ವಿಚಾರಗಳೊಂದಿಗೆ ಸಂವಹನ ನಡೆಸುತ್ತದೆ. ಇದು ತಾನಾಗಿಯೇ ಗಮನವನ್ನು ಒಂದೇ ದಿಕ್ಕಿನಲ್ಲಿ ಕೇಂದ್ರೀಕರಿಸುವಂತೆ ಪ್ರೇರೇಪಿಸುತ್ತದೆ.

ಮನಸ್ಸಿಗೆ ತರಬೇತಿ: ಓದುವಾಗ ನಾವು ಅಕ್ಷರಗಳು, ಅರ್ಥ, ಮತ್ತು ಸಂದರ್ಭಗಳ ನಡುವೆ ಸಂಬಂಧ ಕಲ್ಪಿಸುತ್ತೇವೆ. ಇದು ಮಿದುಳಿನ 'ಡಿಎಂಎನ್' ('ಡಿಫಾಲ್ಟ್ ಮೋಡ್ ನೆಟ್ವರ್ಕ್') ಅನ್ನು ನಿಷ್ಕ್ರಿಯಗೊಳಿಸಿ, ಗಮನವನ್ನು ಪ್ರಸ್ತುತ ಕಾರ್ಯದತ್ತ ಹರಿಸುತ್ತದೆ. ಅಂದರೆ, ಮನಸ್ಸು ತನ್ನ ಮೂಲಸ್ವರೂಪವಾದ ಅತ್ತಿತ್ತ ಹರಿಯುವುದನ್ನು ಬಿಟ್ಟು ವಿಷಯದ ಜೊತೆ ಸಂಬಂಧವನ್ನು ಗಟ್ಟಿಗೊಳಿಸಿ ಅದರಲ್ಲಿ ಮುಳುಗುತ್ತದೆ. ಇದರಿಂದ ಏಕಾಗ್ರತೆ ವೃದ್ಧಿಸುತ್ತದೆ. ಓದುವಾಗ, ಮಿದುಳಿನ ಮುಂಭಾಗ, 'ಪ್ರಿಫ್ರಂಟಲ್ ಕಾರ್ಟೆಕ್ಸ್' ಎಂಬ ಭಾಗ ಜಾಗೃತವಾಗುತ್ತದೆ. ಇದು ಗಮನದ ಗೂಡು. ಪ್ರತಿದಿನದ ಓದು ಇಲ್ಲಿ ಹೊಸ 'ನ್ಯೂರಲ್' ಹಾದಿಗಳನ್ನು ರಚಿಸುತ್ತದೆ. ಕ್ರಮೇಣ, ಈ ಹಾದಿಗಳು ಅಳಿವಿನ ಬದಲು ಹವಳದ ಗೋಡೆಗಳಂತೆ ಬೆಳೆಯುತ್ತವೆ. ಫಲಿತಾಂಶ? ಪರೀಕ್ಷಾ ಹಾಲ್‌ನಿಂದ ಕಚೇರಿಯವರೆಗೆ–ಏಕಾಗ್ರತೆ ಎಂಬ ಆಯುಧ ಹರಿತವಾಗುತ್ತದೆ.

ಸ್ಥಿರತೆಯ ನಿರ್ಮಾಣ: ಹೆಚ್ಚೆಚ್ಚು ಕಾಲ ಓದುವ ಅಭ್ಯಾಸವು ಮನಸ್ಸನ್ನು ದೀರ್ಘಾವಧಿ ಕೇಂದ್ರೀಕರಿಸಲು ತರಬೇತು ನೀಡುತ್ತದೆ. ಏಕಾಗ್ರತೆಯನ್ನು ಸಾಧಿಸಲು ಅಭ್ಯಾಸ ಬೇಕು. ಒಂದು ಕ್ರಿಯೆಯನ್ನು ಬಿಡದೆ ಸತತವಾಗಿ, ನಿಯತವಾಗಿ ಮುಂದುವರಿಸುವುದೇ ಅಭ್ಯಾಸ. ದಿನವಹಿ ಓದಿನಿಂದ ವೇಗವೂ ಹೆಚ್ಚುತ್ತದೆ ಮತ್ತು ಏಕಾಗ್ರತೆಯೂ ವೃದ್ಧಿಸುತ್ತದೆ.

ವಿಶ್ರಾಂತಿ: ಓದು ಮನಸ್ಸನ್ನು ಒತ್ತಡದಿಂದ ಮುಕ್ತಗೊಳಿಸಿ, ಆಳವಾದ ಶಾಂತಸ್ಥಿತಿಗೆ ತರುತ್ತದೆ. ಇದು ಗಮನದ ಸಾಮರ್ಥ್ಯವನ್ನು ಹೆಚ್ಚಿಸುವ 'ಮೈಂಡ್‌ಫುಲ್‌ನೆಸ್' ಅಭ್ಯಾಸಕ್ಕೆ ಸಮಾನವಾಗಿದೆ. ಮನಸ್ಸಿಗೆ ಮುದ ನೀಡುವ ವ್ಯಾಯಾಮವೇ ಓದು. ಓದಿನಲ್ಲಿ ಮುಳುಗುವುದೂ ಒಂದು ಬಗೆಯ ಧ್ಯಾನವೇ. ಓದುವಿಕೆಯಿಂದ ಉಲ್ಲಾಸ, ಶಾಂತಿ ಮತ್ತು ಸಮಾಧಾನಗಳನ್ನು ಅನುಭವಿಸುತ್ತೇವೆ.

ಹೇಗೆ ಅಳವಡಿಸಿಕೊಳ್ಳುವುದು?

ಸಮಯ ನಿಗದಿ: ಪ್ರತಿದಿನ ನಿಗದಿತ ಸಮಯವನ್ನು ಓದಿಗಾಗಿ ಮೀಸಲಾಗಿಡಿ.

ಸೂಕ್ತ ಪರಿಸರ: ಗದ್ದಲವಿಲ್ಲದ, ಬೆಳಕಿನ ಮತ್ತು ಆರಾಮದಾಯಕ ಸ್ಥಳವನ್ನು ಆಯ್ಕೆಮಾಡಿ.

ಸಣ್ಣ ಗುರಿಗಳು: ಕಿರುಕಥೆಗಳು ಅಥವಾ ಲೇಖನಗಳಿಂದ ಪ್ರಾರಂಭಿಸಿ; ನಂತರ ಪುಸ್ತಕಗಳತ್ತ ಕೈ ಚಾಚಿ.

ಡಿಜಿಟಲ್ ಡಿಟಾಕ್ಸ್: ಓದುವಾಗ ಮೊಬೈಲ್ ಅನ್ನು ನಿಶ್ಶಬ್ದಸ್ಥಿತಿಯಲ್ಲಿಡಿ.

ಸವಾಲುಗಳು–ಪರಿಹಾರಗಳು

ಮನಸ್ಸಿನ ಅಲೆಮಾರಿತನ: ಪದಗಳನ್ನು ಓದುತ್ತಿದ್ದರೂ ಮನಸ್ಸು ಬೇರೆಡೆ ಹೋಗಬಹುದು. ಇದಕ್ಕೆ ಪರಿಹಾರವಾಗಿ, ಪ್ರತಿ ಪ್ಯಾರಾಗ್ರಾಫ್ ನಂತರ ಸಂಕ್ಷಿಪ್ತವಾಗಿ ಸಾರಾಂಶವನ್ನು ಯೋಚಿಸಿ. ಪದೇ ಪದೇ ಮನಸ್ಸನ್ನು ಕಟ್ಟಿಹಾಕಿದಾಗ ಅದು ತಹಬಂದಿಗೆ ಬರುತ್ತದೆ. ಒಮ್ಮೆ ಓದಿನ ರುಚಿ ಹತ್ತಿದ ಬಳಿಕ ಈ ಸಮಸ್ಯೆ ಇರುವುದಿಲ್ಲ.

ಸಮಯದ ಅಭಾವ: ದಿನದ ಬಿಡುವಿನ ಸಮಯಗಳನ್ನು ಬಳಸಿ (ಉದಾ: ಬಸ್/ಮೆಟ್ರೊ ಪ್ರಯಾಣ, ಊಟದ ವಿರಾಮ).

ಆಸಕ್ತಿಯ ಕೊರತೆ: ನಿಮಗೆ ಇಷ್ಟವಾದ ವಿಷಯಗಳನ್ನು ಆಯ್ಕೆಮಾಡಿಕೊಳ್ಳಿ. ಕ್ರೀಡೆ, ವಿಜ್ಞಾನ, ಅಥವಾ ಕಥೆ-ಕಾದಂಬರಿಗಳು – ಹೀಗೆ ಮನಸ್ಸಿಗೆ ಒಗ್ಗುವ ವಿಷಯದ ಮೇಲೆ ಓದಲು ಆರಂಭಿಸಿ. ಆಸಕ್ತಿಯು ಏಕಾಗ್ರತೆಯನ್ನು ಸ್ವಾಭಾವಿಕವಾಗಿ ರೂಪಿಸುತ್ತದೆ.

ಮುದ್ರಿತ ಪುಸ್ತಕವೋ ಡಿಜಿಟಲ್ ಪುಟಗಳೋ

ಸ್ಕ್ರೀನ್ ಪ್ರೇಮಿಗಳು ಡಿಜಿಟಲ್ ಪುಸ್ತಕಗಳನ್ನು ಓದಬಹುದು. ಪುಸ್ತಕಗಳನ್ನು ಜೋಡಿಸುವ, ದೂಳು ಹೊಡೆಯುವ, ಕಾಪಾಡುವ ಕೆಲಸದಿಂದ ಅದು ನಿಮ್ಮನ್ನು ಮುಕ್ತಗೊಳಿಸಬಹುದು. ಆದರೆ ಮುದ್ರಿತ ಪುಸ್ತಕಗಳು ಜೀವನ ಸಂಗಾತಿಗಳು. ಅವುಗಳ ಪುಟಗಳ ಹರಹು, ಕಾಗದದ ಪರಿಮಳ, ಬರೆಯುವ ಮಾರ್ಜಿನ್‌ನಲ್ಲಿ ನಮ್ಮ ಟಿಪ್ಪಣಿಗಳು – ಇವೆಲ್ಲವೂ ನಮ್ಮೊಂದಿಗೆ ಸಂವಾದಿಸುತ್ತವೆ. ಮುದ್ರಿತ ಪುಸ್ತಕಗಳು ನಮ್ಮ ಮಿದುಳಿನಲ್ಲಿ ಆಳವಾದ ನೆನಪನ್ನು ಮೂಡಿಸುತ್ತವೆಯಂತೆ. ದೀರ್ಘಕಾಲದ ಡಿಜಿಟಲ್ ಓದುವಿಕೆಯಿಂದ, ಸ್ಕ್ರೀನ್‌ನ ಬೆಳಕು ಕಣ್ಣನ್ನು ಕುಕ್ಕುತ್ತದೆ; ಪುಸ್ತಕದ ಮೃದು ಪುಟಗಳು ಮನಸ್ಸನ್ನು ಸವರುತ್ತವೆ. ಆದರೆ ಆಯ್ಕೆ ನಮಗೆ ಬಿಟ್ಟಿದ್ದು. ಹೇಗಾದರೂ ಸರಿ, ಒಟ್ಟಿನಲ್ಲಿ ಓದುವುದು ಮುಖ್ಯ.

ಓದು ಎಂಬುದು ಮನಸ್ಸಿನ ಯೋಗಾಭ್ಯಾಸ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ವಾಸ್ತವ ಸಂಖ್ಯೆಗಳು

2) ಕೆಳಗೆ ನೀಡಿರುವ ಜೋಡಿ ಲಸಾಅ ಮತ್ತು ಮಸಾಅ ಕಂಡು ಹಿಡಿದು ಲಸಾಅxಮಸಾಅ= ಆ ಎರಡು ಸಂಖ್ಯೆಗಳ ಗುಣಲಬ್ಧ ಎಂಬುದನ್ನು ತಾಳೆ ನೋಡಿ (1) 26 ಮತ್ತು 91 (2) 510 ಮತ್ತು 92 (3) 336 ಮತ್ತು 54

ಉತ್ತರ:– (ಹಿಂದಿನ ಸಂಚಿಕೆಯಿಂದ)

ಉತ್ತರ:– (3) 336 ಮತ್ತು 54

a = 336 b = 54

336 ರ ಭಾಗಾಕಾರ	54 ರ ಭಾಗಾಕಾರ
2 | 336	2 | 54
2 | 168	3 | 21
2 | 84	3 | 9
2 | 42	3 | 3
3 | 21	1
7 | 7	
1	

$\therefore 336 = 2 \times 2 \times 2 \times 2 \times 3 \times 7 = 2^4 \times 3 \times 7$

$54 = 2 \times 3 \times 3 \times 3 = 2 \times 3^3$

ಎರಡು ಸಂಖ್ಯೆಗಳ ಮಸಾಅ $= 2 \times 3 = 6$

ಎರಡು ಸಂಖ್ಯೆಗಳ ಲಸಾಅ $= 2\times2\times2\times2\times3\times3\times3\times7 = 2^4\times3^3\times7 = 3024$

ಲಸಾಅ x ಮಸಾಅ = a x b

$(a\ b) \times (a\ b) = a \times b$

$6 \times 3024 = 336 \times 54$

$18144 = 18144$

3) ಕೆಳಗಿನ ಪೂರ್ಣಾಂಕಗಳ ಲ.ಸಾ.ಅ ಮತ್ತು ಮ.ಸಾ.ಅ ಗಳನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ

1) 12, 15 ಮತ್ತು 21
2) 17, 23 ಮತ್ತು 29
3) 8, 9, ಮತ್ತು 25

ಉತ್ತರ:– (1) 12, 15 ಮತ್ತು 21

$12 = 2 \times 2 \times 3$

$15 = 3 \times 5$

$21 = 3 \times 7$

ಮ. ಸಾ.ಅ. = 3

ಲ.ಸಾ.ಅ $= 3 \times 2 \times 2 \times 5 \times 7 = 420$

ಉತ್ತರ(2) 17, 23 ಮತ್ತು 29

$17 = 17 \times 1$

$23 = 23 \times 1$

$29 = 29 \times 1$

ಮ. ಸಾ.ಅ. = 1

ಲ.ಸಾ.ಅ $= 17 \times 23 \times 29 = 11339$

ಉತ್ತರ(3) 8, 9 ಮತ್ತು 25

$8 = 2 \times 2 \times 2 = 2^3$

$9 = 3 \times 3 = 3^2$

$25 = 5 \times 5 = 5^2$

ಮ. ಸಾ.ಅ. = 1

ಲ.ಸಾ.ಅ $= 2^3 \times 3^2 \times 5^2 = 8 \times 9 \times 25 = 1800$

4) (306, 657)ರ ಮ.ಸಾ.ಅ = 9 ಆದರೆ ಅವುಗಳ ಲ.ಸಾ.ಅ ವನ್ನು ಕಂಡುಹಿಡಿಯಿರಿ.

ಉತ್ತರ:– ಲಸಾಅ(a, b) x ಮಸಾಅ(a, b) = a x b

9 x ಲಸಾಅ = 306x 657

$$\text{LCM} = \frac{306 \times 657}{9} = 22338$$

(306, 657)ರ ಮ.ಸಾ.ಅ = 9 ಆದರೆ ಅವುಗಳ ಲ.ಸಾ.ಅ= 22338

5) nದ ಯಾವುದೇ ಬೆಲೆಗೆ 6^n ಇದು ಸೊನ್ನೆಯಿಂದ ಕೊನೆಕೊಳ್ಳಬಹುದೇ ಪರೀಕ್ಷಿಸಿ. ಇಲ್ಲಿ n ಒಂದು ಸ್ವಾಭಾವಿಕ ಸಂಖ್ಯೆಯಾಗಿದೆ.

ಉತ್ತರ:– ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳಿಗೆ ಉದಾ ಎಂದರೆ (ಅ) 10 (ಅ)100 ಮೊದಲಾದವು

10ರ ಅವಿಭಾಜ್ಯ ಅಪವರ್ತನ= 2 x 5

100ರ ಅವಿಭಾಜ್ಯ ಅಪವರ್ತನ= 2 x2 x 5 x5

ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳ ಅವಿಭಾಜ್ಯ ಅಪವರ್ತನ 2 ಮತ್ತು 5 ಆದರೆ 2 x 3ಗಳು 6ರ ಅವಿಭಾಜ್ಯ ಅಪವರ್ತನಗಳಾಗಿವೆ ಆದರೆ ಇಲ್ಲಿ 5 ಇಲ್ಲ ಹೀಗಾಗಿ ಸಾಧ್ಯವಿಲ್ಲ

6) $7 \times 11 \times 13 + 13$ ಮತ್ತು $7 \times 6 \times 5 \times 4 \times 3 \times 2 \times 1 + 5$ ಇವು ಸಂಯುಕ್ತ ಸಂಖ್ಯೆಗಳಾಗಿವೆ ಏಕೆ ವಿವರಿಸಿ

ಉತ್ತರ:– $7 \times 11 \times 13 + 13 = 13(7 \times 11 + 1) = 13 \times 78$

∴ ಇದು ಸಂಯುಕ್ತ ಸಂಖ್ಯೆ

$7 \times 6 \times 5 \times 4 \times 3 \times 2 \times 1 + 5$

$= 5(7\times6\times4\times3\times2\times1+1)$

$= 5(1008+1) = 5\times1009$

∴ ಇದು ಸಂಯುಕ್ತ ಸಂಖ್ಯೆ

7) ಒಂದು ಕ್ರೀಡಾಂಗಣದ ಸುತ್ತಲೂ ವೃತ್ತಾಕಾರದ ಮಾರ್ಗವಿದೆ ಸೋನಿಯಾಳು ಆ ಕ್ರೀಡಾಂಗಣದ ಒಂದು ಸುತ್ತನ್ನು ಪೂರ್ಣಗೊಳಿಸಲು 18 ನಿಮಿಷಗಳನ್ನು ತೆಗೆದುಕೊಂಡರೆ, ರವಿಯು ಅದೇ ಸುತ್ತನ್ನು ಪೂರ್ಣಗೊಳಿಸಲು 12 ನಿಮಿಷಗಳನ್ನು ತೆಗೆದುಕೊಳ್ಳುತ್ತಾನೆ, ಒಂದೊಮ್ಮೆ ಅವರಿಬ್ಬರೂ ಒಂದೇ ಬಿಂದುವಿನಿಂದ ಏಕಕಾಲದಲ್ಲಿ ಆರಂಭಿಸಿ, ಏಕಮುಖವಾಗಿ ಚಲಿಸಿದರೆ, ಎಷ್ಟು ನಿಮಿಷಗಳ ನಂತರ ಅವರು ಪುನಃ ಆರಂಭಿಕ ಬಿಂದುವಿನಲ್ಲಿ ಸಂಧಿಸುತ್ತಾರೆ?

ಉತ್ತರ:– ಸೋನಿಯಾಳಿಗೆ ಕ್ರೀಡಾಂಗಣ 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ = 18 ನಿಮಿಷ

ರವಿ ಅದೇ ಕ್ರೀಡಾಂಗಣವನ್ನು 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ= 12 ನಿಮಿಷ

ಏಕಕಾಲದಲ್ಲಿ ಚಲಿಸಿದರೆ ಅವರು ಸಂಧಿಸುವ ಸಮಯ = ?

$\text{LCM}(18,12) = 2\times3\times3\times2\times1 = 36$

ಅವರಿಬ್ಬರೂ 36 ನಿಮಿಷಗಳ ತರುವಾಯ ಒಂದು ಸ್ಥಳದಲ್ಲಿ ಸಂಧಿಸುತ್ತಾರೆ

ಅಭ್ಯಾಸ 1.2

1) $\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ

ಉತ್ತರ:– $\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

i.e. $\sqrt{5} = a/b$

$b\sqrt{5} = a$

ಎರಡೂ ಕಡೆ ವರ್ಗಗೊಳಿಸಿದಾಗ

$(b\sqrt{5})^2 = a^2$

$\Rightarrow 5b^2 = a^2$ .... (1)

5 ಇದು a ಅನ್ನು ಭಾಗಿಸುತ್ತದೆ

5 ಇದು b^2 ಅನ್ನು ಭಾಗಿಸುತ್ತದೆ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

PUC: PHYSICS

Chapter – 1

ELECTRIC CHARGES AND FIELDS

1) Define the term Electrostatics.

Ans:- Electrostatics is that branch of physics that deals with the study of forces, fields and potentials arising from static charges (electric charges at rest).

2) Mention some of the properties of charges.

Ans:- The properties of charges are as follows -
(a) There are two types of charges – positive and negative.
(b) Like charges repel and unlike charges attract each other.
(c) A charged body attracts light uncharged bodies.
d) Charge can neither be created nor destroyed. i.e., charge is conserved.
(e) Charge remains unaffected by motion and it is independent of the velocity of the body.
(f) Charges always reside on the outer surface of the conductor.
(g) Accelerated charges radiate energy in the form of electromagnetic waves.
(h) Charge is quantised that is charge exists in discrete 'packets'.
(i) It is a scalar quantity and its SI unit is Coulomb.

4) Which is the sure test of electrification?

Ans:- The sure test of electrification is repulsion between two charged bodies and not attraction.

5) When is the electrostatic force maximum between the two point charges?

Ans:- The electrostatic force between the two point charges separated by a given distance is maximum when the charges are in air or in vacuum.

6) Give reasons, why the charges get distributed over the outer surface of the conductor?

Ans:- Charges get distributed over the outer surface of the conductor in order to have minimum repulsion between them.

7) Why does the charges get distributed uniformly over the surface of the circular conductor?

Ans:- Charges get distributed uniformly over the surface of the circular conductor because the surface of the circular conductor is uniform.

8) Whats does the Coulomb's Law state?

Ans:- **Coulomb's Law**: The force of attraction or repulsion acting along a straight line between two electric charges is directly proportional to the product of the charges and inversely to the square of the distance between them.

9) Which are the regions on the conductor on which the charges are accumulated in abundance?

Ans:- The regions on the conductor on which the charges are accumulated in abundance are the pointed ends of the conductor.

10) A comb run through the dry hair attracts small bits of paper. Why? What happens, if the hair is wet?

Ans:- When a comb is run through the dry hair it gets charged hence it starts attracting. When the hair is wet there is absence of friction due to which the comb does not get charged and hence it does not attract the paper bits.

11) What is 'electric flux'?

Ans:- The measure of count of number of electric field lines crossing an area is known as Electric Flux.

12) Write a note on earthing? How is it done?

Ans:- When we bring a charged body in contact with the earth, all the excess charge on the body disappears by causing a momentary current to pass to the ground through the connecting conductor (such as our body). This process of sharing the charges with the earth is called grounding or earthing. It provides a safety measure for electrical circuits and appliances.

A thick metal plate is buried deep into the earth and thick wires are drawn from this plate theses are used in buildings for the purpose of earthing near the mains supply.

The electric wiring in our houses has three wires – live, neutral and earth. The first two wires carry electric current from the power station and the third is earthed by connecting it to the buried metal plate.

Metallic bodies of the electric appliances such as electric iron, refrigerator, TV are connected to the earth wire. When any fault occurs or live wire touches the metallic body, the charge flows to the earth without damaging the appliance and without causing any injury to the humans; this would have otherwise been unavoidable since the human body is a conductor of electricity.

13) An arbitrary surface encloses a dipole. What is the electric flux through this surface?

Ans:- Zero

14) A metallic spherical shell has an inner radius R_1 and outer radius R_2. A charge Q is placed at the centre of the spherical cavity. What will be surface charge density on – (i) the surface, and (ii) the outer surface?

Ans:- (i) $\dfrac{-Q}{4\pi R_1^2}$

(ii) $\dfrac{-Q}{4\pi R_2^2}$

15) The dimensions of an atom are of the order of an Angstrom. Thus there must be large electric fields between the protons and electrons. Why, then is the electrostatic field inside a conductor zero?

Ans:- The electric fields bind the atoms to neutral entity. Fields are caused by excess charges. There can be no excess charge on the inner surface of an isolated conductor.

16) If the total charge enclosed by a surface is zero, does it imply that the electric field everywhere on the surface is zero? Conversely, if the electric field everywhere on a surface is zero, does it imply that net charge inside is zero.

Ans:- No, the field may be normal. However, the converse is true.

17) What is meant by Electrification?

Ans:- Electrification or charging is a process of making a body to lose or gain electrons.

18) Mention some of the methods of charging a body.

Ans:- Some methods of charging a body are-
Charging by (a) friction,
(b) conduction and
(c) Induction.

19) Write a note on Charging by friction.

Ans:- Charging by friction - is a method of charging a body. When two suitable bodies are rubbed against each other, at many points of contact, electrons are transferred from one body to another. The body which gains electrons become negatively charged and the body which loses electrons become positively charged.

20) Write a note on Charging by conduction.

Ans:- Charging by conduction - is a method of charging a body. Whenever an uncharged conductor is placed in contact with a charged body, charges flow from the charged body to the uncharged conductor and both the bodies in contact will have the same type of charge.

(Contd.....)

ಹಾವು ಕಡಿತದ ಮರಣಗಳ ಪರಿಶೋಧನೆ ಜವಾಬ್ದಾರಿ ಎಚ್‌1ಎನ್‌1 ಸಮಿತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾವು ಕಡಿತದಿಂದ ಸಂಭವಿಸುವ ಮರಣಗಳ ಲೆಕ್ಕ ಪರಿಶೋಧನೆಯ ಜವಾಬ್ದಾರಿಯನ್ನು 'ಎಚ್‌1ಎನ್‌1 ಮರಣದ ಲೆಕ್ಕ ಪರಿಶೋಧನಾ ಸಮಿತಿ'ಗೆ ವಹಿಸಲಾಗಿದೆ.

ಲೆಕ್ಕ ಪರಿಶೋಧನೆಯನ್ನು ಪರಿಶೀಲಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಹಾವು ಕಡಿತ ಪ್ರಕರಣಗಳ ಪರಿಶೀಲನಾ ಸಭೆಯನ್ನು ಮೂರು ತಿಂಗಳಿಗೊಮ್ಮೆ ಮಾಡಬೇಕು. ತಡೆಗಟ್ಟುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕು ಎಂದು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

2023ರಲ್ಲಿ ಹಾವು ಕಡಿತದ 6,596 ಪ್ರಕರಣಗಳು ದಾಖಲಾಗಿದ್ದವು.

ಮುಖ್ಯಾಂಶಗಳು

- 'ಅಧಿಸೂಚಿತ ಕಾಯಿಲೆ' ಪಟ್ಟಿಯಲ್ಲಿ ಹಾವು ಕಡಿತ
- ಮೂರು ತಿಂಗಳಿಗೊಮ್ಮೆ ಪ್ರಕರಣಗಳ ಪರಿಶೀಲನೆ
- ಹಾವು ಕಡಿದ ತಕ್ಷಣ ಗಾಯಾಳುವನ್ನು ಆಸ್ಪತ್ರೆಗೆ ಕರೆತರಬೇಕು

ಅದರಲ್ಲಿ 19 ಮಂದಿ ಮರಣ ಹೊಂದಿದ್ದರು. ಆನಂತರ ಹಾವು ಕಡಿತವನ್ನು 'ಅಧಿಸೂಚಿತ ಕಾಯಿಲೆ' ಎಂದು ಘೋಷಿಸಲಾಗಿತ್ತು. 2024ರಲ್ಲಿ 13,235 ಪ್ರಕರಣಗಳು ದಾಖಲಾಗಿದ್ದು, 100 ಜನರು ಮೃತಪಟ್ಟಿದ್ದರು.

ಕನ್ನಡಿ ಹಾವು

ಹಾವು ಕಡಿತದಿಂದ ಉಂಟಾಗುವ ಅನಾರೋಗ್ಯ ಮತ್ತು ಮರಣವನ್ನು ತಪ್ಪಿಸಲು ಆರೋಗ್ಯ ಇಲಾಖೆ ಕೆಲವು ಕ್ರಮಗಳನ್ನು ಕೈಗೊಂಡಿತ್ತು. ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಜಿಲ್ಲಾ ಆಸ್ಪತ್ರೆಗಳವರೆಗೆ ಹಾವಿನ ಪ್ರತಿವಿಷ (ಎಎಸ್‌ವಿ) ದಾಸ್ತಾನು ಇಟ್ಟುಕೊಳ್ಳಲು ಕ್ರಮ ಕೈಗೊಂಡಿತ್ತು. ಹಾವು ಕಡಿತ ಪ್ರಕರಣಗಳನ್ನು ನಿರ್ವಹಿಸಲು ವೈದ್ಯರು ಮತ್ತು ವೈದ್ಯಕೀಯ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿತ್ತು.

ಎಲ್ಲೇ ಹಾವು ಕಡಿತದ ಘಟನೆಗಳಾದರೂ ಅವು ವಿಳಂಬವಿಲ್ಲದೇ ವರದಿಯಾಗಬೇಕು. ಹಾವು ಕಡಿತಕ್ಕೊಳಗಾದವರು ಸಾಂಪ್ರದಾಯಿಕ ನಂಬಿಕೆ ಇಟ್ಟುಕೊಂಡು ಹಳ್ಳಿ ಮದ್ದು ಮಾಡುವುದರ ಬದಲು, ಸಮಯ ವ್ಯರ್ಥ ಮಾಡದೇ ತಕ್ಷಣವೇ ಚಿಕಿತ್ಸೆ ಪಡೆಯಲು ಆಸ್ಪತ್ರೆಗಳಿಗೆ ಬರುವಂತೆ ಮಾಡಬೇಕು. ಹಾವು ಕಡಿದಾಗ ಆಸ್ಪತ್ರೆಗೆ ಬರುವುದನ್ನು ತಡಮಾಡುವುದೇ ಮರಣಕ್ಕೆ ಮುಖ್ಯ ಕಾರಣವಾಗಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರಳ ಬಸವ ಜಯಂತಿ: ಪ್ರಧಾನಿ ನಿಧಿಗೆ ₹5 ಲಕ್ಷ

ಬೆಂಗಳೂರು: ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ 26 ಅಮಾಯಕರು ಹತರಾಗಿರುವುದರಿಂದ ವಿಶ್ವ ಬಸವ ಜಯಂತಿಯ ಸರಳ ಆಚರಣೆಗೆ ಬಸವ ಸಮಿತಿ ನಿರ್ಧರಿಸಿದೆ.

ಮೃತರಿಗೆ ಸಂತಾಪ ಸೂಚಿಸಿ, ಪ್ರಧಾನಿ ಪರಿಹಾರ ನಿಧಿಗೆ ₹5 ಲಕ್ಷ ದೇಣಿಗೆ ನೀಡಲು ನಿರ್ಧರಿಸಿರುವುದಾಗಿ ಅಧ್ಯಕ್ಷ ಅರವಿಂದ ಜತ್ತಿ ತಿಳಿಸಿದ್ದಾರೆ.

ವಿಶ್ವ ಬಸವ ಜಯಂತಿಯನ್ನು ಏಪ್ರಿಲ್ 30ರಂದು ಸರಳವಾಗಿ ಆಚರಿಸಲಾಗುತ್ತದೆ. ಸಾಹಿತ್ಯಿಕ ಕಾರ್ಯಕ್ರಮಗಳು ನಡೆಯಲಿವೆ. ಕೆ. ಮೋಹನ್‌ದೇವ್ ಆಳ್ವ ಅವರ ದತ್ತಿ ನಿಧಿಯಿಂದ ಚಿತ್ರದುರ್ಗದ ವಚನ ಗಾಯಕ ತೋಟಪ್ಪ ಉತ್ತಂಗಿ ಅವರಿಗೆ ₹1 ಲಕ್ಷ ನೀಡಿ ಗೌರವಿಸಲಾಗುವುದು ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರದ ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ. ಬಸವ ಸಮಿತಿ ಪ್ರಕಟಿಸಿರುವ ಶರಣ ತತ್ವಶಾಸ್ತ್ರಕ್ಕೆ ಸಂಬಂಧಿಸಿದ 18 ಸಾಹಿತ್ಯ ಕೃತಿಗಳನ್ನು ಬಿಡುಗಡೆ ಮಾಡಲಿದ್ದಾರೆ. ಶರಣರ 2,500 ವಚನಗಳನ್ನು ಒಳಗೊಂಡ ಇಂಗ್ಲಿಷ್ ವಚನವನ್ನು ಮೂಲವನ್ನಾಗಿಟ್ಟುಕೊಂಡು ಫ್ರೆಂಚ್ ಮತ್ತು ನೇಪಾಳಿ ಭಾಷೆಯಲ್ಲಿ ವಚನ ಸಂಪುಟಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಯುಎಇ, ಅಮೆರಿಕ, ಯುರೋಪಿಯನ್ ಒಕ್ಕೂಟ, ಆಸ್ಟ್ರೇಲಿಯಾಸೇರಿ ಇತರೆ ರಾಷ್ಟ್ರಗಳಲ್ಲಿರುವ 28 ಸಂಸ್ಥೆಗಳು ಬಸವ ಸಮಿತಿ ಸಹಯೋಗದೊಂದಿಗೆ ವಿಶ್ವ ಬಸವ ಜಯಂತಿ ಆಚರಿಸಲಿವೆ ಎಂದು ತಿಳಿಸಿದ್ದಾರೆ.

ಪ್ರತಿಭಟನೆ

ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಹಾಗೂ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದುಷ್ಕೃತ್ಯ ಖಂಡಿಸಿ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಬೀದರ್‌ನಲ್ಲಿ ಸೋಮವಾರ ಪ್ರತಿಭಟನಾ ರ್‍ಯಾಲಿ ನಡೆಯಿತು ಚಿತ್ರ: ಲೋಕೇಶ ವಿ. ಬಿರಾದಾರ

ಬಿಜೆಪಿಯಲ್ಲೇ ಏಕತೆ ಇಲ್ಲ: ರಾಯರಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಭದ್ರತಾ ವಿಷಯದಲ್ಲಿ ಬಿಜೆಪಿ ನಾಯಕರಲ್ಲೇ ಏಕತೆ ಇಲ್ಲ, ಸುಮ್ಮನೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟೀಕಿಸುತ್ತಿದ್ದಾರೆ. ವಿರೋಧ ಪಕ್ಷಗಳ ನಾಯಕರು ಸಿದ್ದರಾಮಯ್ಯ ವಿರುದ್ಧದ ಹೇಳಿಕೆಗಳನ್ನು ಹಿಂದಕ್ಕೆ ಪಡೆದು ಕ್ಷಮೆಯಾಚಿಸಬೇಕು ಎಂದು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಆಗ್ರಹಿಸಿದರು.

ಬಸವರಾಜ ರಾಯರಡ್ಡಿ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ದೇಶದ ಭದ್ರತಾ ವಿಷಯದಲ್ಲಿ ಯಾವಾಗಲೂ ಹೆಚ್ಚು ಕಾಳಜಿ ಹೊಂದಿದ್ದಾರೆ. ಪಾಕಿಸ್ತಾನದ ಜತೆಗಿನ ಯುದ್ಧ ಸಂಬಂಧ ಮುಖ್ಯಮಂತ್ರಿಯವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ' ಎಂದರು.

ಕಾಶ್ಮೀರದಲ್ಲಿ ಭದ್ರತಾ ವೈಫಲ್ಯ ಆಗಿರುವುದನ್ನು ಕೇಂದ್ರ ಸರ್ಕಾರವೇ ಒಪ್ಪಿದೆ. ಪಹಲ್ಗಾಮ್ ಹತ್ಯಾಕಾಂಡದಲ್ಲಿ ಭದ್ರತಾ ವೈಫಲ್ಯ ಉಂಟಾಗಿರುವುದನ್ನು ಗಮನಿಸಿದ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರ ಭದ್ರತಾ ಕ್ರಮಗಳನ್ನು ಬಿಗಿಗೊಳಿಸಬೇಕು ಎಂದು ಸಲಹೆ ನೀಡಿದ್ದಾರೆ. ಭಯೋತ್ಪಾದನೆ ನಿಯಂತ್ರಣಕ್ಕೆ ಪಾಕಿಸ್ತಾನದೊಂದಿಗೆ ಯುದ್ಧ ಮಾಡುವುದು ಅನಿವಾರ್ಯ ಆದರೆ ಕೇಂದ್ರ ಸರ್ಕಾರ ಯುದ್ಧಕ್ಕೂ ಸಿದ್ಧವಿರಬೇಕು ಎಂಬುದು ಮುಖ್ಯಮಂತ್ರಿಯವರ ಹೇಳಿಕೆಯ ಉದ್ದೇಶ ಎಂದು ರಾಯರಡ್ಡಿ ಹೇಳಿದರು.

ಕೇಂದ್ರ ಸರ್ಕಾರ ಕೂಡಲೇ ಸಂಸತ್ತಿನ ವಿಶೇಷ ಅಧಿವೇಶನ ಕರೆದು ದೇಶದ ಭದ್ರತಾ ವಿಷಯಗಳ ಬಗ್ಗೆ ಮತ್ತು ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನದ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಕುರಿತು ಚರ್ಚಿಸಬೇಕು. ಪ್ರಧಾನಿ ಮೋದಿಯವರು ಕಾಶ್ಮೀರಕ್ಕೆ ಭೇಟಿ ನೀಡಿ ಸಂಪೂರ್ಣ ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸಬೇಕು. ಪಾಕಿಸ್ತಾನವನ್ನು ಒಂದು ಭಯೋತ್ಪಾದಕ ರಾಷ್ಟ್ರ ಎಂಬುದಾಗಿ ಘೋಷಿಸಬೇಕು ಎಂದು ಒತ್ತಾಯಿಸಿದರು.

ನೌಕಾಪಡೆಗೆ 26 ರಫೆಲ್ ಜೆಟ್ ಖರೀದಿ

ಒಂದನೇ ಪುಟದಿಂದ...

ಒಪ್ಪಂದವು ತರಬೇತಿ, ಸಿಮ್ಯುಲೇಟರ್, ಸಂಬಂಧಿತ ಉಪಕರಣಗಳು, ಶಸ್ತ್ರಾಸ್ತ್ರಗಳು ಮತ್ತು ಕಾರ್ಯಕ್ಷಮತೆ ಆಧರಿತ ಮೂಲಸೌಕರ್ಯಗಳನ್ನು ಒಳಗೊಂಡಿರಲಿದೆ. ಅಲ್ಲದೆ, ಈಗ ಭಾರತೀಯ ವಾಯುಪಡೆಯಲ್ಲಿ ಬಳಕೆಯಲ್ಲಿರುವ ರಫೆಲ್ ವಿಮಾನಗಳಿಗೆ ಹೆಚ್ಚುವರಿ ಯುದ್ಧೋಪಕರಣಗಳನ್ನು ಅಳವಡಿಸುವುದು, ಗೋಚರ ವ್ಯಾಪ್ತಿ ಮೀರಿದ ಕ್ಷಿಪಣಿ ಅಸ್ತ್ರದಂತಹ ದೇಶಿ ನಿರ್ಮಿತ ಶಸ್ತ್ರಾಸ್ತ್ರಗಳನ್ನು ರಫೆಲ್ ವಿಮಾನಗಳಿಗೆ ಅಳವಡಿಸುವ ನಿಬಂಧನೆಗಳನ್ನು ಹೊಂದಿದೆ.

ರಫೆಲ್-ಎಂ ವಿಮಾನಗಳು ಸಮುದ್ರದಲ್ಲಿ ರಾಷ್ಟ್ರದ ವಾಯು ಶಕ್ತಿಯನ್ನು ಗಣನೀಯವಾಗಿ ಹೆಚ್ಚಿಸಲಿದೆ. ಈ ವಿಮಾನಗಳ ಸೇರ್ಪಡೆಯು ಭಾರತೀಯ ನೌಕಾಪಡೆಯ ವಿಮಾನವಾಹಕ ನೌಕೆಗಳ ಶಕ್ತಿಯನ್ನೂ ದ್ವಿಗುಣಗೊಳಿಸಲಿದೆ.

ರಫೆಲ್ ಯುದ್ಧ ವಿಮಾನಗಳ ಖರೀದಿಗೆ ಮೂರು ವಾರಗಳ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯ ಸಂಪುಟದ ಭದ್ರತಾ ಸಮಿತಿ ಒಪ್ಪಿಗೆ ನೀಡಿತ್ತು. 2023ರ ಜುಲೈನಲ್ಲಿ, ರಕ್ಷಣಾ ಸಚಿವಾಲಯವು ಈ ಒಪ್ಪಂದಕ್ಕೆ ಆರಂಭಿಕ ಅನುಮೋದನೆಯನ್ನು ನೀಡಿತ್ತು.

'ತನಿಖಾ ಬ್ಯೂರೊ ಸ್ಥಾಪಿಸಿ'

ಎರಡನೇ ಮುಖಪುಟದಿಂದ...

ಅಂತೆಯೇ, ಪ್ರಕರಣ ಸಂಬಂಧ ಮರು ತನಿಖೆ ನಡೆಸಲು ರಾಜ್ಯ ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣವ್ ಮೊಹಂತಿ ನೇತೃತ್ವದಲ್ಲಿ ಐಪಿಎಸ್ ಅಧಿಕಾರಿಗಳಾದ ಭೂಷಣ್ ಗುಲಾಬ್ ಬೊರಾಸೆ ಮತ್ತು ನಿಶಾ ಜೇಮ್ಸ್ ಅವರ ತನಿಖಾ ತಂಡ ರಚಿಸಿದ್ದು, ಪ್ರಕರಣದ ತನಿಖೆಯನ್ನು ಎಸ್‌ಐಟಿಗೆ ಒಪ್ಪಿಸುವಂತೆ ಸರ್ಕಾರಕ್ಕೆ ಆದೇಶಿಸಿದೆ.

'ಎಸ್‌ಐಟಿ ಮೂರು ತಿಂಗಳಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಬೇಕು. ಈ ನಿಟ್ಟಿನಲ್ಲಿ ಈ ತೀರ್ಪಿನ ಪ್ರತಿಯನ್ನು ಹೈಕೋರ್ಟ್ ರಿಜಿಸ್ಟ್ರಾರ್ ಅವರು, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಗೃಹ ಕಾರ್ಯದರ್ಶಿಗೆ ರವಾನಿಸಬೇಕು' ಎಂದು ತಾಕೀತು ಮಾಡಿದೆ.

'ಹಾಲಿ ಇರುವ ಸೈಬರ್ ಅಪರಾಧಗಳ ತನಿಖೆಯಿಂದ ನಿರೀಕ್ಷಿತ ಪ್ರಮಾಣದ ಪ್ರಯೋಜನವಾಗುತ್ತಿಲ್ಲ. ಸಾಕಷ್ಟು ತನಿಖಾಧಿಕಾರಿಗಳಿಗೆ ತಾಂತ್ರಿಕ ನೈಪುಣ್ಯವೇ ಇಲ್ಲ. ಹಾಗಾಗಿ, ತಾಂತ್ರಿಕ ಪರಿಣತಿ ಮತ್ತು ವಿಧಿವಿಜ್ಞಾನಗಳ ಕುಶಾಗ್ರಮತಿ ಹೊಂದಿದ ಅಧಿಕಾರಿಗಳು ಮಾತ್ರ ಉದಯೋನ್ಮುಖ ಡಿಜಿಟಲ್ ಹಾಗೂ ಸೈಬರ್ ಅಪರಾಧಗಳ ತನಿಖೆ ಮಾಡುವಂತಾಗಬೇಕು' ಎಂದು ನ್ಯಾಯಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

> ಇತ್ತೀಚೆಗೆ ಹೊಸ ಬಗೆಯ ಸೈಬರ್ ಬೇಹುಗಾರಿಕೆಯ ಅಪರಾಧಗಳು ಹೆಚ್ಚುತ್ತಿದ್ದು, ಇವು ರಾಷ್ಟ್ರೀಯ ಭದ್ರತೆಯ ಮೇಲೆ ಗಂಭೀರ ಪರಿಣಾಮ ಬೀರುವ ಆತಂಕವಿದೆ
>
> **ನ್ಯಾಯಮೂರ್ತಿ ಎಂ.ನಾಗಪ್ರಸನ್ನ**

ಬಟನ್ ಒತ್ತಿದರೆ ಸಾಕು...!

'ಮಾಹಿತಿಯೇ ಆಧುನಿಕ ನಾಗರಿಕತೆಯ ಜೀವನಾಡಿ ಆಗಿರುವ ಇಂದಿನ ಆಧುನಿಕ ಯುಗದಲ್ಲಿ ಸೈಬರ್ ಅಪರಾಧಗಳು ಜಟಿಲವಾಗಿರುತ್ತವೆ. ಇದಕ್ಕೆ ತಕ್ಕಂತೆ ತನಿಖಾಧಿಕಾರಿಗಳೂ ಸಮರ್ಥರಾಗಿರಬೇಕು. ಡಿಜಿಟಲ್ ಜಗತ್ತಿನಲ್ಲಿ ಕುಳಿತವರು ಕೇವಲ ಬಟನ್ ಕ್ಲಿಕ್ ಮಾಡಿ ಏನು ಬೇಕಾದರೂ ಅವಾಂತರ ಸೃಷ್ಟಿಸಬಹುದು. ಹಾಗಾಗಿ, ಸಿಸಿಬಿಯಂತೆ ಸೈಬರ್ ಅಪರಾಧದ ತನಿಖೆಗೆ ಬ್ಯೂರೊ ರಚಿಸುವುದು ಸೂಕ್ತ' ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ.

ಪತ್ನಿ, ಪುತ್ರನಿಗೆ ಗುಂಡಿಕ್ಕಿ ಉದ್ಯಮಿ ಹರ್ಷವರ್ಧನ ಕಿಕ್ಕೇರಿ ಆತ್ಮಹತ್ಯೆ

ಅಮೆರಿಕದ ನ್ಯೂ ಕ್ಯಾಸೆಲ್ ನಗರದಲ್ಲಿನ ನಿವಾಸದಲ್ಲಿ ಕೃತ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ಉದ್ಯಮಿ ಹರ್ಷವರ್ಧನ ಕಿಕ್ಕೇರಿ (57) ಅಮೆರಿಕದ ವಾಷಿಂಗ್ಟನ್ ಸಮೀಪದ ನ್ಯೂ ಕ್ಯಾಸೆಲ್ ನಗರದಲ್ಲಿರುವ ತಮ್ಮ ನಿವಾಸದಲ್ಲಿ ಪತ್ನಿ ಶ್ವೇತಾ ಹಾಗೂ ಪುತ್ರನಿಗೆ ಗುಂಡಿಕ್ಕಿ, ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಮೆರಿಕ ಕಾಲಮಾನದಲ್ಲಿ ಗುರುವಾರ ರಾತ್ರಿ ಘಟನೆ ನಡೆದಿದ್ದು, ಅಲ್ಲಿನ ಪೊಲೀಸರು ತನಿಖೆ ನಡೆಸಿದ್ದಾರೆ. ಘಟನೆಗೆ ನಿಖರ ಕಾರಣ ತಿಳಿದುಬಂದಿಲ್ಲ.

7 ವರ್ಷದ ಮತ್ತೊಬ್ಬ ಪುತ್ರ ಮನೆಯ ಹೊರಗೆ ಇದ್ದುದರಿಂದ ಪಾರಾಗಿದ್ದಾನೆ ಎನ್ನಲಾಗಿದೆ. ಹರ್ಷವರ್ಧನ ಅವರ ತಾಯಿ ಗಿರಿಜಾ ನಾರಾಯಣ್ ಹಾಗೂ ಸಹೋದರ ಚೇತನ್ ಇಲ್ಲಿನ ವಿಜಯನಗರದಲ್ಲಿ ನೆಲಸಿದ್ದಾರೆ. ಹರ್ಷವರ್ಧನ ಹಾಗೂ ಚೇತನ್ ಇಬ್ಬರೂ ಚೆಸ್ ಆಟಗಾರರಾಗಿದ್ದರು. ಭಾಷಾತಜ್ಞ ತಂದೆ ಕಿಕ್ಕೇರಿ ನಾರಾಯಣ್ 2017ರಲ್ಲಿ ಮೃತಪಟ್ಟಿದ್ದರು.

ಮಂಡ್ಯದ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿಯವರಾದ ಹರ್ಷವರ್ಧನ್ ಅವರು ನಗರದ ಎಸ್‌ಜೆಸಿಇ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ನಂತರ ಮೈಕ್ರೊಸಾಫ್ಟ್ ಉದ್ಯೋಗಿಯಾಗಿದ್ದರು. ನಂತರ ರೋಬೊಟಿಕ್ ತಂತ್ರಜ್ಞಾನ ಆಧಾರಿತ 'ಹೋಲೊವರ್ಲ್ಡ್' ಹಾಗೂ 'ಹೋಲೊಸ್ಯೂಟ್' ಕಂಪನಿಗಳನ್ನು ಸ್ಥಾಪಿಸಿದ್ದರು.

ಮುಖ್ಯಾಂಶಗಳು

- ರೋಬೊಟ್ ಬಗ್ಗೆ ಮೋದಿ ಜತೆ ಚರ್ಚಿಸಿದ್ದ ಹರ್ಷವರ್ಧನ
- ಮನೆಯ ಹೊರಗಿದ್ದ ಮತ್ತೊಬ್ಬ ಪುತ್ರ ಪಾರು
- ಘಟನೆಗೆ ನಿಖರ ಕಾರಣ ತಿಳಿದುಬಂದಿಲ್ಲ

ಹರ್ಷವರ್ಧನ ಕಿಕ್ಕೇರಿ

ಶ್ವೇತಾ ಹರ್ಷವರ್ಧನ

ಅವರು 'ಹೋಲೊವರ್ಲ್ಡ್' ಕಂಪನಿಯ ಸಿಇಒ ಮತ್ತು ಸಿಟಿಒ ಆಗಿದ್ದರೆ, ಪತ್ನಿ ಶ್ವೇತಾ ಅಧ್ಯಕ್ಷರಾಗಿದ್ದರು. ಕಂಪನಿಯ ಉತ್ಪನ್ನಗಳಿಗೆ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ರಾಯಭಾರಿ ಆಗಿದ್ದರು. ಗಡಿಯಲ್ಲಿ ಯೋಧರಂತೆ ಕಾವಲು ಕಾಯುವ ರೋಬೊಟ್‌ಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಹರ್ಷ ಮಾತುಕತೆ ನಡೆಸಿದ್ದರು. ವಿಶ್ವಸಂಸ್ಥೆಯ 'ನೊವುಸ್' ಸಮ್ಮೇಳನದಲ್ಲಿ ಕಂಪನಿಗೆ 'ಸುಸ್ಥಿರ ತಂತ್ರಜ್ಞಾನ ಕಂಪನಿ' ಎಂಬ ಶ್ರೇಯ ಸಿಕ್ಕಿತ್ತು.

ರಾಜ್ಯದ ವಿವಿಧ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ನವೋದ್ಯಮ ಸ್ಥಾಪಿಸಲು ವಿದ್ಯಾರ್ಥಿಗಳನ್ನು ಉತ್ತೇಜಿಸು ತ್ತಿದ್ದರು. ನಗರದ ಎನ್‌ಐಇ, ಎಸ್‌ಜೆಸಿಇ ಕಾಲೇಜುಗಳು ಹಾಗೂ ಸಿಎಫ್‌ಟಿಆರ್‌ಐ ಕಾರ್ಯಕ್ರಮ, ತಂತ್ರಜ್ಞಾನ ಸಮಾವೇಶಗಳಲ್ಲಿ ಪಾಲ್ಗೊಂಡಿದ್ದರು.

ವಿಜಯನಗರ ಮೂರನೇ ಹಂತದ ನಿರ್ಮಿತಿ ಕೇಂದ್ರದ ರಸ್ತೆಯಲ್ಲಿ 2018ರಲ್ಲಿ 'ಹೋಲೊವರ್ಲ್ಡ್' ಕಂಪನಿಯ ಕಾರ್ಪೊರೇಟ್ ಕಚೇರಿ ಆರಂಭಿಸಿ, ನಂತರ ಅಮೆರಿಕಕ್ಕೆ ವಾಪಸಾಗಿದ್ದರು.

SBI

ಆವರಣ ಮತ್ತು ಸ್ವತ್ತು ವಿಭಾಗ,
2ನೇ ಮಹಡಿ, ನವೀನ ಅನೆಕ್ಸ್ ಕಟ್ಟಡ, ಸ್ಥಳೀಯ ಪ್ರಧಾನ ಕಚೇರಿ, ಬೆಂಗಳೂರು,
65 ಸೇಂಟ್ ಮಾರ್ಕ್‌ರ ರಸ್ತೆ, ಬೆಂಗಳೂರು–560001

ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ವೃತ್ತದ ನಿಯಂತ್ರಣದಲ್ಲಿರುವ ನಮ್ಮ ಶಾಖೆಗಳು ಮತ್ತು ವಿವಿಧ ಕಚೇರಿಗಳಲ್ಲಿ ಹಾಗೂ ಕರ್ನಾಟಕದಲ್ಲಿನ ಕಾರ್ಪೊರೇಟ್ ಕೇಂದ್ರ ಸ್ಥಾಪಿತ ಶಾಖೆಗಳು ಹಾಗೂ ಕಚೇರಿಗಳಲ್ಲಿ ಅಸ್ತಿತ್ವದಲ್ಲಿರುವ ಭದ್ರತೆ ಮತ್ತು ಅಗ್ನಿ ಸುರಕ್ಷತಾ ಸಲಕರಣೆಗಳ ನಿರ್ವಹಣೆ ಸೇರಿದಂತೆ ಪೂರೈಕೆ, ಸ್ಥಾಪನೆ, ಪರೀಕ್ಷೆ, ನಿಯೋಜನೆ, ನಿರ್ವಹಣೆಗಾಗಿ (ಯಾವುದೇ ತಯಾರಿಕೆ (Make) ಇರಲಿ) ತಯಾರಕರು / ಸಂಸ್ಥೆಗಳು / ಕಂಪನಿಗಳು / ವಿತರಕರು / ಭದ್ರತಾ ಮತ್ತು ಅಗ್ನಿ ಸುರಕ್ಷತಾ ಸಾಧನಗಳ ಮಾರಾಟ ಗಾರರನ್ನು ಎಂಪ್ಯಾನಲ್ ಮಾಡುವ ಕುರಿತು

ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ವೃತ್ತದ ನಿಯಂತ್ರಣ ದಲ್ಲಿರುವ ನಮ್ಮ ಶಾಖೆಗಳು ಮತ್ತು ವಿವಿಧ ಕಚೇರಿಗಳಲ್ಲಿ ಹಾಗೂ ಕರ್ನಾಟಕದಲ್ಲಿನ ಕಾರ್ಪೊರೇಟ್ ಕೇಂದ್ರ ಸ್ಥಾಪಿತ ಶಾಖೆಗಳು ಹಾಗೂ ಕಚೇರಿಗಳಲ್ಲಿ ಅಸ್ತಿತ್ವದಲ್ಲಿರುವ ಭದ್ರತೆ ಮತ್ತು ಅಗ್ನಿ ಸುರಕ್ಷತಾ ಸಲಕರಣೆಗಳ ನಿರ್ವಹಣೆ ಸೇರಿದಂತೆ ಪೂರೈಕೆ, ಸ್ಥಾಪನೆ, ಪರೀಕ್ಷೆ, ನಿಯೋಜನೆ, ನಿರ್ವಹಣೆಗಾಗಿ (ಯಾವುದೇ ತಯಾರಿಕೆ (Make) ಇರಲಿ) ತಯಾರಕರು / ಸಂಸ್ಥೆಗಳು / ಕಂಪನಿಗಳು / ವಿತರಕರು / ಭದ್ರತಾ ಮತ್ತು ಅಗ್ನಿ ಸುರಕ್ಷತಾ ಸಾಧನಗಳ ಮಾರಾಟಗಾರರನ್ನು ಎಂಪ್ಯಾನಲ್ ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹತೆ ಮಾನದಂಡಗಳು, ಕೆಲಸದ ವ್ಯಾಪ್ತಿ ಮತ್ತು ಇತರ ವಿವರಗಳಿಗಾಗಿ, ದಯವಿಟ್ಟು ಬ್ಯಾಂಕಿನ ವೆಬ್‌ಸೈಟ್ https://bank.sbi ನ 'SBI in News' ....Procurement News' ಅನ್ನು ಉಲ್ಲೇಖಿಸಿ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **22/05/2025** ಮಧ್ಯಾಹ್ನ 3.00 ಗಂಟೆವರೆಗೆ.

ಸ್ಥಳ: ಬೆಂಗಳೂರು
ದಿನಾಂಕ: 29/04/2025

ಸಹಾಯಕ ಪ್ರಧಾನ ವ್ಯವಸ್ಥಾಪಕರು
(ಆ ಮಾತು ಸ್ವ)

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕಂದಾಯ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಉತ್ತಮ ಆಡಳಿತ ನಿಮಗಾಗಿ

ಎರಡು ವರ್ಷಗಳ ಸಾರ್ಥಕ, ಜನಪರ ಮತ್ತು ಉತ್ತಮ ಆಡಳಿತ. ಸರಳ, ಸುಲಭ, ಸುಲಲಿತ ಆಡಳಿತಕ್ಕಾಗಿ ಹೆಚ್ಚಿನ ಸಿಬ್ಬಂದಿ, ಹೆಚ್ಚಿನ ತಂತ್ರಜ್ಞಾನ ನಿಯೋಜನೆ.

ಸರ್ವರಿಗೂ ಆದರದ ಸ್ವಾಗತ

ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
ಶ್ರೀ ಪೊಮ್ಮಲ ಸುನೀಲ್ ಕುಮಾರ್. ಭಾ.ಆ.ಸೇ.
ಆಯುಕ್ತರು, ಕಂದಾಯ ಇಲಾಖೆ, ಬೆಂಗಳೂರು

ಕಂದಾಯ ಇಲಾಖೆಯಲ್ಲಿ ಹೊಸದಾಗಿ ನೇಮಕಾತಿ ಹೊಂದಿರುವ 1000 ಗ್ರಾಮ ಆಡಳಿತಾಧಿಕಾರಿಗಳಿಗೆ ನೇಮಕಾತಿ ಆದೇಶ ವಿತರಣೆ ಹಾಗೂ 4000 ಲ್ಯಾಪ್ ಟಾಪ್ ವಿತರಣಾ ಕಾರ್ಯಕ್ರಮ ಡಿಜಿಟಲ್ ಭೂ ದಾಖಲೆಗಳ ವಿತರಣೆಗೆ ಚಾಲನೆ

29 ಏಪ್ರಿಲ್ 2025, ಬೆಳಿಗ್ಗೆ 11.00 ಗಂಟೆಗೆ ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ

-: ಉದ್ಘಾಟನೆ :-
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

-: ಗೌರವಾನ್ವಿತ ಆಹ್ವಾನಿತರು :-
ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಸುಶ್ರೀ ಶೋಭಾ ಕರಂದ್ಲಾಜೆ
ಮಾನ್ಯ ಸೂಕ್ಷ್ಮ , ಸಣ್ಣ , ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವರು, ಭಾರತ ಸರ್ಕಾರ

-: ಗೌರವ ಉಪಸ್ಥಿತಿ :-
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಶ್ರೀ ಬಸವರಾಜ ಎಸ್. ಹೊರಟ್ಟಿ
ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
ಶ್ರೀ ಯು.ಟಿ. ಖಾದರ್
ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ
ಶ್ರೀ ಕೃಷ್ಣ ಬೈರೇಗೌಡ
ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ

-: ಅಧ್ಯಕ್ಷತೆ :-
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ರಾಜ್ಯದ ಎಲ್ಲಾ ಗೌರವಾನ್ವಿತ ಸಚಿವರು, ಲೋಕಸಭಾ, ರಾಜ್ಯಸಭಾ, ವಿಧಾನ ಸಭಾ, ವಿಧಾನ ಪರಿಷತ್ ಸದಸ್ಯರು, ನಿಗಮ ಮಂಡಳಿಗಳ ಅಧ್ಯಕ್ಷರು ಗಳು ಹಾಗೂ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ

ಮಾನ್ಯ ಕಂದಾಯ ಸಚಿವರಾದ **ಶ್ರೀ. ಕೃಷ್ಣ ಬೈರೇಗೌಡರವರು** ಗ್ರಾಮ ಆಡಳಿತ ಅಧಿಕಾರಿಗಳಿಗೆ ಲ್ಯಾಪ್ ಟಾಪ್ ವಿತರಿಸುತ್ತಿರುವುದು

ಭಾರತದ ಸಾರ್ವಭೌಮತ್ವ , ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

ವಾರದಲ್ಲೇ ಮತ್ತೊಂದು ಬಾಲ್ಯವಿವಾಹ

ಕನಕಗಿರಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನಲ್ಲಿ ಒಂದೇ ವಾರದ ಅಂತರದಲ್ಲಿ ಮತ್ತೊಂದು ಬಾಲ್ಯವಿವಾಹ ನಡೆದಿದೆ. ವಿವಾಹವಾದ ಯುವಕ, ಆತನ ತಂದೆ ಹಾಗೂ ತಾಯಿ ವಿರುದ್ಧ ಕನಕಗಿರಿ ಪೊಲೀಸ್ ಠಾಣೆಯಲ್ಲಿ ಭಾನುವಾರ ಎಫ್‌ಐಆರ್ ದಾಖಲಾಗಿದೆ.

16 ವರ್ಷ ಒಂಬತ್ತು ತಿಂಗಳ ವಯಸ್ಸಿನ ಬಾಲಕಿಯನ್ನು ಹನುಮೇಶ್ ಗದ್ದಿ ಎಂಬಾತ ಏ.26ರಂದು ಮದುವೆಯಾಗಿದ್ದನು. ಈ ಕುರಿತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗೆ ದೂರು ಬಂದಿತ್ತು, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಬಾಲಕಿಯ ವಯಸ್ಸಿನ ದಾಖಲೆ ಪರಿಶೀಲಿಸಿದಾಗ ಬಾಲ್ಯವಿವಾಹ ನಡೆದಿದ್ದು ಖಚಿತವಾಗಿದೆ.

ಮದುವೆಗಳ ಮೇಲೆ ನಿಗಾ ಇಡಲು ಸೂಚನೆ: 'ಅಕ್ಷಯ ತೃತೀಯ ದಿನದಂದು ಸಾಮೂಹಿಕ ವಿವಾಹಗಳು ಹೆಚ್ಚಾಗಿ ಆಯೋಜನೆಯಾಗುತ್ತವೆ, ಈ ಸಂದರ್ಭದಲ್ಲಿ ಬಾಲ್ಯವಿವಾಹ ನಡೆಯುವ ಸಾಧ್ಯತೆ ಇರುತ್ತದೆ. ಹೀಗಾಗಿ ಅಧಿಕಾರಿಗಳು ಮದುವೆಗಳ ಮೇಲೆ ನಿಗಾ ಇಡಬೇಕು' ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಸೂಚಿಸಿದ್ದಾರೆ.

ಟೆಂಡರ್ ವಿಸ್ತರಣೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ 32 ಕ್ರಸ್ಟ್‌ಗೇಟ್‌ಗಳನ್ನು ಬದಲಿಸಲು ಕರೆಯಲಾಗಿದ್ದ ಟೆಂಡರ್ ಅವಧಿಯನ್ನು ಒಂದು ವಾರ ವಿಸ್ತರಿಸಲಾಗಿದೆ.

'ಇ-ಟೆಂಡರ್ ಅನ್ನು ಸೋಮವಾರ ತೆರೆಯಬೇಕಿತ್ತು, ಆದರೆ, ₹60 ಕೋಟಿಗೂ ಹೆಚ್ಚು ವೆಚ್ಚದ ದೊಡ್ಡ ಕಾಮಗಾರಿ ನಿಭಾಯಿಸುವ ಸಮರ್ಥ ಕಂಪನಿಗಳು ಟೆಂಡರ್‌ನಲ್ಲಿ ಪಾಲ್ಗೊಂಡಿಲ್ಲ. ಅದಕ್ಕೆ ಅದರ ಅವಧಿ ಒಂದು ವಾರ ಮುಂದಕ್ಕೆ ಹಾಕಲಾಗಿದೆ. ಮೇ 5 ರಂದು ಟೆಂಡರ್ ತೆರೆಯಲಾಗುವುದು' ಎಂದು ತುಂಗಭದ್ರಾ ಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು.

33ನೇ ಗೇಟ್ ಅಳವಡಿಕೆ ಕಾಮಗಾರಿ ಮೇ ಎರಡನೇ ವಾರದಲ್ಲಿ ನಡೆಯುವ ಸಾಧ್ಯತೆ ಇದೆ.

'ಇನ್ನು ಗ್ರಾ.ಪಂ. ಕಚೇರಿಗಳಲ್ಲೂ ಗ್ರಾಮ ಆಡಳಿತಾಧಿಕಾರಿಗಳು ಲಭ್ಯ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಗ್ರಾಮ ಆಡಳಿತಾಧಿಕಾರಿಗಳನ್ನು (ವಿ.ಎ.) ಜನ ಹುಡುಕಾಡುವ ಸ್ಥಿತಿ ಇದ್ದು, ಇದನ್ನು ತಪ್ಪಿಸಲು ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಅವರಿಗೆ ಕಚೇರಿ ತೆರೆಯಲಾಗುತ್ತದೆ ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ತಿಳಿಸಿದರು.

ಜಿಲ್ಲೆಯ ಸಮಗ್ರ ಅಭಿವೃದ್ಧಿ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಗ್ರಾಮ ಆಡಳಿತಾಧಿಕಾರಿಗಳು ಎಲ್ಲಿ ಸಿಗುತ್ತಾರೆ ಎಂಬುದು ಯಾರಿಗೂ ಗೊತ್ತಿಲ್ಲ. ಹೋಬಳಿ, ತಾಲ್ಲೂಕು, ಜಿಲ್ಲಾ ಕೇಂದ್ರಗಳಿಗೆ ಹುಡುಕಿಕೊಂಡು ಜನ ಹೋಗಬೇಕಿದೆ. ಆದ್ದರಿಂದ ಅವರು ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಜನರಿಗೆ ಲಭ್ಯವಾಗುವಂತೆ ಮಾಡಲಾಗುತ್ತಿದೆ' ಎಂದರು.

ರಾಜೇಂದರ್ ಕುಮಾರ್ ಕಟಾರಿಯಾ

'ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಜಾಗ ಇದ್ದರೆ ಅಲ್ಲೇ ಕುರ್ಚಿ ಮತ್ತು ಟೇಬಲ್ ವ್ಯವಸ್ಥೆ ಮಾಡಬೇಕು. ಒಂದು ವೇಳೆ ಜಾಗ ಇಲ್ಲದಿದ್ದರೆ ಅದೇ ಕಟ್ಟಡದಲ್ಲಿ ಸಣ್ಣ ಕೊಠಡಿ ನಿರ್ಮಿಸಿ ಅವರು ಕುಳಿತು ಮತ್ತು ದಾಖಲೆಗಳನ್ನು ಸಂಗ್ರಹಿಸಿಡಲು ವ್ಯವಸ್ಥೆ ಮಾಡಬೇಕು. ಈ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳು ನೋಡಿಕೊಳ್ಳಬೇಕು. ಒಟ್ಟಾರೆಯಾಗಿ ಗ್ರಾಮ ಆಡಳಿತಾಧಿಕಾರಿಗಳು ಜನರಿಗೆ ಸುಲಭವಾಗಿ ಸಿಗಬೇಕು' ಎಂದು ಹೇಳಿದರು.

ಐಷಾರಾಮಿ ಜೀವನ ಸಾಗಿಸುತ್ತಿದ್ದ ಅಂತರರಾಜ್ಯ ಕಳ್ಳನ ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನಾಲ್ಕು ರಾಜ್ಯಗಳಲ್ಲಿ 260 ಮನೆಗಳಲ್ಲಿ ಕಳ್ಳತನ
- ಪಾಪ ಪರಿಹಾರಕ್ಕಾಗಿ ಸಮಾಜ ಸೇವೆ
- ₹30 ಲಕ್ಷ ಮೌಲ್ಯದ 412 ಗ್ರಾಂ. ಚಿನ್ನಾಭರಣ ವಶ

ಕಲಬುರಗಿ: ನಾಲ್ಕು ರಾಜ್ಯಗಳಲ್ಲಿ 260ಕ್ಕೂ ಹೆಚ್ಚು ಮನೆಗಳ್ಳತನ ಮಾಡಿ, ಕದ್ದ ಹಣದಲ್ಲಿ ಪಾಪ ಪರಿಹಾರಕ್ಕಾಗಿ ಸಮಾಜ ಸೇವೆ ಮಾಡುವುದರ ಜೊತೆಗೆ ಐಷಾರಾಮಿ ಜೀವನ ಸಾಗಿಸುತ್ತಿದ್ದ ಅಂತರರಾಜ್ಯ ಕಳ್ಳನನ್ನು ಅಶೋಕ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಶಿವಪ್ರಸಾದ

'ಮನೆಗಳ್ಳತನ ಮಾಡುತ್ತಿದ್ದ ತೆಲಂಗಾಣದ ಸಿಕಂದರಾಬಾದ್ ನಿವಾಸಿ ಶಿವಪ್ರಸಾದ ಅಲಿಯಾಸ್ ಮಂತ್ರಿ ಶಂಕರ (56) ಎಂಬಾತನನ್ನು ಬಂಧಿಸಿ, ₹30 ಲಕ್ಷ ಮೌಲ್ಯದ 412 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ಆರೋಪಿ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿ 260ಕ್ಕೂ ಹೆಚ್ಚು ಮನೆಗಳ್ಳತನ ಮಾಡಿದ್ದಾನೆ' ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಶಿವಪ್ರಸಾದ 14ನೇ ವಯಸ್ಸಿನಿಂದಲೇ ಕಳ್ಳತನ ಶುರು ಮಾಡಿದ್ದ. ಕಳ್ಳತನದ ಪಾಪ ಪರಿಹಾರಕ್ಕಾಗಿ ದೇವಸ್ಥಾನ, ಜಾತ್ರೆಯಲ್ಲಿ ಅನ್ನ ಸಂತರ್ಪಣೆ, ಬಡ ರೋಗಿಗಳಿಗೆ ಧನಸಹಾಯದಂತಹ ಸಮಾಜ ಸೇವೆಯನ್ನೂ ಮಾಡುತ್ತಿದ್ದ. ಸಹಾಯ ಪಡೆದವರು ಈತನನ್ನು ಮಂತ್ರಿ ಶಂಕರ ಎಂದು ಕರೆಯುತ್ತಿದ್ದರು. ಈತ ಐವರನ್ನು ಮದುವೆ ಆಗಿದ್ದು, ಮಹಾನಗರಗಳ ಡ್ಯಾನ್ಸ್ ಕ್ಲಬ್‌ಗಳಲ್ಲಿ ಹಣ ಖರ್ಚು ಮಾಡುತ್ತಿದ್ದ' ಎಂದರು.

'ಕಲಬುರಗಿಯ ಬ್ರಹ್ಮಪುರ ನಗರದ ಮನೆಯಲ್ಲಿ ಕದ್ದು ಕಾಂಪೌಂಡ್ ಹಾರಿ ಹೋಗುತ್ತಿದ್ದಾಗ ಅದರ ದೃಶ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಮಾಹಿತಿಯನ್ನು ಆಧರಿಸಿ ಆರೋಪಿಯನ್ನು ಪತ್ತೆ ಹಚ್ಚಲಾಗಿದೆ. ಇದಕ್ಕೂ ಮುನ್ನ 210 ಕಳ್ಳತನ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾಗಿದ್ದು, ನಾಲ್ಕು ಬಾರಿ ಜೈಲಿಗೂ ಹೋಗಿದ್ದ. ಆದರೂ ಕಳ್ಳತನ ಕೃತ್ಯ ಬಿಟ್ಟಿರಲಿಲ್ಲ' ಎಂದು ಹೇಳಿದರು.

ಶ್ರವಣದೋಷವುಳ್ಳ ಮಕ್ಕಳ ಶಾಲೆ: ಉಚಿತ ಪ್ರವೇಶ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ತಿಲಕ್‌ನಗರದ 'ಶ್ರವಣದೋಷವುಳ್ಳ ಮಕ್ಕಳ ಸರ್ಕಾರಿ ಪಾಠಶಾಲೆ' ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಬಾಲಕರಿಗೆ ವಸತಿಯುತ ಹಾಗೂ ಬಾಲಕಿಯರಿಗೆ ಬಾಹ್ಯ ಕಲಿಕೆಗೆ (1ರಿಂದ 10ನೇ ತರಗತಿಯವರೆಗೆ) ಕಲಿಯಲು ಅವಕಾಶವಿದೆ.

ಶಾಲಾ ಶಿಕ್ಷಣ ಇಲಾಖೆಯಿಂದ ಸಾಮಾನ್ಯ ಮಕ್ಕಳಿಗೆ ನೀಡುತ್ತಿರುವ ಶಿಕ್ಷಣವನ್ನೇ ಇಲ್ಲೂ ನೀಡಲಾಗುತ್ತದೆ. ವಿಶೇಷ ಮಕ್ಕಳಿಗೆ ಭಾಷಾ ಕಲಿಕೆಯಲ್ಲಿ ವಿನಾಯಿತಿ ಇದ್ದು, ಒಟ್ಟಾರೆ ಕನ್ನಡ ಭಾಷೆಯೊಂದಿಗೆ ಗಣಿತ ವಿಜ್ಞಾನ ಹಾಗೂ ಸಮಾಜವಿಜ್ಞಾನ ವಿಷಯವನ್ನು ಕಲಿಯಬೇಕು.

ಮೇ 29ರಂದು 2025-26ನೇ ಶೈಕ್ಷಣಿಕ ಸಾಲಿಗೆ 1ನೇ ತರಗತಿಗೆ 5 ವರ್ಷ 5 ತಿಂಗಳು ವಯಸ್ಸಿನಿಂದ 9 ವರ್ಷದೊಳಗಿನ ಬಾಲಕ, ಬಾಲಕಿಯರು ಹಾಗೂ ಅಂಗವಿಕಲತೆ ಕಾರಣದಿಂದ ಈವರೆಗೂ ಶಾಲೆಗೆ ದಾಖಲಾಗದವರಿಗೆ ಪ್ರವೇಶ ನೀಡಲಾಗುವುದು. ಇತರ ಶಿಕ್ಷಣ ಸಂಸ್ಥೆಗಳಲ್ಲಿರುವ ಬಾಲಕರು ಬಯಸಿದರೆ ದಾಖಲಿಸಿಕೊಳ್ಳಲಾಗುವುದು.

ಬಾಲಕರಿಗೆ ಉಚಿತ ಊಟ, ವಸತಿ, ಹಾಸಿಗೆ, ಹೊದಿಕೆ, ಪಠ್ಯಪುಸ್ತಕಗಳು ಹಾಗೂ ವೈದ್ಯಕೀಯ ಸೇವೆ ಒದಗಿಸಲಾಗುವುದು. ಸ್ಮಾರ್ಟ್ ಕ್ಲಾಸ್ ಸೌಲಭ್ಯ ಸೇರಿದಂತೆ ಎಲ್ಲವೂ ಉಚಿತ.

ಪೋಷಕರು ಅರ್ಜಿಯನ್ನು ಶಾಲೆಯಲ್ಲಿ ಉಚಿತವಾಗಿ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ. 0821-2494104/ ಮೊ.ಸಂ. 94490 10499 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆವಿಕಂ, ಬೆಂಗಳೂರು, ಬಿಡ್ ವಿಚಾರಣೆ ಸಂಖ್ಯೆ. ಎಸ್‌ಇಇ/ಆರ್‌ಎಂಜಿಸಿ/ಸಿವಿಲ್/2025-26/01 ದಿನಾಂಕ 19.04.2025 ರ ಅನ್ವಯ ಬೆವಿಕಂ, ರಾಮನಗರ, ಕಾ & ಪಾ ವೃತ್ತದ ವ್ಯಾಪ್ತಿಯಲ್ಲಿ ಹೊಸದಾಗಿ ಬಾಡಿಗೆ ನೀಡಿದ ಕಟ್ಟಡದಲ್ಲಿ ಬೆವಿಕಂನ ರಾಮನಗರ ವೃತ್ತ ಕಛೇರಿಗೆ ಅವಕಾಶ ಕಲ್ಪಿಸಲು ಸಿವಿಲ್ ಇಂಜಿನಿಯರಿಂಗ್ ಕೆಲಸಗಳಾದ ವಿಭಜನೆ ಗೋಡೆ, ಫಾಲ್ಸ್ ಸೀಲಿಂಗ್ ಒದಗಿಸುವುದು ಹಾಗೂ ಇತರೆ ಸಂಬಂಧಿತ ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರಿಗಿಟ್ಟ ಮೊತ್ತ (ಅಂದಾಜು): **ರೂ.32.33 ಲಕ್ಷಗಳು.** ಕೆಲಸ ಪೂರ್ಣಗೊಳಿಸಲು ನಿಗಧಿತ ಅವಧಿ ಮಳೆಗಾಲ ಸೇರಿದಂತೆ: **45 ದಿನಗಳು.** ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಗೆ ದಿನಾಂಕ 02.05.2025 ರಂದು ಅಥವಾ ನಂತರ ಭೇಟಿ ನೀಡಿ ಪಡೆಯಬಹುದು. ಯಾವುದೇ ಸ್ಪಷ್ಟತೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ +91-8046010000 ಅಥವಾ +91-8068948777 ಅಥವಾ ಇ-ಮೇಲ್ support@eprochelpdesk.com ಮೂಲಕ ಸಂಪರ್ಕಿಸಬಹುದು.

ಸಹಿ/- ಅಧೀಕ್ಷಕ ಅಭಿಯಂತರರು (ವಿ), (ಕಾ&ಪಾ), ರಾಮನಗರ ವೃತ್ತ, ಬೆವಿಕಂ, ಬೆಂಗಳೂರು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಮೊದಲ ಮಹಡಿ ಸಂಖ್ಯೆ 59, ಕುಮಾರ ಪಾರ್ಕ್ ಪಶ್ಚಿಮ ವಿಸ್ತರಣೆ, ರೈಲ್ವೆ ಪ್ಯಾರಲಲ್ ರೋಡ್, ಶೇಷಾದ್ರಿಪುರಂ, ಬೆಂಗಳೂರು 560020

ಸಂಖ್ಯೆ: KSEDCL/ITS-HR/HIG/SEMI/2025-26 ದಿನಾಂಕ: 28.04.2025

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), 1. Empanelment of Agencies for Providing Highly Skilled and Skilled ICT Human Resource Services to KEONICS. ಸಂಸ್ಥೆಗಳನ್ನು ಆಯ್ಕೆ ಮಾಡಲು 15 ದಿನಗಳ ಅವಧಿಗೆ ಓಪನ್ ಇ-ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್ದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080-8105844665)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2025-26/ SE0114	Empanelment of Agencies for Providing Highly Skilled and Skilled ICT Human Resource Services to Karnataka State Electronics Development Corporation Limited	13.05.2025

DIPR/CP/SA/391/2025-26 ಸಹಿ/- ನಿರ್ದೇಶಕರು (ಹಣಕಾಸು)

ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.
ಡಾ.ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು-570012.
E-mail- dswomysore9@gmail.com ದೂ.: 0821-2344661

ಸಂಖ್ಯೆ:ನಿಪಕೇ.ಮೈ/ಆಡಳಿತ/ಸಿಆರ್-1/2025-26 ದಿನಾಂಕ: 28-04-2025

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

2025-26ನೇ ಸಾಲಿಗೆ ಮೈಸೂರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಹೊರಸಂಪನ್ಮೂಲದಿಂದ ಮಾನವ ಸಿಬ್ಬಂದಿ ಸೇವೆಯನ್ನು ಪಡೆಯಲು ನೊಂದಾಯಿತ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ htpp//.kppp.karnataka.gov.in ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

ಸಹಿ/- ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಹಾಗೂ
ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು.

Vikas Souharda Co-operative Bank Ltd.
Vikas Bank
Head Office : Opp. Sriramulu Park, Station Road, Hosapete - 583201, Vijaynagar Dist.
Station Road, Hosapete-583201 Dist. Vijayanagara, Karnataka
www.vikasbank.com, E-Mail:vcbho@vikasbank.com

SHORT-TERM TENDER NOTIFICATION

Tender No	Description	EMD & Form Fee	Method of Tender
VCB/ HO/ Building /2/ 2024-25	Construction of Branch building at Gangavathi Main Road, Sindhanur (Landmark: Near old IB)	EMD @ 3.25 Lakh & Form and document cost Rs.5,000/-	Two cover system Technical & Financial

Date of issue the tender Document : 29.04.2025 to 05.05.2025
Pre-Bidding Meeting : 03.05.2025 at 11:00 AM
Last Date for Submission of Tender : 05.05.2025 up to 6:00 PM
Opening of technical Bid : 06.05.2025 at 12:00 PM
EMD & Form fee DD in favor of "Vikas Souharda Co-operative Bank Ltd.," Hospet. can be remitted at Head Office, Hospet
- Interested Contractors can obtain details of eligibility criteria from The Managing Director, Vikas Souharda Co-operative Bank Ltd., Head Office Station Road, Hospet- 583201.
- Details of Terms and conditions are available in the tender document which can be obtained from the bank at Head Office, Hospet.
- For any Clarification Contact: 9620220901.

Sd/- Managing Director

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ, ಸಯ್ಯಾಜಿರಾವ್ ರಸ್ತೆ, ಮೈಸೂರು. ಇ-ಮೇಲ್:eewmccmys@gmail.com

ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ-02/2025-26 ದಿನಾಂಕ: 25.04.2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)	ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾ.ಅ(ಪ)/ ಟಿ.ಎನ್-05/2025-26 ದಿನಾಂಕ: 25.04.2025	04	132.50	25.04.2025 ಬೆಳಿಗ್ಗೆ 11 ರ ನಂತರ	09.05.2025 ಸಂಜೆ 5.25 ಗಂಟೆಗೆ	12.05.2025 ಬೆಳಿಗ್ಗೆ 10.00 ರ ನಂತರ
2.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾ.ಅ(ಪೂ)/ ಟಿ.ಎನ್-06/2025-26 ದಿನಾಂಕ: 25.04.2025	03	45.20	25.04.2025 ಬೆಳಿಗ್ಗೆ 11 ರ ನಂತರ	09.05.2025 ಸಂಜೆ 5.25 ಗಂಟೆಗೆ	12.05.2025 ಬೆಳಿಗ್ಗೆ 10.00 ರ ನಂತರ
3.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾ.ಅ(ಪೂ)/ ಟಿ.ಎನ್-04/2025-26 ದಿನಾಂಕ: 24.04.2025	02	53.25	25.04.2025 ಬೆಳಿಗ್ಗೆ 11 ರ ನಂತರ	12.05.2025 ಸಂಜೆ 5.25 ರ ವರೆಗೆ	13.05.2025 ಸಂಜೆ 5.25ರ ನಂತರ

ಅರ್ಹ ಗುತ್ತಿಗೆದಾರರು **(https://kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂರ್ವ & ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ **(https://kppp.karnataka.gov.in)** ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು(ಪೂರ್ವ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಸಹಿ/- ಕಾರ್ಯಪಾಲಕ ಅಭಿಯಂತರರು(ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/109/25-26

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ-583101.
ದೂರವಾಣಿ ಸಂಖ್ಯೆ : 08392-273479 /278168
ಫ್ಯಾಕ್ಸ್ : 08392-273477
ವೆಬ್‌ಸೈಟ್ : www.bellarycity.gov.in
ಇ-ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101

ಸಂಖ್ಯೆ:ಮನಪಾಬ/SWM /SHG/CM/2025-26 ದಿನಾಂಕ:28.04.2025.

ಪತ್ರಿಕಾ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆಯ ಸ್ವಚ್ಛ ಭಾರತ್ ಮಿಷನ್ 2.0 ರ ಅಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪು (SHG) ಸದಸ್ಯರ ನೇಮಕಾತಿಗಾಗಿ ಆಸಕ್ತಿಯುಳ್ಳ ಸದಸ್ಯರಿಗೆ ಈ ಮೂಲಕ ಆಹ್ವಾನಿಸುತ್ತಿದ್ದು, 03 ವರ್ಷಗಳವರೆಗೆ ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ IEC ಚಟುವಟಿಕಳನ್ನು ಕೈಗೊಳ್ಳಲು ಆಸಕ್ತಿಯನ್ನು ಹೊಂದಿರುವ NULM-DAY ಅಡಿಯಲ್ಲಿ ನೋಂದಾಯಿತ SHG ಸದಸ್ಯರಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಇದರ ToR, ಆಯ್ಕೆ ಪ್ರಕ್ರಿಯೆ ಮತ್ತುಗೌರವಧನಕ್ಕೆ ಸಂಬಂಧಿಸಿದ ಇತರೆ ವಿವರಗಳಿಗಾಗಿ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ) ಇವರಿಗೆ ಸಂಪರ್ಕಿಸತಕ್ಕದ್ದು.

ಆಸಕ್ತಿಯುಳ್ಳ NULM-DAY ಅಡಿಯಲ್ಲಿ ನೋಂದಾಯಿಸಿಕೊಂಡ ಆಸಕ್ತ SHG ಸದಸ್ಯರು Expression of Interest (ಇಚ್ಛಾ ಅರ್ಜಿಯನ್ನು) ಹಿಂಬರಹದೊಂದಿಗೆ ಮಹಾನಗರಪಾಲಿಕೆ ಆಯುಕ್ತರು ಕಾರ್ಯಾಲಯಕ್ಕೆ ಭೇಟಿ ನೀಡಿ ಲಭ್ಯವಿರುವ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಅವಶ್ಯ ದಾಖಲಾತಿಗಳೊಂದಿಗೆ ದಿನಾಂಕ:03.05.2025 ರ ಮಧ್ಯಾಹ್ನ 01:30 ಗಂಟೆಯ ಒಳಗಾಗಿ ಖುದ್ದಾಗಿ ಬಳ್ಳಾರಿ ಮಹಾನಗರ ಪಾಲಿಕೆಯ ಕಛೇರಿಗೆ ಸಲ್ಲಿಸತಕ್ಕದು.

SHG ಸದಸ್ಯರು ನಿಗಧಿತಅರ್ಜಿ ನಮೂನೆಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು
1. ಗುರುತಿನ ಪುರಾವೆ 2. ವಿಳಾಸದ ಪುರಾವೆ
3. SHG ಅಡಿಯಲ್ಲಿ ನೋಂದಾಯಿಸಿಕೊಂಡಿರುವುದಕ್ಕೆ (ಎಂಪೆನಾಲ್) ದಾಖಲೆಗಳು.
4. ಶೈಕ್ಷಣಿಕಾ ಅರ್ಹತೆ ದಾಖಲಾತಿಗಳು. 5.NULM-DAY/NRLM ರಿಂದ ಹಿಂಬರಹದ ನಮೂನೆ.
6. SHG ಸದಸ್ಯರುಚಾಲ್ತಿಯಲ್ಲಿರುವತಮ್ಮ ಸಂಸ್ಥೆಯ ನೋಂದಾಣಿ ಪತ್ರದ ಪ್ರತಿ.

ಅಭ್ಯರ್ಥಿಗಳಿಗೆ ಈ ವಿಷಯದ ಕುರಿತು ಅವರಿಗೆ ಇರುವ ಆಸಕ್ತಿ, ಜ್ಞಾನಕೌಶಲ್ಯ, / ಮಾಹಿತಿಯ ಕುರಿತು ನಿರ್ಣಯಿಸಲು ಸಂದರ್ಶನವನ್ನು ಆಯೋಜಿಸಿ ಆಯ್ಕೆ ಮಾಡಲಾಗುವುದು.

ಆಯುಕ್ತರು
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ವಿಭಾಗ, ಕೆ. ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 02 ದಿನಾಂಕ:28.04.2025

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು/ ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in**. ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ - ಪೋರ್ಟಲ್ ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ &ವೇಳೆ @17.00ಗಂಟೆ
ಅಲ್ಪಾವಧಿ ಟೆಂಡರ್			
KSRTC/2025-26/SEI697	ಕರಾರಸಾನಿಗಮದ ವಿಭಾಗಗಳಿಗೆ ಗುತ್ತಿಗೆ ಆಧಾರದ ಮೇಲೆ ಚಾಲಕರ ಸೇವೆಗಳನ್ನು ಒದಗಿಸಲು ಏಜೆನ್ಸಿಯನ್ನು ಆಯ್ಕೆ ಮಾಡುವ ಕುರಿತು.	45.37	03.05.2025
KSRTC/2025-26/IND209	** ಟರ್ನ್ ಕೀ ಆಧಾರದ ಮೇಲೆ ಯು.ಪಿ.ಎಸ್ ಪೂರೈಕೆ ಸ್ಥಾಪನೆ ಮತ್ತು ಕಾರ್ಯಾರಂಭ	0.12	03.05.2025
KSRTC/2025-26/IND210	** ಸರ್ವರ್‌ಗಳ ಖರೀದಿ	0.03	03.05.2025

**GOK order no DPAR/113/EGM/2020 Dated:9.10.2023 ರ ಪ್ರಕಾರ ಪೂರ್ವ ಅರ್ಹತೆ ಹೊಂದಿರುವ ಸರಬರಾಜುದಾರರು ಮಾತ್ರ.

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ, ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ:- ಸೂಚನೆ:-ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ಅಥವಾ ದೂರವಾಣಿ ಸಂಖ್ಯೆ: 080-46010000/080-68948777, ಕರೆಮಾಡಿ **Support@eprochelpdesk.com,** ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತ್ತದೆ. ಬಿಡ್ದುದಾರರಿಗೆ ಟೆಂಡರ್ ಸಂಬಂಧ ಯಾವುದೇ ಮಾಹಿತಿ ಅಗತ್ಯವಿದ್ದರೆ **cosp@ksrtc.org,** ನಲ್ಲಿ ಸಂಪರ್ಕಿಸ ಬಹುದಾಗಿದೆ. (ಸಂಪರ್ಕಿಸಿ: 7760990225, 7760990224)

ಸಹಿ/-
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಜಿಎ/404/2025-26

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ-ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis') ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ-ಪೋರ್ಟಲ್‌ನಲ್ಲಿ ಮಾತ್ರ)

Short Description of the Immovable Property

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 689/2019)	Minimum Bid Price (Rs)	EMD (Rs)	Bid Increase Value (Rs)
1.	No. 564/29, PID No. 59-107-29, 10th cross, WKP Road, 7th Block, Jayanagara, ward No. 59, Bengaluru. Measuring East to West 40 ft North to South 40 Total 1600 sq.ft (Ground + 3 Floor) Location: https://maps.app.goo.gl/s35PfS 4iRve9MZe16			
(a)	Ground Floor, Flat No.GF-101, UDS-399.76, SBA-1383.75 Sq.ft	1,53,00,000/-	15,30,000/-	1,53,000/-
(b)	1st Floor, Flat No.FF-102, UDS-399.76, SBA-1383.75 SQ.ft	1,55,00,000/-	15,50,000/-	1,55,000/-
(c)	2nd Floor, Flat No.SF-103 UDS-400, SBA-1383.75 Sq.ft	1,57,00,000/-	15,70,000/-	1,57,000/-
(d)	3rd Floor, Flat No.TF-01, UDS-399.76, SBA-1383.75 Sq.ft	1,54,00,000/-	15,40,000/-	1,54,000/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ-ಹರಾಜಿನ ದಿನಾಂಕ ಮತ್ತು ಸಮಯ
22ನೇ ಮೇ 2025 ಮಧ್ಯಾಹ್ನ 3 ರಿಂದ 4 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು-01	23ನೇ ಮೇ 2025 ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ	27ನೇ ಮೇ 2025 ಸಂಜೆ 5 ಗಂಟೆಯವರೆಗೆ	28ನೇ ಮೇ 2025 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080-46010000, 080-68948777) ಮತ್ತು ಇ-ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರನ್ನು ಸಂಪರ್ಕಿಸಬಹುದು. ಇ-ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 6364403715 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 22.04.2025
DIPR/CP/393/Zen/2025-26
ಸಹಿ/- ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ನೋಂದಾಯಿತ ಕಚೇರಿ: 30/1, 1ನೇ ಮತ್ತು 2ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ ನಗರ, ಬೆಂಗಳೂರು- 560051
ಇ-ಮೇಲ್: dgm3bswml@gmail.com

ಸಂಖ್ಯೆ: ಡಿಜಿಎಂ-3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/ಪಿಪಿಪಿ/ಪಿಆರ್01/2025-26 ದಿನಾಂಕ : 28.04.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು-3, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಬಿಎಸ್‌ಡಬ್ಲ್ಯೂಎಂಎಲ್ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಬೆಂಗಳೂರು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (ಅಂದರೆ **https://kppp.karnataka.gov.in)** ಮೂಲಕ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ದಾರರು ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳು ಪ್ರಮಾಣಿತ ಬಿಡ್‌ದಾರರ ದಾಖಲೆಗಳ ಪ್ರಕಾರ ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಇತರ ವಿವರಗಳನ್ನು ಬಿಡ್ಡಿಂಗ್ ದಾಖಲೆಗಳಲ್ಲಿ ಕಾಣಬಹುದು.

ಕ್ರ ಸಂ	ಕಾಮಗಾರಿಗಳ ಹೆಸರು	*ಪಿಪಿಪಿ ಮಾದರಿಯಡಿಯಲ್ಲಿ ಬಿಡ್‌ದಾರರಿಗೆ ಅಂದಾಜು ಬಂಡವಾಳ ವೆಚ್ಚ (ಲಕ್ಷ ರೂ.ಗಳಲ್ಲಿ) ಜಿಎಸ್‌ಟಿ ಹೊರತುಪಡಿಸಿ	ಇಎಂಡಿ (ಮೊತ್ತ ರೂ.ಗಳಲ್ಲಿ)	ಬಿಡ್ ದಾಖಲೆಯ ವೆಚ್ಚ
ಪ್ರಸ್ತಾವಿತ ಸಂಸ್ಕರಣಾ ಘಟಕಗಳಿಗೆ ಸಿ & ಡಿ ತ್ಯಾಜ್ಯದ ಸಂಗ್ರಹಣೆ, ಪ್ರಾಥಮಿಕ ಸಾರಿಗೆ ಮತ್ತು ದ್ವಿತೀಯ ಸಾಗಣೆಯ ಕೆಲಸಕ್ಕಾಗಿ 100% ರಿಯಾಯಿತಿ ಹೂಡಿಕೆಯೊಂದಿಗೆ ವಿನ್ಯಾಸ ನಿರ್ಮಾಣ ಹಣಕಾಸು ಕಾರ್ಯಾಚರಣೆ ಮತ್ತು ವರ್ಗಾವಣೆ (DBFOT) ಗಾಗಿ ರಿಯಾಯಿತಿದಾರರ ನೇಮಕಾತಿ, 15 ವರ್ಷಗಳ ರಿಯಾಯಿತಿ ಅವಧಿಗೆ ಕೆಳಗಿನ ವಿವಿಧ ಪ್ಯಾಕೇಜ್‌ಗಳಲ್ಲಿ ಸಂಸ್ಕರಣಾ ಘಟಕಗಳ ಸ್ಥಾಪನೆ ಸೇರಿದಂತೆ.				
1	ಪ್ಯಾಕೇಜ್ - 1 (750 TPD ಸಂಗ್ರಹಣೆ, ಪ್ರಾಥಮಿಕ ಸಾರಿಗೆ ಮತ್ತು ದ್ವಿತೀಯ ಸಾರಿಗೆ ಮತ್ತು RFP ಯಲ್ಲಿ ಉಲ್ಲೇಖಿಸಲಾದ ಸ್ಥಳಗಳ ಪ್ರಕಾರ C&D ತ್ಯಾಜ್ಯದ ಸಂಸ್ಕರಣೆ), ಕರೆ-3.	5325.00	ಈ ಕೆಳಗಿನವುಗಳ ಅಡಿಯಲ್ಲಿ ಇ-ಪಾವತಿಯ ಮೂಲಕ ರೂ. 1.00 ಲಕ್ಷ ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ನೆಫ್ಟ್ / ಒಟಿಸಿ ಮತ್ತು ಉಳಿದ ರೂ. 25,62,500 /- ಬ್ಯಾಂಕ್ ಗ್ಯಾರಂಟಿ / ರಾಷ್ಟ್ರೀಕೃತ /ಪರಿಶಿಷ್ಟ ಬ್ಯಾಂಕ್ ನೀಡಿದ ಎಫ್‌ಡಿಆರ್ ಮೂಲಕ.	ಕೆಪಿಪಿಪಿ ಪೋರ್ಟಲ್ ಪ್ರಕಾರ

ಟೆಂಡರ್‌ನ ಕಾರ್ಯಸೂಚಿಗಳು:
1. ಕೆಪಿಪಿ ಪೋರ್ಟಲ್ ಮುಖಾಂತರ ಪೂರ್ವ-ಬಿಡ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 07.05.2025 ರಂದು ಸಂಜೆ 17.30 ಗಂಟೆಯವರೆಗೆ.**
2. ಪೂರ್ವ ಬಿಡ್ ಸಭೆ: ಸಿಇ & ಸಿಜಿಎಂ (ಟೆಕ್), ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು ಕಚೇರಿಯಲ್ಲಿ **ದಿನಾಂಕ: 07.05.2025 ರಂದು ಸಂಜೆ 15.00 ಗಂಟೆಯವರೆಗೆ.**
3. ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 13.05.2025 ರಂದು ಸಂಜೆ 16.00 ಗಂಟೆಯವರೆಗೆ.**
4. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 14.05.2025 ರಂದು ಸಂಜೆ 16.30 ಗಂಟೆಯವರೆಗೆ.**
5. ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.
6. ತನ್ನ ನಿಯಂತ್ರಣ ಮೀರಿದ ವ್ಯವಸ್ಥೆಯ ವೈಫಲ್ಯದಿಂದ ಉಂಟಾಗುವ ಯಾವುದೇ ವಿಳಂಬಗಳಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ಟೆಂಡರ್‌ದಾರರಿಗೆ ತಿಳಿಸಲು ವ್ಯವಸ್ಥೆಯು ಪ್ರಯತ್ನಿಸಿದರೂ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ-ಮೇಲ್ ವಿಳಾಸ **hphelpdesk.blr@intarvo.com** ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080-22371090/22373788. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಟೆಂಡರ್‌ದಾರರು ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್‌ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ.
7. ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-3 ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/410/ಎಸ್‌ಎಸ್‌ಸಿ/2025-26

AUCTION NOTICE
This is to inform public in general that Kotak Mahindra Bank Ltd has organized an auction in below mention respect of vehicles.

1) CB_AL_BADA_DOST YOM – 2023 Reg No – KA567964
2) CB_Ashok Leyland Dost GOODS YOM – 2023 Reg No – KA25AB9065
3) CB_TATA_LPT_4830_68 _WB_COWL_BLW YOM – 2023 Reg No – KA19AE1794
4) CB_AL_BADA_DOST YOM – 2023 Reg No – KA19AE3446
5) CB_FULLY_BUILD_GOODS _BODY_PRO_2110_VOLVO _EICHER YOM – 2024 Reg No – KA25AC0077
6) CB_MM SUPRO MAXI TRUCK YOM – - Reg No – KA14C7447
7) MAHINDRA BOLERO PICK-UP YOM – - Reg No – KA35D6167
8) CB_MAHINDRA_BOLERO _MAXXCITY_PICKUP YOM – 2023 Reg No – KA14C5848
9) CB_ASHOK_LEYLAND _ECOMET_1915_CABIN _CHASSIS YOM – 2023 Reg No – KA13D7017
10) CB_Ashok Leyland Dost GOODS. YOM – 2023 Reg No – KA01AP0739
11) CB_TATA_INTRA_TATAMOTORS YOM – 2023 Reg No – KA37B6569
12) CB_TIPPER_SIGNA _1923_TATAMOTORS YOM – 2023 Reg No – KA41D7209
13) CB_TIPPER_SIGNA _4830_TATA_MOTORS YOM – 2024 Reg No – KA01AP8769
14) CB_TIPPER_SIGNA _4830_TATA_MOTORS YOM – - Reg No – KA01AP8772

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"
INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 29.04.2025
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಸಂಕ್ಷಿಪ್ತ ಸುದ್ದಿ

ವೀಣಾ ಕಾಶಪ್ಪನವರ ನೇಮಕ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭೆಯ ಮಹಿಳಾ ವಿಭಾಗದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ವೀಣಾ

ವೀಣಾ ಕಾಶಪ್ಪನವರ

ಕಾಶಪ್ಪನವರ ಅವರನ್ನು ನೇಮಕ ಮಾಡಲಾಗಿದೆ.

ಬಾಗಲಕೋಟೆ ಜಿಲ್ಲೆಯ ಹುನಗುಂದದ ವೀಣಾ ಅವರನ್ನು ನೇಮಕ ಮಾಡಿ, ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಆದೇಶ ಹೊರಡಿಸಿದ್ದಾರೆ.

'ಜನಿವಾರ ನಿಷೇಧ: ಮೋದಿಯನ್ನು ದೂಷಿಸುತ್ತಾರೆಯೇ?'

ಬೆಂಗಳೂರು: 'ರೈಲ್ವೆ ಇಲಾಖೆಯ ಪರೀಕ್ಷೆ ವೇಳೆ ವಸ್ತ್ರಸಂಹಿತೆ ಹೆಸರಿನಲ್ಲಿ

ರಾಮಲಿಂಗಾ ರೆಡ್ಡಿ

ಮಾಂಗಲ್ಯ, ಕಾಲುಂಗುರ, ಕೈ ಬಳೆ, ಜನಿವಾರ, ತಿಲಕ ನಿಷೇಧಿಸಿರುವುದಕ್ಕೆ ಬಿಜೆಪಿಯವರು ಪ್ರಧಾನಿ ಮೋದಿ ಅವರನ್ನು ದೂಷಿಸುತ್ತಾರೆಯೇ' ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಪ್ರಶ್ನಿಸಿದ್ದಾರೆ.

'ಇಲ್ಲಸಲ್ಲದ ಆರೋಪ, ಧರ್ಮದ ಹೆಸರಿನಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಾ, ಕೊಳಕು ರಾಜಕೀಯ ಪೋಷಿಸುವ ರಾಜ್ಯದ ಬಿಜೆಪಿ ನಾಯಕರು ಮೋದಿ ಅವರನ್ನು ಪ್ರಶ್ನಿಸುವ ಎದೆಗಾರಿಕೆ ತೋರಿಸುವರೇ' ಎಂದೂ ಕೇಳಿದ್ದಾರೆ.

'ಪ್ರತಿ ಬಾರಿ ಹಿಂದುತ್ವದ ಬಗ್ಗೆ ಮಾತನಾಡಿ ರಾಜಕೀಯ ಮಾಡುವ ಬಿಜೆಪಿಗರು ಮಾಂಗಲ್ಯವನ್ನು ತೆಗೆಸಿ ಪರೀಕ್ಷೆ ಬರೆಯುವಂತೆ ಆದೇಶ ಮಾಡಿರುವುದು ಮಹಿಳೆಯರ ಮೇಲೆ ಅವರಿಗೆ ಎಷ್ಟು ಗೌರವ ಇದೆ ಎನ್ನುವುದನ್ನು ತೋರಿಸುತ್ತದೆ' ಎಂದಿದ್ದಾರೆ.

'ಈ ಹಿಂದೆ ನಮ್ಮ ರಾಜ್ಯದ ಉನ್ನತ ಶಿಕ್ಷಣ ಸಚಿವರಿಗೆ ಪತ್ರ ಬರೆದು ಸಿಇಟಿ ಪರೀಕ್ಷೆಯ ತಪಾಸಕರು ವಿದ್ಯಾರ್ಥಿಯ ಜನಿವಾರ ತೆಗೆಸಿರುವ ಪ್ರಕರಣವನ್ನು ಖಂಡಿಸಿದ್ದೆ. ಅಲ್ಲದೆ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಪರೀಕ್ಷಾ ಮಾರ್ಗಸೂಚಿಯ ವಸ್ತ್ರಸಂಹಿತೆ ನೀತಿಯಲ್ಲಿ ಬದಲಾವಣೆ ಮಾಡುವಂತೆ ಮನವಿ ಮಾಡಿದ್ದೇನೆ. ಆದರೆ, ಈ ಪ್ರಕರಣದಲ್ಲಿ ಬಿಜೆಪಿಯವರು ರಾಜಕಾರಣ ಮಾಡುತ್ತಾ, ರಾಜ್ಯ ಸರ್ಕಾರವು ಹಿಂದೂ ವಿರೋಧಿ ಎಂದು ಅಪಪ್ರಚಾರ ಮಾಡಿದರು' ಎಂದಿದ್ದಾರೆ.

'ಸಂವಿಧಾನ ರಕ್ಷಿಸಿ ದೇಶ ಉಳಿಸಿ' ಆಂದೋಲನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗು

'ಮೋದಿಯನ್ನು ಪ್ರಶ್ನಿಸುವುದು ತಪ್ಪೇ?'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಾಶ್ಮೀರದಲ್ಲಿ ಭಯೋತ್ಪಾದಕರು ಅಮಾಯಕರ ಹತ್ಯೆ ಮಾಡಿದಾಗ ಒಬ್ಬ ಪೊಲೀಸ್ ಕೂಡ ಅಲ್ಲಿರಲಿಲ್ಲ. ಕೇಂದ್ರ ಗುಪ್ತಚರ ವಿಭಾಗ ಮತ್ತು ಭದ್ರತಾ ವ್ಯವಸ್ಥೆ ಏನು ಮಾಡುತ್ತಿದೆ? ಇದು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರ ವೈಫಲ್ಯ ಅಲ್ಲವೆ? ನಮಗೆ ರಕ್ಷಣೆ ನೀಡುವಲ್ಲಿ ವಿಫಲರಾದ ಅವರನ್ನು ನಾವು ಭಾರತೀಯರು ಪ್ರಶ್ನಿಸಬಾರದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಮತ್ತು 'ಸಂವಿಧಾನ ರಕ್ಷಿಸಿ ದೇಶ ಉಳಿಸಿ' ಆಂದೋಲನದ ಪ್ರಯುಕ್ತ ಎಐಸಿಸಿ, ಕೆಪಿಸಿಸಿ ವತಿಯಿಂದ ನಗರದಲ್ಲಿ ಸೋಮವಾರ ನಡೆದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರದ ಭದ್ರತಾ ಲೋಪವನ್ನು ಮರೆಮಾಚಲು ಯುದ್ಧದ ಕುರಿತ ನನ್ನ ಹೇಳಿಕೆ ತಿರುಚಲಾಗಿದೆ' ಎಂದರು.

'ನಮ್ಮ ಪ್ರತಿಭಟನಾ ಸಮಾವೇಶಕ್ಕೇ ನುಗ್ಗಿದ ಬಿಜೆಪಿಯವರು ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ್ದಾರೆ. ಇಂಥ ಬೆದರಿಕೆಗೆ ನಾನು ಜಗ್ಗಲ್ಲ, ಬಗ್ಗಲ್ಲ. ನಮ್ಮ ಕಾರ್ಯಕರ್ತರಿಗೂ ಶಕ್ತಿ ಇದೆ' ಎಂದು ಬಿಜೆಪಿ ಪ್ರತಿಭಟನಕಾರರ ವಿರುದ್ಧ ಗುಡುಗಿದರು.

'ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದ್ದನ್ನು ಮರೆಮಾಚಲು ಬಿಜೆಪಿಯವರು ಕಾಂಗ್ರೆಸ್ ವಿರುದ್ಧ ಜನಾಕ್ರೋಶ ಯಾತ್ರೆ ಮಾಡಿದರೆ, ಜನರಿಗೆ ಸತ್ಯ ತಿಳಿಸಲು ನಾವು ಪ್ರತಿಭಟನಾ ಸಮಾವೇಶ ಮಾಡಿದ್ದೇವೆ' ಎಂದರು.

ಸಚಿವರಾದ ಸತೀಶ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ, ಎಚ್.ಸಿ.ಮಹದೇವಪ್ಪ, ಎಚ್.ಕೆ.ಪಾಟೀಲ, ಎಂ.ಬಿ. ಪಾಟೀಲ, ಕೆ.ಎಚ್.ಮುನಿಯಪ್ಪ ಮತ್ತಿತರರು ಇದ್ದರು.

ಬೆಳಗಾವಿಯಲ್ಲಿ ಸೋಮವಾರ ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು

ಒಂದೆಡೆ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ, ಮತ್ತೊಂದೆಡೆ ಬಿಜೆಪಿ ಸರ್ಕಾರದ ಲೂಟಿ. ಗ್ಯಾರಂಟಿಗಳು ನೆಮ್ಮದಿ ನೀಡಿದರೆ, ಕೇಂದ್ರದ ನೀತಿಗಳು ಆತಂಕ ಮೂಡಿಸಿವೆ
ರಣದೀಪ್ ಸಿಂಗ್ ಸುರ್ಜೇವಾಲಾ ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್‌ನ ದರ ಏರಿಕೆಯೇ ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆಗೂ ಮೂಲ. ಹೀಗಾಗಿ ಜನರ ಆಕ್ರೋಶವು ಕೇಂದ್ರ ಸರ್ಕಾರದ ವಿರುದ್ಧ ಇರಬೇಕು
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

'ಹಿಂದುಳಿದ ತಾಲ್ಲೂಕುಗಳ ಸ್ಥಿತಿಗತಿ ಅಧ್ಯಯನ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಡಿ.ಎಂ.ನಂಜುಂಡಪ್ಪ ವರದಿ ಜಾರಿಯಾಗಿದ್ದರೂ ರಾಜ್ಯ ದಲ್ಲಿ ಇಲ್ಲಿಯವರೆಗೆ ಪ್ರಾದೇಶಿಕ ಅಸಮತೋಲನ ನಿವಾರಣೆ ಸಾಧ್ಯವಾಗಿಲ್ಲ. ಹಿಂದುಳಿದ ತಾಲ್ಲೂಕುಗಳ ಸಮಗ್ರ ಅಧ್ಯಯನಕ್ಕಾಗಿ ರಾಜ್ಯ ಸರ್ಕಾರ ಹೊಸದಾಗಿ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ರಚಿಸಿದ್ದು, ತಾಲ್ಲೂಕುಗಳ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಿ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಸಮಿತಿಯ ಅಧ್ಯಕ್ಷ ಎಂ.ಗೋವಿಂದರಾವ್ ಹೇಳಿದರು.

'ನಂಜುಂಡಪ್ಪ ವರದಿಯಲ್ಲಿ 114 ತಾಲ್ಲೂಕುಗಳನ್ನು ಹಿಂದುಳಿದವು ಎಂದು ಗುರುತಿಸಲಾಗಿತ್ತು. ಆ ತಾಲ್ಲೂಕುಗಳ ಅಭಿವೃದ್ಧಿಗಾಗಿ 2007–08ರಿಂದ 2023–24ರವರೆಗೆ ₹ 45,789 ಕೋಟಿ ಅನುದಾನ ನೀಡಲಾಗಿದೆ. ಅದರಲ್ಲಿ ₹37,661 ಕೋಟಿ ಬಿಡುಗಡೆಯಾಗಿ ₹34,381 ಕೋಟಿ ಖರ್ಚಾಗಿದೆ. ಆದರೂ ಪ್ರಾದೇಶಿಕ ಅಸಮಾನತೆ ನಿವಾರಣೆ ಅಸಾಧ್ಯವಾಗಿರುವ ಕಾರಣ ರಾಜ್ಯ ಸರ್ಕಾರ ಸಮಿತಿ ರಚಿಸಿದೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಎಂ.ಗೋವಿಂದ ರಾವ್

'ನಂಜುಂಡಪ್ಪ ವರದಿಗೆ 22 ವರ್ಷಗಳಾಗಿದ್ದು, ಅಲ್ಲಿಯ ಕೆಲ ಸೂಚ್ಯಂಕಗಳು ಮೌಲ್ಯ ಕಳೆದುಕೊಂಡಿವೆ. ಪ್ರಸ್ತುತ ತಾಲ್ಲೂಕುಗಳ ಸಂಖ್ಯೆಯೂ ಹೆಚ್ಚಾಗಿರುವ ಕಾರಣ ಹೊಸದಾಗಿ ಅಧ್ಯಯನ ನಡೆಸಲು ನಮ್ಮ ಸಮಿತಿಗೆ ಅಧಿಕಾರ ನೀಡಲಾಗಿದೆ. 2024 ಅಕ್ಟೋಬರ್‌ನಿಂದ ಈವರೆಗೆ ಸಮಿತಿ 18 ಸುತ್ತಿನ ಸಭೆ ನಡೆಸಿದೆ. ಸೆಪ್ಟೆಂಬರ್‌ಗೆ ನಮ್ಮ ಸಮಿತಿಯ ಅವಧಿ ಮುಗಿಯಲಿದ್ದು, ಸರ್ಕಾರಕ್ಕೆ ವರದಿ ನೀಡಲಾಗುವುದು' ಎಂದರು.

'ರಾಜ್ಯದಾದ್ಯಂತ ವಿವಿಧ ಹಂತಗಳಲ್ಲಿ ಸಭೆ ನಡೆಸಲಾಗುತ್ತಿದ್ದು, ಎಲ್ಲರ ಸಲಹೆ, ಸೂಚನೆ ಸ್ವೀಕರಿಸಲಾಗುತ್ತಿದೆ. ಯಾರೇ ಮಾಹಿತಿ ನೀಡಿದರೂ ಪರಿಶೀಲಿಸಿ ಪರಿಗಣಿಸಲಾಗುವುದು. ಸಾರ್ವಜನಿಕರೂ ಮಾಹಿತಿ ನೀಡಬಹುದು. ಸಮಿತಿ ಎಲ್ಲವನ್ನೂ ಮುಕ್ತವಾಗಿ ಸ್ವೀಕರಿಸಲಿದೆ. ಮಾಹಿತಿ ನೀಡಲು ಮೊಬೈಲ್ ದೂರವಾಣಿ ಸಂಖ್ಯೆ: 98802– 83338 ಸಂಪರ್ಕಿಸಬಹುದು' ಎಂದು ಕೋರಿದರು.

ಮಹಿಳಾ ಆಯೋಗದ ಸದಸ್ಯೆ ವಾಹನಕ್ಕೆ ತಡೆ

ಚನ್ನಗಿರಿ ತಾಲ್ಲೂಕಿನ ತಾವರೆಕೆರೆಗೆ ಭೇಟಿ ನೀಡಿದ್ದ ಡಾ.ಅರ್ಚನಾ ಮುಜುಂದಾರ್

ಪ್ರಜಾವಾಣಿ ವಾರ್ತೆ

ಚನ್ನಗಿರಿ (ದಾವಣಗೆರೆ ಜಿಲ್ಲೆ): ಮಸೀದಿಯ ಎದುರು ಇಬ್ಬರು ಮಹಿಳೆಯರನ್ನು ಸಾರ್ವಜನಿಕವಾಗಿ ಥಳಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಲು ತಾಲ್ಲೂಕಿನ ತಾವರೆಕೆರೆ ಗ್ರಾಮಕ್ಕೆ ಸೋಮವಾರ ಭೇಟಿ ನೀಡಿದ್ದ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಡಾ.ಅರ್ಚನಾ ಮುಜುಂದಾರ್ ಅವರ ವಾಹನ ತಡೆದ ಮುಸ್ಲಿಂ ಸಮುದಾಯದ ಮಹಿಳೆಯರು ಪ್ರತಿಭಟನೆ ನಡೆಸಿದರು.

ಅಮಾನವೀಯ ಕೃತ್ಯವನ್ನು ಸಮರ್ಥಿಸಿಕೊಂಡ ಪ್ರತಿಭಟನಕಾರರು, ಪೊಲೀಸರು ಬಂಧಿಸಿರುವ ಆರೋಪಿಗಳನ್ನು ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿದರು.

ಸಂತ್ರಸ್ತ ಮಹಿಳೆಯರಿಗೆ ಸಾಂತ್ವನ ಹೇಳಿ ಚನ್ನಗಿರಿಯತ್ತ ಪ್ರಯಾಣ ಬೆಳೆಸಲು ಮುಂದಾದ ಅರ್ಚನಾ ಅವರ ಕಾರನ್ನು ಗುಂಪೊಂದು ತಡೆಯಿತು. ಇದರಲ್ಲಿ ಆರೋಪಿಗಳ ಕುಟುಂಬದ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

'ಆರೋಪಿ ಪುರುಷರು ಮಾಡಿದ್ದು ತಪ್ಪಲ್ಲ. ಬದಲಿಗೆ, ಪ್ರಕರಣದಲ್ಲಿ ಪೊಲೀಸರು ಅಮಾಯಕರನ್ನು ಬಂಧಿಸಿದ್ದಾರೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ಪ್ರಕರಣದಲ್ಲಿ ಸಂತ್ರಸ್ತ ಮಹಿಳೆಯರದ್ದೇ ತಪ್ಪಿದೆ. ಅವರ ಗಂಡಂದಿರು ದೂರು ನೀಡಿದ್ದರಿಂದ ಮಸೀದಿ ಕ್ರಮ ಕೈಗೊಂಡಿದೆ. ಅಮಾಯಕರ ಬಂಧನದಿಂದ ಕುಟುಂಬ ನಿರ್ವಹಣೆಗೆ ತೊಂದರೆಯಾಗಿದೆ' ಎಂದು ಪ್ರತಿಭಟನಕಾರರು ಡಾ.ಅರ್ಚನಾ ಎದುರು ಆರೋಪಿಸಿದರು. ಇದರಿಂದ ಗ್ರಾಮದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

'ಮಹಿಳೆಯರಿಬ್ಬರ ಮೇಲೆ ಪುರುಷರು ಸಾರ್ವಜನಿಕವಾಗಿ ಹಲ್ಲೆ ನಡೆಸಿರುವುದು ವಿಡಿಯೊದಲ್ಲಿದೆ. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು 6 ಜನ ಆರೋಪಿಗಳನ್ನು ಬಂಧಿಸಿದ್ದಾರೆ. ಯಾರು ತಪ್ಪು ಮಾಡಿದ್ದಾರೆ ಎಂಬುದನ್ನು ನ್ಯಾಯಾಲಯ ನಿರ್ಧರಿಸಲಿದೆ' ಎಂದು ಡಾ.ಅರ್ಚನಾ ಪ್ರತಿಭಟನಕಾರರಿಗೆ ಹೇಳಿದರು.

ಪರ ಪುರುಷನೊಂದಿಗೆ ಸಲುಗೆಯಿಂದ ವರ್ತಿಸಿದ ಹಾಗೂ ಇದಕ್ಕೆ ಸಹಕಾರಿಸಿದ ಆರೋಪದ ಮೇರೆಗೆ ಇಬ್ಬರು ಮಹಿಳೆಯರ ಮೇಲೆ ಮುಸ್ಲಿಂ ಸಮುದಾಯದ ಗುಂಪೊಂದು ಗ್ರಾಮದ ಜಾಮಿಯಾ ಮಸೀದಿಯ ಎದುರು ಏಪ್ರಿಲ್ 9ರಂದು ಅಮಾನುಷವಾಗಿ ಹಲ್ಲೆ ನಡೆಸಿತ್ತು. ಘಟನೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಹಿಳಾ ಆಯೋಗ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ.

ಚನ್ನಗಿರಿ ತಾಲ್ಲೂಕಿನ ತಾವರೆಕೆರೆ ಗ್ರಾಮಕ್ಕೆ ಸೋಮವಾರ ಭೇಟಿ ನೀಡಿದ್ದ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಡಾ.ಅರ್ಚನಾ ಮುಜುಂದಾರ್ ಕಾರು ತಡೆದು ಪ್ರತಿಭಟನೆ ನಡೆಸಲಾಯಿತು

ಪೊಲೀಸರು ಬಂಧಿಸಿರುವ ಪತಿಯನ್ನು ಬಿಡುಗಡೆ ಮಾಡುವಂತೆ ಥಳಿತಕ್ಕೊಳಗಾದ ಮಹಿಳೆಯರಲ್ಲೇ ಒಬ್ಬರು ಕೋರಿದರು. ಇದು ನಮ್ಮ ಸಮಾಜದ ವ್ಯಂಗ್ಯ
ಡಾ.ಅರ್ಚನಾ ಮುಜುಂದಾರ್ ಸದಸ್ಯೆ, ರಾಷ್ಟ್ರೀಯ ಮಹಿಳಾ ಆಯೋಗ

ತುಮಕೂರು, ಹಾಸನ, ಮಂಡ್ಯದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಮಂಡ್ಯ/ಹಾಸನ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಹಾಗೂ ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಹಿರಿಸಾವೆಯಲ್ಲಿ ಭಾನುವಾರ ರಾತ್ರಿ ಮಧ್ಯರಾತ್ರಿ ಗುಡುಗು, ಮಿಂಚುಸಹಿತ ಮಳೆ ಸುರಿದು ಮರಗಳು, 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಉರುಳಿಬಿದ್ದಿವೆ. ಚಾವಣಿ ಹಾರಿ ಹೋಗಿ, ವಾಸದ ಮನೆ, ರೇಷ್ಮೆ ಹುಳು ಸಾಕಣೆ ಮನೆಗಳಿಗೆ ಹಾನಿಯಾಗಿದೆ.

ಜವನಗಹಳ್ಳಿ ಸಮೀಪ ಕೊಳ್ಳೇಗಾಲ ರಸ್ತೆ ಬದಿಯ ಮೂರು ಬಾಗೇ ಮರಗಳು ಬಿದ್ದು, ವಾಹನಗಳು ರಾಷ್ಟ್ರೀಯ ಹೆದ್ದಾರಿ 209ರ ಬೈಪಾಸ್‌ ರಸ್ತೆಯಲ್ಲಿ ಸಂಚರಿಸಿದವು. ಹಿರೀಸಾವೆ ಹೋಬಳಿಯ ಹೆಗ್ಗಡಿಹಳ್ಳಿ ರಂಗಸ್ವಾಮಿ ಅವರ ರಾಸು ಕೊಟ್ಟಿಗೆಯ ಸಿಮೆಂಟ್ ಶೀಟ್‌ನ ಚಾವಣಿ, ಮರದ ತೀರುಗಳ ಸಮೇತ ಗಾಳಿಗೆ ಹಾರಿ ಮನೆಯ ಮೇಲೆ ಬಿದ್ದಿದೆ.

ತುಮಕೂರು ವರದಿ: ನಗರ ಸೇರಿದಂತೆ ಜಿಲ್ಲೆಯ ವಿವಿಧ ಕಡೆಗಳಲ್ಲಿ ಭಾನುವಾರ ರಾತ್ರಿ ಮತ್ತು ಸೋಮವಾರ ಸಂಜೆ ಉತ್ತಮ ಮಳೆ ಸುರಿಯಿತು. ಹಲವು ಕಡೆ ಮಳೆ ಮತ್ತು ಗಾಳಿಗೆ ಮರ, ವಿದ್ಯುತ್ ಕಂಬ ಉರುಳಿ ಬಿದ್ದು ವಾಹನಗಳು ಜಖಂಗೊಂಡಿವೆ.

ಬಿ.ಎಚ್.ರಸ್ತೆ, ಜಿಲ್ಲಾ ಆಸ್ಪತ್ರೆ ಆವರಣ, ವಿನಾಯಕ ನಗರದ ವಿವಿಧ ಕಡೆ ಕಾರು, ಬೈಕ್ ಮತ್ತು ಆಂಬುಲೆನ್ಸ್ ಮೇಲೆ ಮರ, ವಿದ್ಯುತ್ ಕಂಬಗಳು ಉರುಳಿಬಿದ್ದಿವೆ. ವಾಹನಗಳಿಗೆ ಹಾನಿಯಾಗಿದೆ. ಆಸ್ಪತ್ರೆ ಆವರಣದಲ್ಲಿ ನಿಲ್ಲಿಸಿದ ನಾಲ್ಕು ಕಾರುಗಳ ಮೇಲೆ ಮರದ ಕೊಂಬೆ ಮುರಿದು ಬಿದ್ದಿವೆ.

ಸಿಡಿಲು ಬಡಿದು ಮಹಿಳೆ ಸಾವು: ಆನವಟ್ಟಿ (ಶಿವಮೊಗ್ಗ ಜಿಲ್ಲೆ): ಸಮೀಪದ ಗಿಣಿವಾಲ ಗ್ರಾಮದಲ್ಲಿ ಭಾನುವಾರ ಸಂಜೆ ಸಿಡಿಲು ಬಡಿದು ಅಂಗನವಾಡಿ ಸಹಾಯಕಿ ಮಾಲತಿ ಮಂಜಪ್ಪ ಕೊಡಗಂಟಿ (42) ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆಯ ಬೆಳಕವಾಡಿ ಸಮೀಪ ಜವನಗಹಳ್ಳಿ ಬಳಿ ಭಾನುವಾರ ರಾತ್ರಿ ಸುರಿದ ಮಳೆಯಿಂದ ಮೂರು ಮರಗಳು ಬುಡಸಮೇತ ಮುರಿದು ಬಿದ್ದವು

ಬೇಸಿಗೆ ರಜೆ: ರೈಲು ವಿಶೇಷ ಟ್ರಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ರಜೆಯಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ವಿವಿಧೆಡೆ ಹೆಚ್ಚುವರಿಯಾಗಿ ಟ್ರಿಪ್ ನಡೆಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಎಸ್‌ಎಂವಿಟಿ ಬೆಂಗಳೂರು–ಬೆಳಗಾವಿ ವಿಶೇಷ ಎಕ್ಸ್‌ಪ್ರೆಸ್ ರೈಲು ಏಪ್ರಿಲ್ 30 ಮತ್ತು ಮೇ 2ರಂದು ಸಂಜೆ 7ಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಹೊರಟು, ಮರುದಿನ ಬೆಳಿಗ್ಗೆ 7.30ಕ್ಕೆ ಬೆಳಗಾವಿಯನ್ನು ತಲುಪಲಿದೆ. ಬೆಳಗಾವಿಯಿಂದ ಮೇ 1 ಮತ್ತು 3ರಂದು ಸಂಜೆ 5.30ಕ್ಕೆ ಹೊರಟು, ಮರುದಿನ ಬೆಳಿಗ್ಗೆ 4.30ಕ್ಕೆ ಬೆಂಗಳೂರು ತಲುಪಲಿದೆ.

ಈ ರೈಲು ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ಎಸ್‌ಎಂಎಂ ಹಾವೇರಿ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಅಳ್ನಾವರ, ಲೋಂಡಾ ಮತ್ತು ಖಾನಾಪುರ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ.

ಯಶವಂತಪುರ–ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ರೈಲು ಯಶವಂತಪುರದಿಂದ ಏಪ್ರಿಲ್ 3ರಂದು ರಾತ್ರಿ 10ಕ್ಕೆ ಹೊರಟು, ಮರುದಿನ ಮಧ್ಯಾಹ್ನ 2:05ಕ್ಕೆ ವಿಜಯಪುರ ತಲುಪಲಿದೆ. ಅಲ್ಲಿಂದ ಮೇ 1ರಂದು ಸಂಜೆ 7ಕ್ಕೆ ಹೊರಟು, ಮರುದಿನ ಬೆಳಿಗ್ಗೆ 11.15ಕ್ಕೆ ಯಶವಂತಪುರ ತಲುಪಲಿದೆ.

ತುಮಕೂರು, ಅರಸೀಕೆರೆ, ಬೀರೂರು, ಚಿಕ್ಕಜಾಜೂರು, ಚಿತ್ರದುರ್ಗ, ರಾಯದುರ್ಗ, ಬಳ್ಳಾರಿ ಕಂಟೋನ್ಮೆಂಟ್, ತೋರಣಗಲ್ಲು, ಹೊಸಪೇಟೆ, ಕೊಪ್ಪಳ, ಗದಗ, ಬಾದಾಮಿ, ಬಾಗಲಕೋಟೆ ಮತ್ತು ಆಲಮಟ್ಟಿ ನಿಲ್ದಾಣಗಳಲ್ಲಿ ಈ ರೈಲು ನಿಲುಗಡೆ ಹೊಂದಿರಲಿದೆ.

ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು–ಮದುರೈ ವಿಶೇಷ ಎಕ್ಸ್‌ಪ್ರೆಸ್ ರೈಲು ಏಪ್ರಿಲ್ 30ರಂದು ಸಂಜೆ 7ಕ್ಕೆ ಹೊರಟು, ಮರುದಿನ ಬೆಳಿಗ್ಗೆ 6.15ಕ್ಕೆ ಮದುರೈ ತಲುಪಲಿದೆ. ಮದುರೈನಿಂದ ಮೇ 1ರಂದು ಬೆಳಿಗ್ಗೆ 9.10ಕ್ಕೆ ಹೊರಟು, ಅದೇ ದಿನ ಸಂಜೆ 7.50ಕ್ಕೆ ಬೆಂಗಳೂರನ್ನು ತಲುಪಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪಿಜಿಸಿಇಟಿ: ಅರ್ಜಿ ಸಲ್ಲಿಕೆಗೆ ಮೇ 10 ಕೊನೆ

ಬೆಂಗಳೂರು: 2025-26ನೇ ಸಾಲಿನ ಸ್ನಾತಕೋತ್ತರ ಕೋರ್ಸುಗಳ (ಎಂಬಿಎ, ಎಂಸಿಎ, ಎಂ.ಟೆಕ್, ಎಂಇ) ಪ್ರವೇಶದ ಪಿಜಿಸಿಇಟಿ ಹಾಗೂ ಲ್ಯಾಟರಲ್ ಎಂಟ್ರಿ ಮೂಲಕ ಎಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕೆ ನಡೆಸುವ ಡಿಸಿಇಟಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅರ್ಜಿ ಆಹ್ವಾನಿಸಿದೆ.

'ಈ ಎರಡೂ ಪರೀಕ್ಷೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೇ 10 ಕೊನೆ ದಿನ. ಶುಲ್ಕ ಪಾವತಿಗೆ ಮೇ 12 ಕೊನೆ ದಿನ' ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

'ಮೇ ಕೊನೆ ಅಥವಾ ಜೂನ್ ಮೊದಲ ವಾರದಲ್ಲಿ ಪಿಜಿಸಿಇಟಿ ನಡೆಸಲಾಗುತ್ತದೆ. ಮೇ 31ರಂದು ಡಿಸಿಇಟಿ ನಡೆಸಲು ತೀರ್ಮಾನಿಸಲಾಗಿದೆ' ಎಂದು ಅವರು ವಿವರಿಸಿದ್ದಾರೆ.

'ಪಿಜಿ-ಆರ್ಕಿಟೆಕ್ಚರ್ ಕೋರ್ಸ್ ಪ್ರವೇಶಕ್ಕೆ ಕೆಇಎ ಪ್ರವೇಶ ಪರೀಕ್ಷೆ ನಡೆಸುವುದಿಲ್ಲ. ಬದಲಿಗೆ ಆರ್ಕಿಟೆಕ್ಚರ್ ಕೌನ್ಸಿಲ್ ನಡೆಸುವ ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನೇ ಇಲ್ಲಿ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ. ಆದರೆ, ಅವರು ಕೂಡ ಈಗ ಅರ್ಜಿ ಸಲ್ಲಿಸಬೇಕು' ಎಂದು ಪ್ರಸನ್ನ ತಿಳಿಸಿದ್ದಾರೆ.

ಜಾತಿ ಜನ ಗಣತಿ ವರದಿ ಮಧ್ಯಂತರ ರಕ್ಷಣೆಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನ ಗಣತಿ) ವರದಿಯನ್ನು ಪ್ರಶ್ನಿಸಲಾದ ಅರ್ಜಿಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಮಧ್ಯಂತರ ರಕ್ಷಣೆ ನೀಡಲು ನಿರಾಕರಿಸಿರುವ ಹೈಕೋರ್ಟ್, 'ಈ ಸಂಬಂಧ ಏನಿದ್ದರೂ ಪ್ರತ್ಯೇಕ ಮಧ್ಯಂತರ ಅರ್ಜಿ ಸಲ್ಲಿಸಿ' ಎಂದು ಅರ್ಜಿದಾರರಿಗೆ ಸೂಚಿಸಿದೆ.

ಈ ಸಂಬಂಧ ಬೀದರ್‌ನ ಶಿವಾರಾಜ ಕಣಶೆಟ್ಟಿ, ಕೆ.ಸಿ.ಶಿವರಾಂ, ಬೆಂಗಳೂರಿನ ಬುಜೇಂದ್ರ, ನಟ 'ಮುಖ್ಯಮಂತ್ರಿ' ಚಂದ್ರು ಹಾಗೂ ಬೆಂಗಳೂರಿನ 'ಸಮಾಜ ಸಂಪರ್ಕ ವೇದಿಕೆ' ಅಧ್ಯಕ್ಷ ಜಿ.ಎನ್. ಶ್ರೀಕಂಠಯ್ಯ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಶಿವರಾಜ ಕಣಶೆಟ್ಟಿ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಗಂಗಾಧರ ಆರ್.ಗುರುಮಠ ವಾದ ಮಂಡಿಸಲು ಮುಂದಾಗುತ್ತಿದ್ದಂತೆಯೇ, ಮುಖ್ಯ ನ್ಯಾಯಮೂರ್ತಿಗಳು, 'ಇದರಲ್ಲಿ ತುರ್ತು ಏನಿದೆ, ಅವಸರ ಮಾಡಬೇಡಿ' ಎಂದರು. ಇದಕ್ಕೆ ಪೂರಕವಾಗಿ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, 'ತುರ್ತು ಏನಿಲ್ಲ' ಎಂದರು.

ಇದಕ್ಕೆ ಪ್ರತಿಯಾಗಿ ಗುರುಮಠ ಅವರು, 'ಕಳೆದ ವಿಚಾರಣೆ ವೇಳೆ ನ್ಯಾಯಪೀಠ ನಮ್ಮ ಆಕ್ಷೇಪವನ್ನು ವಿವರವಾಗಿ ಆಲಿಸಿದೆ. ಈ ಪ್ರಕರಣದಲ್ಲಿ ಅರ್ಜಿದಾರರಿಗೆ ಮಧ್ಯಂತರ ರಕ್ಷಣೆ ನೀಡಬೇಕು. ಅಂತೆಯೇ, ರಾಜ್ಯ ಸರ್ಕಾರ 2002ರ ಮಾರ್ಚ್ 30ರಂದು ರೂಪಿಸಿದ ಮೀಸಲಾತಿಯನ್ನು ಮುಂದುವರಿಸುವುದಾಗಿ ಸುಪ್ರೀಂ ಕೋರ್ಟ್‌ಗೆ ವಾಗ್ದಾನ ನೀಡಿದೆ...' ಎಂದು ವಿವರಿಸಲು ಮುಂದಾದರು. ಆದರೆ, ವಿವರಣೆಯನ್ನು ಲೆಕ್ಕಿಸದ ನ್ಯಾಯಪೀಠ ವಿಚಾರಣೆಯನ್ನು ಜುಲೈ 17ಕ್ಕೆ ಮುಂದೂಡಿತು.

ಆದೇಶ ಹಿಂದಕ್ಕೆ ಪಡೆಯಲು ಸ್ಪೀಕರ್‌ಗೆ ಸೂಚನೆ ನೀಡಲು ರಾಜ್ಯಪಾಲರಿಗೆ ಕೋರಿಕೆ

ಶಾಸಕರ ಅಮಾನತು ತೆರವಿಗೆ ಬಿಜೆಪಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ 18 ಶಾಸಕರನ್ನು ಆರು ತಿಂಗಳು ಅಮಾನತು ಮಾಡಿರುವ ಆದೇಶವನ್ನು ಹಿಂದಕ್ಕೆ ಪಡೆಯುವಂತೆ ವಿಧಾನಸಭಾಧ್ಯಕ್ಷರಿಗೆ ಸೂಚನೆ ನೀಡಬೇಕು ಮತ್ತು ಈ ವಿಚಾರದಲ್ಲಿ ತಾವು ಮಧ್ಯಸ್ಥಿಕೆ ವಹಿಸಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಬಿಜೆಪಿ ನಾಯಕರು ಮನವಿ ಮಾಡಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧಪಕ್ಷದ ನಾಯಕ ಆರ್.ಅಶೋಕ ನೇತೃತ್ವದ ಶಾಸಕರ ನಿಯೋಗ ರಾಜ್ಯಪಾಲರಿಗೆ ಸೋಮವಾರ ಮನವಿ ಸಲ್ಲಿಸಿತು.

ಮನವಿಗೆ ಸ್ಪಂದಿಸಿರುವ ರಾಜ್ಯಪಾಲ ಗೆಹಲೋತ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾನೂನು ಸಚಿವ ಎಚ್.ಕೆ.ಪಾಟೀಲ ಅವರಿಗೆ ಪತ್ರ ಬರೆದಿದ್ದಾರೆ. 'ಶಾಸಕರ ಮನವಿಯನ್ನು ಸಕಾರಾತ್ಮಕವಾಗಿ ಪರಿಗಣಿಸಿ 18 ಶಾಸಕರ ಅಮಾನತು ಆದೇಶವನ್ನು ಹಿಂದಕ್ಕೆ ಪಡೆಯಬೇಕು. ಪ್ರಜಾಸತ್ತಾತ್ಮಕ ಮೌಲ್ಯಕ್ಕನುಗುಣವಾಗಿ ಜನಪ್ರತಿನಿಧಿಗಳಾದ ಶಾಸಕರು ಪ್ರತಿದಿನ ಸಾರ್ವಜನಿಕರ ಕೆಲಸಗಳನ್ನು ಮಾಡಬೇಕಾಗಿದೆ. ಅದಕ್ಕೆ ಅನುವು ಮಾಡಿಕೊಡಬೇಕು' ಎಂದು ಪತ್ರದಲ್ಲಿ ರಾಜ್ಯಪಾಲರು ಸೂಚಿಸಿದ್ದಾರೆ.

ಕೈಗೊಂಬೆ ಸಭಾಧ್ಯಕ್ಷ: ರಾಜ್ಯಪಾಲರ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವಿಜಯೇಂದ್ರ, 'ಸಭಾಧ್ಯಕ್ಷರು ಆಡಳಿತ ಪಕ್ಷದ ಕೈಗೊಂಬೆಯಾಗಿ ವರ್ತಿಸಬಾರದು. 18 ಶಾಸಕರನ್ನು ಆರು ತಿಂಗಳು ಅಮಾನತು ಮಾಡಿರುವುದು ಸಂವಿಧಾನ ವಿರೋಧಿ ನಡೆ. ಸಭಾಧ್ಯಕ್ಷರು ಇದಕ್ಕೆ ಬೆಂಬಲಕೊಡಬಾರದು. ಆಡಳಿತ ಪಕ್ಷಕ್ಕೆ ಮನವರಿಕೆ ಮಾಡಿ ಸಭಾಧ್ಯಕ್ಷರು ತಮ್ಮ ನಿರ್ಧಾರದಿಂದ ಹಿಂದೆ ಸರಿಯಬೇಕು. ಈ ನಿಟ್ಟಿನಲ್ಲಿ ರಾಜ್ಯಪಾಲರು ಸರ್ಕಾರಕ್ಕೆ ಬುದ್ಧಿವಾದ ಹೇಳಬೇಕು ಎಂದು ಮನವಿ ಮಾಡಿದ್ದೇವೆ' ಎಂದರು.

ಆರ್.ಅಶೋಕ ಮಾತನಾಡಿ, ಈ ವಿಷಯವಾಗಿ ರಾಜ್ಯಪಾಲರು ಸರ್ಕಾರ ಮತ್ತು ಸಭಾಧ್ಯಕ್ಷರ ಜತೆ ಚರ್ಚೆ ಮಾಡಲಿದ್ದಾರೆ ಎಂದು ತಿಳಿಸಿದರು.

'ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಬಿಜೆಪಿ ಶಾಸಕರನ್ನು ಆರು ತಿಂಗಳು ಅಮಾನತು ಮಾಡಿರುವುದು ಪ್ರಜಾಪ್ರಭುತ್ವ ವಿರೋಧಿ ನಡೆ. ದೇಶದಲ್ಲಿ ಕಾಂಗ್ರೆಸ್ ಪಕ್ಷ ತುರ್ತುಪರಿಸ್ಥಿತಿ ಹೇರಿದ್ದನ್ನು ನಾವು ನೋಡಿದ್ದೇವೆ. ಅಧಿವೇಶನದಲ್ಲಿ ಮಾತನಾಡಲೆಂದೇ ಜನ ನಮಗೆ ಮತ ನೀಡಿ ಕಳಿಸಿದ್ದಾರೆ. ಅಮಾನತು ಮಾಡಿರುವುದರಿಂದ ಶಾಸಕರಿಗೆ ಜನರಿಗೆ ಸಂಬಂಧಿಸಿದ ನಿತ್ಯದ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ' ಎಂದರು.

'ಈ ಹಿಂದೆ ಕಾಂಗ್ರೆಸ್ ಶಾಸಕರು ಸಭಾಧ್ಯಕ್ಷರ ಪೀಠಕ್ಕೆ ನುಗ್ಗಿದ್ದರು. ಆಗ ಪ್ರಜಾಪ್ರಭುತ್ವದ ಆಶಯದಂತೆಯೇ ಬಿಜೆಪಿ ಸರ್ಕಾರ ನಡೆದುಕೊಂಡಿತ್ತು. ಆಡಳಿತ ಪಕ್ಷದಂತೆ ವಿರೋಧ ಪಕ್ಷವೂ ಮುಖ್ಯ. ಕಾನೂನು ಸಚಿವರು ಮತ್ತು ಸಭಾಧ್ಯಕ್ಷರ ಜತೆ ಮಾತನಾಡಿ ಅಮಾನತು ಆದೇಶ ವಾಪಸ್ ಪಡೆಯುವಂತೆ ಆಗ್ರಹಿಸಲಾಗಿದೆ' ಎಂದರು.

ನಿಯೋಗದಲ್ಲಿ ಶಾಸಕರಾದ ಉದಯ್ ಗರುಡಾಚಾರ್, ಕೆ. ಗೋಪಾಲಯ್ಯ, ಸಿ.ಕೆ. ರಾಮಮೂರ್ತಿ, ಎಸ್. ರಘು, ಎಸ್. ಮುನಿರಾಜು ಮತ್ತು ಎಲ್.ಎ. ರವಿಸುಬ್ರಹ್ಮಣ್ಯ ಇದ್ದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಅರ್ಪಿಸಿದ ಬಿಜೆಪಿ ನಾಯಕರು

ಭಯೋತ್ಪಾದನೆ: ರಾಜ್ಯ 'ಕೈ' ನಾಯಕರ ವ್ಯತಿರಿಕ್ತ ಹೇಳಿಕೆಗೆ ವಿಜಯೇಂದ್ರ ಟೀಕೆ

ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್‌ಗಾಂಧಿ ಮತ್ತು ಶಶಿ ತರೂರು ಅವರು ಪಾಕಿಸ್ತಾನ ವಿರುದ್ಧ ಯಾವುದೇ ಕ್ರಮ ಕೈಗೊಂಡರೂ ಪಕ್ಷದ ಬೆಂಬಲ ಇದೆ ಎಂದು ಹೇಳಿದ್ದಾರೆ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ನಾಯಕರು ವ್ಯತಿರಿಕ್ತ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಬಿ.ವೈ.ವಿಜಯೇಂದ್ರ ಟೀಕಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಸಂತೋಷ್ ಲಾಡ್, ಆರ್.ಬಿ.ತಿಮ್ಮಾಪುರ ಅವರು ಅವಿವೇಕತನದ ಹೇಳಿಕೆ ನೀಡುತ್ತಿದ್ದಾರೆ. ಇಂತಹ ಹೇಳಿಕೆ ನೀಡುವುದನ್ನು ಬಿಟ್ಟು ದೇಶದ ಪರವಾಗಿ ನಿಲ್ಲಬೇಕು ಎಂದು ಆಗ್ರಹಿಸಿದರು.

ಪಾಕಿಸ್ತಾನದ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಅಗತ್ಯ ಎಂದು ಶಶಿತರೂರು ಹೇಳಿದ್ದಾರೆ. ರಾಜ್ಯದ ಕಾಂಗ್ರೆಸ್ ನಾಯಕರು ದೇಶ ಮತ್ತು ಜನರ ಸಂವೇದನೆಯನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಆರ್.ಅಶೋಕ ಮಾತನಾಡಿ, ರಾಜ್ಯದ ಸಚಿವರು ಮತ್ತು ಶಾಸಕರು ಭಯೋತ್ಪಾದಕ ದಾಳಿಯ ಬಗ್ಗೆ ಬೇಕಾಬಿಟ್ಟಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸಚಿವ ಆರ್.ಬಿ.ತಿಮ್ಮಾಪುರ ಅವರು ಉಗ್ರಗಾಮಿಗಳು ಅವಸರದಲ್ಲಿ ಇದ್ದರು, ಧರ್ಮದ ಆಧಾರದಲ್ಲಿ ಹತ್ಯೆ ಮಾಡಿಲ್ಲ ಎಂದಿದ್ದಾರೆ. ಕಾಂಗ್ರೆಸ್ ನಾಯಕರಿಗೆ ವೋಟು ಮುಖ್ಯವೇ ಹೊರತು ರಾಷ್ಟ್ರ ಮುಖ್ಯವಾಗಿಲ್ಲ ಎಂದು ಟೀಕಿಸಿದರು.

ಸಿದ್ದರಾಮಯ್ಯ ಅವರನ್ನು ಪಾಕಿಸ್ತಾನಕ್ಕೆ ಕಳಿಸಿದರೆ ಅಲ್ಲಿನ ಜನರು ಅವರನ್ನು ರಥದಲ್ಲಿ ಮೆರವಣಿಗೆ ಮಾಡುತ್ತಾರೆ. ಉನ್ನತ ನಾಗರಿಕ ಪ್ರಶಸ್ತಿಯನ್ನೂ ಕೊಡುತ್ತಾರೆ ಎಂದು ವ್ಯಂಗ್ಯವಾಡಿದರು.

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–02/2025 ದಿನಾಂಕ: 25–04–2025

ಅಧಿಸೂಚನೆ

ಡಿಪ್ಲೊಮಾ ಅಭ್ಯರ್ಥಿಗಳಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಡಿಪ್ಲೊಮಾ ಸಾಮಾನ್ಯ ಪ್ರವೇಶ ಪರೀಕ್ಷೆ–2025
(ವೃತ್ತಿಪರ ಡಿಪ್ಲೊಮಾ ಪದವೀಧರ (Working Professionals) ಅಭ್ಯರ್ಥಿಗಳೂ ಸೇರಿದಂತೆ)

1. ಸರ್ಕಾರದ ಆದೇಶ ಸಂಖ್ಯೆ ಇಡಿ 88 ಡಿಟಿಇ 2022 ಬೆಂಗಳೂರು ದಿನಾಂಕ 14–07–2022 ಅನ್ವಯ ಮೂರು ವರ್ಷಗಳ ಡಿಪ್ಲೊಮಾ ಇಂಜಿನಿಯರಿಂಗ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿ ಅರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳು ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸುಗಳಿಗೆ ನೇರವಾಗಿ ಯಾವುದೇ ಇಂಜಿನಿಯರಿಂಗ್ ಕೋರ್ಸುಗಳನ್ನು ಆಯ್ಕೆ ಮಾಡಿಕೊಳ್ಳಲು ಆದೇಶಿಸಿದೆ.
2. ಮುಂದುವರಿದು ಸರ್ಕಾರವು ತನ್ನ ಪತ್ರ ಸಂಖ್ಯೆ ಇಡಿ 137 ಡಿಟಿಇ 2023 ಬೆಂಗಳೂರು ದಿನಾಂಕ 12–12–2023 ರಲ್ಲಿ, ವೃತ್ತಿಪರ ಡಿಪ್ಲೊಮಾ ಪದವೀಧರ (Working Professional) ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷ / 3ನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾತಿ ನೀಡಲು ಆದೇಶಿಸಿದೆ. (ನೀಡಲಾಗುವ ಸೀಟ್ ಮ್ಯಾಟ್ರಿಕ್ಸ್ ನೀಡಿಕೆಗೆ ಒಳಪಟ್ಟು)
3. ಸರ್ಕಾರದ ಆದೇಶದ ಅನ್ವಯ 2025–26ನೇ ಸಾಲಿಗೆ ಪ್ರಾಧಿಕಾರವು ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ **"ಇಂಜಿನಿಯರಿಂಗ್ ಕಾಲೇಜುಗಳ"** ಪ್ರವೇಶಾತಿಗೆ ಅರ್ಹ ಡಿಪ್ಲೊಮಾ ಅಭ್ಯರ್ಥಿಗಳಿಂದ ಹಾಗೂ ಆಸಕ್ತಿಯುಳ್ಳ ವೃತ್ತಿಪರ ಡಿಪ್ಲೊಮಾ ಪದವೀಧರ (Working Professional) ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.
4. ಅಭ್ಯರ್ಥಿಗಳು, ಲ್ಯಾಟರಲ್ ಎಂಟ್ರಿ ಮೂಲಕ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆಯಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ 2025ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು. ವೃತ್ತಿಪರ ಡಿಪ್ಲೊಮಾ ಪದವೀಧರ (Working Professional) ಅಭ್ಯರ್ಥಿಗಳೂ ಸಹ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು.
5. ಆರ್ಕಿಟೆಕ್ಚರ್ ಪ್ರವೇಶಕ್ಕೆ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ನವರು ನಡೆಸಿದ NATA-2025 ಪರೀಕ್ಷೆಗೆ ಹಾಜರಾಗಿ ಮಾನ್ಯವಾದ NATA ಅಂಕಗಳನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ಆನ್‌ಲೈನ್ ಮೂಲಕ ನೊಂದಣಿ ಮಾಡಿ ಅರ್ಜಿ ಸಲ್ಲಿಸಿ ಶುಲ್ಕವನ್ನು ಪಾವತಿಸಬೇಕು.
6. ವೃತ್ತಿಪರ ಡಿಪ್ಲೊಮಾ ಪದವೀಧರ (Working Professional) ಅಭ್ಯರ್ಥಿಗಳಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶವು ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಆಧರಿಸಿರುತ್ತದೆ.
7. **ಶೈಕ್ಷಣಿಕ ವಿದ್ಯಾರ್ಹತೆ:** ಮೇಲಿನ ಎಲ್ಲಾ ಕೋರ್ಸುಗಳ ಪ್ರವೇಶಕ್ಕೆ ವಿವರವಾದ ಅರ್ಹತೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ (http://kea.kar.nic.in) ಪ್ರಕಟಿಸಲಾಗಿದೆ. ಅಭ್ಯರ್ಥಿಗಳು, ಯಾವುದೇ ಕೋರ್ಸಿಗೆ ಅರ್ಜಿ ಸಲ್ಲಿಸುವ ಮೊದಲು ಅರ್ಹತಾ ವಿವರವನ್ನು ಪರಿಶೀಲಿಸಲು ಕೋರಲಾಗಿದೆ.
8. **ಪಠ್ಯಕ್ರಮ:** ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ನೀಡಿರುವ ಡಿಸಿಇಟಿ – 2025ರ ಪರೀಕ್ಷೆಯ ಪಠ್ಯಕ್ರಮಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ. (ಎಲ್ಲಾ ಡಿಪ್ಲೊಮಾ ವಿಭಾಗಗಳಿಗೆ ಸಾಮಾನ್ಯವಾದದು)
9. ಸರ್ಕಾರದ ಆದೇಶ ಸಂಖ್ಯೆ: ED 155 TEC 2022 dated 19.04.2025 the Karnataka selection of candidate for Admission to Government Seats in Professional Educational Institutions (Amendment) rules, 2022 ಅನ್ವಯ ಶೆಡ್ಯೂಲ್–1 ರಲ್ಲಿ **"1. Dip NTTF (Tool and Dye Making) & 2. Dip NTTF (Electronics)** ಅನ್ನು ತೆಗೆದು ಹಾಕಲಾಗಿದೆ.

i.	ನೊಂದಣಿ ಹಾಗು ಆನ್‌ಲೈನ್ ಮೂಲಕ ಅರ್ಜಿ (application-cum-verification module) ಸಲ್ಲಿಸಲು ಪ್ರಾರಂಭಿಕ ದಿನಾಂಕ	25–04–2025 ಸಂಜೆ 6.00 ರಿಂದ
ii.	ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	10–05–2025 ರಾತ್ರಿ 11.59 ರ ವರೆಗೆ
iii.	ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	12–05–2025 ಸಂಜೆ 6.00 ರವರೆಗೆ
iv.	ಡಿಸಿಇಟಿ–2025ಕ್ಕೆ ಪ್ರವೇಶ ಪತ್ರವನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡುವುದು.	20–05–2025 ರಿಂದ

ಡಿಸಿಇಟಿ 2025ರ ಪರೀಕ್ಷಾ ವೇಳಾಪಟ್ಟಿ

ದಿನಾಂಕ / ದಿನ	ಪಠ್ಯಕ್ರಮ (ಎಲ್ಲಾ ಇಂಜಿನಿಯರಿಂಗ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ)	ಸಮಯ	ಅಂಕಗಳು
31–05–2025 ಶನಿವಾರ	a. Engineering Mathematics b. Statistics & Analytics c. IT Skills d. Fundamentals of Electrical and Electronics Engineering e.Project Management Skills	ಮ.2.00 ರಿಂದ ಸಂಜೆ.5.00 (3 ಘಂಟೆಗಳು)	100
	ವಿವರಣಾತ್ಮಕ ಕನ್ನಡ ಭಾಷಾ ಪರೀಕ್ಷೆ (4ನೇ ತರಗತಿ ಮಟ್ಟ) – ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ (ಪರೀಕ್ಷಾ ಕೇಂದ್ರ ಬೆಂಗಳೂರಿನಲ್ಲಿ ಮಾತ್ರ)	ಬೆಳಿಗ್ಗೆ 10.30 ರಿಂದ 11.30 ರವರೆಗೆ	50

ಸೂಚನೆ:

- ಆನ್‌ಲೈನ್ ಅರ್ಜಿ ಸಲ್ಲಿಸುವಿಕೆಯನ್ನು application-cum-verification module ಆಗಿ ಸಿದ್ಧಪಡಿಸಲಾಗಿದೆ. ಅಭ್ಯರ್ಥಿಗಳು ದಾಖಲಿಸುವ ವಿವರಗಳನ್ನು ಅಂದರೆ, ಶಾಲಾ ವ್ಯಾಸಂಗ, ಕನ್ನಡ ಮಾಧ್ಯಮ, ಜಾತಿ/ಪ್ರವರ್ಗ, ವಾರ್ಷಿಕ ಆದಾಯ ಮುಂತಾದ ವಿವರಗಳನ್ನು SATS ಹಾಗೂ ಕಂದಾಯ ಇಲಾಖೆಯ ವೆಬ್‌ಸರ್ವೀಸ್ ಮುಖಾಂತರ ಆನ್‌ಲೈನ್ ಮೂಲಕವೇ ಪರಿಶೀಲಿಸಲಾಗುವುದು. ಭೌತಿಕವಾಗಿ ದಾಖಲೆಗಳ ಪರಿಶೀಲನೆ ಇರುವುದಿಲ್ಲ.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಡಿಪ್ಲೊಮಾ ಸಿಇಟಿ–2025ಕ್ಕೆ ದಾಖಲಿಸಿದ ಎಲ್ಲಾ ಮಾಹಿತಿಗಳನ್ನು ಅಂತಿಮ ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಮಾಹಿತಿಯೇ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ಆಧಾರವಾಗಿರುತ್ತದೆ ಹಾಗೂ ಯಾವುದೇ ಕಾರಣಕ್ಕೂ ದಾಖಲಿಸಿದ ಮಾಹಿತಿಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
- **ಡಿಪ್ಲೊಮಾ ಸಿಇಟಿ–2025 ರ ಅರ್ಜಿ ನಮೂನೆಯಲ್ಲಿ ಜಾತಿ / ಪ್ರವರ್ಗ ಮತ್ತು ವಾರ್ಷಿಕ ಆದಾಯದ ಬಗ್ಗೆ ಒದಗಿಸಿರುವ ಮಾಹಿತಿಯು ವಿದ್ಯಾರ್ಥಿಗಳಿಗೆ ರ‍್ಯಾಂಕ್ ನೀಡುವುದಕ್ಕೆ / ಸೀಟು ಆಯ್ಕೆ ಮಾಡುವುದಕ್ಕೆ ಪರಿಗಣಿಸಲಾಗುವುದು ಮತ್ತು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.**

ವಿ.ಸೂ. ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ **(http://cetonline.karnataka.gov.in/kea/)** ಗೆ ಭೇಟಿ ನೀಡಲು ಸೂಚಿಸಿದೆ.

ಸಹಿ/–
(ಹೆಚ್. ಪ್ರಸನ್ನ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾಪ್ರ/408/2025–26

ಷೇರುಪೇಟೆ ವಹಿವಾಟು 1006



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,039
ಇಂದಿನ ಅಂತ್ಯ	24,328
▲	289
ದಿನದ ಗರಿಷ್ಠ	24,355

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹455
12 ಕ್ಕೆ	₹60
ಮೈಸೂರು	
100ಕ್ಕೆ	₹465

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18000-18500
ಪುತ್ತೂರು	₹12000-17500
ತಿಪಟೂರು	₹17500-18200

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹194.50
ಆರ್‌ಎಸ್‌ಎಸ್-5	₹189.50
ಗುಡ್ ಲಾಟ್	₹180

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29400
ಎಸಿ	₹16800
ಆರ್‌ಪಿ	₹22750
ಆರ್‌ಸಿ	₹12690

ವಿನಿಮಯ ದರ

$ ಡಾಲರ್	85.23
£ ಪೌಂಡ್	113.44
€ ಯುರೊ	96.50
¥ ಯೆನ್ (100ಕ್ಕೆ)	60

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1330 (1325)
ಸೋಯಾ (ರಿಫೈನ್ಡ್)	₹1290 (1285)
ಸೂರ್ಯಕಾಂತಿ (ರಿಫೈನ್ಡ್)	₹1385 (1395)
ಪಾಮೋಲಿನ್	₹1255 (1270)

ಬ್ರೆಂಟ್ ಕಚ್ಚಾ ತೈಲ ದರ ಶೇ 0.19ರಷ್ಟು ಇಳಿಕೆ

ಸೆನ್ಸೆಕ್ಸ್ 1,006 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರು ಸೂಚ್ಯಂಕಗಳು ಸೋಮವಾರ ನಡೆದ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚು ಏರಿಕೆ ಕಂಡಿವೆ.



ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,006 ಅಂಶ (ಶೇ 1.27) ಏರಿಕೆಯಾಗಿ, 80,218 ಆಗಿದೆ. ವಹಿವಾಟಿನ ವೇಳೆ ಸೂಚ್ಯಂಕ 1,109 ಅಂಶಗಳವರೆಗೆ ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 289 ಅಂಶ (ಶೇ 1.20) ಹೆಚ್ಚಳವಾಗಿ, 24,328 ಆಗಿದೆ.

ರಿಲಯನ್ಸ್ ಇಂಡಸ್ಟ್ರೀಸ್, ಖಾಸಗಿ ಬ್ಯಾಂಕ್‌ಗಳ ಷೇರಿನ ಮೌಲ್ಯದಲ್ಲಿನ ಹೆಚ್ಚಳದಿಂದ ಸೂಚ್ಯಂಕಗಳು ಏರಿಕೆ ಕಂಡಿವೆ. ವಿದೇಶಿ ಬಂಡವಾಳದ ಒಳಹರಿವು ಸಹ ಸೂಚ್ಯಂಕಗಳ ಹೆಚ್ಚಳಕ್ಕೆ ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಸನ್‌ಫಾರ್ಮಾ, ಟಾಟಾ ಸ್ಟೀಲ್, ಎಸ್‌ಬಿಐ, ಎಕ್ಸಿಸ್ ಬ್ಯಾಂಕ್, ಟಾಟಾ ಮೋಟರ್ಸ್, ಲಾರ್ಸನ್ ಆ್ಯಂಡ್ ಟೂಬ್ರೊ ಮತ್ತು ಐಸಿಐಸಿಐ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಎಚ್‌ಸಿಎಲ್ ಟೆಕ್, ಅಲ್ಟ್ರಾಟೆಕ್ ಸಿಮೆಂಟ್, ನೆಸ್ಲೆ ಮತ್ತು ಹಿಂದೂಸ್ತಾನ್ ಯುನಿಲಿವರ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಶುಕ್ರವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ₹2,952 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

'ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಖರೀದಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮಾರ್ಚ್ ತ್ರೈಮಾಸಿಕದ ಫಲಿತಾಂಶವು ಹೂಡಿಕೆದಾರರಿಗೆ ಉತ್ತೇಜನ ನೀಡಿದೆ. ಇದರಿಂದ ಷೇರು ಸೂಚ್ಯಂಕಗಳು ಏರಿಕೆಯಾಗಿವೆ' ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಡಾಲರ್ ಮೌಲ್ಯ ಇಳಿಕೆ ಮತ್ತು ಅಮೆರಿಕದಲ್ಲಿನ ಹಣದುಬ್ಬರ ಒತ್ತಡವು ವಿದೇಶಿ ಸಾಂಸ್ಥಿಕ ಹೂಡಿಕೆದಾರರನ್ನು ದೇಶೀಯ ಮಾರುಕಟ್ಟೆಗೆ ಆಕರ್ಷಿಸಲಿದೆ ಎಂದು ಹೇಳಿದ್ದಾರೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ ಮತ್ತು ಟೋಕಿಯೊ ಮಾರುಕಟ್ಟೆಯು ಸಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ಶಾಂಘೈ ಮತ್ತು ಹಾಂಗ್ ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಕೊನೆಗೊಂಡಿವೆ.

ಜಾಗತಿಕ ಮಾರುಕಟ್ಟೆ ಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.19ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರಲ್ ದರ 66.74 ಡಾಲರ್ (₹5,675) ಆಗಿದೆ.

ರಿಲಯನ್ಸ್ ಎಂ–ಕ್ಯಾಪ್ ಹೆಚ್ಚಳ

ನವದೆಹಲಿ (ಪಿಟಿಐ): ಸೋಮವಾರದ ವಹಿವಾಟಿನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯ ಶೇ 5ಕ್ಕೂ ಹೆಚ್ಚು ಏರಿಕೆಯಾಗಿದೆ.

ಷೇರಿನ ಮೌಲ್ಯ ಹೆಚ್ಚಳದಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹92,629 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹18.51 ಲಕ್ಷ ಕೋಟಿಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಮೌಲ್ಯ ಕ್ರಮವಾಗಿ ಶೇ 5.27 ಮತ್ತು ಶೇ 5.06ರಷ್ಟು ಹೆಚ್ಚಳವಾಗಿದೆ. ಷೇರಿನ ಬೆಲೆಯು ₹1,368 ಮತ್ತು ₹1,366 ಆಗಿದೆ.

ಕಂಪನಿಯು ಮಾರ್ಚ್ ತ್ರೈಮಾಸಿಕದಲ್ಲಿ ₹19,407 ಕೋಟಿ ನಿವ್ವಳ ಲಾಭ ಗಳಿಸಿದೆ. ಇದರಿಂದ ಸೋಮವಾರದ ವಹಿವಾಟಿನಲ್ಲಿ ಸೂಚ್ಯಂಕಗಳು ಏರಿಕೆ ಕಂಡಿವೆ.

ಚಿನ್ನ ₹1 ಸಾವಿರ, ಬೆಳ್ಳಿ ₹1,400 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರ (ಶೇ 99.9 ಪರಿಶುದ್ಧತೆ) ₹1 ಸಾವಿರ ಕಡಿಮೆಯಾಗಿ, ₹98,400ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹97,900 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,400 ಕಡಿಮೆಯಾಗಿ, ₹98,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರವು ಶೇ 1ರಷ್ಟು ಇಳಿಕೆಯಾಗಿದೆ. ಇದರಿಂದ ದೇಶದ ಮಾರುಕಟ್ಟೆಯಲ್ಲೂ ಧಾರಣೆ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹322-625
ದ್ವಿತಳಿ (ಬಿ.ವಿ)	₹302-750

ಮುಗಿದ ಕೋಟಾ: ರೈತರು ಕಂಗಾಲು

ಜೋಳ ಖರೀದಿಗಾಗಿ ಸರತಿಯಲ್ಲಿ ಚಪ್ಪಲಿ, ಕಲ್ಲು ಇಟ್ಟು ಕಾದಿದ್ದ ಕೃಷಿಕರಿಗೆ ನಿರಾಶೆ

• ಹರಿಶಂಕರ್ ಆರ್.

ಬಳ್ಳಾರಿ: ಕನಿಷ್ಠ ಬೆಂಬಲ ಬೆಲೆಯಡಿ (ಎಂಎಸ್‌ಪಿ) ಹಿಂಗಾರು ಜೋಳ ನೋಂದಣಿಗೆ ರಾಜ್ಯದಲ್ಲಿ 2 ದಿನಗಳಿಂದ ಎದುರಾಗಿದ್ದ ಸರ್ವರ್ ಕಾಟ ಸೋಮವಾರ ಮಧ್ಯಾಹ್ನದ ಹೊತ್ತಿಗೆ ನಿವಾರಣೆಯಾಯಿತು. ಆದರೆ, ರಾಜ್ಯಕ್ಕೆ ನಿಗದಿಯಾಗಿದ್ದ ಕೋಟಾ ಮುಗಿದಿದ್ದರಿಂದ ನೋಂದಣಿ ಸ್ಥಗಿತಗೊಂಡಿದೆ. ರೈತರು ಕಂಗಾಲಾಗಿದ್ದಾರೆ.

ರಾಜ್ಯದಾದ್ಯಂತ 10 ಲಕ್ಷ ಕ್ವಿಂಟಲ್ ಜೋಳ ಖರೀದಿಸುವುದಾಗಿ ಸರ್ಕಾರ ಹೇಳಿತ್ತಾದರೂ, ಖರೀದಿಯಲ್ಲಿ ಜಿಲ್ಲೆಗಳಿಗೆ ಮಿತಿ ವಿಧಿಸಿತ್ತು. ಇದರ ವಿರುದ್ಧ ರೈತರು ಹೋರಾಟ ನಡೆಸಿ, ಸರ್ಕಾರದ ಹಂತದಲ್ಲಿ ಮಾತುಕತೆ ನಡೆಸಿ ಜಿಲ್ಲೆಗಳ ಮಿತಿ ತೆರವು ಮಾಡಿಸಿಕೊಂಡು ಬಂದಿದ್ದರು.

ಸರ್ಕಾರ ಏ. 22ರಂದು ಮಿತಿ ತೆರವುಗೊಳಿಸಿತ್ತು. 24ರ ಗುರುವಾರದಿಂದ ಬಳ್ಳಾರಿ, ರಾಯಚೂರು, ವಿಜಯನಗರ ಜಿಲ್ಲೆಗಳೂ ಸೇರಿ ರಾಜ್ಯದಾದ್ಯಂತ ನೋಂದಣಿ ಆರಂಭವಾಗಿತ್ತು. ಆದರೆ, 25ರ ಸಂಜೆ ಹೊತ್ತಿಗೆ ಸರ್ವರ್‌ನಲ್ಲಿ ಸಮಸ್ಯೆ ಕಾಣಿಸಿಕೊಂಡು, ನೋಂದಣಿ ಸ್ಥಗಿತಗೊಂಡಿತ್ತು. ಅಷ್ಟು ಹೊತ್ತಿಗಾಗಲೇ ರಾಜ್ಯದಾದ್ಯಂತ 9.40 ಲಕ್ಷ ಕ್ವಿಂಟಲ್‌ನಷ್ಟು ನೋಂದಣಿ ಪೂರ್ಣಗೊಂಡಿತ್ತು. 60 ಸಾವಿರ ಕ್ವಿಂಟಾಲ್ ಖರೀದಿಗೆ ಮಾತ್ರ ಅವಕಾಶವಿತ್ತು.

ಬಳ್ಳಾರಿ ನಗರದ ಎಪಿಎಂಸಿ ಪ್ರಾಂಗಣದಲ್ಲಿರುವ ಜೋಳ ಖರೀದಿ ಕೇಂದ್ರದ ಎದುರು ಚಪ್ಪಲಿ, ಕಲ್ಲು, ಗೋಣಿಚೀಲಗಳನ್ನು ಜೋಡಿಸಿರುವ ರೈತರು ತಮ್ಮ ಸರತಿಗಾಗಿ ಕಾಯುತ್ತಾ ಕುಳಿತಿದ್ದರು

ಖರೀದಿಯಲ್ಲಿ ರಾಜ್ಯಗಳಿಗೆ ಕೇಂದ್ರ ಮಿತಿ ವಿಧಿಸುತ್ತದೆ. ಮಿತಿ ತೆಗೆಯುವ ನಿರ್ಧಾರ ಕೇಂದ್ರದ್ದು. ಹಾಗೆ ಆದ ಉದಾಹರಣೆ ವಿರಳ. ಆದರೂ ರಾಜ್ಯ ಸರ್ಕಾರಕ್ಕೆ ವರದಿ ನೀಡುತ್ತೇನೆ

ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಧಿಕಾರಿ, ಬಳ್ಳಾರಿ

ಎರಡು ದಿನಗಳಿಂದ ಖರೀದಿ ಕೇಂದ್ರದ ಬಳಿ ಕಾದಿದ್ದೆವು. ನೋಂದಣಿ ಆರಂಭವಾದ ಮೂರ್ನಾಲ್ಕು ನಿಮಿಷಗಳಲ್ಲೇ ಮಿತಿ ಮುಗಿದಿದೆ. ಜೋಳ ಬೆಳೆದು ನಷ್ಟವಾಗಿದೆ

ರಾಜೇಶ್, ರೈತ, ಹಲಕುಂದಿ

ಜೋಳ ನೋಂದಣಿ ಶೀಘ್ರವೇ ಅಂತ್ಯಗೊಳ್ಳುತ್ತದೆ ಎಂಬುದನ್ನು ತಿಳಿದಿದ್ದ ರೈತರು ಶುಕ್ರವಾರ ರಾತ್ರಿಯಿಂದಲೂ ಖರೀದಿ ಕೇಂದ್ರಗಳ ಬಳಿ ಬೀಡು ಬಿಟ್ಟಿದ್ದರು. ಸೋಮವಾರ ಮಧ್ಯಾಹ್ನ 3 ಗಂಟೆ ಹೊತ್ತಿಗೆ ಸರ್ವರ್ ಸಮಸ್ಯೆ ನಿವಾರಣೆಯಾದ ಕೆಲವೇ ನಿಮಿಷಗಳಲ್ಲಿ ರಾಜ್ಯದಾದ್ಯಂತ 60 ಸಾವಿರ ಕ್ವಿಂಟಲ್ ನೋಂದಣಿಯಾಯಿತು. ಕೆಲವೇ ರೈತರಿಗಷ್ಟೇ ನೋಂದಣಿ ಅವಕಾಶ ಸಿಕ್ಕಿತು. ಇನ್ನುಳಿದ ಸಾವಿರಾರು ರೈತರು ಅವಕಾಶ ವಂಚಿತರಾಗಿದ್ದು, ತೀವ್ರ ಆಕ್ರೋಶ ಹೊರ ಹಾಕಿದ್ದಾರೆ.

ನಾವು ಬೆಳೆ ಇಟ್ಟಾಗಲೇ ಸರ್ಕಾರಕ್ಕೆ ಮಾಹಿತಿ ನೀಡಿರುತ್ತೇವೆ. ಆದರೆ, ಸರ್ಕಾರ ಹೀಗೆ ಮಿತಿ ವಿಧಿಸಿ ಖರೀದಿ ಮಾಡಿದರೆ ನಮಗೆ ಅನ್ಯಾಯವಾಗುವುದಿಲ್ಲವೇ ಎಂದು ಬಳ್ಳಾರಿ ಹೊರವಲಯದ ಹಲಕುಂದಿಯ ರೈತ ಗಾದೆಪ್ಪ ಎಂಬುವವರು ಪ್ರಶ್ನೆ ಮಾಡಿದ್ದಾರೆ.

ಹೈಬ್ರೀಡ್ ಜೋಳ ಮಾರುಕಟ್ಟೆಯಲ್ಲಿ ₹1500ರಿಂದ ₹1600 ಇದೆ. ಆದರೆ, ಎಂಎಸ್‌ಪಿ ಅಡಿ ₹3,371 ಸಿಗುತ್ತಿದೆ. ಎಂಎಸ್‌ಪಿ ಅಡಿ ನೋಂದಣಿ ಮುಗಿದು ಹೋಗಿರುವುದರಿಂದ ಭಾರಿ ನಷ್ಟವಾಗು-ತ್ತಿದೆ ಎಂಬುದು ರೈತರ ದೂರು.

ಬಳ್ಳಾರಿಯಲ್ಲಿ ಕನಿಷ್ಠ 60 ಸಾವಿರ ಕ್ವಿಂಟಲ್, ರಾಯಚೂರಿನಲ್ಲಿ 2.50 ಲಕ್ಷದಿಂದ 3 ಲಕ್ಷ ಕ್ವಿಂಟಲ್‌ನಷ್ಟು ನೋಂದಣಿ ಬಾಕಿ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಲ್ಲು, ಚಪ್ಪಲಿ ಸಾಲು: ಇತ್ತ ಖರೀದಿ ಕೇಂದ್ರಗಳಲ್ಲಿ ಬೀಡು ಬಿಟ್ಟಿದ್ದ ರೈತರು, ಅನ್ನ ನೀರಿಲ್ಲದೇ, ಎರಡು ದಿನಗಳಿಂದ ಬಿಸಿಲಿನಲ್ಲಿ ಒಣಗಿದ್ದಾರೆ. ಖರೀದಿ ಕೇಂದ್ರಗಳ ಮುಂದೆ ಕಲ್ಲು, ಚಪ್ಪಲಿ, ಗೋಣಿಚೀಲಗಳನ್ನು ಜೋಡಿಸಿಟ್ಟು ಕಾದಿದ್ದಾರೆ.

ಸಮಸ್ಯೆ ಬಗೆಹರಿದ ಕೂಡಲೇ ನೋಂದಣಿ ಮಾಡಿಸುವ ಧಾವಂತದಲ್ಲಿದ್ದ ರೈತರು ಖರೀದಿ ಕೇಂದ್ರಗಳನ್ನು ಬಿಟ್ಟು ಬೇರೆಡೆಗೆ ಕದಲಿರಲಿಲ್ಲ. 40-42 ಡಿಗ್ರಿ ಉಷ್ಣಾಂಶವಿದ್ದರೂ, ಮರಗಳಡಿ ಆಶ್ರಯಪಡೆದರೇ ಹೊರತು ಜಾಗ ಬಿಟ್ಟರಲಿಲ್ಲ. ಈಗ ನೋಂದಣಿಯೇ ಸ್ಥಗಿತಗೊಂಡಿರುವುದು ರೈತರನ್ನು ತೀವ್ರ ನಿರಾಶೆಗೆ ದೂಡಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform the general public that my client intends to purchase the immovable property mentioned and described in the schedule below from **Sri. Shivanna S. H.,** son of Sri. Haalina Honnaiah (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the agricultural land bearing Survey No. 216/4, (earlier being part of Survey No. 216/1) measuring 1 acre, situated at Kethohalli Village, Kasaba Hobli, Ramanagara Taluk and is bounded on the:

East by : Property bearing Survey No. 122;
West by : Property bearing Survey No. 216/1;
North by : Property bearing Survey No. 216/2;
South by : Property bearing survey No. 216/5;

Vinay K. S., Advocate,
Vinay Kademane & Associates
307, 3rd Floor, Prestige Centre Point,
No.7/49, Edward Road, Bengaluru-560001
Ph.: 080 22863885
email:vinay@vinaykademane.in
Place : Bengaluru
Date : 28-04-2025

PUBLIC NOTICE

This is to inform the general public that my client intends to purchase the immovable property mentioned and described in the schedule below from **Smt. Jayalakshmamma,** wife of Late Honnaiah alias Honnappa, (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and she has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the agricultural land bearing Survey No. 216/5, (earlier being part of Survey No. 216/1) measuring 1 acre *(excluding 30 guntas of karab land)*, situated at Kethohalli Village, Kasaba Hobli, Ramanagara Taluk and is bounded on the:

East by : Property bearing Survey No. 122;
West by : Property bearing Survey No. 119;
North by : Property bearing Survey No. 216/1 & 216/4;
South by : Property bearing Survey No. 119.

Vinay K. S., Advocate,
Vinay Kademane & Associates
307, 3rd Floor, Prestige Centre Point,
No.7/49, Edward Road, Bengaluru-560001
Ph.: 080 22863885
email:vinay@vinaykademane.in
Place : Bengaluru
Date : 28-04-2025

ಉದ್ಯೋಗಾವಕಾಶ

Drivers

ಸಣ್ಣ ಕುಟುಂಬಕ್ಕೆ ಚಾಲಕ ಮತ್ತು ಅಡುಗೆ ಕೆಲಸ ಮಾಡಲು ಗಂಡ ಮತ್ತು ಹೆಂಡತಿ ತಂಡ ಬೇಕಾಗಿದ್ದಾರೆ. ಉತ್ತಮ ಸಂಬಳದ ಊಟ ಮತ್ತು ವಸತಿ 9741900909 ಸಂಪರ್ಕಿಸಿ.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಶ್ರೀ ಶಕ್ತಿ ಹೆಲ್ತ್ ಕೇರ, ಶೇಷಾದ್ರಿಪುರಂ ಬೆಂಗಳೂರು, ರಾಜ್ಯದಾದ್ಯಂತ ತೆರೆಯಲಿರುವ ನಮ್ಮ ಶಾಖೆಗಳಿಗೆ ಹೆಲ್ಪರಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 25000/- ಸಂಪರ್ಕಿಸಿ: 7349494852

ವೈಯಕ್ತಿಕ

Change of Name

I HAVE Changed My Name from Suhas Sawant to Suhas Vasant Sawant as per documents.

ಪ್ರವಾಸ

Travel

15.05.2025 ರಿಂದ 13 ದಿನಗಳ ಚಾರ್‌ಧಾಮ. 22.05.2025 ರಿಂದ 8 ದಿನಗಳ ಕಾಶಿ,ಗಯಾ ಪ್ರಯಾಗ್‌ರಾಜ್ ಅಯೋಧ್ಯ ಇತ್ಯಾದಿ. ವೈಷ್ಣವಿ ಟೂರ್ಸ್ ಅಂಡ್ ಟ್ರಾವೆಲ್ಸ್ ನಂ.39. ಗಾಂಧಿಬಜಾರ್ ಬೆಂಗಳೂರು.04. 9448683374 9483537730

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ನಾಳೆಯಿಂದ ಸ್ಮಾರ್ಟ್ ಬಜಾರ್ ಪೈಸಾ ವಸೂಲ್ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಪ್ರಿಲ್ 30ರಿಂದ ಮೇ 4ರ ವರೆಗೆ 'ಸ್ಮಾರ್ಟ್ ಬಜಾರ್‌ನ ಫುಲ್ ಪೈಸಾ ವಸೂಲ್' ಮಾರಾಟ ಮೇಳ ನಡೆಯಲಿದ್ದು, ಗ್ರಾಹಕರಿಗೆ ಹಲವು ರಿಯಾಯಿತಿ ನೀಡಿದೆ.

'ಸ್ಮಾರ್ಟ್ ಬಜಾರ್‌ನ ಫುಲ್ ಪೈಸಾ ವಸೂಲ್ ಮಾರಾಟ ಮೇಳವು ಗ್ರಾಹಕರಿಗೆ ಹೆಚ್ಚು ಇಷ್ಟವಾಗಲಿದೆ. ಅಗತ್ಯ ವಸ್ತುಗಳನ್ನು ಖರೀದಿಸಲು ಮತ್ತು ಹೆಚ್ಚಿನ ಉಳಿತಾಯಕ್ಕಾಗಿ ಸ್ಮಾರ್ಟ್ ಬಜಾರ್ ಒನ್ ಸ್ಟಾಪ್ ಮಳಿಗೆಯಾಗಿದೆ. ದಿನಸಿ, ಉಡುಪುಗಳು ಸೇರಿದಂತೆ ಅನೇಕ ವಸ್ತುಗಳು ದೊರೆಯಲಿದೆ. ಗ್ರಾಹಕರು ಮಳಿಗೆಗೆ ಭೇಟಿ ನೀಡಿ ರಿಯಾಯಿತಿ ಪಡೆದುಕೊಳ್ಳಬೇಕು' ಎಂದು ರಿಲಯನ್ಸ್ ರಿಟೇಲ್‌ನ ವಾಲ್ಯು ಫಾರ್ಮ್ಯಾಟ್‌ನ ಸಿಇಒ ದಾಮೋದರ್ ಮಾಲ್ ಕೋರಿದ್ದಾರೆ.

ಕೈಗಾರಿಕಾ ಉತ್ಪಾದನೆ ಕುಂಠಿತ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆ ಯು (ಐಐಪಿ) ಮಾರ್ಚ್ ತಿಂಗಳಿನಲ್ಲಿ ಶೇ 3ರಷ್ಟು ದಾಖಲಾಗಿದೆ.

2024ರ ಮಾರ್ಚ್‌ನಲ್ಲಿ ಶೇ 5.5ರಷ್ಟು ದಾಖಲಾಗಿತ್ತು. ತಯಾರಿಕಾ, ಗಣಿಗಾರಿಕೆ ಮತ್ತು ವಿದ್ಯುತ್ ವಲಯದಲ್ಲಿ ಉತ್ಪಾದನೆ ಇಳಿಕೆಯಾಗಿದೆ. ಇದರಿಂದ ಸೂಚ್ಯಂಕ ಇಳಿದಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಸೋಮವಾರ ತಿಳಿಸಿದೆ.

ಕಳೆದ ವರ್ಷದ ಮಾರ್ಚ್ ತಿಂಗಳಿನಲ್ಲಿ ಗಣಿಗಾರಿಕೆ ಮತ್ತು ವಿದ್ಯುತ್ ವಲಯದ ಉತ್ಪಾದನೆಯು ಕ್ರಮವಾಗಿ ಶೇ 1.3 ಮತ್ತು ಶೇ 8.6ರಷ್ಟಿತ್ತು. ಅದು ಪ್ರಸಕ್ತ ಮಾರ್ಚ್‌ನಲ್ಲಿ ಶೇ 0.4 ಮತ್ತು ಶೇ 6.3ಕ್ಕೆ ಇಳಿದಿದೆ ಎಂದು ತಿಳಿಸಿದೆ.

2021–22ರ ಆರ್ಥಿಕ ವರ್ಷದಲ್ಲಿ ಶೇ 11.4ರಷ್ಟು ಬೆಳವಣಿಗೆ ದಾಖಲಾಗಿತ್ತು. 2022–23ರಲ್ಲಿ ಶೇ 5.2, 2023–24ರಲ್ಲಿ ಶೇ 5.9 ಮತ್ತು 2024–25ರಲ್ಲಿ ಶೇ 4ರಷ್ಟು ದಾಖಲಾಗಿದೆ. ಇದು ನಾಲ್ಕು ವರ್ಷದ ಕನಿಷ್ಠ ಮಟ್ಟವಾಗಿದೆ.

ಕತ್ತಲಲ್ಲಿ ಸ್ಪೇನ್, ಪೋರ್ಚುಗಲ್

ಎರಡನೇ ಮುಖಪುಟದಿಂದ...

'ಕೆಲವು ಗಂಟೆಗಳ ನಂತರ ಸ್ಪೇನ್‌ನ ಉತ್ತರ ಹಾಗೂ ದಕ್ಷಿಣ ದ್ವೀಪಗಳಲ್ಲಿ ಮತ್ತೆ ವಿದ್ಯುತ್ ಪೂರೈಕೆ ಆರಂಭಗೊಂಡಿದೆ. ಇಡೀ ದೇಶದಲ್ಲಿ ನಿಧಾನವಾಗಿ ಮತ್ತೆ ವಿದ್ಯುತ್ ಪೂರೈಕೆಯನ್ನು ಪುನರ್ ಸ್ಥಾಪಿಸಲಾಗುವುದು' ಎಂದು ಜಾಲತಾಣ ತಿಳಿಸಿದೆ.

1.6 ಕೋಟಿ ಜನಸಂಖ್ಯೆ ಹೊಂದಿರುವ ಪೋರ್ಚುಗಲ್‌ನ ರಾಜಧಾನಿ ಲಿಸ್ಬನ್ ಸೇರಿದಂತೆ ಸುತ್ತಲಿನ ಪ್ರದೇಶ, ಉತ್ತರ, ದಕ್ಷಿಣ ಪ್ರದೇಶಗಳಲ್ಲಿ ಸೋಮವಾರ ವಿದ್ಯುತ್ ವ್ಯತ್ಯಯ ಉಂಟಾಯಿತು.

'ಸ್ಪೇನ್‌ನಿಂದ ಪೂರೈಕೆಯಾಗುವ ವಿತರಣಾ ಜಾಲದಲ್ಲಿ ಉಂಟಾದ ಸಮಸ್ಯೆಯಿಂದ ಎಲ್ಲೆಡೆ ವಿದ್ಯುತ್ ವ್ಯತ್ಯಯ ಉಂಟಾಗಿದೆ' ಎಂದು ಸಂಪುಟ ಸಚಿವ ಲಿಟೊ ಅಮರೊ ತಿಳಿಸಿದರು.

ಫ್ರಾನ್ಸ್‌ನ ಕೆಲವು ಭಾಗಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿತ್ತು.

ಕೇದಾರನಾಥನ ದರ್ಶನ ಮೇ 2ರಿಂದ

ಡೆಹ್ರಾಡೂನ್ (ಪಿಟಿಐ): ಚಳಿಗಾಲದಲ್ಲಿ ಮುಚ್ಚಿದ್ದ ಕೇದಾರನಾಥ ದೇಗುಲದ ಬಾಗಿಲು ತೆರೆಯಲಿದ್ದು, ಮೇ 2ರಿಂದ ಭಕ್ತರಿಗೆ ದರ್ಶನ ಸಿಗಲಿದೆ.

ದೇಗುಲದ ಬಾಗಿಲು ತೆಗೆಯುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ಒಂದೆಡೆ ಬಿರುಸಿನಿಂದ ನಡೆದಿದ್ದರೆ, ಮತ್ತೊಂದೆಡೆ ಉಖಿ ಮಠದಲ್ಲಿದ್ದ ಶಿವನ ಮೂರ್ತಿಗೆ ಸೋಮವಾರ ವಿಶೇಷ ಪೂಜೆ ಸಲ್ಲಿಸಿ, ಹೂವಿನ ಪಲ್ಲಕ್ಕಿಯಲ್ಲಿ ಬೀಳ್ಕೊಡಲಾಯಿತು.

ಚಳಿಗಾಲದಲ್ಲಿ ಉಖಿಮಠದ ಓಂಕಾರೇಶ್ವರ ದೇಗುಲದಲ್ಲಿ ಬಾಬಾ ಕೇದಾರನಾಥನನ್ನು (ಶಿವ) ಪೂಜಿಸಲಾಗುತ್ತದೆ. ಬಾಗಿಲನ್ನು ವಿಧ್ಯುಕ್ತವಾಗಿ ತೆರೆಯುವ ಮುನ್ನ ಕೇದಾರನಾಥ ದೇಗುಲಕ್ಕೆ ಮೂರ್ತಿಯನ್ನು ವಾಪಸ್ ಕೊಂಡೊಯ್ಯಲಾಗುತ್ತದೆ.

ಸೇನೆಯ ವಾದ್ಯ ತಂಡದ ಭಕ್ತಿ ಗೀತೆಗಳ ಮೊಳಗಿಸುವಿಕೆಯೊಂದಿಗೆ, ಬದರಿನಾಥ–ಕೇದಾರನಾಥ ದೇವಾಲಯ ಸಮಿತಿಯ (ಬಿಕೆಟಿಸಿ) ಅರ್ಚಕರು, ವೇದಪತಿಗಳು ಹಾಗೂ ಅಪಾರ ಸಂಖ್ಯೆಯ ಭಕ್ತರು ತಮ್ಮ ಹೆಗಲ ಮೇಲೆ ಪಂಚಮುಖಿ ಡೋಲಿಯಲ್ಲಿ (ಹೂವಿನಿಂದ ಅಲಂಕೃತವಾಗಿದ್ದ ಪಲ್ಲಕ್ಕಿ) ಶಿವನ ಮೂರ್ತಿಯನ್ನು ಹೊತ್ತು ಮೆರವಣಿಗೆಯಲ್ಲಿ ಸಾಗಿದರು.

ರಾತ್ರಿ ವೇಳೆ ಗುಪ್ತಕಾಶಿ, ಫಾಟಾ ಹಾಗೂ ಗೌರಿಕುಂಡ್‌ನಲ್ಲಿ ವಾಸ್ತವ್ಯ ಹೂಡಲಿರುವ ಮೆರವಣಿಗೆಯು ಮೇ 1ರ ತಡರಾತ್ರಿ ಕೇದಾರನಾಥವನ್ನು ತಲುಪಲಿದೆ. ಮೇ 2ರ ಬೆಳಿಗ್ಗೆ 7 ಗಂಟೆಗೆ ದೇಗುಲದ ದ್ವಾರಗಳನ್ನು ತೆರೆಯಲಾಗುವುದು ಎಂದು ಬಿಕೆಟಿಸಿ ಮಾಧ್ಯಮ ಉಸ್ತುವಾರಿ ಹರೀಶ್ ಗೌರ್ ತಿಳಿಸಿದ್ದಾರೆ.

ಕಳೆದ ವರ್ಷ 48 ಲಕ್ಷ ಯಾತ್ರಿಕರು ಚಾರ್ ಧಾಮ್ ಯಾತ್ರೆಯಲ್ಲಿ ಭಾಗಿಯಾಗಿದ್ದರೆ, ಪ್ರಸ್ತುತ ವರ್ಷ ಈ ಸಂಖ್ಯೆ 60 ಲಕ್ಷ ತಲುಪುವ ನಿರೀಕ್ಷೆಯಿದೆ ಎಂದಿದ್ದಾರೆ.

ಬೆಳೆಗಾರರಿಗೆ ಪೂರ್ಣಪ್ರಮಾಣದಲ್ಲಿ ದಕ್ಕದ ಬೆಲೆ ಏರಿಕೆಯ ಲಾಭ

ಸರಕು ಅಡಿಕೆ ಕ್ವಿಂಟಲ್‌ಗೆ ₹92,740

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಅಡಿಕೆ ಬೆಲೆ ಗಗನಮುಖಿ ಆಗಿದೆ. ಶಿವಮೊಗ್ಗ ಎಪಿಎಂಸಿಯಲ್ಲಿ ಸೋಮವಾರ ಸರಕು (ಹಸ) ಅಡಿಕೆ ಕ್ವಿಂಟಲ್‌ಗೆ ಗರಿಷ್ಠ ₹92,740, ಬೆಟ್ಟೆ ಕ್ವಿಂಟಲ್‌ಗೆ ₹59,299 ಹಾಗೂ ರಾಶಿ ಅಡಿಕೆ ₹59,199ಕ್ಕೆ ಮಾರಾಟವಾಗಿದೆ. ಆದರೆ ಮಲೆನಾಡಿನಲ್ಲಿ ಜನವರಿ ಅಂತ್ಯಕ್ಕೆ ಅಡಿಕೆ ಕೊಯ್ಲು ಮುಗಿದಿದೆ. ಹೀಗಾಗಿ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯ ಲಾಭ ಪೂರ್ಣ ಪ್ರಮಾಣದಲ್ಲಿ ಬೆಳೆಗಾರರಿಗೆ ಸಿಗುವುದಿಲ್ಲ.

ಸಣ್ಣ ಹಾಗೂ ಮಧ್ಯಮ ರೈತರಲ್ಲಿ ಬಹಳಷ್ಟು ಮಂದಿ ಈಗಾಗಲೇ ಅಡಿಕೆ ಮಾರಾಟ ಮಾಡಿದ್ದಾರೆ. ಕೆಲವರು ಮಾತ್ರ ಸಂಗ್ರಹಿಸಿಟ್ಟಿದ್ದಾರೆ. ಕಳೆದ ಹಂಗಾಮಿನಲ್ಲಿ ಅಡಿಕೆ ಖರೀದಿಸಿ ಸಂಗ್ರಹಿಸಿ ಇಟ್ಟುಕೊಂಡಿರುವ ವ್ಯಾಪಾರಸ್ಥರು ಬೆಲೆ ಏರಿಕೆಯ ಲಾಭ ಪಡೆಯುತ್ತಿದ್ದಾರೆ.

ಸೋಮವಾರದಂದು ಶಿವಮೊಗ್ಗ ಎಪಿಎಂಸಿಗೆ 50 ಕ್ವಿಂಟಲ್ ಸರಕು ಅಡಿಕೆ, 2,722 ಕ್ವಿಂಟಲ್ ರಾಶಿ ಅಡಿಕೆ, 687 ಕ್ವಿಂಟಲ್ ಗೊರಬಲು ಹಾಗೂ 151 ಕ್ವಿಂಟಲ್ ಬೆಟ್ಟೆ ಅಡಿಕೆ ಆವಕವಾಗಿದೆ.

ಬರ್ಮಾ, ಭೂತಾನ್ ದೇಶಗಳಿಂದ ಭಾರತಕ್ಕೆ ಅಡಿಕೆ ಕಳ್ಳಸಾಗಣೆ ಆಗುತ್ತಿದೆ. ಅದಕ್ಕೆ ಸಂಪೂರ್ಣ ಕಡಿವಾಣ ಹಾಕಿದರೆ ಬೆಲೆ ಇನ್ನೂ ಏರಿಕೆಯಾಗಲಿದೆ

ರಮೇಶ್ ಹೆಗ್ಡೆ, ಶಿವಮೊಗ್ಗ ಜಿಲ್ಲಾ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ

ಬೇಡಿಕೆಯಷ್ಟು ಪೂರೈಕೆ ಇಲ್ಲ: 'ಮಲೆನಾಡು ಭಾಗದಲ್ಲಿ ಸರಕು, ಬೆಟ್ಟೆ ಅಡಿಕೆ ಜಾಸ್ತಿ. ಈ ಬಾರಿ ಎಲೆಚುಕ್ಕಿ ರೋಗ ಹಾಗೂ ಕೊಳೆ ರೋಗದಿಂದ ಅಡಿಕೆ ಬೆಳೆಯ ಇಳುವರಿ ಕಡಿಮೆ ಆಗಿದೆ. ಕಳೆದ ವರ್ಷ ಮ್ಯಾಮ್ಕೋಸ್‌ನಿಂದ 3.03 ಲಕ್ಷ ಕ್ವಿಂಟಲ್ ಅಡಿಕೆ ಖರೀದಿಸಿದ್ದೆವು. ಈ ಬಾರಿ ಅಡಿಕೆ ಆವಕದ ಪ್ರಮಾಣ ಹಿಂದಿನ ವರ್ಷಕ್ಕೆ ಹೋಲಿಸಿದರೆ 45,000 ಕ್ವಿಂಟಲ್‌ನಷ್ಟು ಕಡಿಮೆ ಆಗಿದೆ. ಮಾರುಕಟ್ಟೆಯಲ್ಲಿ ಬೇಡಿಕೆಯಷ್ಟು ಆವಕ ಆಗದಿರುವುದೇ ಬೆಲೆ ಏರಿಕೆಗೆ ಕಾರಣ' ಎಂದು ಶಿವಮೊಗ್ಗದ ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘದ (ಮ್ಯಾಮ್ಕೋಸ್) ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ ಬರುವೆ ಹೇಳುತ್ತಾರೆ.

ಮ್ಯಾಮ್ಕೋಸ್ ಸಂಸ್ಥೆ ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ದಾವಣಗೆರೆ ಜಿಲ್ಲೆಯ ನ್ಯಾಮತಿ, ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳ ವ್ಯಾಪ್ತಿಯ ಬೆಳೆಗಾರರನ್ನು ಒಳಗೊಂಡಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	53409-53819
ಬೆಟ್ಟೆ	28629-29069
ಕೆಂಪುಗೋಟು	20610-21049
ರಾಶಿ	52939-53399
ಕುಮಟ	
ಚಾಲಿ	38899-44096
ಚಿಪ್ಪು	27569-32099
ಕೋಕ	8889-20129
ಫ್ಯಾಕ್ಟರಿ	6089-25600
ಹೊಸಚಾಲಿ	37299-42599
ಪುತ್ತೂರು	
ಕೋಕ	22000-30000
ಹೊಸತು	26000-45000
ಹಳತು	35500-51000
ಸಾಗರ	
ಬಿಳಿಗೋಟು	10199-27199
ಚಾಲಿ	26099-39209
ಕೋಕ	10199-21899
ಕೆಂಪುಗೋಟು	15399-30899
ರಾಶಿ	31009-59099
ಸಿಪ್ಪೆಗೋಟು	8099-19632
ಶಿವಮೊಗ್ಗ	
ಬೆಟ್ಟೆ	50009-59299
ಗೊರಬಲು	18800-32162
ರಾಶಿ	48036-59199
ಸರಕು	52210-92740
ಸಿದ್ದಾಪುರ	
ಬಿಳಿಗೋಟು	23089-31099
ಚಾಲಿ	34679-41299
ಕೋಕ	10019-23089
ಕೆಂಪುಗೋಟು	16012-22012
ರಾಶಿ	42389-50769
ತಟ್ಟಿಬೆಟ್ಟೆ	29669-35099
ಶಿರಸಿ	
ಬೆಟ್ಟೆ	29699-43989
ಬಿಳಿಗೋಟು	21799-33218
ಚಾಲಿ	35119-43900
ಕೆಂಪುಗೋಟು	10199-26169
ರಾಶಿ	41199-49899
ಯಲ್ಲಾಪುರ	
ಅಪಿ	60109-60109
ಬಿಳಿಗೋಟು	15899-34400
ಚಾಲಿ	35009-42599
ಕೋಕ	7011-17349
ಕೆಂಪುಗೋಟು	16899-26899
ರಾಶಿ	40119-58299
ತಟ್ಟಿಬೆಟ್ಟೆ	28295-38399

ಸಚಿವ ಪೀಯೂಷ್ ಬ್ರಿಟನ್‌ಗೆ ಭೇಟಿ

ಲಂಡನ್ (ಪಿಟಿಐ): ಭಾರತ ಮತ್ತು ಬ್ರಿಟನ್ ನಡುವೆ ಮುಕ್ತ ವ್ಯಾಪಾರ ಒಪ್ಪಂದದ ವಿಚಾರವಾಗಿ ಬ್ರಿಟನ್ನಿನ ವಾಣಿಜ್ಯ ಮತ್ತು ವ್ಯಾಪಾರ ಸಚಿವ ಜೊನಾಥನ್ ರೆನಾಲ್ಡ್ಸ್ ಜೊತೆ ಉತ್ತಮ ಮಾತುಕತೆ ನಡೆಯಿತು ಎಂದು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಗೋಯಲ್ ಅವರು ಸೋಮವಾರ ಬೆಳಿಗ್ಗೆ ಲಂಡನ್‌ಗೆ ಬಂದಿದ್ದಾರೆ. ಗೋಯಲ್ ಅವರ ಜೊತೆ ಭಾರತದ ಕೆಲವು ಪ್ರಮುಖ ಕಂಪನಿಗಳ ಪ್ರತಿನಿಧಿಗಳೂ ಇದ್ದಾರೆ. ಬ್ರಿಟನ್ ಜೊತೆಗಿನ ವ್ಯಾಪಾರ ಹಾಗೂ ಹೂಡಿಕೆ ಸಂಬಂಧವನ್ನು ಉತ್ತಮಪಡಿಸುವ ಉದ್ದೇಶವನ್ನು ಅವರ ಭೇಟಿಯು ಹೊಂದಿದೆ.

'ಬ್ರಿಟನ್ನಿನ ಉದ್ದಿಮೆಗಳಿಗೆ ಭಾರತದ ಮಾರುಕಟ್ಟೆಯ ಲಭ್ಯತೆಯನ್ನು ಸುಧಾರಿಸುವ, ತೆರಿಗೆ ಪ್ರಮಾಣ ಕಡಿಮೆ ಮಾಡುವ ಮತ್ತು ವ್ಯಾಪಾರ ವಹಿವಾಟು ನಡೆಸುವ ಪ್ರಕ್ರಿಯೆಯನ್ನು ಸುಲಭವೂ ಕಡಿಮೆ ವೆಚ್ಚದ್ದೂ ಆಗಿಸಲು ಅಗತ್ಯವಿರುವ ಒಪ್ಪಂದ ಮಾಡಿಕೊಳ್ಳಲು ಸರ್ಕಾರ ಬದ್ಧವಾಗಿದೆ' ಎಂದು ಬ್ರಿಟನ್ನಿನ ವಾಣಿಜ್ಯ ಮತ್ತು ವ್ಯಾಪಾರ ಇಲಾಖೆಯ ವಕ್ತಾರರು ಹೇಳಿದ್ದಾರೆ. ಎರಡೂ ದೇಶಗಳಲ್ಲಿ ಸಾರ್ವತ್ರಿಕ ಚುನಾವಣೆ ಎದುರಾಗಿದ್ದ ಕಾರಣಕ್ಕೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಗಳಿಗೆ ವಿರಾಮ ನೀಡಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಉಕ್ರೇನ್ ಜೊತೆಗೆ ಮೇ 8ರಿಂದ 10ವರೆಗೆ ಕದನ ವಿರಾಮ

ಕೀವ್ (ಎಪಿ): 'ಎರಡನೇ ಮಹಾಯುದ್ಧದ ಗೆಲುವಿನ ದಿನದ ಅಂಗವಾಗಿ ಮೇ 8ರಿಂದ 10ರವರೆಗೆ ಉಕ್ರೇನ್‌ನಲ್ಲಿ ಪೂರ್ಣ ಕದನ ವಿರಾಮ ಇರಲಿದೆ' ಎಂದು ರಷ್ಯಾ ಸೋಮವಾರ ತಿಳಿಸಿದೆ.

ವ್ಲಾದಿಮಿರ್ ಪುಟಿನ್

'ಮೇ 7ರ ಮಧ್ಯರಾತ್ರಿಯಿಂದ ಮೇ 10ರವರೆಗೆ ಕದನ ವಿರಾಮ ಇರಲಿದೆ. ಮೇ 9ರ ವಿಜಯ ದಿನದ ಅಂಗವಾಗಿ 'ಮಾನವೀಯ ಆಧಾರ'ದ ಮೇಲೆ ರಷ್ಯಾ ಅಧ್ಯಕ್ಷ ವ್ಲಾದಿಮರ್ ಪುಟಿನ್ ಅವರು ಸಂಪೂರ್ಣ ಕದನ ವಿರಾಮ ಘೋಷಿಸಿದ್ದಾರೆ' ಎಂದು ಕ್ರೆಮ್ಲಿನ್ ತಿಳಿಸಿದೆ.

ಉಕ್ರೇನ್ ಜೊತೆಗಿನ ಯುದ್ಧ ಕೊನೆಗೊಳಿಸಿ, ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಧ್ಯಸ್ಥಿಕೆ ವಹಿಸುವ ಪ್ರಯತ್ನ ನಡೆಸುತ್ತಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಕೆ ನಿಲ್ಲಿಸುವ ತನಕ, ಬೇಷರತ್ತಾಗಿ ಕದನ ವಿರಾಮ ಒಪ್ಪಂದಕ್ಕೆ ಮುಂದಾಗಲು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಿರಾಕರಿಸಿದ್ದಾರೆ.

ನೂತನ ಪೋಪ್ ಆಯ್ಕೆಗಾಗಿ ಮೇ 7ರಿಂದ ರಹಸ್ಯ ಸಭೆ

ವ್ಯಾಟಿಕನ್ ಸಿಟಿ (ಎಪಿ): ಪೋಪ್ ಫ್ರಾನ್ಸಿಸ್ ಅವರ ಉತ್ತರಾಧಿಕಾರಿಯನ್ನು ಚುನಾಯಿಸಲು ಮೇ 7ರಿಂದ ರಹಸ್ಯ ಸಭೆ ಆರಂಭಿಸಲು ಕ್ಯಾಥೋಲಿಕ್ ಕಾರ್ಡಿನಲ್‌ಗಳು ಸೋಮವಾರ ನಿರ್ಧರಿಸಿದ್ದಾರೆ.

ರಹಸ್ಯ ಮತದಾನ ಪ್ರಕ್ರಿಯೆ ಎರಡು ದಿನ ವಿಳಂಬವಾಗಿದೆ. ಇದರಿಂದಾಗಿ, ಸಿಸ್ಟೀನ್ ಛಾಪೆಲ್‌ನಲ್ಲಿ ಮತದಾನ ಪ್ರಕ್ರಿಯೆ ನಡೆಯುವ ಮುನ್ನ ಒಬ್ಬರ ಬಗ್ಗೆ ಒಬ್ಬರು ತಿಳಿದುಕೊಳ್ಳಲು ಮತ್ತು ಒಬ್ಬ ಅಭ್ಯರ್ಥಿಯ ಬಗ್ಗೆ ಒಮ್ಮತಾಭಿಪ್ರಾಯಕ್ಕೆ ಬರುವುದಕ್ಕೆ ಅನುಕೂಲವಾಗಲಿದೆ.

ಸಭೆ ಆರಂಭವಾದ ನಂತರ ಕಾರ್ಡಿನಲ್‌ಗಳು ಹೊರ ಜಗತ್ತಿನ ಸಂಪರ್ಕ ಕಡಿದುಕೊಳ್ಳುತ್ತಾರೆ. ಸಭೆಯಲ್ಲಿ ಪೋಪ್ ಮತ್ತು ಚರ್ಚ್‌ಗೆ ಸಂಬಂಧಿಸಿದ ಹಲವು ವಿಚಾರಗಳ ಬಗ್ಗೆ ಚರ್ಚೆಗಳು ನಡೆಯುತ್ತವೆ. ಇಲ್ಲಿ ಅಭಿಪ್ರಾಯ ವ್ಯಕ್ತಪಡಿಸುವ ಕಾರ್ಡಿನಲ್‌ಗಳ ಜ್ಞಾನ, ಪಾಂಡಿತ್ಯದ ಆಧಾರದಲ್ಲಿ ಅವರಲ್ಲೇ ಒಬ್ಬರನ್ನು ಪೋಪ್ ಆಗಿ ಆಯ್ಕೆ ಮಾಡಲಾಗುತ್ತದೆ.

ಚೀನಾ ವಿದೇಶಾಂಗ ಇಲಾಖೆ ವಕ್ತಾರ ಗೋ ಜೈಕುನ್ ಹೇಳಿಕೆ

ಮಾನಸ ಸರೋವರ ಯಾತ್ರೆಗೆ ತಯಾರಿ

ಬೀಜಿಂಗ್ (ಪಿಟಿಐ): ಐದು ವರ್ಷಗಳ ನಂತರ ಈ ಬೇಸಿಗೆಯಲ್ಲಿ (ಜೂನ್‌ನಿಂದ) ಕೈಲಾಸ ಮಾನಸ ಸರೋವರ ಯಾತ್ರೆ ಆರಂಭಗೊಳ್ಳಲಿದೆ. ಭಾರತೀಯ ಯಾತ್ರಾರ್ಥಿಗಳು ಕೈಗೊಳ್ಳುವ ಮಾನಸ ಸರೋವರ ಯಾತ್ರೆಗೆ ಚೀನಾ ಮತ್ತು ಭಾರತ ಪೂರ್ವ ತಯಾರಿ ಆರಂಭಿಸಿವೆ ಎಂದು ಚೀನಾದ ವಿದೇಶಾಂಗ ಸಚಿವಾಲಯವು ಸೋಮವಾರ ತಿಳಿಸಿದೆ.

2020ರಲ್ಲಿ ಮಾನಸ ಸರೋವರ ಯಾತ್ರೆಯನ್ನು ಕೋವಿಡ್ ಮತ್ತು ಉಭಯ ದೇಶಗಳ ಗಡಿಯಲ್ಲಿ ಸೇನಾ ಸಂಘರ್ಷದ ಕಾರಣಕ್ಕೆ ಸ್ಥಗಿತಗೊಳಿಸಲಾಗಿತ್ತು.

ಚೀನಾದ ಸ್ವಾಯತ್ತ ಪ್ರದೇಶವಾದ ಟಿಬೆಟ್‌ನಲ್ಲಿರುವ ಕೈಲಾಸ ಪರ್ವತ ಮತ್ತು ಮಾನಸ ಸರೋವರಕ್ಕೆ ಭಾರತದ ಯಾತ್ರಾರ್ಥಿಗಳು ಭೇಟಿ ನೀಡುತ್ತಾರೆ. ಇದು ಎರಡೂ ದೇಶಗಳ ಜನರ ಸಾಂಸ್ಕೃತಿಕ ವಿನಿಮಯದ ಪ್ರಮುಖ ಭಾಗವಾಗಿದೆ ಎಂದು ಚೀನಾ ವಿದೇಶಾಂಗ ಇಲಾಖೆ ವಕ್ತಾರ ಗೋ ಜೈಕುನ್ ತಿಳಿಸಿದ್ದಾರೆ.

ಕೈಲಾಸ ಪರ್ವತ — ಸಂಗ್ರಹ ಚಿತ್ರ

ಟಿಬೆಟ್ಟಿನ ಬೌದ್ಧರು ಮತ್ತು ಭಾರತದ ಹಿಂದೂಗಳು ಸೇರಿ ಹಲವು ಧರ್ಮದವರಿಗೆ ಈ ಪರ್ವತ ಮತ್ತು ಸರೋವರ ಶ್ರದ್ಧಾ ಕೇಂದ್ರವಾಗಿದೆ.

ಈ ವರ್ಷ ಭಾರತ ಮತ್ತು ಚೀನಾದ ರಾಜತಾಂತ್ರಿಕ ಒಪ್ಪಂದಕ್ಕೆ 75 ವರ್ಷ ತುಂಬಲಿದೆ. ಹಾಗಾಗಿ ಬೀಜಿಂಗ್ ಮತ್ತು ನವದೆಹಲಿ ಸಮಾನ ತಿಳಿವಳಿಕೆಯೊಂದಿಗೆ ಹೆಜ್ಜೆ ಇಡಲು ಬಯಸುತ್ತವೆ. ಉಭಯ ದೇಶಗಳ ಸಂಬಂಧ ಸುಧಾರಣೆಯಲ್ಲಿ ಪ್ರಬಲ ಮತ್ತು ಸುಸ್ಥಿರ ಬೆಳವಣಿಗೆಗೆ ನಾಯಕರು ಕಟಿಬದ್ಧರಾಗಿದ್ದಾರೆ ಎಂದು ಗೋ ಜೈಕುನ್ ಹೇಳಿದ್ದಾರೆ.

ಜೂನ್‌ನಿಂದ ಆಗಸ್ಟ್‌ವರೆಗೆ ಮಾನಸ ಸರೋವರ ಯಾತ್ರೆಯು ಉತ್ತರಾಖಂಡದ ಲಿಪುಲೇಕ್ ಪಾಸ್ ಮತ್ತು ಸಿಕ್ಕಿಂನ ನಾಥು ಲಾ ಮಾರ್ಗಗಳಿಂದ ಶುರುವಾಗಲಿದೆ. ಹಿಂದೂ, ಜೈನ ಮತ್ತು ಬೌದ್ಧ ಧರ್ಮೀಯರು ಯಾತ್ರೆ ಕೈಗೊಳ್ಳಲಿದ್ದಾರೆ. ತಲಾ 50 ಸದಸ್ಯರ 15 ತಂಡಗಳು ಎರಡೂ ಮಾರ್ಗಗಳಿಂದ ಯಾತ್ರೆ ತೆರಳಲಿವೆ ಎಂದು ಏಪ್ರಿಲ್ 26ರಂದು ಭಾರತದ ವಿದೇಶಾಂಗ ಇಲಾಖೆ ಹೇಳಿಕೆ ನೀಡಿತ್ತು.

ರಷ್ಯಾದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಮಾತುಕತೆ ನಡೆಸಿದ ನಂತರ ಎರಡೂ ದೇಶಗಳ ಸಂಬಂಧ ಸುಧಾರಿಸುವ ನಿರ್ಧಾರ ಆಗಿತ್ತು. ಮಾನಸ ಸರೋವರ ಯಾತ್ರೆಯು ಭಾರತ–ಚೀನಾ ಸಂಬಂಧ ಸುಧಾರಣೆಯ ಹೆಜ್ಜೆಗಳಲ್ಲಿ ಒಂದಾಗಿದೆ.



'ಗುರು ನಾನಕ್' ಪೋಸ್ಟರ್ ನಕಲಿ

ನಟ ಅಮೀರ್ ಖಾನ್ 'ಗುರು ನಾನಕ್' ಪಾತ್ರದಲ್ಲಿ ಇರುವಂತೆ ಸಿನಿಮಾ ಪೋಸ್ಟರ್ ಒಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಇದರ ಬೆನ್ನಲ್ಲೇ ಅಮಿರ್ ಅವರ ವಕ್ತಾರ ಸ್ಪಷ್ಟನೆ ನೀಡಿದ್ದು, 'ಇದು ಸುಳ್ಳು ಹಾಗೂ ಎಐ ಬಳಸಿಕೊಂಡು ಸೃಷ್ಟಿಸಿದ ಪೋಸ್ಟರ್' ಎಂದಿದ್ದಾರೆ.

ರುಚಿ ಹತ್ತಿಸುವ ಸಸ್ಪೆನ್ಸ್ ಥ್ರಿಲ್ಲರ್

ಕನ್ನಡದಲ್ಲಿ ಇಲ್ಲಿಯವರೆಗೆ ಬೆರಳೆಣಿಕೆಯಷ್ಟು ವೆಬ್ ಸರಣಿಗಳು ಬಂದಿವೆ. ಆದರೆ ಒಟಿಟಿ ವೇದಿಕೆಗಳು ನೇರವಾಗಿ ಭಾಗವಹಿಸಿ ಕನ್ನಡ ವೆಬ್ ಸರಣಿಯೊಂದನ್ನು ನಿರ್ಮಾಣ ಮಾಡಿರಲಿಲ್ಲ. ಜೀ5 ಈ ನಿಟ್ಟನಲ್ಲಿ ಮೊದಲ ಹೆಜ್ಜೆ ಇಟ್ಟು 'ಅಯ್ಯನ ಮನೆ'ಯನ್ನು ಪ್ರೇಕ್ಷಕರ ಎದುರಿಗೆ ಇರಿಸಿದೆ. ವೀಕ್ಷಕರು ಹೆಚ್ಚಾಗಿ ನೋಡಬಯಸುವ ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ಇಟ್ಟುಕೊಂಡೇ ಈ ಸರಣಿ ನಿರ್ಮಾಣವಾಗಿದೆ. ಈ ಮೂಲಕ ಕನ್ನಡಿಗರಿಗೆ ಕನ್ನಡ ವೆಬ್ ಸರಣಿಯ ರುಚಿ ಹತ್ತಿಸುವ ಕೆಲಸವಾಗಿದೆ.

'ಕಾಂತಾರ'ದ ಬಳಿಕ ದೈವ ಹಾಗೂ ಅದರ ನಂಬಿಕೆ, ಸ್ಥಳೀಯ ಸಂಸ್ಕೃತಿಗಳನ್ನಿಟ್ಟುಕೊಂಡು ಕಥೆ ಹೆಣೆಯಲಾಗುತ್ತಿದೆ. ಈ ಸರಣಿಯೂ ಇವೇ ಅಂಶಗಳನ್ನು ಹೊಂದಿದೆ.

ಎರೆ ಮಲ್ಲಿಕಾರ್ಜುನ ಸ್ವಾಮಿ ಮತ್ತು ನಾಗಮ್ಮ (ಮಾನಸಿ ಸುಧೀರ್) ದಂಪತಿ ಉಳುಮೆ ಮಾಡುವಾಗ ಕೊಂಡಯ್ಯನ ವಿಗ್ರಹ ಸಿಗುತ್ತದೆ. ಇದಾದ ಬಳಿಕ ಅವರು ಶ್ರೀಮಂತರಾಗುತ್ತಾರೆ. ಚಿಕ್ಕಮಗಳೂರಿನ ಬಾಳೂರಿನಲ್ಲಿ ಅವರ ಮನೆ. ಮನೆಯೊಳಗೇ ಕೊಂಡಯ್ಯನ ದೈವಸ್ಥಾನ. ಹೀಗಾಗಿ ಆ ಮನೆಗೆ 'ಅಯ್ಯನ ಮನೆ' ಎಂಬ ಹೆಸರು. ಇವರಿಗೆ ಮೂವರು ಗಂಡು ಮಕ್ಕಳು. 'ದುಷ್ಯಂತ'(ಅಕ್ಷಯ್) ಕಿರಿಯವ. ಚಿಕ್ಕಮಗಳೂರಿನ ಸಂಪಿಗೆಹಾರದ 'ಜಾಜಿ'ಯನ್ನು (ಖುಷಿ ರವಿ) 'ದುಷ್ಯಂತ'ನಿಗೆ(ಅಕ್ಷಯ್) ಮದುವೆ ಮಾಡಿಕೊಡುವ ದೃಶ್ಯದಿಂದ ಚಿತ್ರದ ಕಥೆ ಆರಂಭವಾಗುತ್ತದೆ. ನೇಮ ನಿಷ್ಠೆ ಹೆಚ್ಚಿರುವ ಅಯ್ಯನ ಮನೆಯಲ್ಲಿ ಮುಂದೆ ನಡೆಯುವ ಘಟನೆಗಳೇ ಈ ಸರಣಿಯ ಕಥೆ.

ತಲಾ 18 ರಿಂದ 20 ನಿಮಿಷದ ಅವಧಿಯ ಆರು ಕಂತುಗಳು ಇಲ್ಲಿವೆ. ಒಂದು ಸಿನಿಮಾದ ಅವಧಿಯಷ್ಟೇ ಇದರ ಒಟ್ಟು ಅವಧಿಯಿದ್ದು, ಎಲ್ಲಾ ಕಂತುಗಳನ್ನು ಒಮ್ಮೆಯೇ ನೀಡಲಾಗಿದೆ. ಇದರಿಂದ ಕಥೆಯೊಳಗಿನ ಕುತೂಹಲ ಕಡಿಮೆಯಾಗಿದೆ. ವೆಬ್ ಸರಣಿಯ ಬರವಣಿಗೆ ಹಾಗೂ ನಿರೂಪಣೆ ಚೆನ್ನಾಗಿದೆ. ಆಯಾ ಕಂತುಗಳ ಅಂತ್ಯದಲ್ಲಿ ಮುಂದಿನ ಕಂತಿನ ವೀಕ್ಷಣೆಗೆ ಪ್ರೇರೇಪಿಸುವಂಥ ಅಂಶಗಳು ಇವೆ. ಸರಣಿಯಲ್ಲಿ ಬರುವ ಉಪಕಥೆಗಳ ಬರವಣಿಗೆಯನ್ನು ಇನ್ನಷ್ಟು ಗಟ್ಟಿಗೊಳಿಸಬಹುದಿತ್ತು. ಕೆಲವೆಡೆ ಪ್ರೇಕ್ಷಕರಿಗೆ ಒಂದು ಪಾತ್ರದ ಮೇಲೆ ಗುಮಾನಿ ಹುಟ್ಟಿಸಲೇಬೇಕು ಎನ್ನುವ ಉದ್ದೇಶದಿಂದ ದೃಶ್ಯಗಳನ್ನು ಬರೆದಿರುವಂತೆ ಭಾಸವಾಗುತ್ತದೆ. ಇನ್ನಷ್ಟು ಪರಿಣಾಮಕಾರಿಯಾಗಿ ಕೆಲ ದೃಶ್ಯಗಳನ್ನು ಚಿತ್ರೀಕರಿಸಬಹುದಿತ್ತು. ಚಿತ್ರೀಕರಣ ನಡೆದಿರುವ ಸ್ಥಳ, ಸರಣಿಯ ಅವಧಿ, ಪಾತ್ರಗಳ ಸಂಖ್ಯೆ, ದೃಶ್ಯಗಳನ್ನು ಗಮನಿಸಿದರೆ ಕೆಲವು ಮಿತಿಗಳಲ್ಲಿ ಈ ಸರಣಿಯನ್ನು ನಿರ್ಮಾಣ ಮಾಡಿದಂತಿದೆ.

ನಟನೆಯಲ್ಲಿ ಖುಷಿ ರವಿ ಇಡೀ ಸರಣಿಯನ್ನು ಆವರಿಸಿಕೊಂಡಿದ್ದಾರೆ. ಜಾಜಿ ಪಾತ್ರಕ್ಕೆ ಅವರು ಜೀವ ತುಂಬಿದ್ದಾರೆ. ಮಾನಸಿ ಸುಧೀರ್ ನಾಗಮ್ಮನ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಹಿತಾ ಚಂದ್ರಶೇಖರ್, ಶೋಭರಾಜ್, ಅರ್ಚನಾ ಕೊಟ್ಟಿಗೆ ತಮ್ಮ ಪಾತ್ರಗಳನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ರಾಹುಲ್ ರಾಯ್ ಛಾಯಾಚಿತ್ರಗ್ರಹಣ ಹಾಗೂ ಎಲ್.ವಿ.ಮುತ್ತು ಗಣೇಶ್ ಸಂಗೀತವೂ ಇಲ್ಲಿ ಉಲ್ಲೇಖಾರ್ಹ.

–**ಅಭಿಲಾಷ್ ಪಿ.ಎಸ್.**

ಖುಷಿ ರವಿ

ನಾವು ನೋಡಿದ ವೆಬ್ ಸರಣಿ

ಅಯ್ಯನ ಮನೆ

- ನಿರ್ಮಾಣ: ಶ್ರುತಿ ನಾಯ್ಡು
- ಕಥೆ ಮತ್ತು ನಿರ್ದೇಶನ: ರಮೇಶ್ ಇಂದಿರಾ
- ತಾರಾಗಣ: ಖುಷಿ ರವಿ, ಮಾನಸಿ ಸುಧೀರ್, ಅಕ್ಷಯ್, ಹಿತಾ ಚಂದ್ರಶೇಖರ್, ಅನಿರುದ್ಧ ಆಚಾರ್ಯ, ಅರ್ಚನಾ ಕೊಟ್ಟಿಗೆ, ಶೋಭರಾಜ್ ಪಾವೂರ್ ಮತ್ತಿತರರು.

ಶೀಘ್ರದಲ್ಲೇ ತೆರೆಗೆ ಗ್ರೀನ್

ರಾಜ್ ವಿಜಯ್ ನಿರ್ಮಾಣ ಹಾಗೂ ನಿರ್ದೇಶನದ 'ಗ್ರೀನ್' ಚಿತ್ರ ಶೀಘ್ರದಲ್ಲೇ ತೆರೆಗೆ ಬರಲಿದೆ. ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ಗೋಪಾಲಕೃಷ್ಣ ದೇಶಪಾಂಡೆ, ಬಾಲಾಜಿ ಮನೋಹರ್ ಸಿನಿಮಾದ ಮುಖ್ಯಭೂಮಿಕೆಯಲ್ಲಿದ್ದಾರೆ.

ರಾಜ್ ವಿಜಯ್ ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದೆ. 'ಕನ್ನಡದಲ್ಲಿ ಅಪರೂಪ ಎನ್ನಬಹುದಾದ ಸೈಕಾಲಜಿಕಲ್ ಥ್ರಿಲ್ಲರ್ ಕಥಾಹಂದರವನ್ನು ಸಿನಿಮಾ ಹೊಂದಿದೆ. ತನ್ನ ಇಡೀ ಜೀವನವನ್ನೇ ನಿಯಂತ್ರಿಸುತ್ತಿರುವ ತನ್ನೊಳಗಿನ ರಾಕ್ಷಸನಿಂದ ಹೊರಬರಲು ಹೊರಡುವ ನಾಯಕನ ಕಥೆಯೇ ಇದು. ಇದೊಂದು ಕಾಡಿನಲ್ಲಿ ನಡೆಯುವ ಕಥೆಯಾಗಿದ್ದು, ಊಟಿ ಬಳಿಯಲ್ಲಿ ಹೆಚ್ಚಿನ ಚಿತ್ರೀಕರಣ ಮಾಡಲಾಗಿದೆ. ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಈ ಸಿನಿಮಾ ಪ್ರದರ್ಶನ ಕಂಡಿದೆ. ರವಿ ಫಿಲಂಸ್‌ನ ಮನೋಜ್ ಸದ್ಯದಲ್ಲೇ ಈ ಚಿತ್ರವನ್ನು ರಾಜ್ಯದಾದ್ಯಂತ ಬಿಡುಗಡೆ ಮಾಡಲಿದ್ದಾರೆ' ಎಂದರು ರಾಜ್ ವಿಜಯ್.

'ಕನ್ನಡದಲ್ಲಿ ತೀರ ಅಪರೂಪದ ಕಥೆ ಇದಾಗಿದೆ ಹಾಗೂ ನಾನು ಕೂಡ ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ' ಎಂದರು ಗೋಪಾಲಕೃಷ್ಣ ದೇಶಪಾಂಡೆ.

ಬಿ.ಎನ್.ಸ್ವಾಮಿ ಈ ಚಿತ್ರದ ನಿರ್ಮಾಣಕ್ಕೆ ಕೈಜೋಡಿಸಿದ್ದಾರೆ. ಆರ್.ಜೆ. ವಿಕ್ಕಿ, ಶಿವ ಮಂಜು, ವಿಶ್ವನಾಥ್, ಡಿಂಪಿ ಪಾದ್ಯ ಚಿತ್ರದ ತಾರಾಬಳಗದಲ್ಲಿದ್ದಾರೆ.



ಗೋಪಾಲಕೃಷ್ಣ ದೇಶಪಾಂಡೆ

'ಸೂತ್ರಧಾರಿ'ಗೆ ಧ್ರುವ ಸಾಥ್

ಗಾಯಕ ಚಂದನ್ ಶೆಟ್ಟಿ ನಾಯಕನಾಗಿ ನಟಿಸಿರುವ ಮೊದಲ ಚಿತ್ರ 'ಸೂತ್ರಧಾರಿ' ಮೇ 9ರಂದು ತೆರೆಕಾಣುತ್ತಿದ್ದು, ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು.

ನಟ ಧ್ರುವ ಸರ್ಜಾ ಟ್ರೇಲರ್ ಬಿಡುಗಡೆಗೊಳಿಸಿದರು. ಈಗಲ್ ಮೀಡಿಯಾ ಕ್ರಿಯೇಷನ್ಸ್ ಮೂಲಕ ನವರಸನ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಕಿರಣ್ ಕುಮಾರ್ ನಿರ್ದೇಶಿಸಿದ್ದಾರೆ. 'ನನ್ನ ಪ್ರತಿಭೆಯನ್ನು ಮೊದಲು ಗುರುತಿಸಿದ್ದು ಸರ್ಜಾ ಕುಟುಂಬ. ಈ ಸಂದರ್ಭದಲ್ಲಿ ನನಗೆ ಧ್ರುವ ಅವರ ಮೊದಲ ಚಿತ್ರ 'ಅದ್ದೂರಿ'ಯ ಬಿಡುಗಡೆ ದಿನದ ನೆನಪಾಗುತ್ತಿದೆ. ಬಿಡುಗಡೆಯ ಹಿಂದಿನ ದಿನ ಬೆಳಗಿನ ಜಾವದವರೆಗೂ ನಾನು, ಧ್ರುವ ಚಿತ್ರಮಂದಿರಗಳಿಗೆ ಹೋಗಿ ಪೋಸ್ಟರ್ ಅಂಟಿಸಿದ್ದೆವು. ಮೊದಲ ಶೋ ಮುಗಿದ ಬೆನ್ನಲ್ಲೇ ನನ್ನ ಸ್ನೇಹಿತ ಆಗಿದ್ದ ಧ್ರುವ ಸ್ಟಾರ್ ಆಗಿದ್ದರು. ಅದು ಧ್ರುವ ಅವರ ಜೀವನ ಬದಲಾದ ದಿನ. ಆ ದಿನಗಳು ಕಣ್ಣಿಗೆ ಕಟ್ಟಿದಂತಿದೆ. 'ಸೂತ್ರಧಾರಿ'ಯಲ್ಲಿ ನಾನು ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದೇನೆ' ಎಂದರು ಚಂದನ್ ಶೆಟ್ಟಿ.

ಚಿತ್ರದಲ್ಲಿ ನಾಯಕಿಯಾಗಿ ಅಪೂರ್ವ ನಟಿಸಿದ್ದಾರೆ. ಸಂಜಯ್ ಗೌಡ, 'ನಟನ' ಪ್ರಶಾಂತ್, ಲೋಹಿತ್, ರಮೇಶ್ ಮಾಸ್ಟರ್, ಗಣೇಶ್ ನಾರಾಯಣ್ ಚಿತ್ರದ ತಾರಾಬಳಗದಲ್ಲಿದ್ದಾರೆ.

ಧ್ರುವ ಸರ್ಜಾ, ಚಂದನ್, ಅಪೂರ್ವ

'ಗತವೈಭವ'ದಲ್ಲಿ ಕಿಶನ್

ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾದಲ್ಲಿ 'ಬಿಗ್‌ಬಾಸ್' ಖ್ಯಾತಿಯ ಕಿಶನ್ ಬಿಳಗಲಿ ನಟಿಸಿದ್ದು, 'ಅನಾಮದೇವ' ಎಂಬ ಪಾತ್ರದಲ್ಲಿ ಅವರು ಕಾಣಿಸಿಕೊಳ್ಳಲಿದ್ದಾರೆ.

ಕಿಶನ್ ಜನ್ಮದಿನದಂದು ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ಅನ್ನು ಸುನಿ ರಿಲೀಸ್ ಮಾಡಿದ್ದಾರೆ. ದುಷ್ಯಂತ್ ಹಾಗೂ ಆಶಿಕಾ ರಂಗನಾಥ್ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾ ಜೂನ್ ವೇಳೆಗೆ ತೆರೆಕಾಣುವ ಸಾಧ್ಯತೆ ಇದೆ. ಪ್ರೇಮಕಥೆಯೊಂದನ್ನು ಸೈಂಟಿಫಿಕ್ ಥ್ರಿಲ್ಲರ್ ಮಾದರಿಯಲ್ಲಿ ಸುನಿ ತೆರೆಗೆ ತರುತ್ತಿದ್ದು, ಚಿತ್ರದಲ್ಲಿ ವಿಎಫ್‌ಎಕ್ಸ್ ಕಲಾವಿದನ ಪಾತ್ರದಲ್ಲಿ ದುಷ್ಯಂತ್ ಕಾಣಿಸಿಕೊಳ್ಳುತ್ತಿದ್ದಾರೆ.

'ಗತವೈಭವ' ಸಿನಿಮಾಗೆ ಕಥೆ-ಚಿತ್ರಕಥೆ ಮತ್ತು ಸಂಭಾಷಣೆಯನ್ನು ಸುನಿ ಅವರೇ ಬರೆದಿದ್ದಾರೆ. ಮಾತಾ ಮೂವಿ ಮೇಕರ್ಸ್ ಹಾಗೂ ಸುನಿ ಚಿತ್ರ ನಿರ್ಮಾಣ ಮಾಡುತ್ತಿದ್ದು, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ, ಜೂಡಾ ಸ್ಯಾಂಡಿ ಸಂಗೀತ ಚಿತ್ರಕ್ಕಿದೆ.

ತಮ್ಮ ಡಾನ್ಸ್ ಮೂಲಕ ಇನ್‌ಸ್ಟಾಗ್ರಾಂನಲ್ಲಿ ಸದ್ದು ಮಾಡುತ್ತಿರುವ ಕಿಶನ್, ಮಾಲಾಶ್ರೀ ಹಾಗೂ 'ಬಿಗ್‌ಬಾಸ್' ಖ್ಯಾತಿಯ ತನಿಷಾ ಕುಪ್ಪಂಡ ನಟನೆಯ 'ಪೆನ್‌ಡ್ರೈವ್'ನಲ್ಲೂ ಬಣ್ಣಹಚ್ಚಿದ್ದಾರೆ.

ವಾಹನ ಅಪಘಾತಗಳಲ್ಲಿ ಗಾಯಗೊಂಡವರಿಗೆ ಗಂಟೆಯಲ್ಲಿ ಚಿಕಿತ್ಸೆ: 'ಸುಪ್ರೀಂ'ಗೆ ಸರ್ಕಾರ ಭರವಸೆ

ನಗದುರಹಿತ ಚಿಕಿತ್ಸೆ: ಕೇಂದ್ರಕ್ಕೆ ತಪರಾಕಿ

ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಮೋಟಾರು ವಾಹನ ಅಪಘಾತಗಳಲ್ಲಿ ಗಾಯಗೊಂಡವರಿಗೆ ನಗದು ರಹಿತವಾಗಿ ಚಿಕಿತ್ಸೆ ಒದಗಿಸುವುದಕ್ಕೆ ಸಂಬಂಧಿಸಿದ ಯೋಜನೆ ರೂಪಿಸುವುದನ್ನು ವಿಳಂಬ ಮಾಡಿರುವ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್ 'ನೀವು ಬೃಹತ್ ಹೆದ್ದಾರಿಗಳನ್ನು ನಿರ್ಮಿಸುತ್ತಿದ್ದೀರಿ. ಆದರೆ, ಜನರು ಅಲ್ಲಿ ಅಗತ್ಯ ಸೌಲಭ್ಯಗಳಿಲ್ಲದೆ ಸಾಯುತ್ತಿದ್ದಾರೆ' ಎಂದು ಹೇಳಿದೆ.

ಜನವರಿ 8ರಂದು ತಾನು ಆದೇಶ ನೀಡಿದ್ದರೂ ಕೇಂದ್ರ ಸರ್ಕಾರವು ಅದನ್ನು ಪಾಲಿಸಿಲ್ಲ, ಹೆಚ್ಚುವರಿ ಕಾಲಾವಕಾಶ ಕೇಳಿಯೂ ಇಲ್ಲ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 164(ಎ)ಅನ್ನು 2022ರ ಏ. 1ರಿಂದ ಮೂರು ವರ್ಷಗಳ ಅವಧಿಗೆ ಜಾರಿಗೆ ತರಲಾಗಿದೆಯಾದರೂ, ಅರ್ಹರಿಗೆ ಮಧ್ಯಂತರ ಪರಿಹಾರ ಒದಗಿಸಲು ಬೇಕಿರುವ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿಲ್ಲ ಎಂದು ಪೀಠವು ಅಸಮಾಧಾನ ವ್ಯಕ್ತಪಡಿಸಿತು.

'ನೀವು ನ್ಯಾಯಾಂಗ ನಿಂದನೆಯ ಕೃತ್ಯ ಎಸಗಿದ್ದೀರಿ. ಹೆಚ್ಚುವರಿ ಸಮಯಾವಕಾಶವನ್ನು ನೀವು ಕೇಳಿಲ್ಲ. ಇಲ್ಲಿ ಏನು ನಡೆಯುತ್ತಿದೆ? ಯೋಜನೆ ಯಾವಾಗ ರೂಪಿಸುತ್ತೀರಿ ಎಂಬುದನ್ನು ತಿಳಿಸಿ. ನೀವೇ ರೂಪಿಸಿದ ಕಾನೂನುಗಳ ಬಗ್ಗೆ ನೀವು ಗಮನ ನೀಡುತ್ತಿಲ್ಲ... ಈ ನಿಯಮ ಜಾರಿಗೆ ಬಂದು ಮೂರು ವರ್ಷಗಳಾಗಿವೆ. ಜನಸಾಮಾನ್ಯರ ಒಳಿತಿಗಾಗಿ ನೀವು ನಿಜವಾಗಿಯೂ ಕೆಲಸ ಮಾಡುತ್ತಿದ್ದೀರಾ' ಎಂದು ಪೀಠವು ಪ್ರಶ್ನಿಸಿತು.

'ನೀವು ಈ ಅಂಶದ ಬಗ್ಗೆ ಗಂಭೀರವಾಗಿ ಆಲೋಚಿಸಿಲ್ಲವೇ? ರಸ್ತೆ ಅಪಘಾತಗಳಲ್ಲಿ ಜನ ಸಾಯುತ್ತಿದ್ದಾರೆ. ಬೃಹತ್ ಹೆದ್ದಾರಿಗಳನ್ನು ನೀವು ನಿರ್ಮಿಸುತ್ತಿದ್ದೀರಿ. ಆದರೆ ಅಗತ್ಯ ಸೌಲಭ್ಯಗಳು ಇಲ್ಲದೆ ಜನರು ಅಲ್ಲಿ ಸಾಯುತ್ತಿದ್ದಾರೆ. ಅಪಘಾತ ನಡೆದ ನಂತರ ನಿಗದಿತ ಸಮಯದ ಒಳಗೆ ಚಿಕಿತ್ಸೆ ಕೊಡಿಸಲು ಯೋಜನೆಯೇ ಇಲ್ಲ. ಇಷ್ಟೊಂದು ಹೆದ್ದಾರಿಗಳನ್ನು ನಿರ್ಮಿಸಿ ಪ್ರಯೋಜನ ಏನು' ಎಂದು ಕೂಡ ಪೀಠವು ರಸ್ತೆ ಸಾರಿಗೆ ಸಚಿವಾಲಯದ ಕಾರ್ಯದರ್ಶಿಯನ್ನು ಪ್ರಶ್ನಿಸಿತು.

ಅಪಘಾತ ನಡೆದ ಒಂದು ತಾಸಿನ ಒಳಗೆ ಚಿಕಿತ್ಸೆ ಕೊಡಿಸುವ ಯೋಜನೆಯನ್ನು ಒಂದು ವಾರದಲ್ಲಿ ಜಾರಿಗೆ ತರಲಾಗುತ್ತದೆ ಎಂಬ ಹೇಳಿಕೆಯನ್ನು ಪೀಠವು ದಾಖಲಿಸಿಕೊಂಡಿತು. ಯೋಜನೆಯ ಬಗ್ಗೆ ಅಧಿಸೂಚನೆಯಲ್ಲಿ ಪ್ರಕಟಿಸಿದ್ದನ್ನು ಮೇ 9ರೊಳಗೆ ತಿಳಿಸಬೇಕು ಎಂದು ಸೂಚಿಸಿದ ಪೀಠವು ವಿಚಾರಣೆಯನ್ನು ಮೇ 13ಕ್ಕೆ ಮುಂದೂಡಿದೆ.

ರಣವೀರ್‌ಗೆ ಪಾಸ್‌ಪೋರ್ಟ್ ಹಿಂತಿರುಗಿಸಿ: ಸುಪ್ರೀಂ

ರಣವೀರ್

ನವದೆಹಲಿ (ಪಿಟಿಐ): ಕೆಲಸದ ನಿಮಿತ್ತ ವಿದೇಶಕ್ಕೆ ಪ್ರಯಾಣಿಸಲು ಪಾಡ್‌ಕಾಸ್ಟರ್ ರಣವೀರ್ ಅಲಹಾಬಾದಿಯಾ ಅವರಿಗೆ ಪಾಸ್‌ಪೋರ್ಟ್ ಹಿಂದಿರುಗಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಆದೇಶಿಸಿದೆ.

ರಣವೀರ್ ವಿರುದ್ಧದ ತನಿಖೆ ಪೂರ್ಣಗೊಂಡಿದೆ ಎಂದು ಅಸ್ಸಾಂ ಮತ್ತು ಮಹಾರಾಷ್ಟ್ರ ಸರ್ಕಾರಗಳು ಹೇಳಿದ ಕಾರಣ, ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠವು ಷರತ್ತುಗಳನ್ನು ಸಡಿಲಿಸಲು ನಿರ್ಧರಿಸಿತು.

ಪಾಸ್‌ಪೋರ್ಟ್ ವಾಪಸ್ ಪಡೆಯಲು ಮಹಾರಾಷ್ಟ್ರ ಸೈಬರ್ ಪೊಲೀಸ್ ಬ್ಯೂರೊವನ್ನು ಸಂಪರ್ಕಿಸುವಂತೆಯೂ ಪೀಠವು ಅವರಿಗೆ ಸೂಚಿಸಿದೆ.

ತನ್ನ ವಿರುದ್ಧ ವಿವಿಧೆಡೆ ದಾಖಲಾಗಿರುವ ಎಫ್‌ಐಆರ್‌ಗಳನ್ನು ಒಗ್ಗೂಡಿಸಿ, ಒಂದೇ ಕಡೆ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಬೇಕೆಂದು ಕೋರಿ ರಣವೀರ್ ಸಲ್ಲಿಸಿರುವ ಮನವಿಯನ್ನು ಪರಿಗಣಿಸುವುದಾಗಿ ಪೀಠವು, ಅವರ ಪರ ಹಾಜರಾದ ಹಿರಿಯ ವಕೀಲ ಅಭಿನವ್ ಚಂದ್ರಚೂಡ್ ಅವರಿಗೆ ತಿಳಿಸಿತು.

'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಕಾರ್ಯಕ್ರಮದಲ್ಲಿ ಆಡಿದ ಅಶ್ಲೀಲ ಮಾತುಗಳ ಸಂಬಂಧ ರಣವೀರ್ ವಿರುದ್ಧ ಹಲವೆಡೆ ಎಫ್‌ಐಆರ್ ದಾಖಲಾಗಿದೆ. ತಮ್ಮ ವಿರುದ್ಧ ಕಠಿಣ ಕ್ರಮ ಜರುಗಿಸದಂತೆ ರಕ್ಷಣೆ ನೀಡಬೇಕು ಎಂದು ಕೋರಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ರಣವೀರ್ ಅವರನ್ನು ಬಂಧಿಸಬಾರದು ಎಂದು ಫೆ.18ರ ತನ್ನ ಆದೇಶದಲ್ಲಿ ಹೇಳಿದ್ದ ಸುಪ್ರೀಂ ಕೋರ್ಟ್, ಪಾಸ್‌ಪೋರ್ಟ್ ಅನ್ನು ಪ್ರಕರಣದ ವಿಚಾರಣೆ ನಡೆಸುತ್ತಿರುವ ಸೈಬರ್ ಅಪರಾಧ ಪೊಲೀಸ್ ಠಾಣೆಗೆ ಒಪ್ಪಿಸುವಂತೆ ಸೂಚಿಸಿತ್ತು.

ರಾಣಾ ಎನ್‌ಐಎ ಕಸ್ಟಡಿ ಅವಧಿ 12 ದಿನ ವಿಸ್ತರಣೆ

ತಹವ್ವುರ್ ರಾಣಾ

ನವದೆಹಲಿ (ಪಿಟಿಐ): 26/11ರ ಮುಂಬೈನಲ್ಲಿ ನಡೆದ ದಾಳಿಯ ಆರೋಪಿ ತಹವ್ವುರ್ ರಾಣಾನನ್ನು ಮತ್ತೆ 12 ದಿನ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಕಸ್ಟಡಿಗೆ ನೀಡಿ ದೆಹಲಿ ಕೋರ್ಟ್ ಸೋಮವಾರ ಆದೇಶಿಸಿದೆ.

ಈ ಮೊದಲಿನ 18 ದಿನಗಳ ಕಸ್ಟಡಿ ಮುಗಿದ ನಂತರ ಎನ್‌ಐಎ ಕೋರಿಕೆಯ ಮೇರೆಗೆ ವಿಶೇಷ ಎನ್‌ಐಎ ನ್ಯಾಯಾಧೀಶ ಚಂದರ್ ಜಿತ್ ಸಿಂಗ್ ಅವರು ರಾಣಾನ ಕಸ್ಟಡಿ ಅವಧಿಯನ್ನು ವಿಸ್ತರಿಸಿದರು.

ಬಿಗಿ ಭದ್ರತೆಯ ನಡುವೆ, ಮುಖ ಮರೆಸಿ ರಾಣಾನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ರಾಣಾನ ಬಂಧನದ ನಂತರ ಕಳೆದ 18 ದಿನಗಳಲ್ಲಿ ಆಗಿರುವ ತನಿಖೆಯ ಬಗ್ಗೆ ತನಿಖಾ ಸಂಸ್ಥೆಯು ನ್ಯಾಯಾಧೀಶರಿಗೆ ಅವರ ಕೊಠಡಿಯಲ್ಲಿ ವಿವರ ನೀಡಿತು.

ನ್ಯಾಯಾಧೀಶರು ರಾಣಾಗೆ 'ಸಾಫ್ಟ್-ಟಿಪ್ ಪೆನ್' ಬಳಸಲು, ಎನ್‌ಐಎ ಅಧಿಕಾರಿಗಳ ಸಮ್ಮುಖದಲ್ಲಿ ತನ್ನ ವಕೀಲರ ಭೇಟಿಯಾಗಲು ಅವಕಾಶ ಕಲ್ಪಿಸಿದರು.

'ಸಿದ್ದರಾಮಯ್ಯಗೆ ಅಧಿಕಾರದ ಅಮಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರದ ಮದದಲ್ಲಿ ತೇಲುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡೆ–ನುಡಿಗಳು ವಿಪರೀತಕ್ಕೆ ಹೋಗಿವೆ. ಪೊಲೀಸ್ ಅಧಿಕಾರಿಯ ವಿರುದ್ಧ ಕೈ ಮಾಡಲು ಹೋಗಿ ಮುಖ್ಯಮಂತ್ರಿ ಸ್ಥಾನದ ಘನತೆಗೇ ಧಕ್ಕೆ ತಂದಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, ಬೆಳಗಾವಿಯ ಕಾಂಗ್ರೆಸ್ ಸಮಾವೇಶದಲ್ಲಿ ರಾಷ್ಟ್ರಭಕ್ತ ಮಹಿಳೆಯರು ದಿಟ್ಟತನದಿಂದ ಘೋಷಣೆ ಮೂಲಕ ಪ್ರತಿಭಟನೆ ವ್ಯಕ್ತಪಡಿಸಿದರು. ಇದರಿಂದ ವಿಚಲಿತರಾದ ಸಿದ್ದರಾಮಯ್ಯ ಪೊಲೀಸ್ ಅಧಿಕಾರಿಯ ವಿರುದ್ಧ ಆರ್ಭಟಿಸಿ, ಕೈ ಮಾಡಲು ಹೋಗಿದ್ದಾರೆ ಎಂದಿದ್ದಾರೆ.

ಕೆಲ ತಿಂಗಳ ಹಿಂದೆ ಸಭೆಯೊಂದರಲ್ಲಿ ಜಿಲ್ಲಾಧಿಕಾರಿಯೊಬ್ಬರನ್ನು ವೇದಿಕೆಯ ಮೇಲೆ ಅಪಮಾನಿಸಿ ತಮ್ಮ ಸಂಸ್ಕೃತಿ ಮತ್ತು ನಡವಳಿಕೆಯನ್ನು ಬಹಿರಂಗಗೊಳಿಸಿದ್ದರು. ಅವರ ವರ್ತನೆ ಇಂದು ನಿನ್ನೆಯದಲ್ಲ. ಸ್ವಕ್ಷೇತ್ರದಲ್ಲಿ ಮಹಿಳೆಯೊಬ್ಬರ ವಿರುದ್ಧವೂ ಇದೇ ರೀತಿ ವರ್ತಿಸಿದ್ದರು. ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರು ಅನುಭವದ ಹಿರಿತನ, ನಡವಳಿಕೆಯಿಂದ ಪಕ್ವರಾಗಿರಬೇಕು. ಸಿದ್ದರಾಮಯ್ಯ ಅವರ ವಿಷಯದಲ್ಲಿ ಇದು ತಿರುಗುಮುರಗಾಗಿದೆ. ದಿನೇ ದಿನೇ ತಮ್ಮ ನಾಲಗೆಯ ಮೇಲೆ ಹಿಡಿತ ಕಳೆದುಕೊಳ್ಳುತ್ತಿದ್ದಾರೆ ಎಂದು ಹರಿಹಾಯ್ದಿದ್ದಾರೆ.

ಬೇಹುಗಾರಿಕೆ ವೈಫಲ್ಯವೇ?: 'ಮುಖ್ಯಮಂತ್ರಿಯವರೇ ನಿಮ್ಮ ಕಾರ್ಯಕ್ರಮದಲ್ಲಿ ಪ್ರತಿಭಟನೆ ನಡೆಯುತ್ತದೆ ಎಂಬ ಮಾಹಿತಿ ನಿಮ್ಮ ಗುಪ್ತಚರದಳಕ್ಕೆ ಇರಲಿಲ್ಲವೇ? ಇದು ಬೇಹುಗಾರಿಕೆ ವೈಫಲ್ಯ ಅಲ್ಲವೇ?' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಜಮ್ಮು–ಕಾಶ್ಮೀರದ ವಿಚಾರದಲ್ಲಿ ದೇಶದ ವಿರುದ್ಧ ಸುಳ್ಳುಗಳನ್ನು ಹೇಳುವ ಕೆಲಸ ಮಾಡುತ್ತಿದ್ದರು. ಅದನ್ನು ವಿರೋಧಿಸಿ ಮಹಿಳೆಯರು ಪ್ರತಿಭಟನೆ ನಡೆಸಿದ್ದಾರೆ ಎಂದರು.

ನೀವು ನಮ್ಮ ನಾಡಿನ ಏಕವಚನದ ವ್ಯಾಕರಣ ಮೇಷ್ಟ್ರು ಎಂಬುದು ಇಡೀ ರಾಜ್ಯಕ್ಕೆ ಗೊತ್ತಿದೆ. ಆದರೆ, ತಾವು ಮುಖ್ಯಮಂತ್ರಿಗಳಾಗಿ, ಎಲ್ಲರಿಗೂ ಮೇಲ್ಪಂಕ್ತಿ ಹಾಕಿ ಕೊಡಬೇಕಾಗಿರುವುದು ನಿಮ್ಮ ಜವಾಬ್ದಾರಿ. ಆದರೆ, ಅಂದು ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿ, ಇಂದು ಬೆಳಗಾವಿ ಜಿಲ್ಲೆಯ ಪೊಲೀಸ್ ಅಧಿಕಾರಿಯು ನಿಮ್ಮ ಕೋಪ ತಾಪಕ್ಕೆ ಬಲಿಯಾಗಿದ್ದು ನಿಜಕ್ಕೂ ಒಳ್ಳೆಯದಲ್ಲ.

ಎಸ್.ಸುರೇಶ್ ಕುಮಾರ್, ಶಾಸಕ

ಸಂಕ್ಷಿಪ್ತ ಸುದ್ದಿ

ಕಡತಗಳ ಡಿಜಿಟಲ್ ಸಂಗ್ರಹವಿದೆ: ಇ.ಡಿ

ನವದೆಹಲಿ (ಪಿಟಿಐ): ಮುಂಬೈನ ಕಚೇರಿಯಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಕೆಲವು ದಾಖಲೆಗಳು ಮತ್ತು ಪೀಠೋಪಕರಣಗಳು ಸುಟ್ಟುಹೋಗಿವೆ. ಆದರೆ ಕಡತಗಳ ಡಿಜಿಟಲ್ ಸಂಗ್ರಹವೂ ಇರುವುದರಿಂದ ಪ್ರಕರಣಗಳ ತನಿಖೆಗೆ ಯಾವುದೇ ಅಡ್ಡಿಯಾಗುವುದಿಲ್ಲ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಸ್ಪಷ್ಟಪಡಿಸಿದೆ.

ಮುಂಬೈನ ಬಲ್ಲಾರ್ಡ್ ಎಸ್ಟೇಟ್ ಪ್ರದೇಶದ ಕೈಸರ್ 1– ಹಿಂದ್ ಕಟ್ಟಡದ ನಾಲ್ಕನೇ ಮಹಡಿಯಲ್ಲಿದ್ದ ಇ.ಡಿ ಕಚೇರಿಯಲ್ಲಿ ಭಾನುವಾರ ಮುಂಜಾನೆ 2.25ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ಇದಕ್ಕೆ ಶಾರ್ಟ್ ಸರ್ಕೀಟ್ ಕಾರಣ ಎಂದು ತಿಳಿದುಬಂದಿದೆ ಎಂದು ಇ.ಡಿ ಹೇಳಿಕೆಯಲ್ಲಿ ತಿಳಿಸಿದೆ.

ಬಾಲಾಜಿ ರಾಜೀನಾಮೆ: ಕೋರ್ಟ್‌ಗೆ ಮಾಹಿತಿ

ನವದೆಹಲಿ (ಪಿಟಿಐ): ವಿ. ಸೆಂಥಿಲ್ ಬಾಲಾಜಿ ಅವರು ತಮಿಳುನಾಡಿನ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ, ಅದನ್ನು ರಾಜ್ಯಪಾಲರು ಒಪ್ಪಿದ್ದಾರೆ ಎಂದು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸೋಮವಾರ ಮಾಹಿತಿ ನೀಡಿದೆ.

ತಮಿಳುನಾಡು ರಾಜಭವನವು ಹೊರಡಿಸಿರುವ ಪತ್ರಿಕಾ ಪ್ರಕಟಣೆಯನ್ನು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠಕ್ಕೆ ಸಲ್ಲಿಸಲಾಯಿತು. ಬಾಲಾಜಿ ಅವರು ರಾಜೀನಾಮೆ ನೀಡಿರುವುದನ್ನು ಪತ್ರಿಕಾ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ನೀಟ್– ಯುಜಿ: ಲೋಪ ತಡೆಗೆ ಕ್ರಮ

ನವದೆಹಲಿ(ಪಿಟಿಐ): ವೈದ್ಯಕೀಯ ಪದವಿ ಕೋರ್ಸ್ ಪ್ರವೇಶಕ್ಕೆ ನಡೆಯುವ ನೀಟ್-ಯುಜಿಯಲ್ಲಿ ಯಾವುದೇ ಲೋಪಗಳು ಆಗದಂತೆ ಕಠಿಣ ಕ್ರಮ ತೆಗೆದುಕೊಳ್ಳಲು ಶಿಕ್ಷಣ ಸಚಿವಾಲಯವು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸರಣಿ ಸಭೆಗಳನ್ನು ನಡೆಸಿದೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ನೀಟ್-ಯುಜಿ ಪರೀಕ್ಷೆ ಮೇ 4 ರಂದು ನಿಗದಿಪಡಿಸಲಾಗಿದ್ದು, ದೇಶದಾದ್ಯಂತ 550ಕ್ಕೂ ಹೆಚ್ಚು ನಗರಗಳಲ್ಲಿ ಒಟ್ಟು 5,000ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಕಳೆದ ವರ್ಷದ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ಹಲವು ಅಕ್ರಮಗಳು ನಡೆದ ಬಗ್ಗೆ ಆರೋಪಗಳು ಕೇಳಿಬಂದ ನಂತರ ಸಚಿವಾಲಯವು, ಪರೀಕ್ಷೆಯನ್ನು ಪಾರದರ್ಶಕವಾಗಿ ಮತ್ತು ಅತ್ಯಂತ ಕಟ್ಟುನಿಟ್ಟಿನಿಂದ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

'ನೀಟ್-ಯುಜಿಯನ್ನು ಸುಗಮವಾಗಿ, ನ್ಯಾಯಯುತ ಮತ್ತು ಸುರಕ್ಷಿತವಾಗಿ ನಡೆಸಲು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜತೆಗೆ ಸರಣಿ ಸಭೆಗಳನ್ನು ನಡೆಸಲಾಗಿದೆ. ಪ್ರಶ್ನೆ ಪತ್ರಿಕೆಗಳನ್ನು ಸಾಗಿಸಲು ಭದ್ರತೆ ಒದಗಿಸುವ ಮತ್ತು ಯಾವುದೇ ಸಮಸ್ಯೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಜಿಲ್ಲಾ ಮಟ್ಟದ ಸಮನ್ವಯ ಸಮಿತಿಗಳನ್ನು ಸಂಪೂರ್ಣ ಸಕ್ರಿಯಗೊಳಿಸಲಾಗಿದೆ' ಎಂದು ಮೂಲವೊಂದು ಸುದ್ದಿಸಂಸ್ಥೆಗೆ ತಿಳಿಸಿದೆ.

ಮಥುರಾ ವಿವಾದ ಅರ್ಜಿಯ ವಿಚಾರಣೆ ಮುಂದಕ್ಕೆ

ನವದೆಹಲಿ (ಪಿಟಿಐ): ಮಥುರಾ ಕೃಷ್ಣ ಜನ್ಮಭೂಮಿ – ಶಾಹಿ ಈದ್ಗಾ ವಿವಾದದಲ್ಲಿ ಕೇಂದ್ರ ಸರ್ಕಾರ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯನ್ನು (ಎಎಸ್‌ಐ) ಪ್ರತಿವಾದಿಗಳನ್ನಾಗಿಸಲು ಹಿಂದೂ ಅರ್ಜಿದಾರರಿಗೆ ಅವಕಾಶ ನೀಡಿದ ಹೈಕೋರ್ಟ್‌ನ ಕ್ರಮ ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂದೂಡಿದೆ.

ಎಎಸ್‌ಐ ಮತ್ತು ಕೇಂದ್ರ ಗೃಹ ಸಚಿವಾಲಯವನ್ನು ಪ್ರತಿವಾದಿಗಳನ್ನಾಗಿಸಲು ಅಲಹಾಬಾದ್ ಹೈಕೋರ್ಟ್ ಮಾರ್ಚ್ 5ರಂದು ಅವಕಾಶ ಕಲ್ಪಿಸಿತ್ತು. ಎರಡು ಅರ್ಜಿಗಳಲ್ಲಿ ತಿದ್ದುಪಡಿ ತರುವುದಕ್ಕೆ ಕೂಡ ಹೈಕೋರ್ಟ್ ಒಪ್ಪಿತ್ತು.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು, ಅರ್ಜಿಗಳಲ್ಲಿ ತಿದ್ದುಪಡಿ ತರುವುದಕ್ಕೆ ಒಪ್ಪಿಗೆ ನೀಡಿರುವುದರಲ್ಲಿ ಮೇಲ್ನೋಟಕ್ಕೆ ಯಾವುದೇ ತಪ್ಪು ಇಲ್ಲ ಎಂದು ಹೇಳಿದೆ.

ಚಾರ್‌ಧಾಮ್ ಯಾತ್ರೆ 60 ಲಕ್ಷ ಮಂದಿ ನಿರೀಕ್ಷೆ

ಮುಂಬೈ: ಪ್ರಸಕ್ತ ಸಾಲಿನ ಚಾರ್‌ಧಾಮ್ ಯಾತ್ರೆಯಲ್ಲಿ 50ರಿಂದ 60 ಲಕ್ಷ ಮಂದಿ ಯಾತ್ರಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಇದರಿಂದ ಅಂದಾಜು ₹7,500 ಕೋಟಿ ಆದಾಯ ಸೃಷ್ಟಿಯಾಗಲಿದೆ ಎಂದು ತಜ್ಞರು ಹೇಳಿದ್ದಾರೆ.

ತೀರ್ಥಯಾತ್ರೆ ಆಯೋಜಕ ಸಂಸ್ಥೆಗಳಾದ ಟೆಂಪಲ್ ಕನೆಕ್ಟ್ ಹಾಗೂ ಟ್ರಿಪ್ ಟು ಟೆಂಪಲ್ಸ್ ಸಂಸ್ಥೆಯ ಮುಖ್ಯಸ್ಥರಾದ ಗಿರೀಶ್ ಕುಲಕರ್ಣಿ, ವಿಕಾಸ್ ಮಿಶ್ರಾ ಅವರು ಈ ಬಗ್ಗೆ ಮಾಹಿತಿ ನೀಡಿದ್ದಾರೆ.

24 ನಕ್ಸಲರು ಶರಣು

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ 24 ನಕ್ಸಲರು ಸೋಮವಾರ ಶರಣಾಗಿದ್ದಾರೆ. ಈ ಪೈಕಿ 14 ನಕ್ಸಲರ ಸುಳಿವು ನೀಡಿದವರಿಗೆ ಈ ಹಿಂದೆ ₹28.50 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ತೆಲಂಗಾಣದ ಜತೆಗೆ ಗಡಿ ಹಂಚಿಕೊಂಡಿರುವ ಬಿಜಾಪುರ ಪ್ರದೇಶದಲ್ಲಿ ಏ.21ರಿಂದ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಯುತ್ತಿದ್ದು, 24,000 ಭದ್ರತಾ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಈ ನಡುವೆಯೇ ನಕ್ಸಲರು ಶರಣಾಗಿರುವುದು ಮಹತ್ವ ಪಡೆದಿದೆ.

ಎಎಸ್ಪಿ ಮೇಲೆ ಕೈ ಎತ್ತಿದ ಸಿ.ಎಂ

ಒಂದನೇ ಪುಟದಿಂದ...

ಈ ಎಲ್ಲದರ ಮಧ್ಯೆ ವೇದಿಕೆಯತ್ತ ನುಗ್ಗಲು ಯತ್ನಿಸಿದ ಬಿಜೆಪಿ ಕಾರ್ಯಕರ್ತೆಯರನ್ನು ಪೊಲೀಸರು ಹೊರಕ್ಕೆ ಎಳೆದೊಯ್ದರು. ಹೊರಗೆ ನಿಂತಿದ್ದ ಕಾಂಗ್ರೆಸ್‌ನ ಕಾರ್ಯಕರ್ತರು ಪೊಲೀಸ್ ವಾಹನಕ್ಕೆ ಮುತ್ತಿಗೆ ಹಾಕಿದರು. ಇದರಿಂದ ಸ್ಥಳದಲ್ಲಿ ಕೆಲ ಹೊತ್ತು ಗೊಂದಲದ ವಾತಾವರಣ ನಿರ್ಮಾಣವಾಯಿತು. ಸಿದ್ದರಾಮಯ್ಯ ಅವರು ಕೆಲಹೊತ್ತು ಭಾಷಣ ನಿಲ್ಲಿಸಿದರು.

ಸಮಾವೇಶದ ಬಳಿಕ ಪೊಲೀಸ್ ಅಧಿಕಾರಿಗಳ ವಿರುದ್ಧ ಹರಿಹಾಯ್ದ ಸಚಿವೆ ಲಕ್ಷ್ಮೀ ಹೆಬ್ಬಾಳಕರ, 'ನಮ್ಮ ಸಮಾವೇಶದಲ್ಲಿ ಬಿಜೆಪಿಯವರನ್ನು ಹೇಗೆ ಬಿಟ್ಟರಿ? ಇಷ್ಟು ಜನ ಪೊಲೀಸರು ಏನು ಮಾಡುತ್ತಿದ್ದೀರಿ? ಈ ಲೋಪಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಡಿಸಿಪಿ ರೋಹನ್ ಜಗದೀಶ ಅವರಿಗೆ ತಾಕೀತು ಮಾಡಿದರು.

ಬಿಜೆಪಿಯ ಪಾಕ್ ಪ್ರೇಮ: 'ಬಿಜೆಪಿಯ ಪಾಕ್ ಪ್ರೇಮವನ್ನು ದೇಶದ ಜನ ನೆನಪಿಸಿಕೊಳ್ಳಬೇಕು. ಉಗ್ರರ ದಾಳಿಗೆ ಬಿಜೆಪಿ ಸರ್ಕಾರ ನಿರುತ್ತರವಾಗಿದೆ. ನಮ್ಮ ಸಮಾವೇಶದಲ್ಲಿ ಕೂಗಾಡಿ ಅವರ ವೈಫಲ್ಯ ಮರೆಮಾಚಲು ಸಾಧ್ಯವಿಲ್ಲ' ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಹೇಳಿದರು.

'ಬಿಜೆಪಿಗೂ ಉಗ್ರರಿಗೂ ನಂಟಿದೆಯೇ? ಕೇಂದ್ರದಲ್ಲಿ ಬಿಜೆಪಿಯ ಸರ್ಕಾರ ಇದ್ದಾಗಲೇ ಏಕೆ ಉಗ್ರರ ದಾಳಿಗಳಾಗುತ್ತವೆ' ಎಂಬ ಪ್ರಶ್ನೆ ಜನರಲ್ಲಿ ಮೂಡತೊಡಗಿದೆ. ಸಂಸತ್ತಿನ ಮೇಲಿನ ದಾಳಿ, ಪಠಾನ್‌ಕೋಟ್, ಉರಿ, ನಗರೋಟಾ, ಅಮರನಾಥ್ ಯಾತ್ರೆ, ಪುಲ್ವಾಮಾ ಘಟನೆಗಳು ಬಿಜೆಪಿ ಸರ್ಕಾರದ ಅವಧಿಯಲ್ಲೇ ನಡೆದಿವೆ. ಈಗ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದಿದ್ದು, ಕರ್ನಾಟಕದ ಪ್ರವಾಸಿಗರ ಹತ್ಯೆಯಾಗಿದೆ. ಬಿಜೆಪಿಯ ಪಾಕ್ ಪ್ರೇಮವನ್ನು ಜನ ಪ್ರಶ್ನೆ ಮಾಡುತ್ತಿದ್ದಾರೆ' ಎಂದರು.

ಎಐಸಿಸಿ, ಕೆಪಿಸಿಸಿಯಿಂದ ಬೆಳಗಾವಿಯಲ್ಲಿ ಸೋಮವಾರ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶಕ್ಕೆ ನುಗ್ಗಿ ಘೋಷಣೆ ಕೂಗಿದ ಬಿಜೆಪಿ ಕಾರ್ಯಕರ್ತೆಯರನ್ನು ಪೊಲೀಸರು ವಶಕ್ಕೆ ಪಡೆದರು

ಬಿಜೆಪಿ ಕಾರ್ಯಕರ್ತೆಯರಿಗೆ ಜಾಮೀನು

ಕಪ್ಪು ಬಟ್ಟೆ ಪ್ರದರ್ಶಿಸಿದ್ದು ಅಲ್ಲದೇ ಸಮಾವೇಶದ ವೇದಿಕೆಯತ್ತ ನುಗ್ಗಲು ಯತ್ನಿಸಿದ ಬಿಜೆಪಿಯ ಶಿಲ್ಪಾ ಎಂಬುವರು ಸೇರಿ ಆರು ಕಾರ್ಯಕರ್ತೆಯರ ವಿರುದ್ಧ ಬಿಎನ್‌ಎಸ್ 189(1)(C), ಬಿಎನ್‌ಎಸ್ 352 ಅಡಿ ಪ್ರಕರಣ ದಾಖಲಿಸಲಾಗಿದೆ.

ಶಿಲ್ಪಾ ಕೇಕ್ರೆ, ಪವಿತ್ರಾ ಹಿರೇಮಠ, ರೇಷ್ಮಾ ಬರಮೂಚೆ, ಮಂಜುಳಾ ಹಣ್ಣೀಕೇರಿ, ಅನ್ನಪೂರ್ಣಾ ಹವಳ ಮತ್ತು ಸುಮಿತ್ರಾ ಜಾಲಗಾರ್ ಆರೋಪಿಗಳು. ಕ್ಯಾಂಪ್ ಠಾಣೆ ಪೊಲೀಸರು ಪ್ರಕರಣ ದಾಖಲಿಸುತ್ತಿದ್ದಂತೆಯೇ ಬಿಜೆಪಿ ನಾಯಕರು ಜಾಮೀನು ಅರ್ಜಿ ಸಲ್ಲಿಸಿದರು. ಅವರಿಗೆ ಇಲ್ಲಿನ ಐದನೇ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಸ್ಪರ್ಷಾ ಡಿಸೋಜಾ ಅವರು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದರು.

ಬಿಜೆಪಿಯವರ ಪ್ರವೃತ್ತಿ ಹೀಗೆ ಮುಂದುವರಿದರೆ ರಾಜ್ಯದಲ್ಲಿ ಅವರ ಒಂದು ಸಭೆಗೂ ಅವಕಾಶ ನೀಡಲ್ಲ. ಇದು ಕಾಂಗ್ರೆಸ್ ಪ್ರತಿಜ್ಞೆ. ಬಿಜೆಪಿ ನಾಯಕರೇ, ನಿಮ್ಮ ಕಾರ್ಯಕರ್ತರಿಗೆ ಬುದ್ಧಿ ಹೇಳಿ. ಇದು ಎಚ್ಚರಿಕೆ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

'ಪ್ರತಿಭಟನೆ ಸರಿಯೇ'

'ಭಯೋತ್ಪಾದಕರ ಕೃತ್ಯಕ್ಕೆ ದೇಶವೇ ದುಃಖದಲ್ಲಿದೆ. ಇಂಥ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರವೇ ಪ್ರತಿಭಟನೆಗೆ ಮುಂದಾಗಿದ್ದು ಸರಿಯೇ' ಎಂದು ಶಾಸಕ ಅಭಯ ಪಾಟೀಲ ಪ್ರಶ್ನಿಸಿದರು.

'ನಮ್ಮ ಕಾರ್ಯಕರ್ತೆಯರು ಘೋಷಣೆ ಕೂಗಿದ್ದಾರೆ. ಸಿ.ಎಂ.ಗೆ ಕಲ್ಲು ಎಸೆದಿಲ್ಲ. ಅವರನ್ನು ಎಳೆದಾಡಿ, ಬಂಧಿಸಿದ್ದಾರೆ. ಆದರೆ, ಸಿದ್ದರಾಮಯ್ಯ ಅವರೇ ಅಧಿಕಾರಿಯನ್ನು ಹೊಡೆಯಲು ಹೋಗಿದ್ದಾರಲ್ಲ; ಇವರ ಮೇಲೆ ಯಾವ ಪ್ರಕರಣ ದಾಖಲಿಸಬೇಕು? ಇದು ಹಿಟ್ಲರ್ ಸರ್ಕಾರ' ಎಂದರು.

'ಬಿಜೆಪಿ ಮಹಿಳಾ ಕಾರ್ಯಕರ್ತೆಯರು ಸಿ.ಎಂ ವಿರುದ್ಧ ಘೋಷಣೆ ಕೂಗಿದ್ದಕ್ಕೆ ಬಂಧಿಸಿ, ಹಲ್ಲೆ ನಡೆಸಿದ್ದು ಸರಿಯಲ್ಲ' ಎಂದು ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ಖಂಡಿಸಿದರು.

ಒಬ್ಬ ದಕ್ಷ ಪೊಲೀಸ್ ಅಧಿಕಾರಿಯನ್ನು ವೇದಿಕೆ ಮೇಲೆ ಕಪಾಳಕ್ಕೆ ಹೊಡೆಯಲು ಮುಂದಾಗಿದ್ದು ಮುಖ್ಯಮಂತ್ರಿಗೆ ಶೋಭೆ ತರುವುದಿಲ್ಲ. ಸಿದ್ದರಾಮಯ್ಯ ಮನಸ್ಸು ವಿಚಲಿತವಾಗಿದೆ

ಜಗದೀಶ ಶೆಟ್ಟರ್, ಸಂಸದ

ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಕರ್ನಾಟಕ ತಂಡದ ಆಟಗಾರ್ತಿಯರು (ಎಡದಿಂದ ಬಲಕ್ಕೆ): ಮೋನಿಶಾ, ವಂದನಾ, ವರ್ಷಾ ರಾಜ್, ಪೂರ್ವಿತಾ, ಲಿಖಿತಾ, ದೀಪ್‌ಶಿಖಾ, ಪ್ರಗತಿ, ನೇತ್ರಾ, ನೇಹಾ, ಸಾನ್ವಿ, ಚಿನ್ಮಯಿ ಹಾಗೂ ಪೂರ್ವಿ ಅಶೋಕ್ ಅಂಗಡಿ ಅವರು (ನಿಂತವರು ಎಡದಿಂದ ಬಲಕ್ಕೆ): ರಾಘವೇಂದ್ರ (ಸಹಾಯಕ ಕೋಚ್), ಗೀತಾ (ಕೋಚ್),ಮಹೇಶ್ ಶೆಟ್ಟಿ (ಬಾಲವಿಕಾಸ ಶಾಲೆ ಕಾರ್ಯದರ್ಶಿ), ನರಸಿಂಹ ರೆಡ್ಡಿ (ಭಾರತ ಡಾಜ್‌ಬಾಲ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ),ಪ್ರಹ್ಲಾದ್ ಜೆ ಶೆಟ್ಟಿ (ಬಾಲವಿಕಾಸ ಶಾಲೆ ಅಧ್ಯಕ್ಷ),ವಿದ್ಯಾಧರ್ ಜೈನ್ (ದಕ್ಷಿಣ ಕನ್ನಡ ಜಿಲ್ಲಾ ಡಾಜ್ ಬಾಲ್ ಸಂಸ್ಥೆ ಅಧ್ಯಕ್ಷ),ಸುಪ್ರಿಯಾ (ಬಾಲವಿಕಾಸ ಶಾಲೆ ಮುಖ್ಯ ಶಿಕ್ಷಕಿ),ಸಂಪತ್ (ಕೋಚ್),ನೇತ್ರಾ (ವ್ಯವಸ್ಥಾಪಕಿ)

ರಾಷ್ಟ್ರೀಯ ಡಾಜ್‌ಬಾಲ್ ಚಾಂಪಿಯನ್‌ಷಿಪ್

ಕರ್ನಾಟಕ ತಂಡದ ಹ್ಯಾಟ್ರಿಕ್ ಸಾಧನೆ

ಮಂಗಳೂರು: ಕರ್ನಾಟಕ ಮಹಿಳೆಯರ ತಂಡದವರು ಬಂಟ್ವಾಳ ತಾಲ್ಲೂಕಿನ ಮಾಣಿಯ ಬಾಲವಿಕಾಸ ಶಾಲೆಯಲ್ಲಿ ನಡೆದ ರಾಷ್ಟ್ರೀಯ ಡಾಜ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದು ಹ್ಯಾಟ್ರಿಕ್ ಸಾಧನೆ ಮಾಡಿದರು. ಎರಡು ಬಾರಿಯ ಚಾಂಪಿಯನ್ ಪುರುಷರ ತಂಡ ನಿರಾಸೆ ಕಂಡಿತು.

ಭಾರತ ಡಾಜ್ ಬಾಲ್ ಫೆಡರೇಷನ್ ಹಾಗೂ ಕರ್ನಾಟಕ ರಾಜ್ಯ ಡಾಜ್ ಬಾಲ್ ಸಂಸ್ಥೆಯ ಸಹಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಡಾಜ್ ಬಾಲ್ ಸಂಸ್ಥೆ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನ ಭಾನುವಾರ ನಡೆದ ಫೈನಲ್‌ನಲ್ಲಿ ಕರ್ನಾಟಕದ ಮಹಿಳೆಯರು 2-0 ಸೆಟ್‌ಗಳಿಂದ ಮಹಾರಾಷ್ಟ್ರವನ್ನು ಮಣಿಸಿದರು. ಪುದುಚೇರಿ ಮತ್ತು ತಮಿಳುನಾಡು ತಂಡಗಳು ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನ ಗಳಿಸಿದವು.

ಪುರುಷರ ತಂಡಕ್ಕೆ ಸೆಮಿಫೈನಲ್ ತಲುಪುವುದಕ್ಕೂ ಸಾಧ್ಯವಾಗಲಿಲ್ಲ. ಹರಿಯಾಣವನ್ನು ಸೋಲಿಸಿದ ಮಹಾರಾಷ್ಟ್ರ ಚಾಂಪಿಯನ್ ಪಟ್ಟಕ್ಕೇರಿದರೆ, ಪುದುಚೇರಿ ಮತ್ತು ತಮಿಳುನಾಡು ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದವು. ಮಿಶ್ರ ವಿಭಾಗದಲ್ಲಿ ಹರಿಯಾಣ ವಿರುದ್ಧ 4-0ಯಿಂದ ಗೆದ್ದ ಗುಜರಾತ್ ಪ್ರಶಸ್ತಿ ಗೆದ್ದುಕೊಂಡಿತು. ಮಹಾರಾಷ್ಟ್ರ ಮೂರು ಪುದುಚೇರಿ ನಾಲ್ಕನೇ ಸ್ಥಾನ ಗಳಿಸಿದವು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ಪೂರ್ವಿತಾ ಉತ್ತಮ ಆಲ್‌ರೌಂಡರ್, ಲಿಖಿತಾ ಉತ್ತಮ ಅಟ್ಯಾಕರ್ ಮತ್ತು ಮಹಾರಾಷ್ಟ್ರದ ಸೈನಿ ಉತ್ತಮ ಡಿಫೆಂಡರ್ ಎನಿಸಿಕೊಂಡರು.

ಮಲೇಷ್ಯಾಗೆ ಪ್ರಶಸ್ತಿ:

ಇದೇ ಮೊದಲ ಬಾರಿ ನಡೆದ ಮೂರು ದೇಶಗಳ ಟೂರ್ನಿಯಲ್ಲಿ ಮಲೇಷ್ಯಾ ಪ್ರಶಸ್ತಿ ಗೆದ್ದುಕೊಂಡಿತು. ಭಾರತ ರನ್ನರ್ ಆದರೆ ನೇಪಾಳ ಮೂರನೇ ಸ್ಥಾನ ಗಳಿಸಿತು.

ಅಂಗವಿಕಲರ ಟಿ20 ಕ್ರಿಕೆಟ್ ಸರಣಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವೆ ಅಂಗವಿಕಲರ (ಕಾಲಿನ ನ್ಯೂನತೆಯಿದ್ದವರ) ಐದು ಪಂದ್ಯಗಳ ಟಿ20 ಕ್ರಿಕೆಟ್ ಸರಣಿಯು ಕುಂಬಳಗೋಡಿನ ಕಿಣಿ ಸ್ಪೋರ್ಟ್ಸ್ ಅರೇನಾದಲ್ಲಿ ಮಂಗಳವಾರ ಆರಂಭವಾಗಲಿದೆ.

ಡಿಸಿಸಿಐ ಮತ್ತು ವಿಲ್‌ಸ್ಪೋಕ್ ಸ್ಪೋರ್ಟ್ಸ್ ಅಂಡ್ ಎಂಟರ್ಟೈನ್‌ಮೆಂಟ್ ಸಂಸ್ಥೆಯ ಆಶ್ರಯದಲ್ಲಿ ಮೊದಲ ಬಾರಿಗೆ ಭಾರತ–ಲಂಕಾ ನಡುವೆ ದ್ವಿಪಕ್ಷೀಯ ಕ್ರಿಕೆಟ್ ಸರಣಿ ಆಯೋಜಿಸಲಾಗಿದೆ. ಏಪ್ರಿಲ್ 29, 30, ಮೇ 2, 3 ಮತ್ತು 5ರಂದು ಬೆಳಿಗ್ಗೆ 9ರಿಂದ 12.30ರವರೆಗೆ ಪಂದ್ಯಗಳು ನಡೆಯಲಿವೆ. ‘ಕೊಲಂಬೊದಲ್ಲಿ ಜನವರಿಯಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ, ಶ್ರೀಲಂಕಾ, ಪಾಕಿಸ್ತಾನ ಸೇರಿದಂತೆ ಐದು ತಂಡಗಳು ಸೆಣಸಾಟ ನಡೆಸಿತ್ತು.

ಈ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆಗಿತ್ತು. ಅದೇ ಆತ್ಮ-ವಿಶ್ವಾಸದಲ್ಲಿ ಭಾರತ ತಂಡವು ಕಣಕ್ಕೆ ಇಳಿಯಲಿದ್ದು, ಸರಣಿ ಗೆಲ್ಲುವ ವಿಶ್ವಾಸವಿದೆ. ರಾಷ್ಟ್ರೀಯ ಜೆರ್ಸಿಯಲ್ಲಿ ಆಡುವುದೇ ಹೆಮ್ಮೆಯ ಕ್ಷಣ’ ಎಂದು ಭಾರತ ತಂಡದ ನಾಯಕ ರವೀಂದ್ರ ಸಾಂಟೆ ಸೋಮವಾರ ಮಾಧ್ಯಮ ಸಂವಾದದಲ್ಲಿ ತಿಳಿಸಿದರು.

‘ಉತ್ತಮ ತರಬೇತಿಯೊಂದಿಗೆ ನಮ್ಮ ತಂಡವು ಪ್ರಬಲ ಪೈಪೋಟಿ ನೀಡಲು ಸಜ್ಜಾಗಿದೆ. ಸರಣಿಯನ್ನು ಗೆಲ್ಲಲು ಪ್ರಯತ್ನಿಸುತ್ತೇವೆ’ ಎಂದು ಲಂಕಾ ತಂಡದ ನಾಯಕ ದುಲನ್ ಪ್ರಿಯಶಾಂತ ಹೇಳಿದರು.

ಅಂಗವಿಕಲರ ಐದು ಪಂದ್ಯಗಳ ಟಿ20 ಕ್ರಿಕೆಟ್ ಸರಣಿ ಟ್ರೋಫಿಯೊಂದಿಗೆ ಶ್ರೀಲಂಕಾ ತಂಡದ ನಾಯಕ ಪಿ.ಆರ್. ಶಾಂತೊ (ಎಡ) ಮತ್ತು ಭಾರತ ತಂಡದ ನಾಯಕ ರವೀಂದ್ರ ಸಾಂಟೆ

ಬೆಂಗಳೂರು ಸಿಟಿ ಎಫ್‌ಸಿಗೆ ಜಯ

ಬೆಂಗಳೂರು: ಬೆಂಗಳೂರು ಸಿಟಿ ಎಫ್‌ಸಿ ತಂಡ ಬಿಡಿಎಫ್‌ಎ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಸೋಮವಾರ 2–0 ಗೋಲುಗಳಿಂದ ಎಜಿಒಆರ್‌ಸಿ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಸಿಟಿ ಎಫ್‌ಸಿ ತಂಡದ ಪರ ಸಚಿನ್ ಆರ್. (31ನೇ ನಿ.) ಮತ್ತು ನಿರಾನ್ ಜೈ ಬಾಬು (90 + 4ನೇ ನಿ.) ಗೋಲು ಗಳಿಸಿದರು.